ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭಾಷಾಭಿವೃದ್ಧಿ ಯೋಜನೆ

ಸಾಂಗತ್ಯ ಸಂಪುಟ

ಸಂಪಾದಕರು

ಡಾ. ವೀರಣ್ಣ ರಾಜೂರ



ಕನ್ನಡ ಅಧ್ಯಯನ ಸಂಸ್ಥೆ

ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-೫೮೫೧೦೬

ಸಾಂಗತ್ಯ ಸಂಪುಟ

(ತ್ರಿಪುರದಹನ ಸಾಂಗತ್ಯ ಮತ್ತು ಮನ್ಮಥಮುಕುರ)

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭಾಷಾಭಿವೃದ್ಧಿ ಯೋಜನೆ

ಹಸ್ತಪ್ರತಿಗಳ ಸಂಗ್ರಹ,

ಸಂರಕ್ಷಣೆ ಹಾಗೂ ಪ್ರಕಟನಾ

ಯೋಜನೆ - ೧

ಸಾಂಗತ್ಯ ಸಂಪುಟ

(ತ್ರಿಪುರದಹನ ಸಾಂಗತ್ಯ ಮತ್ತು ಮನ್ಮಥಮುಕುರ)

ಪ್ರಧಾನ ಸಂಪಾದಕರು

ಡಾ. ನಾಗಾಬಾಯಿ ಬಿ. ಬುಳ್ಳಾ

ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಕನ್ನಡ ಅಧ್ಯಯನ ಸಂಸ್ಥೆ

ಗುಲಬರ್ಗಾ ವಿಶ್ವವಿದ್ಯಾಲಯ

ಗುಲಬರ್ಗಾ - ೫೮೫ ೧೦೬

SANGATHYA SAMPUTA

Edited by: Dr. Veeranna Rajur, Dharwad

Chief Editor : Dr, Nagabai. B. Bulla

Funded by: Government of Karnataka
Published by : Institute of Kannada Studies
Gulbarga University, Gulbarga
ISBN : 978-81-923128-6-6

First Impression : 2012
Total Pages : LXII + 368
Paper Used : 80 G. S.M.Maplitho
Price : Rs. 400.00
Cover Design by : Mahesh Shrigani

ಸಾಂಗತ್ಯ ಸಂಪುಟ

ಸಂಪಾದಕರು : **ಡಾ. ವೀರಣ್ಣ ರಾಜೂರ,** ಧಾರವಾಡ

ಪ್ರಧಾನ ಸಂಪಾದಕರು **ಡಾ.ನಾಗಾಬಾಯಿ ಬಿ. ಬುಳ್ಳಾ,** ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಪ್ರಕಾಶಕರು : ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
ಪ್ರಥಮ ಮುದ್ರಣ : ೨೦೧೨
ಪುಟಗಳು : LXII + ೩೬೮
ಬಳಸಿದ ಕಾಗದ : ೮೦ ಜಿ.ಎಸ್. ಎಮ್. ಮ್ಯಾಪಲಿಥೊ
ಬೆಲೆ : ರೂ. ೪೦೦.೦೦
ಕೃತಿ ದೊರೆಯುವ ಸ್ಥಳ : ಕನ್ನಡ ಅಧ್ಯಯನ ಸಂಸ್ಥೆ

ಮುದ್ರಕರು :
ಪ್ರಿಂಟ್ ಪಾರ್ಕ್
ಕ್ವಾಲಿಟಿ ಆಫ್ ಸೆಟ್ ಪ್ರಿಂಟರ್ಸ್
೧೪೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ
ಶ್ರೀರಾಂಪುರಂ ಅಂಚೆ,
ಬೆಂಗಳೂರು – ೫೬೦ ೦೨೧.
ದೂ : ೦೮೦–೨೩೪೨೨೮೩೮

ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಕನ್ನಡ ಭಾಷಾಭಿವೃದ್ಧಿ ಯೋಜನೆ ಸಮಿತಿ

ಅಧ್ಯಕ್ಷರು

ಪ್ರೊ. ಈ.ಟಿ. ಪುಟ್ಟಯ್ಯ

ಕುಲಪತಿಗಳು

ಉಪಾಧ್ಯಕ್ಷರು

ಪ್ರೊ. ಎಸ್.ಎಲ್. ಹಿರೇಮಠ

ಕುಲಸಚಿವರು

ಸಂಚಾಲಕರು

ಪ್ರೊ. ನಾಗಾಬಾಯಿ ಬಿ. ಬುಳ್ಳಾ

ಅಧ್ಯಕ್ಷರು, ಕನ್ನಡ ಅಧ್ಯಯನ ಸಂಸ್ಥೆ

ಸದಸ್ಯರು

ಡಾ. ಪಿ.ಕೆ.ಖಂಡೋಬಾ
ಡಾ. ವ್ಹಿ.ಜಿ.ಪೂಜಾರ
ಡಾ. ವೀರಣ್ಣ ದಂಡೆ
ಡಾ. ಎಚ್.ಟಿ.ಪೋತೆ
ಡಾ. ಜಯಶ್ರೀ ದಂಡೆ
ಡಾ. ಡಿ.ಬಿ.ನಾಯಕ
ಡಾ. ಬಸವರಾಜ ಸಬರದ
ಡಾ. ಬಿ.ಎಸ್. ಪೋಲಿಸ ಪಾಟೀಲ
ಡಾ. ಎಸ್.ಎಂ. ಹಿರೇಮಠ
ಡಾ. ರಾಜಪ್ಪ ದಳವಾಯಿ

ಡಿ.ವಿ.ಸದಾನಂದಗೌಡ
ಮುಖ್ಯಮಂತ್ರಿ
ಸಿಎಂ/ಪಿಎಸ್/57/11

ವಿಧಾನಸೌಧ
ಬೆಂಗಳೂರು-560 001
ದಿ: 02.11.2011

ಕರ್ನಾಟಕ ಸರ್ಕಾರ

ಶುಭ ಹಾರೈಕೆ

ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ದೊರೆತಿದ್ದು, ಈ ಹಿನ್ನಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಎರಡು ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟು ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ನಾಡಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿರುವುದು ಮೆಚ್ಚತಕ್ಕ ಸಂಗತಿ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ವಚನ ಸಾಹಿತ್ಯ, ದಾಸ ಸಾಹಿತ್ಯ ತತ್ವಪದ ಸಾಹಿತ್ಯ, ದಲಿತ-ಬಂಡಾಯ ಸಾಹಿತ್ಯ, ಜಾನಪದ, ಶಾಸನ, ಇತಿಹಾಸ, ಹಸ್ತಪ್ರತಿ, ಸಾಹಿತ್ಯ ಚರಿತ್ರೆ, ರಂಗಭೂಮಿ, ತಂತ್ರಜ್ಞಾನ, ಕನ್ನಡೇತರರಿಗೆ ಕನ್ನಡ ಪರಿಚಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ರೂಪಿಸಲಾದ ವಿವಿಧ ಕ್ರಿಯಾಯೋಜನೆಗಳು ಹೆಚ್ಚು ಉಪಯುಕ್ತಕಾರಿಯಾಗಿವೆ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಕನ್ನಡಕ್ಕೆ ಹೊಸ ಆಯಾಮಗಳನ್ನು ಜೋಡಿಸಿದೆ. ಈ ಕಾರ್ಯದಲ್ಲಿ ನಾಡಿನ ಅನೇಕ ಸಂಶೋಧನಾಸಕ್ತಕರು ಪಾಲುಗೊಂಡಿದ್ದು, ಅವರ ಎಲ್ಲ ಸಂಶೋಧನೆ, ಅಧ್ಯಯನ, ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತಿರುವುದು ಶ್ಲ್ಯಾಘನೀಯ.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಸಮೃದ್ಧವೂ, ಪ್ರಬುದ್ಧವೂ ಆದ ಕನ್ನಡ ಭಾಷಾ ಸಾಹಿತ್ಯ ತನ್ನ ಭಾಷಿಕ, ಸಾಂಸ್ಕೃತಿಕ, ಸಾಹಿತ್ಯಿಕ ಅನನ್ಯತೆಯಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಬೆಳವಣಿಗೆಗೆ ಕನ್ನಡದ ಅಸಂಖ್ಯಾತ ಕವಿಗಳೂ, ಲೇಖಕರೂ, ಕಲಾವಿದರೂ ಕಾರಣರಾಗಿದ್ದಾರೆ. ಕನ್ನಡ ಭಾಷೆ ಸೃಜನಶೀಲವಾಗಿ ಮತ್ತು ಶಾಸ್ತ್ರೀಯವಾಗಿ ಶ್ರೇಷ್ಠ ಮಟ್ಟದ ಬೆಳವಣಿಗೆಯನ್ನು ಹೊಂದಿದೆ. ವೈವಿಧ್ಯಪೂರ್ಣವಾದ ಒಂದು ದೊಡ್ಡ ಪರಂಪರೆ ನಮ್ಮ ಹಿಂದಿದೆ. ಈ

ಗೋವಿಂದ. ಎಂ. ಕಾರಜೋಳ
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ನಂ. 330, 3ನೇ ಮಹಡಿ
ವಿಧಾನಸೌಧ
ಬೆಂಗಳೂರು– 560 001
ದಿ: 16.11.2011

ಕರ್ನಾಟಕ ಸರ್ಕಾರ

ಶುಭಹಾರೈಕೆ

ಕನ್ನಡ ನಾಡು–ನುಡಿಗೆ ಸುದೀರ್ಘವಾದ ಇತಿಹಾಸವಿದೆ. ಭವ್ಯ ಪರಂಪರೆಯನ್ನು ಈ ನಾಡು ಹೊಂದಿದೆ. ಭಾರತೀಯ ಭಾಷೆಗಳಲ್ಲಿಯೇ ಅತೀ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಹೆಗ್ಗಳಿಕೆಗೆ ನಮ್ಮ ಭಾಷೆ ಪಾತ್ರವಾಗಿದೆ. ಈ ನಾಡಿನ ಕವಿಗಳು, ಸಾಹಿತಿಗಳು, ಕಲಾವಿದರು, ಸಂಶೋಧಕರು, ಶಿಕ್ಷಣತಜ್ಞರು, ವಿಜ್ಞಾನಿಗಳು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ.

ಕನ್ನಡ ನಾಡು–ನುಡಿಗೆ ಸಂಬಂಧಪಟ್ಟ ಮಾತುಗಳು ರಾಮಾಯಣ ಮಹಾಭಾರತಗಳಲ್ಲಿ ಕಂಡು ಬರುತ್ತವೆ. ಕ್ರಿಸ್ತಪೂರ್ವದಿಂದಲೇ ಕನ್ನಡ ಭಾಷೆಯ ಅಸ್ತಿತ್ವವನ್ನು ಸಂಶೋಧಕರು ಗುರುತಿಸಿದ್ದಾರೆ. ಕ್ರಿಸ್ತಶಕ 450 ರ ಹಲ್ಮಿಡಿಶಾಸನ ಕನ್ನಡದ ಉಪಲಬ್ಧವಿರುವ ಮೊದಲ ಲಿಖಿತ ರೂಪದ ಶಾಸನ. ಕನ್ನಡದ ಆದಿ ಮಹಾಕವಿ ಪಂಪನಿಗಿಂತ ಹಿಂದೆಯೇ ಒಂದು ಸಮೃದ್ಧವಾದ ಸಾಹಿತ್ಯ ಪರಂಪರೆಯನ್ನು ಕನ್ನಡ ಕಂಡಿದೆ ಎಂಬುದಕ್ಕೆ ಸಂಶೋಧಕರು ಸಾಕಷ್ಟು ಪುರಾವೆಗಳನ್ನು ನೀಡಿದ್ದಾರೆ. ಶಾತವಾಹನರು, ಕದಂಬರು, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು ಈ ನಾಡಿನ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ಅಪೂರ್ವ ಕೊಡುಗೆ ನೀಡಿದ್ದಾರೆ.

ಇಂಥ ಅಪೂರ್ವ ಪರಂಪರೆ ಹೊಂದಿರುವ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದೆ. ಕನ್ನಡದ ಕೆಲಸಕ್ಕೆ ಕೈ ಜೋಡಿಸಿರುವ ಕರ್ನಾಟಕ ರಾಜ್ಯ ಸರ್ಕಾರ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗೆ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಟ್ಟುವ ಕೆಲಸ ಭರದಿಂದ ನಡೆದಿದೆ. ಕನ್ನಡದ ಇತಿಹಾಸ, ಭಾಷೆ, ಸಾಹಿತ್ಯ, ಪರಂಪರೆ, ಜಾನಪದ, ವಿಜ್ಞಾನ, ಮಾನವಿಕ ಇನ್ನಿತರ ಅಂಶಗಳನ್ನು ಕುರಿತ ಹೊತ್ತಿಗೆಗಳು ಸಿದ್ಧವಾಗುತ್ತಿವೆ. ಈ ಯೋಜನೆಯ ಹಲವು ಯೋಜನೆಯ ಅಡಿಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಗಳ ಸಂಗ್ರಹ ಸಂರಕ್ಷಣೆ ಹಾಗೂ ಪ್ರಕಟನಾ ಯೋಜನೆಯಲ್ಲಿ ಹಲವಾರು ಅಪ್ರಕಟಿತ ಹಸ್ತಪ್ರತಿಗಳನ್ನು ಪ್ರಕಟಿಸಿದ ಪ್ರಧಾನ ಸಂಪಾದಕರಿಗೂ, ಸಂಪಾದಕರಿಗೂ ಅಭಿನಂದಿಸುವೆನು.

ಬಿ. ಬಸವರಾಜು ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ
ಹಾಗೂ ವಾರ್ತಾ ಇಲಾಖೆ

ಕರ್ನಾಟಕ ಸರ್ಕಾರ

2, ನೆಲಮಹಡಿ, ವಿಕಾಸ ಸೌಧ,
ಬೆಂಗಳೂರು– 560 001
(22205781ಮ 2203400
ಫ್ಯಾಕ್ಸ್: 22353105
ಇ–ಮೇಲ್: secy-kc@karnataka. Gov.In

ದಿ: 24.10.2011

ಶುಭಹಾರೈಕೆ

ದ್ರಾವಿಡ ಭಾಷಾ ಪರಂಪರೆಯ ನಡುವೆ ಕನ್ನಡ ಭಾಷೆಯ ಶ್ರೀಮಂತಿಕೆ ಮತ್ತು ಅದರ ಸಾಂಸ್ಕೃತಿಕ ವೈವಿಧ್ಯತೆ ಎದ್ದುಕಾಣುವಂತಿದೆ. ತಮಿಳು ಭಾಷೆಯ ಪರಂಪರೆಗೆ ಸರಿಸಮಾನವಾಗಿಯೇ ಬೆಳೆದು ಬಂದಿರುವ ಕನ್ನಡಕ್ಕೆ ನಿಖರವಾಗಿಯೇ ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿದೆ. ಕ್ರಿ.ಶ.450ರ ಹಲ್ಮಿಡಿ ಶಾಸನದ ಕಾಲಕ್ಕೆ ಕನ್ನಡ, ಕರ್ನಾಟಕದಲ್ಲಿ ಬಳಕೆಯಲ್ಲಿತ್ತು. ವ್ಯಾಸಕೃತ ಮಹಾಭಾರತದಲ್ಲಿಯೇ ಕರ್ನಾಟಕದ ಪ್ರಸ್ತಾಪವಿದೆ. ಶಾತವಾಹನರು, ಕದಂಬರು ಇಲ್ಲಿನ ಪ್ರಾಚೀನ ಅರಸು ಮನೆತನದವರೆಂದು ಇತಿಹಾಸಕಾರರು ಗುರುತಿಸಿರುತ್ತಾರೆ. ಗ್ರೀಕ್ ಭೂಗೋಳಶಾಸ್ತ್ರದ ಟಾಲೆಮಿಯ ಪ್ರವಾಸಿ ಬರವಣಿಗೆಯಲ್ಲಿಯೇ ಕನ್ನಡ ನಾಡಿನ ಅನೇಕ ಪ್ರದೇಶಗಳ ಪ್ರಸ್ತಾಪ ಇರುವುದನ್ನು ಸಂಶೋಧಕ ಗೋವಿಂದ ಪೈ ಅವರು ಬೆಳಕಿಗೆ ತಂದರು. ಅಶೋಕನು ದಕ್ಷಿಣ ಭಾರತದಲ್ಲಿ ಹಾಕಿಸಿದ ಶಾಸನಗಳು ಮೊದಲು ದೊರಕಿರುವುದು ಕರ್ನಾಟಕದಲ್ಲಿಯೇ! ಚಿತ್ರದುರ್ಗದ ಸಿದ್ದಾಪುರ, ರಾಯಚೂರಿನ ಮಸ್ಕಿ ಭಾಗದಲ್ಲಿ ದೊರಕಿರುವ ಶಾಸನದಿಂದಲೇ ಅಶೋಕನಿಗೆ 'ದೇವನಾಂಪ್ರಿಯ' ಎಂಬ ಬಿರುದು ಇದ್ದಿತೆಂದು ತಿಳಿದುಬರುತ್ತದೆ. ಅಶೋಕನು ದಕ್ಷಿಣ ಭಾರತದ ಕರ್ನಾಟಕದಲ್ಲಿ ತನ್ನ ಶಾಸನಗಳನ್ನು ಹಾಕಿಸಿದನೆಂದರೆ ಕರ್ನಾಟಕದಲ್ಲಿಯ ಭಾಷಾಪ್ರದೇಶಗಳು ಚೆನ್ನಾಗಿಯೇ ನೆಲೆಯೂರಿದ್ದವೆಂದು ತಿಳಿಯಬಹುದಾಗಿರುತ್ತದೆ. ಇಷ್ಟೇ ಅಲ್ಲದೆ ಕಾಳಿದಾಸನ ಕಾಲ ನಿಗದಿ ಮಾಡುವುದರಲ್ಲಿಯೂ ಮೊದಲು ಸಹಾಯಕ್ಕೆ ಬಂದದ್ದು ಕರ್ನಾಟಕದ ಐಹೊಳೆಯ ಮೇಗುತಿ ದೇವಾಲಯದ ರವಿಕೀರ್ತಿಯ 5ನೇ ಶತಮಾನದ ಶಾಸನ. 'ಅಯ್ಯಾಹೊಳೆಯ' ಐನೂರು ಜನ ವ್ಯಾಪರಸ್ಥರು ದಕ್ಷಿಣ ಭಾರತದ ವ್ಯಾಪಾರವನ್ನೆಲ್ಲ ನಿಯಂತ್ರಿಸುತ್ತಿದ್ದರಂತೆ. ಅಂದರೆ ಭಾರತದ ಇತಿಹಾಸಕ್ಕೆ ತನ್ನದೇ ಆದ ಕಾಣಿಕೆ ನೀಡಿದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಈ ಹೆಗ್ಗುರುತುಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದರ ಕಾರಣವೆಂದರೆ, ಭಾರತ ಸರಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷೆ

ಮಹಾಪರಂಪರೆಯ ಮುಂಚೂಣಿಯಲ್ಲಿ ನಾವಿದ್ದೇವೆ. ಕನ್ನಡವನ್ನು ಇನ್ನೂ ಎತ್ತರಕ್ಕೆ ತೆಗೆದುಕೊಂಡು ಹೋಗುವ ಬಹುಮುಖ್ಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕನ್ನಡ ಕಟ್ಟುವ ಈ ಮಹತ್ವದ ಕೈಂಕರ್ಯಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಲವು ಯೋಜನೆಗಳಲ್ಲಿ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಪ್ರಕಟಣಾ ಯೋಜನೆಯು ಒಂದಾಗಿದೆ. ಹಲವಾರು ಅಪ್ರಕಟಿತ ಹಸ್ತ ಪ್ರತಿಗಳನ್ನು ಪ್ರಕಟಿಸಿದ ಪ್ರಧಾನ ಸಂಪಾದಕರಿಗೂ, ಸಂಪಾದಕರಿಗೂ ಅಭಿನಂದಿಸಿ, ಈ ಕೃತಿಗಳು ನಾಡಿನ ಸಹೃದಯರ ಮನ ಗೆಲ್ಲಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

ಡಿ.ವಿ. ಸದಾನಂದಗೌಡ

ಮುಖ್ಯಮಂತ್ರಿಗಳು

ಮನು ಬಳಿಗಾರ್ ಕ.ಆ.ಸೇ
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ಸರ್ಕಾರ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು– 560 001
ದಿ: 15.10.2011

ನಲ್ನುಡಿ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯೇ ಕುತೂಹಲಕರ ಮತ್ತು ವೈವಿಧ್ಯಮಯವಾದುದು. ಹತ್ತನೆಯ ಶತಮಾನ ಮತ್ತು ಅದರ ಪೂರ್ವಯುಗವನ್ನು 'ವೀರಯುಗ' ಎಂದು ವಿದ್ವಾಂಸರು ಕರೆದಿರುವುದಲ್ಲದೆ, ಆ ಕಾಲಕ್ಕೆ ಬಂದ ಕೃತಿಗಳೆಲ್ಲವೂ ಕ್ಷಾತ್ರಧರ್ಮ ಮತ್ತು ಅದರ ಮೌಲ್ಯಗಳನ್ನೇ ಹೇಳುವಂಥವಾಗಿರುತ್ತವೆ. ಪಂಪ ಬರೆದದ್ದು ವಿಕ್ರಮಾರ್ಜುನ ವಿಜಯವಾದರೆ ರನ್ನ ಬರೆದದ್ದು ಸಾಹಸಭೀಮ ವಿಜಯ. ಇದೆಲ್ಲಕ್ಕಿಂತ ಪೂರ್ವದಲ್ಲಿ ಕವಿರಾಜ ಮಾರ್ಗಕಾರನು ಕನ್ನಡ ನಾಡಿನ ಜನಗಳನ್ನು ಕಲಿಗಳೆಂದೂ, ಕವಿಗಳೆಂದೂ ಮುಕ್ತಕಂಠದಿಂದ ಪ್ರಶಂಸಿಸುತ್ತಾನೆ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಕುರಿತು ಆರಂಭ ಕಾಲಕ್ಕೆ ಎಲ್ಲ ಕವಿಗಳು ಹೇಳುವ ಮಾತಿನಲ್ಲಿ ಆಶ್ಚರ್ಯಕರ, ಕುತೂಹಲಕರ ಹೊಂದಾಣಿಕೆ ಇದೆ. ಕವಿರಾಜ ಮಾರ್ಗಕಾರನು ಕನ್ನಡ ಜನರು ಕವಿಗಳೂ, ಕಲಿಗಳೂ ಆಗಿದ್ದರೆಂದರೆ, ಪಂಪ ತಾನೇ ಸತ್ಕವಿ, ಕಲಿ ಎಂದು ಹೇಳಿಕೊಳ್ಳುತ್ತಾನೆ. ಪಂಪ, ರನ್ನರ ಕೃತಿಗಳಲ್ಲಿ ಬರುವ ಸ್ತ್ರೀಪಾತ್ರಗಳು ಕೂಡ ಪುರುಷ ಪರಾಕ್ರಮವನ್ನು ಪುರಸ್ಕರಿಸಿ ಮಾತನಾಡುತ್ತವೆ. ಇದು ಕನ್ನಡ ನಾಡಿನ ಹತ್ತನೆಯ ಶತಮಾನ ಮತ್ತು ಅದರ ಪೂರ್ವ ವಿವರವಾದರೆ ಹನ್ನೆರಡನೆಯ ಶತಮಾನದ ಸಂಗತಿಯೇ ಬೇರೆ. ಅರಮನೆಯಲ್ಲಿ ಬೆಳೆದ ಸಾಹಿತ್ಯ ಸಾಮಾನ್ಯರ ನಡುವೆ ಬಂದು ಚಳುವಳಿಯ ರೂಪ ಪಡೆದುಕೊಂಡಿತು. ಪಾಂಡಿತ್ಯಪೂರ್ಣ ಸಾಹಿತ್ಯ ಸೃಷ್ಟಿಗಿಂತ ಜನಸಾಮಾನ್ಯರಿಗೆ ಅರ್ಥವಾಗುವ ಸಂಗತಿ ಮುಖ್ಯವೆಂಬ ಧೋರಣೆಯ ವಚನಕಾರರು ಪ್ರಭುತ್ವವನ್ನೇ ಪ್ರತಿಭಟಿಸಿ ಹೊರಬಂದದ್ದು ಆಶ್ಚರ್ಯಕರ ಬೆಳವಣಿಗೆ, ಬಸವಣ್ಣ, ಅಕ್ಕಮಹಾದೇವಿ, ಹರಿಹರ, ರಾಘವಾಂಕ ಇವರೆಲ್ಲ ಅರಸನ ವೈಭವದ ಆಸ್ಥಾನವನ್ನು ಬಿಟ್ಟು ಬಂದವರೆ. ತಮ್ಮ ಸಾಹಿತ್ಯ ಕೃತಿಗಳಲ್ಲಿ ಮಾನವೀಯತೆ, ಸರ್ವಸಮಾನತೆ, ಭಕ್ತಿ ಮತ್ತು ಅಧ್ಯಾತ್ಮವನ್ನು ಸಂಸ್ಥಾಪಿಸಿದವರು; ಅದಕ್ಕನುಗುಣವಾದ ಕಥೆ ಹಾಗೂ ಪಾತ್ರಗಳನ್ನೇ ಸೃಷ್ಟಿಸಿದರು.

ವಚನಕಾರರ ಕಾಲಕ್ಕೆ ಸಾಮಾನ್ಯ ಜನರ ನಡುವೆ ಬಂದ ಸಾಹಿತ್ಯವು ದಾಸವರೇಣ್ಯರ ಕಾಲಕ್ಕೆ ಜನಸಮೂಹದ ಅಂತರಂಗವನ್ನು ರಾಗ, ತಾಳಗಳ ಮುಖೇನ ಕಾಂತಾಸಮ್ಮಿತ

ಕನ್ನಡ ತೇರು ಎಳೆಯುವ ಮಹತ್ಕಾರ್ಯದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿ, ಉತ್ತೇಜಿಸಿ ಆ ಎಲ್ಲ ವಿಶೇಷ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ನಿರ್ದೇಶನ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ತಿಳಿದಾಗಲಂತೂ ನನಗೆ ಇನ್ನಷ್ಟು ಮಹದಾನಂದವಾಗಿದೆ. ಇದರ ಪೂರ್ಣ ಪ್ರಯೋಜನವನ್ನು ನಾಡಿನ ಜನತೆ ಪಡೆಯುವಂತಾಗಲಿ.

ರಾಜ್ಯ ಸರ್ಕಾರದ ಈ ಯೋಜನೆ ಕನ್ನಡ ನಾಡು-ನುಡಿ ಸಂಸ್ಕೃತಿಯ ಪುನರುತ್ಥಾನಕ್ಕೆ ಕಾರಣವಾಗಿದೆ. ಈ ಮೂಲಕ ವಿವಿಧ ಜ್ಞಾನ ಶಿಸ್ತುಗಳಲ್ಲಿ ಕನ್ನಡಿಗರ ಅಧ್ಯಯನ ಆಸಕ್ತಿ ಬೆಳೆಯಲು ವಿವಿಧ ಕ್ರಿಯಾ ಯೋಜನೆಗಳು ಸಹಕಾರಿಯಾಗಿವೆ. ಇದರಿಂದ ಹೊಸ ಚೈತನ್ಯವನ್ನು ಹುಟ್ಟುಹಾಕುವ ಹೊಸ ಸಂಚಲನವನ್ನು ಉಂಟುಮಾಡುವ ಅನನ್ಯ ಪರಂಪರೆಯೊಂದಕ್ಕೆ ಚಾಲನೆ ಸಿಕ್ಕಂತಾಗಿದೆ.

ಈ ಪರ್ವಕಾಲದಲ್ಲಿ ನಾವಿದ್ದೇವೆ ಎನ್ನುವದು ಸಂತಸದ ಸಂಗತಿ. ಕನ್ನಡದ ಅಪೂರ್ವ ಪರಂಪರೆಯನ್ನು ಉಳಿಸಿ ಬೆಳೆಸುವ ಮಹತ್ಕಾರ್ಯದಲ್ಲಿ ಎಲ್ಲರೂ ಕೈ ಜೋಡಿಸಿದ್ದಾರೆ. ನಾಡು-ನುಡಿಯ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ಸದಾ ಸಹಕಾರ ನೀಡುವದು. ಕನ್ನಡಿಗರಿಗೆ ಒಳಿತಾಗಲಿ, ಸರ್ವರೂ ಸುಖ ಶಾಂತಿಯಿಂದ ಬದುಕಿ ಬಾಳಲೆಂದು ಹೃದಯತುಂಬಿ ಹಾರೈಸುವೆ.

ಗೋವಿಂದ. ಎಂ. ಕಾರಜೋಳ
ಸಚಿವರು

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕಾರ್ಯಸೌಧ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ
ದಿ: 25.10.2011

ಕುಲಪತಿಗಳ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯವು ಹೈದ್ರಾಬಾದ ಕರ್ನಾಟಕ ಪ್ರದೇಶದ ಹೆಮ್ಮೆಯ ವಿದ್ಯಾಸಂಸ್ಥೆಯಾಗಿದೆ. 1970–71ರಲ್ಲಿ ಇದು ಕರ್ನಾಟಕ ವಿಶ್ವವಿದ್ಯಾಲಯದ ಒಂದು ಸ್ನಾತಕೋತ್ತರ ಕೇಂದ್ರವಾಗಿ, ಮುಂದೆ 1980ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು. ಕಳೆದ ಮೂವತ್ತು ವರ್ಷಗಳಿಂದ ಈ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ ಹಾಗೂ ಪ್ರಕಟನೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ ಬೋಧನೆ ಮತ್ತು ಸಂಶೋಧನೆ. ಇವು ಸಾಕಾರಗೊಳ್ಳುವುದು ಪ್ರಕಟನೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ಅನೇಕ ಮೌಲಿಕವಾದ ಪ್ರಕಟಣೆಗಳನ್ನು ಪ್ರಕಟಿಸಿದೆ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳು ಇದುವರೆಗೆ ನಾಲ್ಕು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದುದು ತುಂಬ ಹೆಮ್ಮೆಯ ಸಂಗತಿಯಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನ ವಿದ್ಯಾರ್ಥಿಗಳು ಬರೆದ ಸಂಶೋಧನ ಲೇಖನಗಳ ಸಂಕಲನ 'ಜ್ಞಾನ ಗಂಗಾ' ಸಂಚಿಕೆಗಳಂತೂ ತುಂಬ ಜನಪ್ರಿಯವಾಗಿವೆ. ಒಟ್ಟಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ತನ್ನ ಅಪೂರ್ವ ಪ್ರಕಟನೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆದಿದೆ.

ಕರ್ನಾಟಕ ಸರ್ಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ ಸ್ಮಾರಕಗಳು, ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ, ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ ನಾಟಕಗಳು, ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ

ಸ್ಥಾನಮಾನವನ್ನು ನೀಡಿರುವುದು ಎಲ್ಲಾ ರೀತಿಯಿಂದಲೂ ಸಮಂಜಸ ಹಾಗೂ ಸೂಕ್ತ ಎಂಬುವುದಕ್ಕಾಗಿ. 2009ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ಕರ್ನಾಟಕದ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ನವರು ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೂ ಎರಡೆರಡು ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಅದರ ಅಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯ ಯೋಜನೆಗಳು ನೆರವೇರುವಂತಾಗಲಿ ಎಂದು ತಿಳಿಸಿದ್ದರು. ಅದರಂತೆ ಕರ್ನಾಟಕದ ವಿವಿಧ ಭಾಗದ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಕನ್ನಡ ಸಾಹಿತ್ಯ ಪರಂಪರೆ ಕುರಿತಾಗಿ ಅನೇಕ ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತವೆ.

ಈ ಹಿನ್ನೆಲೆಯಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ವಿಭಿನ್ನ ಸಂಪುಟಗಳ ಪ್ರಕಟಣಾ ಯೋಜನೆಯನ್ನು ಹಮ್ಮಿಕೊಂಡು ಅದರಡಿಯಲ್ಲಿ **ಹಸ್ತ ಪ್ರತಿಗಳ ಸಂಗ್ರಹ ಸಂರಕ್ಷಣೆ ಹಾಗೂ ಪ್ರಕಟಣಾ ಯೋಜನೆಯಲ್ಲಿ ಹಲವಾರು ಅಪ್ರಕಟಿತ ಹಸ್ತ ಪ್ರತಿಗಳನ್ನು ಪ್ರಕಟಿಸಿದೆ.** ಕನ್ನಡ ಆಸಕ್ತರು ನಮ್ಮ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಕುರಿತಂತೆ ಸಮಗ್ರ ಅರಿವನ್ನು ಪಡೆಯುವಂತೆ ರಚಿತವಾಗಿರುತ್ತವೆ. ಇಂಥದೊಂದು ಯೋಜನೆಯನ್ನು ಕೈಗೆತ್ತುಕೊಂಡು ಅದರ ಮೊದಲ ಹಂತದ ಕಾರ್ಯ ಮುಗಿಸಿ, ಮುಂದಿನ ಹಂತದಲ್ಲಿಯೂ ಈ ಬಗೆಯ ಇನ್ನಷ್ಟು ಗ್ರಂಥಗಳ ಪ್ರಕಟಣೆಯ ಯೋಜನೆಯನ್ನು ಕೈಗೆತ್ತಿಕೊಂಡು ಉತ್ಸಾಹದಿಂದ ಮುಂದುವರೆಸುತ್ತಿರುವ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಈ.ಟಿ.ಪುಟ್ಟಯ್ಯ ಅವರನ್ನು ಮತ್ತು ಕುಲಸಚಿವ ಪ್ರೊ.ಎಸ್.ಎಲ್.ಹಿರೇಮಠ ಅವರನ್ನು ಈ ಸಂಪುಟದ ಪ್ರಧಾನ ಸಂಪಾದಕರೂ ಮತ್ತು ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬಿ. ಬುಳ್ಳಾ ಅವರನ್ನು ನಾನು ಕರ್ನಾಟಕ ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ.

ಬಿ. ಬಸವರಾಜು
ಕಾರ್ಯದರ್ಶಿ

ಪ್ರಧಾನ ಸಂಪಾದಕರ ನುಡಿ

ಹಸ್ತ ಪ್ರತಿಗಳು ನಮ್ಮ ನಾಡಿನ ಅಮೂಲ್ಯ ಆಸ್ತಿಗಳಾಗಿವೆ. ಪ್ರಾಚೀನ ಕಾಲದಲ್ಲಿ ತಾಳೆಗರಿಗಳ ಮೇಲೆ, ಬೂರ್ಜ್ವಪತ್ರಗಳ ಮೇಲೆ ಬರೆಯುತ್ತಿದ್ದರು. ನಂತರದ ಅವಧಿಯಲ್ಲಿ ಕೋರಿ ಕಾಗದಗಳಲ್ಲಿ ಬರೆಯತೊಡಗಿದರು. ಹತ್ತನೆಯ ಶತಮಾನದ ಹಳಗನ್ನಡ ಕಾವ್ಯಗಳಿಂದ ಹಿಡಿದು ನಡುಗನ್ನಡದ ವಚನ ಸಾಹಿತ್ಯ, ದಾಸರಕೀರ್ತನೆಗಳು, ತತ್ವಪದಗಳು, ವ್ಯಾಕರಣ ಗ್ರಂಥಗಳು, ಜೋತಿಷ್ಯ, ವೈದ್ಯಶಾಸ್ತ್ರ ಹಾಗೂ ಅನೇಕ ಧಾರ್ಮಿಕ ಗ್ರಂಥಗಳು ಹಸ್ತಪ್ರತಿಗಳಲ್ಲಿ ಇವತ್ತಿಗೂ ದೊರಕುತ್ತಿವೆ. ಆದರೆ ನಮ್ಮ ಅಲಕ್ಷ, ಅಜ್ಞಾನ ಹಾಗೂ ಮೂಢನಂಬಿಕೆಗಳಿಂದಾಗಿ ಹಲವಾರು ಮಠಗಳಲ್ಲಿ, ಮನೆಗಳಲ್ಲಿ ಪೂಜೆಗೊಳ್ಳುತ್ತ ದಯನೀಯ ಸ್ಥಿತಿಯಲ್ಲಿವೆ. ಕೆಲವೆಡೆ ನೈಸರ್ಗಿಕ ವಿಪತ್ತುಗಳಿಂದಲೂ ಹಸ್ತಪ್ರತಿಗಳು ನಶಿಸಿ ಹೋಗುತ್ತಿವೆ. ಇವುಗಳ ಸಂಗ್ರಹ ಸಂರಕ್ಷಣೆ ಹಾಗೂ ಅಪ್ರಕಟಿತ ಗ್ರಂಥಗಳ ಪ್ರಕಟಣೆ ಮಾಡುವ ಅವಶ್ಯಕತೆಯಿದೆ. ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಇದುವರೆಗೆ ದೊರೆತಿರುವ 6000 ಹಸ್ತಪ್ರತಿಗಳನ್ನು ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂರಕ್ಷಿಸಿ ಇಡಲಾಗಿದೆ. ಈ ಪ್ರದೇಶದ ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಬಿಂಬಿಸುತ್ತಿರುವ ಈ ಹಸ್ತಪ್ರತಿಗಳ ಅಧ್ಯಯನ ಮಾಡಿ ಪ್ರಕಟಿಸುವ ಕಾರ್ಯ ಅತ್ಯಂತ ತ್ವರಿತಗತಿಯಲ್ಲಿ ನಡೆಯಬೇಕಾಗಿದೆ.

ಈ ಹಿನ್ನಲೆಯಲ್ಲಿ ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಲಭಿಸಿದ ಶುಭ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಕನ್ನಡ ಭಾಷಾ ಅಭಿವೃದ್ಧಿ ಅನುದಾನದ ಅಡಿಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಮ್ಮಿಕೊಂಡ ಹಲವು ಸಂಶೋಧನ ಯೋಜನೆಗಳಲ್ಲಿ "ಹಸ್ತಪ್ರತಿ ಸಂಗ್ರಹ ಸಂಪಾದನೆ ಹಾಗೂ ಪ್ರಕಟಣಾ ಯೋಜನೆ ಭಾಗ-೧" ಕೂಡ ಒಂದು. ಈ ಯೋಜನೆಯಲ್ಲಿ ಗಾಜೇಶಲಿಂಗನಲೀಲೆ, ಭೋಗೇಶ್ವರ ಪುರಾಣ, ಮಹಾಂತೇಶ್ವರ ಪುರಾಣ, ವೀರಸೇನನ ಚಾರಿತ್ರ್ಯ, ಕುಸನೂರ ಸಿದ್ಧೇಶ್ವರ ಪುರಾಣ, ಸಾಂಗತ್ಯ ಸಂಪುಟ -೧, ಶತಕ ಸಂಪುಟ, ಹಾಗೂ ಹಸ್ತಪ್ರತಿಗಳಲ್ಲಿ ಚಿತ್ರಕಲೆ'ಗಳ ಮುದ್ರಣ ಕಾರ್ಯವನ್ನು ಪ್ರಥಮ ಹಂತದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಈಗಾಗಲೇ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ೧೯೯೪ರಲ್ಲಿ ಹಸ್ತಪ್ರತಿ

ಭಾವದ ಮೂಲಕವೇ ಮುಟ್ಟತೊಡಗಿತು. 'ವೀರನಾರಾಯಣನೇ ಕವಿ, ಲಿಪಿಕಾರ ಕುವರವ್ಯಾಸ, ಕೇಳುವ ಸೂರಿಗಳೆ ಜಂಗಮ ಜನಾರ್ಧನರು' ಎನ್ನುತ್ತಾನೆ ಕುಮಾರವ್ಯಾಸ. ಹೀಗೆ ಅರಮನೆಯಿಂದ ಜನಸಾಮಾನ್ಯರ ಕಡೆಗೆ ಪ್ರವಹಿಸಿದ ಕನ್ನಡ ಸಾಹಿತ್ಯ ಪರಂಪರೆಯೇ ವೈವಿಧ್ಯಮಯವಾದುದು. ಆಧುನಿಕ ಕನ್ನಡ ಸಂದರ್ಭದ ಕವಿ, ಕಥೆಗಾರ, ಕಾದಂಬರಿಕಾರರ ಪ್ರತಿಭಾನ್ವಿತ ಬರವಣಿಗೆಯಂತೂ ಸಮಸ್ತ ಕನ್ನಡಿಗರ ಅರಿವಿಗೆ ಬಂದಿರುವಂಥದ್ದೆ. ಹೀಗೆ ಒಂದೂವರೆ ಸಾವಿರ ವರ್ಷಗಳ ಸ್ಪಷ್ಟ ಮತ್ತು ಸಮಗ್ರ ಇತಿಹಾಸವಿರುವ ಕನ್ನಡ ಭಾಷಾ ಶ್ರೀಮಂತಿಕೆಗೆ 2009ರಲ್ಲಿ ಭಾರತ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿತು. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವೂ ಕೂಡ ಕನ್ನಡನಾಡಿನ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ತಲಾ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿತು. ಈಗ ಎಲ್ಲ ವಿಶ್ವವಿದ್ಯಾಲಯಗಳು ಕನ್ನಡ ಸಾಹಿತ್ಯ, ಸಂಸ್ಕೃತಿ ತತ್ಸಂಬಂಧದ ಸಂಶೋಧನೆಯ ಯೋಜನೆಗಳಲ್ಲಿ ತೊಡಗಿಸಿಕೊಂಡಿವೆ. ಈ ನಿಟ್ಟಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಲವು ಸಂಪುಟಗಳ ಪ್ರಕಟಣಾ ಯೋಜನೆಯನ್ನು ಕೈಗೆತ್ತಿಕೊಂಡು ಅದರ ಅಡಿಯಲ್ಲಿ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಪ್ರಕಟನಾ ಯೋಜನೆಯಲ್ಲಿ ಹಲವಾರು ಹಸ್ತಪ್ರತಿಗಳನ್ನು ಪ್ರಕಟಿಸಿದೆ. ಈ ಯೋಜನೆಯ ಯಶಸ್ಸಿಗೆ ಕಾರಣರಾದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ ಈ.ಟಿ.ಪುಟ್ಟಯ್ಯ ಅವರಿಗೆ, ಕುಲಸಚಿವರಾದ ಪ್ರೊ ಎಸ್.ಎಲ್. ಹಿರೇಮಠ ಅವರಿಗೆ, ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರೂ ಹಾಗೂ ಈ ಪ್ರಕಟಣಾ ಯೋಜನೆಯ ಪ್ರಧಾನ ಸಂಪಾದಕರಾದ ಡಾ. ನಾಗಾಬಾಯಿ ಬಿ. ಬುಳ್ಳಾಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪರವಾಗಿ ನಾನು ಹೃತ್ಪೂರ್ವಾಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮನು ಬಳಿಗಾರ್

ಆಯುಕ್ತರು

*

ಪ್ರಸ್ತಾವನೆ

ಕನ್ನಡ ಸಾಹಿತ್ಯದ ರೂಪವೈವಿಧ್ಯ ಹಾಗೂ ಭಾಷಾ ಶ್ರೀಮಂತಿಕೆಯನ್ನು ಹೆಚ್ಚಿಸುವ ಮೂಲಕ, ಅದರ ಭಾವಕೋಶವನ್ನು ವಿಸ್ತರಿಸಿದ ಹಿರಿಯ ಸಾಹಿತ್ಯ ಪ್ರಕಾರಗಳಲ್ಲಿ 'ಸಾಂಗತ್ಯ'ವೂ ಒಂದು. ಏಕಕಾಲಕ್ಕೆ ಛಂದೋರೂಪ ಮತ್ತು ಸಾಹಿತ್ಯ ರೂಪವಾಗಿ ವಿಶಿಷ್ಟತೆಯನ್ನು ಮೆರೆದ ಇದು ಅಚ್ಚಗನ್ನಡ ದೇಶೀನಿಷ್ಠತೆಯನ್ನು ಕೊನೆಯವರೆಗೂ ಕಾಯ್ದುಕೊಂಡು ಬಂದ ಏಕೈಕ ರಚನೆ ಎನಿಸಿದೆ. ಕೃತಿಗಳ ಸಂಖ್ಯೆ ಹಾಗೂ ಸತ್ವದ ದೃಷ್ಟಿಯಿಂದ ಚಂಪೂ ಹಾಗೂ ಷಟ್ಪದಿಯ ನಂತರದ ಮೂರನೆಯ ಸ್ಥಾನವನ್ನು ಪಡೆದುಕೊಂಡ ಇದರಲ್ಲಿ ೩೫೦ ಕ್ಕೂ ಹೆಚ್ಚು ಕೃತಿಗಳು ರಚನೆಯಾಗಿವೆ. ಕರ್ನಾಟಕದ ಪ್ರಮುಖ ಧರ್ಮಗಳೆನಿಸಿದ ಜೈನ-ವೀರಶೈವ-ಬ್ರಾಹ್ಮಣ ಮೂರೂ ಪ್ರಕಾರದ ಕವಿಗಳು ಈ ಮಾಧ್ಯಮದಲ್ಲಿ ಸಾಹಿತ್ಯ ಸೃಷ್ಟಿ ಮಾಡಿದ್ದಾರೆ. ವಿಭಿನ್ನ ವಸ್ತು-ಭಾಷೆ-ದೃಷ್ಟಿ-ಧೋರಣೆಗಳು ಅದರಲ್ಲಿ ಸಮಾವೇಶಗೊಂಡಿವೆ. ರತ್ನಾಕರವರ್ಣಿಯ 'ಭರತೇಶ ವೈಭವ', ನಂಜುಂಡ ಕವಿಯ 'ರಾಮನಾಥ ಚರಿತ್ರೆ' ಮಹಾಕಾವ್ಯ ಎನಿಸಿವೆ. ಕನಕದಾಸರ 'ಮೋಹನತರಂಗಿಣಿ', ಹೊನ್ನಮ್ಮನ 'ಹದಿಬದೆಯಧರ್ಮ', ಮೂರನೆಯ ಮಂಗರಸನ 'ನೇಮಿಜಿನೇಶ ಸಂಗತಿ', ದೇಪರಾಜನ 'ಸೊಬಗಿನಸೋನೆ' ಮೊದಲಾದವು ವಸ್ತು-ನಿರೂಪಣೆ-ತಂತ್ರ-ಆಶಯಗಳ ದೃಷ್ಟಿಯಿಂದ ವಿಶೇಷತೆಯನ್ನು ಅಳವಡಿಸಿಕೊಂಡು ಗಮನಾರ್ಹವೆನಿಸಿವೆ.[೧]

ಇಲ್ಲಿಯವರೆಗೆ ಗುರುತಿಸಲ್ಪಟ್ಟ ಸು. ಮೂರೂವರೆನೂರು ಸಾಂಗತ್ಯ ಕೃತಿಗಳಲ್ಲಿ ನೂರಕ್ಕೂ ಹೆಚ್ಚು ಇನ್ನೂ ಅಪ್ರಕಟಿತವಾಗಿ ಹಸ್ತಪ್ರತಿಗಳಲ್ಲಿಯೇ ಉಳಿದಿವೆ. ಅವೆಲ್ಲವನ್ನು ಪರಿಷ್ಕರಿಸಿ ಪ್ರಕಟಿಸಿ ಮೌಲ್ಯಮಾಪನ ಮಾಡಿದಾಗ ಮಾತ್ರ ಈ ಸಾಹಿತ್ಯದ ನಿಜವಾದ ಕೊಡುಗೆ ಅರಿತಕ್ಕೆ ಬರುತ್ತದೆ. ಈ ಹಿನ್ನೆಲೆಯಲ್ಲಿ ಈಗ ಅಪ್ರಕಟಿತ ಸಾಂಗತ್ಯ ಕೃತಿಗಳ ಪ್ರಕಟಣ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

---

೧. ಹೆಚ್ಚಿನ ವಿವರಗಳಿಗೆ ನನ್ನ ಪಿಎಚ್.ಡಿ. ಮಹಾಪ್ರಬಂಧ 'ಕನ್ನಡ ಸಾಂಗತ್ಯ ಸಾಹಿತ್ಯ' -ಪ್ರ. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು. ೧೯೮೫-ಇದನ್ನು ನೋಡಬಹುದು.

ಸಂಪುಟಗಳ ಪ್ರಕಟನೆ ಈ ಮುಂತಾದ ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು. ಇವುಗಳಲ್ಲಿ ಹಸ್ತ ಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಪ್ರಕಟನಾ ಯೋಜನೆಯೂ ಒಂದಾಗಿದೆ. ಈ ಯೋಜನೆಯಲ್ಲಿ ಹಲವಾರು ಮಹತ್ವದ ಅಪ್ರಕಟಿತ ಹಸ್ತ ಪ್ರತಿಗಳನ್ನು ಪ್ರಕಟಿಸಿದ್ದಾರೆ. ಹಸ್ತಪ್ರತಿಗಳನ್ನು ಸಂಪಾದನೆ ಮಾಡಿ ಕೊಟ್ಟಿರುವ ಸಂಪಾದಕರಿಗೂ ಈ ಸಂಪುಟದ ಪ್ರಧಾನ ಸಂಪಾದಕರೂ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬಿ. ಬುಳ್ಳಾ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ. ಬಿ.ಬಸವರಾಜು ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ ಅವರಿಗೂ ಅಲ್ಲದೆ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ರಿಂದ ೧೫೦೫ ರ ವರೆಗೆ ಎಂದು ತಿಳಿದಿದೆ. ಇದರಿಂದ ಈ ಕವಿ ೧೬ನೆಯ ಶತಮಾನದ ಆದಿಯಲ್ಲಿ ಇದ್ದಿರಬೇಕೆಂದು ಊಹಿಸಬಹುದಾಗಿದೆ. ಕವಿಚರಿತ್ರೆಕಾರರು ಇವನ ಇನ್ನೊಂದು ಕೃತಿ 'ಚೋಳರಾಜ ಸಾಂಗತ್ಯ'ದ ಹಸ್ತಪ್ರತಿಯ ಅಂತ್ಯ ಪ್ರಶಸ್ತಿಯ ಆಧಾರದಿಂದ ಅದನ್ನು ನಕಲು ಮಾಡಿದ ಕಾಲ ೧೬೦೪ ಇರುವುದನ್ನು ಗಮನಿಸಿ, ಈ ಕವಿಯ ಕಾಲವನ್ನು ೧೫೫೦ ಎಂದು ನಿರ್ಧರಿಸಿದ್ದಾರೆ.[೧೧] ಇದನ್ನು ಅಂಗೀಕರಿಸಬಹುದು.

ಕವಿ ತನ್ನನ್ನು 'ಶಿವಕವಿ' 'ಹರಕವಿಗಳ ಪದಕಮಲಭ್ರಮರ' ಎಂದು ಹೇಳಿಕೊಂಡಿರುವುದರಿಂದ ಮತ್ತು ಶಿವಪರವಾದ ವಸ್ತುವನ್ನು ತನ್ನ ಕಾವ್ಯಕ್ಕೆ ಆಯ್ಕೆ ಮಾಡಿಕೊಂಡಿರುವುದರಿಂದ ಈತ ವೀರಶೈವನೆಂದು ಖಚಿತಪಡುತ್ತದೆ.

'ಉರುತರ ಶಬ್ದಾದಿ ಗಂಭೀರ' 'ಸವಿನುಡಿ ಸಂಪನ್ನ' 'ಸವಿನುಡಿ ಶರದಿ ತರಂಗ' 'ರಸಿಕರನ್ನ' 'ಕವಿ ಮನ ಕಮಲಾದಿತ್ಯ' 'ಕನ್ನಡ ಜಾಣ' 'ಕನ್ನಡ ದೇಶದೊಳೊಪ್ಪುವ ಕವಿಗಳಿಗುನ್ನತ ಗುಣಮಣಿ'–ಇವು ಕವಿ ತನ್ನ ವ್ಯಕ್ತಿತ್ವ ಹಾಗೂ ಕವಿತ್ವ ಕುರಿತು ಹೇಳಿಕೊಂಡ ಪ್ರಶಂಸಾ ನುಡಿಗಳು. ಇವುಗಳಿಗೆ ಸಾಕ್ಷಿಯಂತಿವೆ ಈತನ ಕೃತಿಗಳು.

ಕೃತಿಗಳು : ಲಿಂಗಕವಿ ಬರೆದ ಎರಡು ಕೃತಿಗಳು ಈಗ ದೊರೆತಿವೆ. ಒಂದು–ಚೋಳರಾಜ ಸಾಂಗತ್ಯ; ಮತ್ತೊಂದು ತ್ರಿಪುರದಹನ ಸಾಂಗತ್ಯ. ಎರಡೂ ಸಾಂಗತ್ಯ ರೂಪದಲ್ಲಿಯೇ ರಚನೆಗೊಂಡಿರುವುದು ವಿಶೇಷ.

'ಚೋಳರಾಜಸಾಂಗತ್ಯ' ೩ ಸಂಧಿ ೫೬೧ ಸಾಂಗತ್ಯ ಪದ್ಯಗಳಿರುವ ಕಿರುಗಾತ್ರದ ಕೃತಿ.[೧೨] ಇದರ ವಸ್ತು ತಮಿಳು ನಾಡಿನ ಶಿವಭಕ್ತರಲ್ಲಿ ಪ್ರಸಿದ್ಧರಾದ ೬೩ ಪುರಾತನರಲ್ಲಿ ಒಬ್ಬನಾದ ಪಗಲ್ಚೋಳನ ಕಥೆ. ಇದನ್ನು ಕೆಳಗಿನ ಎರಡು ಪದ್ಯಗಳಲ್ಲಿ ಹೀಗೆ ಸಂಗ್ರಹಿಸಿದ್ದಾನೆ :

ಈ ಕಥೆಗಧಿನಾಯಕ ಚೋಳನೃಪನು ದಿ
ವಾಕರ ವಂಶ ಲಲಾಮ
ಭೂಕಾಂತೆಗರಸನೀಶ್ವರಭಕ್ತನೆನಿಪನು
ಲೋಕವರಿಯೆ ಬಣ್ಣಿಸುವೆನು ೧–೧೦

---

೧೧. ಕರ್ನಾಟಕ ಕವಿಚರಿತೆ: ಸಂಪುಟ–೨ ಪು.೨೦೮ (ತಿದ್ದಿದ ದ್ವಿತೀಯ ಮುದ್ರಣ)
೧೨. ಕನ್ನಡ ಅಧ್ಯಯನಪೀಠದ ತಾ.ಪ್ರ. ೧೨೭೭.

ಸಂಗ್ರಹ ಕಾರ್ಯವು ಪತ್ರಾಗಾರ ಇಲಾಖೆಯಿಂದ ನಡೆದಿತ್ತು , ಆ ಹಸ್ತಪ್ರತಿ ಸಂಗ್ರಹದೊಳಗಿನ ಒಂದೆರಡು ಹಸ್ತಪ್ರತಿಗಳನ್ನು ಹಾಗೂ ಬೇರೆ ಬೇರೆ ಕಡೆಗಳಿಂದ ಕೆಲವು ಹಸ್ತ ಪ್ರತಿಗಳನ್ನು ಸಂಗ್ರಹಿಸಿ ಸಂಪಾದನಾ ಕಾರ್ಯವನ್ನು ವಹಿಸಿಕೊಟ್ಟು ಅಪ್ರಕಟಿತ ಪುಸ್ತಕಗಳನ್ನು ಪ್ರಕಟಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ಪ್ರಸ್ತುತ ಕೃತಿ **"ಸಾಂಗತ್ಯ ಸಂಪುಟ"**ವನ್ನು ಪ್ರೊ. ವೀರಣ್ಣ ರಾಜೂರ ನಿವೃತ್ತ ಪ್ರಾಧ್ಯಾಪಕರು ಡಾ. ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇವರು ಸಂಪಾದಿಸಿ ಕೊಟ್ಟಿರುವರು. ಸುಧೀರ್ಘವಾದ ಪ್ರಸ್ತಾವನೆಯಲ್ಲಿ ಕವಿ – ಕಾವ್ಯ ವಿಚಾರಗಳನ್ನು ತಿಳಿಸಿರುವರು. ಹಸ್ತಪ್ರತಿ ಯೋಜನೆಯ ವತಿಯಿಂದ ಸಂಪಾದಕರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುವೆನು. ಈ ಯೋಜನೆಯು ರೂಪುಗೊಳ್ಳುವಲ್ಲಿ ಸೂಕ್ತ ಮಾರ್ಗದರ್ಶನ ಮಾಡಿದ ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ ಈ.ಟಿ. ಪುಟ್ಟಯ್ಯನವರಿಗೂ ಕುಲಸಚಿವರಾದ ಪ್ರೊ. ಎಸ್. ಎಲ್. ಹಿರೇಮಠಅವರಿಗೂ ಹಾಗೂ ಅಧಿಕಾರಿಗಳಿಗೂ ಕೃತಜ್ಞಳಾಗಿರುವೆನು.

ಈ ಕೃತಿಯ ಅಕ್ಷರ ಸಂಯೋಜನೆ ಹಾಗೂ ಮುದ್ರಣವನ್ನು ಸುಂದರವಾಗಿ ಮಾಡಿರುವ ಬೆಂಗಳೂರಿನ ಮೆ ॥ ಪ್ರಿಂಟ್ ಪಾರ್ಕ್ ಮಾಲೀಕರಾದ ಶ್ರೀ ಜಿ.ಬಿ. ಪಾಟೀಲ್ ಇವರಿಗೆ ಕೃತಜ್ಞತೆಗಳು.

ಡಾ. ನಾಗಾಬಾಯಿ ಬಿ. ಬುಳ್ಳಾ

ಪ್ರಧಾನ ಸಂಪಾದಕರು

ಕೃತಿಯ ವಸ್ತುವಿಶೇಷತೆಯನ್ನು ಕುರಿತು-'ಸರಡ ಗಂಟಿಕ್ಕಿ ನಾನಾ ಕಥೆಗಳ ತಂದು ವಿರಚಿಪ ಭಿತ್ತಿಯಂತಲ್ಲಾ' 'ಅಂತಿಂತು ಪೇಳುವ ಸಂದೇಹ ಕಪಿಗಳ ತೊಂತಬೊಂತೆಯ ಕಥೆಯಲ್ಲ' 'ಪರೀಕ್ಷಿಸೆ ವೇದ ಸಿದ್ಧಾಂತದ ಕಥೆಯಿದು' 'ಕರ್ಮವನೊದವ ಪುಣ್ಯದ ನೆಲೆವೀಡು' 'ಪರಮ ಶಿವೈಕ್ಯರು ಕೇಳಿ' 'ಶಿವಕಥೆಯಿದು ಭಾರಿ ಸುಜಾಣರು ಕೇಳಿ' 'ಬಲ್ಲ ರಸಿಕರೀಕೃತಿಯ ತಿದ್ದುವುದು'- ಎಂದು ಹೇಳುತ್ತ, 'ಧಾರೆವಟ್ಟಲದ ಸುಸಾರವ ಬಿಟ್ಟು ನಿಸ್ಸಾರವ ಪಿಡಿವ ಖೂಳರಿಗೆ ದೂರದೊಳಾನೆರಗುವೆ' ಎಂದು ಕವಿ ತನ್ನ ವಿನಯಶ್ರೀಯನ್ನು ಮೆರೆಯುತ್ತಾನೆ.

ಹಾಗೆಯೇ 'ಶ್ರೀ ಶಶಿಭೂಷ ತ್ರಿಪುರನಿವಾಸಿಗಳಂ ಭಾಳನೇತ್ರದ ಶಿಖಿಯೊಳುರೆ ಸುಟ್ಟ ಅಸುರ ಕರ್ಮಕಥೆ' 'ತ್ರಿಪುರದಹನದ ಕಥೆ' 'ಕಪ್ಪುಗೊರಳ ಸರ್ಪಧರನೊಂದು ಬಾಣದಿ ಮುಪ್ಪುರಗಳ ಸುಟ್ಟ ಕಥೆ' 'ದೇವರ ದೇವ ಗಜಾಸುರ ಮರ್ದನ ಭಾವಜನಿರ್ಧೂಮಧಾಮ ಪಾವಕಾಕ್ಷದಿ ತ್ರಿಪುರವ ಸುಟ್ಟ ಕಥೆ' ಎಂದು ಕೃತಿಯಲ್ಲಿ ಅಳವಟ್ಟ ಕಥೆಯ ಸ್ವರೂಪವನ್ನು ಸೂತ್ರರೂಪದಲ್ಲಿ ತಿಳಿಸುತ್ತಾನೆ.

ಮುಂದೆ ಕಾವ್ಯದ ಸೊಗಸುಗಾರಿಕೆಯನ್ನು ಹತ್ತೆಂಟು ಪದ್ಯಗಳಲ್ಲಿ (ಬೇರೆ ಬೇರೆ ಸಂಧಿಗಳಲ್ಲಿ) ಮನದುಂಬಿ ಬಣ್ಣಿಸುತ್ತಾನೆ :

ಎಳೆಯಳ ಪೊಸಜವ್ವನದೊಡ್ಡಣೆಯಂತೆ
ತಿಳಿಜೊನ್ನದ ಕಳೆಯಂತೆ
ಚಿಲಿಪಾಲು ಸಕ್ಕರೆಯಂತೆ ಲಿಂಗನ ಕೃತಿ
ತಿಳಿವುದು ಸುಖದಿ ಕೇಳ್ವರಿಗೆ ೧-೧೩

ದೆಸೆಗೆ ಕಂಪಿಡುವ ಜಾಜಿಯ ಪೂವಿನವೊಲು
ಶಿಶುಗಳ ಮೃದುನುಡಿಯಂತೆ
ಕುಸುಮಾಸ್ತ್ರನ ಬಿಲ್ಲುಲಿಯೋಯೆಂಬಂತೆಯು
ಎಸೆದುದು ಲಿಂಗನ ಕಾವ್ಯ ೧-೧೪

ನಲ್ಲನೊಲುಮೆಯಂತೆ ಪುಲ್ಲಸರನ ಕೈಯ
ಬಿಲ್ಲಜೇವಡೆಗೆಯಿದಂತೆ
ಎಲ್ಲ ಮೋಹಿಗಳಿಗೆ ಸುರತರುವೆನಿಪುದ
ದೊಳ್ಳಿತು ಲಿಂಗನ ಕಾವ್ಯ ೧-೨೬

ತಂಗಾಳಿಯ ತಂಪೊ ನೆರೆಪೊಸಪೂಗಳ
ದೊಂಗಲ ನಿಜಪರಿಮಳವೊ

ಪ್ರಸ್ತುತ ಸಂಪುಟ ಅದರ ಮೊದಲ ಕಂತು. ಇದರಲ್ಲಿ 'ತ್ರಿಪುರದಹನ ಸಾಂಗತ್ಯ' ಮತ್ತು 'ಮನ್ಮಥಮುಕುರ' ಎಂಬ ಎರಡು ಸಾಂಗತ್ಯ ಕಾವ್ಯಗಳು ಅಳವಟ್ಟಿವೆ.

ತ್ರಿಪುರದಹನ ಸಾಂಗತ್ಯ

ಕವಿ : ತ್ರಿಪುರದಹನ ಸಾಂಗತ್ಯದ ಕರ್ತೃ ಲಿಂಗ. ಈತ ತನ್ನ ಹೆಸರನ್ನು ಸ್ವ ಕೃತಿಯಲ್ಲಿ ಅನೇಕ ಬಾರಿ ಉಲ್ಲೇಖಿಸಿದ್ದಾನೆ. ಅದು ಲಿಂಗ[೨], ಲಿಂಗಪ್ಪ[೩], ಲಿಂಗಯ್ಯ[೪], ಲಿಂಗರಸ[೫], ಶಿವಕವಿ ಲಿಂಗ[೬] ಎಂದು ವೈವಿಧ್ಯಮಯವಾಗಿ ಬಳಕೆಯಾಗಿದೆ. ತನ್ನ ವಂಶ ಹಾಗೂ ತಂದೆಯನ್ನು ಕುರಿತು-

> "ಬಿರಿದು ಸಾಳುವನೆಡವಂಕನಧಿಕ ಪೊಳ-
> ಲರಸು ಹಂಪೆಯ ನಾಯಕನ
> ವರಭುಜ ತಿಮ್ಮಣ್ಣ ಮಂತ್ರಿಯಾತ್ಮಜ ಲಿಂ-
> ಗರಸ"[೭]
> "ಒಪ್ಪುವ ತಿಮ್ಮಪ್ಪಮಂತ್ರಿಯಾತ್ಮಜನು ಲಿಂಗಪ್ಪ"[೮]
> "ಗರುವ ತಿಮ್ಮಣ್ಣಮಂತ್ರಿಯ ಸುತ ಲಿಂಗಯ್ಯ"[೯]

ಎಂದು ಹೇಳಿಕೊಂಡಿದ್ದಾನೆ. ಇದರಿಂದ ಈತ ಸಾಳುವ ವಂಶಕ್ಕೆ ಸೇರಿದವನೆಂದೂ, ಹಂಪೆಯ ಅರಸನ ಮಂತ್ರಿ ತಿಮ್ಮಣ್ಣ ಅಥವಾ ತಿಮ್ಮಪ್ಪ ಈತನ ತಂದೆ ಎಂದೂ ತಿಳಿದುಬರುತ್ತದೆ. ಆದರೆ ಇಲ್ಲಿ ಹೇಳುವ ಅರಸು ಯಾರೆಂಬುದು ಸ್ಪಷ್ಟವಿಲ್ಲ[೧೦].

ಕಾವ್ಯದಲ್ಲಿ ನೇರವಾಗಿ ಕವಿ ತನ್ನ ಕಾಲದ ಉಲ್ಲೇಖ ಮಾಡಿಲ್ಲ. ಸಾಳ್ವ ವಂಶದ ಪ್ರಸ್ತಾಪ ಬಂದಿರುವುದರಿಂದ ಆ ಹಿನ್ನೆಲೆಯಲ್ಲಿ ಈತನ ಕಾಲವನ್ನು ನಿರ್ಧರಿಸಲು ಅವಕಾಶವಿದೆ. ಸಾಳ್ವ ಅರಸರ ಆಳ್ವಿಕೆಯ ಕಾಲಾವಧಿ ೧೪೮೬

---

೨. ತ್ರಿಪುರದಹನ ಸಾಂಗತ್ಯ :೧-೧೩, ೧೪, ೧೫, ೧೭,೨೬೨; ೨-ವ್ಯ.೧, ೨-೨;೩-೧, ೨, ೩; ೪-೨; ೫-೩.
೩. ಅದೇ. ೧-೧೮.
೪. ಅದೇ. ೫-೧೭೪.
೫. ಅದೇ. ೧-೧೬; ೫-೧೭೫.
೬. ಅದೇ. ೧-ಕಂ.೧, ೨; ೫-೧೭೬.
೭. ಅದೇ. ೧-೧೬; ೫-೧೭೫.
೮. ಅದೇ. ೧-೧೮.
೯. ಅದೇ. ೫-೧೭೪.
೧೦.ಈತ ವಿಜಯನಗರದ ಅರಸು ಕೃಷ್ಣದೇವರಾಯನಾಗಿರಬಹುದೆ? ಈತನ ಮಂತ್ರಿಯಾಗಿದ್ದ ತಿಮ್ಮಣ್ಣನೇ ಲಿಂಗಕವಿಯ ತಂದೆಯಾಗಿರಬಹುದೆ? ಸದ್ಯಕ್ಕೆ ಯಾವುದನ್ನೂ ಖಚಿತವಾಗಿ ಹೇಳಲು ಆಧಾರಗಳಿಲ್ಲ.

ಇದು ವೇದ ಸಿದ್ಧಾಂತದ ಕಥೆ ಕರ್ಮವ
ನೊದವ ಪುಣ್ಯದ ನೆಲೆವೀಡು
ಮುದದೊಳೊಲಿದು ಕೇಳ್ವರಿಗೆಲ್ಲ ಗಣಸಂ
ಪದವನೀವನು ಶಿವನೊಲಿದು   ೫-೧೭೩

ಈ ಶಿವ ಕಥೆಯನು ಕೇಳಿದವರ ಪಾಪ
ನಾಶವಹುದು ನಿಮಿಷದಲಿ
ಲೇಸಕೊಡುವ ಕೈಲಾಸ ಪದವ ಗಿರಿ
ಜೇಶನೊಲಿದು ಕರುಣದಲಿ   ೫-೧೭೮

ಇದು ಈ ಕಾವ್ಯದ ಸ್ಥೂಲ ಸ್ವರೂಪ.

ಶಿವನ ಇಪ್ಪತ್ತೈದು ಲೀಲೆಗಳಲ್ಲಿ 'ತ್ರಿಪುರದಹನಲೀಲೆ' ಒಂಬತ್ತನೆಯದು. ತುಂಬ ಪ್ರಸಿದ್ಧವಾದ ಇದು ಪ್ರಾಸಂಗಿಕವಾಗಿ ಎಲ್ಲ ಶಿವಪುರಾಣಗಳಲ್ಲಿ ಮತ್ತು ಶಿವಪರವಾದ ವಸ್ತುವನ್ನೊಳಗೊಂಡ ವೀರಶೈವ ಕಾವ್ಯಗಳಲ್ಲಿ ಬರುತ್ತದೆ. ಇದನ್ನು ಲಿಂಗ ಕವಿ ತನ್ನ ಪ್ರತಿಭಾ ಶಕ್ತಿಯಿಂದ ಒಂದು ಸ್ವತಂತ್ರ ಕಾವ್ಯವಾಗಿ ವಿಸ್ತರಿಸಿದ್ದಾನೆ. 'ತ್ರಿಪುರದಹನಲೀಲೆ'ಯ ಮೂಲ ಕಥೆ ಹೀಗಿದೆ :

"ತಾರಕಾಸುರನೆಂಬ ರಕ್ಕಸನು ಬಲಿಷ್ಠನಾಗಿ, ಸುರರೆಲ್ಲರಿಗೂ ಪ್ರಬಲ ಶತ್ರುವಾಗಿ ಅತಿಯಾದ ಉಪಟಳವನ್ನು ಕೊಡುತ್ತಿರುತ್ತಾನೆ. ದೇವತೆಗಳು ಶಿವನಲ್ಲಿ ಮೊರೆಯಿಡುತ್ತಾರೆ. ಶಿವಪುತ್ರ ಷಣ್ಮುಖನಿಂದ ಅವನ ಸಂಹಾರವಾಗುತ್ತದೆ. ತಾರಕಾಸುರನಿಗೆ ತಾರಕಾಕ್ಷ , ಕಮಲಾಕ್ಷ, ವಿದ್ಯುನ್ಮಾಲಿ ಎಂಬ ಮೂವರು ಮಕ್ಕಳಿರುತ್ತಾರೆ. ತಂದೆಯ ಮರಣದಿಂದ ಅವರು ಕೋಪಾವಿಷ್ಟರಾಗಿ ತಮ್ಮ ಆಜನ್ಮ ಶತ್ರುಗಳಾದ ಸುರರನ್ನು ನಾಶಮಾಡಲು ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ, ಯಾರಿಂದಲೂ ನಾಶವಾಗದಂತಹ ಮೂರು ಪುರಗಳನ್ನು, ಯಾರಿಂದಲೂ ತಮಗೆ ಮರಣವಿಲ್ಲದಂಥ ವರವನ್ನು ಪಡೆಯುತ್ತಾರೆ. ಆ ವರವನ್ನು ಕೊಡುವಾಗ ಬ್ರಹ್ಮನು ಈ ತ್ರಿಪುರಗಳು ಒಂದೆಡೆ ಸೇರಿದಾಗ ಒಂದೇ ಬಾಣದಿಂದ ಏಕಕಾಲದಲ್ಲಿ ಭೇದಿಸಬಲ್ಲ ಸಮರ್ಥನಿಂದ ಮಾತ್ರವೇ ಅವರ ಮರಣವೆಂದೂ ಎಚ್ಚರಿಸುತ್ತಾನೆ. ಅಂತೆಯೇ ಆ ರಕ್ಕಸತ್ರಯರು ದಾನವಶಿಲ್ಪಿಯಾದ ಮಯನಿಂದ ಸ್ವರ್ಗದಲ್ಲಿ ಚಿನ್ನದ, ಅಂತರಿಕ್ಷದಲ್ಲಿ ಬೆಳ್ಳಿಯ, ಭೂಲೋಕದಲ್ಲಿ ಕಬ್ಬಿಣದ ನಗರಗಳನ್ನು ನಿರ್ಮಾಣ ಮಾಡಿಸಿ, ಒಬ್ಬೊಬ್ಬರು ಒಂದೊಂದರಲ್ಲಿ ಆಳುತ್ತಾ ಮದಾಂಧರಾಗಿ ಸುರರೆಲ್ಲರಿಗೂ ಕಿರುಕುಳ ಕೊಡಲಾರಂಭಿಸುತ್ತಾರೆ. ಇಂದ್ರನನ್ನೂ ಸಹ ಪದಚ್ಯುತಗೊಳಿಸುತ್ತಾರೆ. ದೇವತೆಗಳೆಲ್ಲ ಬ್ರಹ್ಮ-ವಿಷ್ಣುಗಳಲ್ಲಿ ಮೊರೆಯಿಡುತ್ತಾರೆ. ಅವರು ಶಿವನೊಬ್ಬನೆ ಈ ತ್ರಿಪುರಾಸುರರ ಸಂಹಾರಕರ್ತನೆಂದು ತಿಳಿಸುತ್ತಾರೆ. ಅಲ್ಲದೆ ಸುರಸಮೂಹದೊಡನೆ

ಜಡೆದಲೆಯನು ಕಂಡು ಮುಡಿದಲೆಯನು ಕೊಟ್ಟ
ಕಡುಗಲಿ ಚೋಳ ಚಕ್ರೇಶಂ
ಮೃಡಪದವಿಯ ನೆಱೆ ಪಡೆದನ ಕೃತಿಯನು
ಪೊಡವಿಯರಿಯೆ ಬಣ್ಣಿಸುವೆ ೧-೧೧

ಇಲ್ಲಿ ಬರುವ ಕಥೆ ಹರಿಹರನ ಮನುಚೋಳನ ರಗಳೆ, ಗುಬ್ಬಿಮಲ್ಲಣಾರ್ಯನ ಭಾವಚಿಂತಾರತ್ನ, ಷಡಕ್ಷರದೇವನ ರಾಜಶೇಖರ ವಿಳಾಸ, ಶಾಂತಕವಿಯ ಸತ್ಯೇಂದ್ರ ಚೋಳರಾಯನ ಸಾಂಗತ್ಯಗಳಲ್ಲಿ ಬರುವ ಕಥೆಯಿಂದ ಭಿನ್ನವಾಗಿದೆ. ಚೋಳರಾಜನು ಜಡೆದಲೆಯನ್ನು ಕಂಡು ತನ್ನ ತಲೆಯನ್ನೇ ಕೊಟ್ಟು ಶಿವನನ್ನು ಒಲಿಸಿಕೊಂಡು ಮುಕ್ತಿಯನ್ನು ಪಡೆದ ಕಥೆಯನ್ನು ಇಲ್ಲಿ ನಿರೂಪಿಸಲಾಗಿದೆ. ಕಾವ್ಯದ ಮಹತಿಯನ್ನು ಕವಿ "ಲೇಸಿದು ಲಿಂಗನುಸುರಿದ ಶಿವಕಥೆ ಬೇಸರದೋರದು ಕಿವಿಗೆ" "ಸವಿನುಡಿಗಳ ಸೊಂಪು ನವರಸಗಳ ಗುಂಪು, ಶಿವಕವಿಗಳ ಮನದಿಂಪು, ಭುವನಜನರ ತಂಪು ಕೇಳ್ವರ ಕಿವಿಗಿಂಪು" "ತಂಗಾಳಿಯು ತಂಪಿನವೊಲು ಮೋಹನ ಸಿಂಗಾರವೆಣ್ಣಿನಂದದಲಿ" ಎಂದು ವರ್ಣಿಸಿದ್ದಾನೆ. ಅವನ ಈ ಹೇಳಿಕೆಯಂತೆ 'ಸವಿನುಡಿಗಳ ಸೊಂಪು' ಈ ಕಾವ್ಯದಲ್ಲಿ 'ಕೇಳ್ವ ಜನರ ಕಿವಿಗೆ ಇಂಪನ್ನು' ಒದಗಿಸುತ್ತದೆ.

'ತ್ರಿಪುರದಹನ ಸಾಂಗತ್ಯ'[೧೩] ಲಿಂಗನ ಎರಡನೆಯ ಕೃತಿ. ಚೋಳರಾಜ ಸಾಂಗತ್ಯಕ್ಕಿಂತ ಎರಡುಪಟ್ಟು ಹಿರಿಯ ಕಾವ್ಯ. ಇದರಲ್ಲಿ ೫ ಸಂಧಿ, ೧೦೨೦ ಸಾಂಗತ್ಯ, ಪ್ರಥಮ ಸಂಧಿಯ ಆರಂಭದಲ್ಲಿ ೨ ಕಂದ, ಪ್ರತಿ ಸಂಧಿಯ ಆರಂಭದಲ್ಲಿ ಒಂದೊಂದು, ಎರಡನೆಯ ಸಂಧಿಯ ಪ್ರಾರಂಭದಲ್ಲಿ ಎರಡು ಒಟ್ಟು ಆರು ವೃತ್ತಗಳು ಇವೆ. ವೃತ್ತಗಳಲ್ಲಿ ಆಯಾ ಸಂಧಿಯ ವಿಷಯ ಸಂಗ್ರಹ ಮಾಡಲಾಗಿದೆ. ಕಂದಗಳಲ್ಲಿ ಒಂದು ಕೃತಿಯ ವಸ್ತು ಸೂಚನೆಗೆ ಮೀಸಲಾಗಿದ್ದರೆ, ಮತ್ತೊಂದು ಕರ್ತೃವಿನ ವ್ಯಕ್ತಿತ್ವ ವಿಶೇಷವನ್ನು ತಿಳಿಸುತ್ತದೆ.

ಒಂದರಿಂದ ಹದಿನೆಂಟರ ವರೆಗಿನ ಸಾಂಗತ್ಯ ಪದ್ಯಗಳಲ್ಲಿ ಇಷ್ಟದೈವಗಳ ಸ್ತುತಿ, ಪೂರ್ವಕವಿಗಳ ಸ್ಮರಣೆ, ಕೃತಿಯ ವಸ್ತು ವಿಶೇಷತೆ, ನಿರೂಪಣೆಯ ಸೊಗಸುಗಾರಿಕೆ, ಕವಿಯ ವಂಶವಿವರ-ನೀಡಲಾಗಿದೆ. ಇಷ್ಟದೈವಗಳಲ್ಲಿ ಶಿವನನ್ನು ವಿಶೇಷವಾಗಿ-ಕಾವ್ಯದುದ್ದಕ್ಕೂ-ಸ್ತುತಿಸಲಾಗಿದೆ. ಜೊತೆಗೆ ವೀರೇಶ, ಗಣಪತಿ, ಸರಸ್ವತಿಯರನ್ನು ಒಂದೊಂದು ಪದ್ಯಗಳಲ್ಲಿ ನೆನೆಯಲಾಗಿದೆ. ಪೂರ್ವ ಕವಿಗಳಲ್ಲಿ ಬಾಣ, ವ್ಯಾಸ, ಉದ್ಭಟ, ಕಾಳಿದಾಸ, ಹರಿದೇವ, ರಾಘವಾಂಕರನ್ನು ಸ್ಮರಿಸಲಾಗಿದೆ.

---

೧೩. ಶಿಶುಮಾಯಣ(೧೪೭೨)ನೆಂಬ ಜೈನಕವಿ ಇದೇ ಹೆಸರಿನ ಕೃತಿಯೊಂದನ್ನು ರಚಿಸಿದ್ದಾನೆ. ಆದರೆ, ಅದರ ಕಥೆ ಇದರಿಂದ ಭಿನ್ನವಾಗಿದೆ. ಜನ್ಮ-ಜರಾ-ಮರಣ ಎಂಬುವು ಅಲ್ಲಿನ ತ್ರಿಪುರಗಳು. ಅವುಗಳನ್ನು ಆದಿನಾಥನು ಅಪರಾಜಿತಮಂತ್ರ ಎಂಬ ಬಾಣದಿಂದ ಸುಟ್ಟುಹಾಕುತ್ತಾನೆ.

ಜಡೆಯೊಳಗಳ ಗಂಗೆ ತೊಡೆಯ ಮೇಲಣ ನೀರೆ
ಮೃಡಕೊಡುಮತಿಗೆ ಮಂಗಳವ ೧-೪

ಹರನೊಪ್ಪಿದ ಶುಭಕರನೊಪ್ಪಿದ ಶಶಿ
ಧರನೊಪ್ಪಿದ ಪಾರ್ವತಿಯ
ವರನೊಪ್ಪಿದ ಸುಸ್ಥಿರನೊಪ್ಪಿದನೀ
ಶ್ವರನೊಪ್ಪಿದನು ಶೃಂಗರದಿ ೫-೧೬೯

ಸ್ತ್ರೀಯರ ವರ್ಣನೆ ಶೃಂಗಾರರಸಪೂರ್ಣವಾಗಿವೆ. ಸುಕೋಮಲ ಮೃದುಮಧುರ ಪದ-ಭಾವಗಳಿಂದ ತುಂಬಿ ಮನೋಹರವೆನಿಸಿವೆ:

ಪಂಕಜದೊಳು ತುಂಬಿ ತುಂಬಿಯೊಳೆಳೆಮಿಂಚು
ಬಿಂಕದ ಸಂಕದ ವೇಣಿ
ಶಂಕು ತಾವರೆಯೊಳು ನಕ್ಷತ್ರ ರಂಜಿಪ
ಕುಂಕುಮಗಂಧಿಯರೆಸೆಯೆ ೧-೧೬೩
ಉರತುಂಬಿದ ಮೊಲೆ ಮೊಗತುಂಬಿದ ಕಣ್ಣು
ಸಿರತುಂಬಿದ ತುಂಬೆಗುರುಳು
ಕರತುಂಬಿ ಬಿಗಿದಪ್ಪಿಕೊಂಡಿಹ ಸುಖ
ಸ್ಥಿರರಾಜ್ಯದ ಹಂಗೇಕೆ ೧-೧೭೦

ಕೆನೆವಾಲೊ ಜೇನ್ಗೊಡನೊ ಕಬ್ಬೊ ಮಾವಿನ
ತನಿವಣ್ಣಿನ ಪೊಸರಸವೊ
ವನಿತೆಯಳಧರಾಮೃತವನಿತ್ತಳು ಮಿಗೆ
ಇನಿಯನಿಗೇನು ಸುಕೃತವೊ ೧-೧೯೦

ಶಿವನು ತನ್ನ ಹಣೆಗಣ್ಣಿನಿಂದ ತ್ರಿಪುರಗಳನ್ನು ಸುಟ್ಟ ವರ್ಣನೆ ಅದ್ಭುತವೆನಿಸಿದೆ; ಓದುಗರ ಮೈ ನಡುಗಿಸುವಂತಿದೆ :

ಘುಡುಘುಡು ಛಿಳಿ ಛಿಳಿ ಛಿಳಿ ಚಿಟಿ ಚಿಟಿಲೆಂದುದು
ಮೃಡನುರಿಗಣ್ಣಿನಕೋಪ
ಸುಡತೊಡಗಿದುದು ಬ್ರಹ್ಮಾಂಡ ಮಂಡಲವನು
ಕಿಡಿಗಳ ಹರಹಿಯೊಗ್ಗಿನಲಿ ೫-೧೩೩

ಅಂಗಜಚಾಪದ ಜೇವಡೆಯೊ ಎನೆ
ಲಿಂಗನ ಕೃತಿಯು ರಾಜಿಪುದು ೩-೩

ರಸದಾಳಿಯ ಮಾವಿನ ತನಿವಣ್ಣಿನ
ಒಸರುವ ಪೊಸ ಜೇಂಗೊಡನ
ಪೊಸ ಸವಿಯಂತಿರೆ ತ್ರಿಪುರದಹನ ಕಥೆ
ಉಸುರಿದ ಶಿವಕವಿ ಲಿಂಗ ೫-೧೭೬

೧೯ನೆಯ ಪದ್ಯದಿಂದ ಕಾವ್ಯದ ಕಥೆ ಆರಂಭವಾಗುತ್ತದೆ. ಮೊದಲ ಸಂಧಿಯಲ್ಲಿ ದೇವೇಂದ್ರನ ವೈಭವ, ತಾರಕಾಸುರನ ಉಪಟಳ, ಶಿವಸುತ ಷಣ್ಮುಖನಿಂದ ತಾರಕನ ಸಂಹಾರ, ತಾರಕಾಸುರನ ಮಕ್ಕಳ ಶೋಕ, ಗುರುವಿನ ಉಪದೇಶದಂತೆ ತಾರಕಾಸುತರು ತಪಸ್ಸುಗೈದು ಬ್ರಹ್ಮನನ್ನು ಒಲಿಸಿಕೊಳ್ಳುವುದು, ಬ್ರಹ್ಮ ಅವರ ಬಯಕೆಯಂತೆ ಮೂರು ಪುರಗಳನ್ನು ರಚಿಸಿಕೊಡುವುದು, ತಾರಕಾಸುತರು ವೈಭವದಿಂದ ಮೆರೆಯುತ್ತ ದೇವತೆಗಳಿಗೆ ತೊಂದರೆಕೊಡುವುದರ ವರ್ಣನೆ ಬಂದರೆ, ಎರಡನೆಯ ಸಂಧಿಯಲ್ಲಿ ದೇವತೆಗಳು ಅಸುರರ ತೊಂದರೆ ತಾಳದೆ ಶಿವನಲ್ಲಿಗೆ ಬಂದು ಮೊರೆಯಿಡುವುದು, ಶಿವನು ನನಗೆ 'ಪಶುಪತಿ' ಎಂಬ ಬಿರುದಿತ್ತು, ಪಟ್ಟಗಟ್ಟಿದರೆ ಮಾತ್ರ ನಿಮ್ಮನ್ನು ರಕ್ಷಿಸುವೆನೆಂದು ಹೇಳುವುದು, ಅದರಂತೆ ಪಟ್ಟಗಟ್ಟುವುದು; ಮೂರನೆಯ ಸಂಧಿಯಲ್ಲಿ ನಾರದ ತಾರಕಾಸುತರಿಗೆ ಈ ವಿಷಯ ತಿಳಿಸಿ, ಶಿವನ ಮಹಿಮೆಯನ್ನು ಹೊಗಳುತ್ತ ಅವನೊಡನೆ ಸರಸ ಸರಿಯಲ್ಲ, ನೀವು ಶರಣಾಗತರಾಗಿ ಎಂದು ಹೇಳುವುದು, ಅವರು ಅವನ ಮಾತಿಗೆ ಒಪ್ಪದೆ, ಪ್ರತಿಯಾಗಿ ಶಿವನಿಂದೆ ಮಾಡಿ ಯುದ್ಧಕ್ಕೆ ಹೊರಡುವುದಾಗಿ ತಿಳಿಸುವುದು, ನಾರದ ಅವರಿಗೆ ನಿಮ್ಮ ತ್ರಿಪುರಗಳು ಹಾಳಾಗಲಿ ಎಂದು ಶಾಪ ಕೊಡುವುದು; ನಾಲ್ಕನೆಯ ಸಂಧಿಯಲ್ಲಿ ತಾರಕಾಸುತರು ಮತ್ತು ದೇವತೆಗಳ ಮಧ್ಯ ಘೋರ ಕಾಳಗವಾಗುವುದು, ದೇವತೆಗಳು ಸೋತು ಹೋಗುವುದು, ಐದನೆಯ ಸಂಧಿಯಲ್ಲಿ ಶಿವನು ತ್ರಿಪುರಗಳನ್ನು ಸುಟ್ಟು ನಾಶಮಾಡುವುದು, ದೇವತೆಗಳೆಲ್ಲ ನೆಮ್ಮದಿಯ ನಿಟ್ಟುಸಿರುಬಿಟ್ಟು, ಶಿವನನ್ನು ಸ್ತುತಿಸುವುದು– ಈ ವಿವರಗಳು ಬರುತ್ತವೆ.

ಪ್ರತಿ ಸಂಧಿಯ ಕೊನೆಯಲ್ಲಿ ಈ ಕೆಳಗಿನ–ಶಿವಸ್ತುತಿಪರವಾದ–ಪದ್ಯ ಕಡ್ಡಾಯವಾಗಿ ಬರುತ್ತದೆ:

ಚಂದ್ರಶೇಖರ ಭುಜಗೇಂದ್ರ ಭೂಷಣ ವಿಷ
ಕಂದರನಿಂದ್ರ ವಂದಿತನೆ
ನಂದಿಸಿಂಧನ ಮಹಿಮಾಬ್ಧಿ ವರ್ಣನೆಗಳ
ಸಂಧಿಮುಗಿದುದೆರಡನೆಯ ೨-೧೫೭

ಐದನೆಯ ಸಂಧಿಯ ಕೊನೆಯಲ್ಲಿ ಕೃತಿ ಶ್ರವಣದ ಫಲಶ್ರುತಿಯನ್ನು ಹೀಗೆ ತಿಳಿಸುತ್ತಾನೆ:

ಕ್ರೂರಮೃಗಕೆ ಮಿಗೆ ಭುಜಶೌರ್ಯವ, ಗಿರಿಗಳಿಗೆ ನಿಜ ಚೈತನ್ಯವ ಕೊಡೆ ಲೋಕವುಳಿವುದೆ?'-ಇಂತಹ ನುಡಿಗಳು ಕವಿಯ ಲೋಕಾನುಭವಕ್ಕೆ ಕನ್ನಡಿ ಹಿಡಿಯುತ್ತವೆ. ಲೀಲಾಜಾಲವಾಗಿ ಸಾಂಗತ್ಯ ಪದ್ಯಗಳನ್ನು ಹೆಣೆಯುವಲ್ಲಿ, ಔಚಿತ್ಯವರಿತು ಅಡೆತಡೆಯಿಲ್ಲದೆ ಸಹಜ ಸರಳ ಮೃದು-ಕಠಿಣ ಪದಗಳನ್ನು ಜೋಡಿಸುವಲ್ಲಿ, ಸಂದರ್ಭೋಚಿತ ಭಾವಾಭಿವ್ಯಕ್ತಿಗೊಳಿಸುವಲ್ಲಿ ಕವಿಯ ಕಾವ್ಯಶಕ್ತಿ, ಭಾಷೆ. ಛಂದಸ್ಸುಗಳ ಮೇಲಿನ ಹಿಡಿತ ಸುಪ್ರಕಟವಾಗಿವೆ. ಸಮರ್ಥವಾದ ವಸ್ತುನಿರ್ವಹಣೆ, ಸೊಗಸಾದ ನಿರೂಪಣಾ ಶೈಲಿ ಹಾಗೂ ಉನ್ನತವಾದ ಆಶಯಗಳನ್ನು ಹೊಂದಿದ ಈ ಕಾವ್ಯ ಕನ್ನಡ ಸಾಹಿತ್ಯಕ್ಕೆ ಒಂದು ಉತ್ತಮ ಕೊಡುಗೆ ಎನಿಸಿದೆ.

ಮನ್ಮಥಮುಕುರ

ಕವಿ : 'ಮನ್ಮಥಮುಕುರ' ದ ಕರ್ತೃವಿನ ಬಗೆಗೆ ಸದ್ಯಕ್ಕೆ ಹೆಚ್ಚಿನ ಸಂಗತಿಗಳು ಲಭ್ಯವಿಲ್ಲ. "ಮದನಾರಿಯು ತ್ರಿಯಂಬಕನ ಕಾರುಣ್ಯದಿ ಗದುಗಿನ ಗುಡಿಶೆಟ್ಟಿಯರು ಮುದದಿಂದ ಪೇಳ್ದನು ಮನ್ಮಥಮುಕುರವ"[೧೪] ಎಂದು ಹೇಳಿಕೊಂಡಿರುವುದರಿಂದ ಕವಿಯ ಹೆಸರು 'ಗುಡಿಶೆಟ್ಟಿ' ಎಂದು ತಿಳಿದುಬರುತ್ತದೆ. ಇನ್ನೊಂದು ಪದ್ಯದಲ್ಲಿ ಇದು 'ಗುಂಡಿಶೆಟ್ಟಿ' ಎಂದು ಉಲ್ಲೇಖಿಗೊಂಡಿದೆ.[೧೫] ಹೆಸರಿನ ಹಿಂದೆ ಸೇರಿದ 'ಗದುಗಿನ' ಎಂಬುದು ಅವನ ಸ್ಥಳವನ್ನು ಸೂಚಿಸುತ್ತದೆ. ಅಂದರೆ ಗದಗು ಕವಿಯ ಸ್ಥಳವಾಗಿರಬೇಕು. ಕಾವ್ಯಾಂತ್ಯದಲ್ಲಿ 'ಸಂಗಮನಾಥ'ನನ್ನು ನೆನೆದಿರುವುದರಿಂದ ಅವನು ಈತನ ಇಷ್ಟದೈವವಾಗಿರಬೇಕು. ಇಷ್ಟಲ್ಲದೆ ಇವನ ವಿಷಯವಾಗಿ ಮತ್ತೇನೂ ತಿಳಿದು ಬರುವುದಿಲ್ಲ. ಕೃತಿಯಲ್ಲಿ ಅದರ ರಚನಾ ಕಾಲ ಕುರಿತು ಹೇಳಿಕೊಂಡಿಲ್ಲ. ಪೂರ್ವ ಕವಿಗಳಲ್ಲಿ ಕಾಳಿದಾಸ, ಮಲುಹಣ, ನಂಬಿ, ಹರೀಶ, ಪಾಲ್ಕುರಿಕೆ ಸೋಮಾರಾಧ್ಯ, ಭೀಮಕವಿಗಳನ್ನು ನೆನೆದಿದ್ದಾನೆ. ಇವರಲ್ಲಿ ಕಾಲಮಾನದ ದೃಷ್ಟಿಯಿಂದ ಕೊನೆಯವನೆಂದರೆ ೧೩೬೯ ರಲ್ಲಿದ್ದ ಭೀಮಕವಿ. ಇದರಿಂದ ಈ ಕವಿ ೧೩೬೯ ರಿಂದ ಈಚಿನವನು ಎಂದು ವೇದ್ಯವಾಗುತ್ತದೆ. ಆದರೆ ಎಷ್ಟು ಈಚಿನವನು ಎನ್ನುವುದು ಖಚಿತವಾಗುವುದಿಲ್ಲ. ಈಗ ದೊರೆತ ಇವನ ಕೃತಿ ಓಲೆಗರಿಯಲ್ಲಿದೆ. ಶಕಟರೇಫೆಯನ್ನು ಬಳಸಲಾಗಿದೆ. ಭಾಷಾಶೈಲಿ ಸು. ೧೬ನೆಯ ಶತಮಾನಕ್ಕೆ ಸರಿಹೊಂದುತ್ತದೆ. ಕಾರಣ ಸದ್ಯಕ್ಕೆ ಸು. ೧೫೭೫ ಇವನ ಕಾಲವೆಂದು ಊಹಿಸಬಹುದು.

ಈಶನಲ್ಲದ ಪೊಗಳದ ನೇಮ ನರಭವಿ
ಪಾಶಂಡಿ ದೈವವಿದೂರ
ಪೋಷಣ ನಿಮಿತ್ಯ ಕೈಯಾಂತುವೊಂದಿಪ

೧೪. ಮನ್ಮಥಮುಕುರ :೭-೫೮
೧೫. ಅದೇ. ೧-೨೫

ಶಿವನಲ್ಲಿ ಹೋಗಿ ಪ್ರಾರ್ಥಿಸುತ್ತಾರೆ. ಅನೇಕ ಸಂವತ್ಸರಗಳ ನಂತರ ಆ ಮೂರು ನಗರಗಳು ಒಂದೆಡೆ ಸೇರುತ್ತವೆ. ಆಗ ಪರಶಿವನ ಆಜ್ಞೆಯಂತೆ ಭೂಮಂಡಲವೇ ರಥವಾಯಿತು. ಸೂರ್ಯಚಂದ್ರರೇ ರಥದ ಗಾಲಿಗಳಾದರು. ನಾಲ್ಕು ವೇದಗಳೇ ಕುದುರೆಗಳಾದವು. ಆಕಾಶವೇ ಕವಚವಾಯಿತು. ಮೇರುಪರ್ವತವೇ ಧನುಸ್ಸಾಯಿತು. ಆದಿಶೇಷನೆ ಬಿಲ್ಲಿನ ಹಗ್ಗವಾದನು. ವಿಷ್ಣುವೇ ಬಾಣವಾದನು. ಸಮುದ್ರವೇ ಬತ್ತಳಿಕೆಯಾಯಿತು. ಬ್ರಹ್ಮನೇ ಸಾರಥಿಯಾದನು. ಹೀಗೆ ಸಜ್ಜುಗೊಂಡ ಪರಮೇಶ್ವರನು ತ್ರಿಪುರಗಳನ್ನು ವಿಷ್ಣು ಬಾಣವೊಂದರಿಂದಲೇ ಏಕಕಾಲದಲ್ಲಿ ಭೇದಿಸಿ, ಸುರಕಂಟಕರಾಗಿದ್ದ ತ್ರಿಪುರಾಸುರರನ್ನು ಧ್ವಂಸ ಮಾಡಿ, ತಾರಕಾಸುರನ ವಂಶವೃಕ್ಷವನ್ನೇ ಸಮೂಲಾಗ್ರವಾಗಿ ನಿರ್ನಾಮಮಾಡಿ ದೇವತೆಗಳಿಗೆ ನೆಮ್ಮದಿಯನ್ನು ನೀಡುತ್ತಾನೆ."

ಈ ಕಥೆಯ ಜಾಡು ಹಿಡಿದೇ ಲಿಂಗ ಕವಿ ತನ್ನ ಕಾವ್ಯವನ್ನು ಹೆಣೆಯುತ್ತ ಸಾಗಿದ್ದಾನೆ. ಕಥಾವಸ್ತು ಚಿಕ್ಕದಾಗಿರುವುದರಿಂದ ವರ್ಣನೆಗಳ ಮೂಲಕ ಅದನ್ನು ೫೫ ಸಂಧಿಯವರೆಗೆ ಹಿಗ್ಗಿಸಿದ್ದಾನೆ. ಇಲ್ಲಿನ ವರ್ಣನೆಗಳೆಲ್ಲ ಸಾಂಪ್ರದಾಯಿಕವಾಗಿದ್ದರೂ ಅಲ್ಲಲ್ಲಿ ಕವಿಯ ಸ್ವತಂತ್ರ ಕಲ್ಪನಾ ಶಕ್ತಿಯ ಕಿಡಿಗಳು ಮಿಂಚುತ್ತವೆ. ತಾರಕಾಸುರನ ಮಕ್ಕಳು ತಪಸ್ಸಿಗೆ ಕುಳಿತ ಹೇಮಗಿರಿಯ ಪರಿಸರದ ವರ್ಣನೆ, ಶಬರರ ಬೇಟೆಯ ವರ್ಣನೆ, ಶಬರಿಯರ ರೂಪಾತಿಶಯಗಳ ವರ್ಣನೆ, ಮಯನು ನಿರ್ಮಿಸಿಕೊಟ್ಟ ತ್ರಿಪುರಗಳ ವೈಭವದ ವರ್ಣನೆ, ವೇಶ್ಯಾವಾಟಿಯ ವರ್ಣನೆ, ಕೈಲಾಸ ಗಿರಿಯ ವರ್ಣನೆ, ಶಿವನ ಒಡ್ಡೋಲಗದ ವರ್ಣನೆ, ತಾರಕಾಸುತರು ಮತ್ತು ದೇವತೆಗಳ ಮಧ್ಯ ನಡೆದ ಯುದ್ಧದ ವರ್ಣನೆ, ಶಿವನು ತ್ರಿಪುರಗಳನ್ನು ನಾಶಮಾಡಿದ ವರ್ಣನೆ– ಹೀಗೆ ಕಾವ್ಯ ವಿಸ್ತಾರವಾದ ವರ್ಣನೆಗಳಿಂದ ಇಡಿಕಿರಿದಿದೆ.

ಶಿವ ಪಾರಮ್ಯವನ್ನು ಪ್ರತಿಪಾದಿಸುವುದೇ ಈ ಕಾವ್ಯದ ಪರಮ ಉದ್ದೇಶವಾಗಿರುವುದರಿಂದ ಇಡೀ ಕಾವ್ಯದ ತುಂಬ ಶಿವನ ರೂಪಾತಿಶಯ–ಮಹಿಮೆ–ಸಾಹಸಗಳ ವರ್ಣನೆಗಳಿಗೆ ವಿಶೇಷ ಆದ್ಯತೆ ದೊರೆತಿದೆ:

> ಗಂಗಾತರಳ ತರಂಗದ ರುಚಿಯಲಿ
> ಶೃಂಗರಿಸಿ ತುಂಗಮಕುಟ
> ಮಂಗಳ ಗಿರಿಜಾಲಿಂಗನ ಲೋಲ ನಿ
> ರಂಗನಂಘ್ರಿಗೆ ನಮಿಸುವೆನು ೧–೩
>
> ಕಿಡಿಗಣ್ಣುನೊಸಲೊಳು ತಲೆಯೋಡು ಕರದಲಿ
> ಪಿಡಿದ ಸೂಲದ ಮೇಲೆ ಪೆಣನು

ನಾ ಸೇವಿಪೆನರ್ತಿಯಲಿ ೧–೧೯

ಎಂದು ತನಗಿಷ್ಟವಾದ ಹರಕವಿ ಮತ್ತು ಹರಭಕ್ತರನ್ನು ನೆನೆಯುತ್ತಾನೆ.

'ಭಾಳಾಕ್ಷ ನಿರೂಪವೆ ತಾನಿದು ನಾನು ಹೇಳಿದುದಲ್ಲ' 'ಮದನಾರಿ ತ್ರಿಯಂಬಕನ ಕಾರುಣ್ಯದಿ ಮುದದಿಂದ ಪೇಳ್ದೆನು' 'ಅರ್ಥಾಲಂಕಾರಭಿಧಾನ ಸಂಧಿ ಸಮಾಸ ಪ್ರತ್ಯಯ ಪ್ರಕೃತಿ ಲಿಂಗತ್ರಯವ ವಿಸ್ತರಿಸುವ ಛಂದ ರಸಭಾವ ಶಬ್ದವ ಮತ್ತಿವನೇನೆಂದರಿಯೆ'ನೆಂದು ವಿನಯವನ್ನು ತೋರಿ, 'ಗಾಣಿಯು ಗಮಕನಾದರೆ ಬರೆವನು ನೆರೆ ಜಾಣನಾದರೆ ಈ ಕೃತಿಯ ಊಣೆಯವಿನಿತಿಲ್ಲ ಛಂದಲಂಕಾರದಿ ಕಾಣಿಸಿ ಪದವಿಟ್ಟು ನೋಡೆ' ಎಂಬ ಆತ್ಮವಿಶ್ವಾಸವನ್ನು ತಾಳಿ, 'ವಿಸ್ತರಿಸುವೆ ನವರಸಭಾವಭರಿತದಿ ಚಿತ್ರದ ಕರುವಿನಂದದಲಿ ವಸ್ತುವೆಣ್ಣಿನ ಮುಖಮುಕುರವೆಂಬೊಲು ಜಾಣರಾಸ್ಥಾನ ಸೊಗಸುವಂದದಲಿ' ಎಂಬ ನಂಬಿಕೆಯಿಂದ ಮುನ್ನಡೆಯುತ್ತಾನೆ. 'ಈಶನಲ್ಲದ ಪೊಗಳದ ನೇಮ. ನರಭವಿ ಪಾಶಂಡಿದೈವವಿದೂರ' ಎಂದು ತನ್ನ ಕಾವ್ಯಧೋರಣೆಯನ್ನು ಸ್ಪಷ್ಟಪಡಿಸುತ್ತಾನೆ.

ತನ್ನ ಕಾವ್ಯದ ಸೊಬಗನ್ನು ಕೆಳಗಿನಂತೆ ಬಣ್ಣಿಸುತ್ತಾನೆ:

ಸಿರಿಯ ಸೊಬಗು ವಾಣಿಯ ಮತಿಯಮೃತ
ಕರ ಶೈತ್ಯವು ಮನ್ಮಥನ
ನೆರೆಲಾವಣ್ಯವೊಯೆಂಬೊಲು ಕೃತಿಯನು
ಬರೆವೆನು ಶರಣರಾಲಿಪುದು ೧–೨೪

ಸ್ತ್ರೀಯು ಪುರುಷನೊಳಪ್ಪಿ ಸ್ನೇಹದ ಸವಿ
ಮಾತಿನ ಸವಿಯಂತೆ
ಬೆಲ್ಲ ಘೃತವು ಚಿನಿಪಾಲೊಡನೆರೆವೊಲು
ಸಲ್ಲಿಸುವೆನು ಅರಿವರಿಗೆ ೩–೧

ಮುಂದೆ ಎರಡು ಪದ್ಯಗಳಲ್ಲಿ (೧–೨೮,೨೯)ಹದಿನೆಂಟು ವರ್ಣನೆಗಳ ವಿವರಗಳನ್ನು ನೀಡಿ, ತನ್ನ ಕಾವ್ಯದುದ್ದಕ್ಕೂ ಅವುಗಳನ್ನು ಉಚಿತಕ್ಕೆ ತಕ್ಕಂತೆ ತರುತ್ತ ನಡೆಯುತ್ತಾನೆ. ಪ್ರತಿ ಸಂಧಿಯ ಕೊನೆಯಲ್ಲಿ ಒಂದು ಶಿವಸ್ತುತಿ ಪರವಾದ ಪದ್ಯ ನಿಯತವಾಗಿ ಬರುತ್ತದೆ. ಏಳನೆಯ ಸಂಧಿಯ ಅಂತ್ಯದಲ್ಲಿ ಕೃತಿಯ ಫಲಶ್ರುತಿಯನ್ನು ಹೀಗೆ ತಿಳಿಸುತ್ತಾನೆ:

ಮನ್ಮಥಮುಕುರವನಿನ್ನಾರು ಕೇಳ್ವರೆ
ಹೊನ್ನು ಧಾನ್ಯವು ಘನವಹುದು

ಅದೆ ಹೊತ್ತುತದೆ ಹೊಗವುತಲದೆ ದಳ್ಳುರಿ
ಅದೆ ಸುಡುತಿದೆ ತ್ರಿಪುರವನು
ಅದೆ ಕೆಂಡದ ಮೇಲೆ ಮುಗಿಲ ಕರುವುತದೆ
ಅದೆಯೆಂದಮರರುಲಿದರು ೫–೧೩೪

ದಳದಳಸುದುರಲು ತಾರಕೆ ಗಿರಿ ಸಂ
ಕುಳ ಛಿಟಿಛಿಟಿಲೆಂದು ಸಿಡಿಯೆ
ಘಳಿಲನೆಸದುದು ಮುಗಿಲು ಕವುರಿಡೆ ಮು
ಪ್ಪೊಳಲ ಸುಟ್ಟನು ಗಿರಿಜೇಶ ೫–೧೩೫

ಅಳುವ ಕಂದನನ್ನು ಕಂಡು ಸಮಾಧಾನಪಡಿಸುವ ಶಬರಿಯರ ವರ್ಣನೆ ಸಹಜಸುಂದರವಾಗಿದೆ :

ಅಳುವ ಮಕ್ಕಳನೆತ್ತಿ ಶಬರಿಯರಲುಗಾಡಿ
ಹೊಳವ ಕಂಗಳ ನೀರ ತೊಡದು
ಮೊಲೆಗಳನೂಡಿ ಮೊಗವನೋಡಿ ಮುದ್ದಾಡಿ
ಒಲಿದು ಜೋಗುಳವ ಪಾಡಿದರು ೧–೮೬

ಹೀಗೆ ಕಾವ್ಯದ ತುಂಬೆಲ್ಲ ವರ್ಣನೆಗಳ ಚಿತ್ರಮಾಲೆಗಳನ್ನೇ ಕಟ್ಟಿದ್ದಾನೆ. ಗಿರಿ, ವನ, ಪುರ, ಸ್ತ್ರೀಯರ ವರ್ಣನೆಗಳಲ್ಲಿ ಶೃಂಗಾರ; ಯುದ್ಧ, ಬೇಟೆ, ತ್ರಿಪುರದಹನದ ಪ್ರಸಂಗಗಳಲ್ಲಿ ವೀರ–ಅದ್ಭುತ; ಶಿವನ ವರ್ಣನೆಯಲ್ಲಿ ಭಕ್ತಿರಸ ಓತಪ್ರೋತವಾಗಿ ಪ್ರವಹಿಸಿವೆ. ಉಪಮೆ, ದೃಷ್ಟಾಂತ, ರೂಪಕ ಮೊದಲಾದ ಅಲಂಕಾರಗಳನ್ನು ಉಚಿತಕ್ಕೆ ತಕ್ಕಂತೆ ಬಳಸಿದ್ದಾನೆ. ಅಲ್ಲಲ್ಲಿ ಸಂದರ್ಭಾನುಸಾರ ಲೋಕೋಕ್ತಿ, ನೀತಿಯ ನುಡಿಗಳನ್ನು ಬಳಸಿ ತನ್ನ ಕಾವ್ಯವನ್ನು ಜನಮುಖಿಗೊಳಿಸಲು ಪ್ರಯತ್ನಿಸಿದ್ದಾನೆ.

'ದುರ್ಜನರೇಸು ಶಾಸ್ತ್ರವನೋದಲು ಸಜ್ಜನರುಗಳಂತಹರೆ' 'ವಜ್ಜರಿಸುವ ಬಚ್ಚಲುದಕವು ತಿಳಿದರೆ ಮಜ್ಜನಕದು ಯೋಗ್ಯವಹುದೆ?' 'ಹಾಲನೆರೆಯಲು ಹಾವಿಗೆ ವಿಷ ಬಿಡುವುದೆ?' 'ಬಡತನ ಬಂದರೆ ಕಡುಗೂರ್ಪ ಹಗೆಯಹನು' 'ಕೈಸಿರಿಯುಳ್ಳ ಕಾಲಕ್ಕೆ ಸೇರುವರೆಲ್ಲ ಬಂಧುಗಳು' 'ಹಗೆಗಳ ಗೆಲುವರೆ ಮಿಗೆ ಸ್ನೇಹವ ಮಾಡಿ' 'ನರಿಯ ಸಂಗೀತಕ್ಕೆ ಕೋಡಗ ಮೋಹಿಸಿ ಸಿರದೂಗುವಂತೆ' 'ಹೊಗುವದರೊಳು ಹುಲ್ಲು ಹಾಕುವ ತೆರನಂತೆ' 'ಕನಸಿನ ಸುಖ ಕಣ್ದೆರೆದರೆ ಹೋಹಂತೆ' 'ಕಿಚ್ಚ ಹಾಯ್ವಳನುಬ್ಬಿಸುವಂತೆ' 'ಒಂದು ಕೈಯಲಿ ನೆಟ್ಟು ಎರಡು ಕೈಯಲಿ ಕೀಳ್ವಂತೆ' 'ವಾಲೆಯಕಾರಗೇತಕೆ ಬಂಗಾರವು' 'ಹಾವಿಗೆ ಪಕ್ಕವ, ಕೊಲೆಗೇಡಿಗೆ ಸಂಜೀವನವನು, ದುರ್ಜನಗೆ ಶೀವಿದ್ಯೈಶ್ವರ್ಯವ ಕೊಡೆ ಧರ್ಮ ಮೆರೆಯದು', 'ರಜನಿಗೆ ಕಠಿಣವ,

ಬೆನ್ನುಹತ್ತಿದ ರಾಜಭಟರಿಂದ ತಪ್ಪಿಸಿಕೊಂಡು ಒಬ್ಬ ಶೆಟ್ಟಿಯ ಮನೆಯನ್ನು ಪ್ರವೇಶಿಸುತ್ತಾನೆ. ಶೆಟ್ಟಿ ಅವನ ರೂಪವನ್ನು ಕಂಡು ತನ್ನ ಅಳಿಯನನ್ನಾಗಿ ಮಾಡಿಕೊಂಡು ವ್ಯಾಪಾರಕ್ಕೆ ಹಚ್ಚುತ್ತಾನೆ. ಒಂದು ದಿವಸ ಚಂದ್ರಾಕರ ಅಂಗಡಿಯಲ್ಲಿ ಕುಳಿತಿರಲು ಹೇಮಲತೆಯ ಸಖಿಯರು ಕಂಡು ಅವಳಿಗೆ ತಿಳಿಸುತ್ತಾರೆ. ಹೇಮಲತೆ ಬಂದು ಮನೆಗೆ ಕರೆದೊಯ್ಯುವೆನೆನ್ನಲು ಶೆಟ್ಟಿಯ ಮಗಳು ಬಿಡದಾಗುತ್ತಾಳೆ. ವಿಷಯ ತಿಳಿದು ಕಾಳಿಯೂ ಅಲ್ಲಿಗೆ ಬರುತ್ತಾಳೆ. ಮೂವರೂ ಅವನನ್ನು ಎಳೆದಾಡುತ್ತ ಅರಮನೆಯ ಹತ್ತಿರ ಬರಲು ರಾಜಕುಮಾರಿಯೂ ಕಂಡು ತಾನೂ ಬಂದು ಎಳೆಯತೊಡಗುತ್ತಾಳೆ. ಆಗ ಎಲ್ಲರೂ ಸೇರಿ ಅರಸನಲ್ಲಿಗೆ ಹೋಗಲು, ಅವನಿಗೆ ಅವರ ನ್ಯಾಯವನ್ನು ಬಗೆಹರಿಸುವದಾಗುವದಿಲ್ಲ. ಊರ ಶೆಟ್ಟಿಯ ಹತ್ತಿರ ಹೋಗಲು ಇದನ್ನು ಶಿವನೇ ಪರಿಹರಿಸಬೇಕೆಂದು ಹೇಳುತ್ತಾನೆ. ನಾಲ್ವರೂ ಹೋಗಿ ಶಿವನನ್ನು ಬೇಡಿಕೊಳ್ಳಲು ಹೇಮಲತೆಗೆ ವರ ದೊರೆಯುತ್ತದೆ. ಆಗ ಆಕೆ ನಾವೆಲ್ಲರೂ ಇವನಿಗೆ ಸತಿಯರು ಎಂದು ಹೇಳುತ್ತಾಳೆ. ಅರಸ ನಾಲ್ವರೂ ತನ್ನ ಮಕ್ಕಳೆಂದು ಭಾವಿಸಿ ಮದುವೆ ಮಾಡಿ ಚಂದ್ರಾಕರನಿಗೆ ಪಟ್ಟಗಟ್ಟುತ್ತಾನೆ. ಅವನು ಅರಸನಾಗಿ ಅರಿಬಲವನ್ನು ನಾಶಮಾಡಲು ಹೊರಟು, ತನ್ನ ತಂದೆ ಮಂತ್ರಿಯಾಗಿದ್ದ ರಾಜ್ಯಕ್ಕೆ ದಾಳಿಯಿಡುತ್ತಾನೆ. ಮಂತ್ರಿ ತನ್ನ ಮಗನನ್ನು ಗುರುತಿಸಿ ಅರಸನಿಗೆ ತಿಳಿಸುತ್ತಾನೆ. ಅವನು ತನ್ನ ಮಗಳು ಹೇಮಲತೆಯನ್ನು ಕಂಡು ಮುದ್ದಾಡಿ ಇಬ್ಬರಿಗೂ ಮದುವೆ ಮಾಡಿ ತನ್ನ ರಾಜ್ಯಕ್ಕೆ ಪಟ್ಟಗಟ್ಟುತ್ತಾನೆ. ಚಂದ್ರಾಕರ ಎರಡೂ ರಾಜ್ಯಕ್ಕೆ ಅರಸನಾಗಿ ಕೆಲಕಾಲ ಇದ್ದು ಶಿವನ ಆಜ್ಞೆಯಾಗಲು ನಾಲ್ವರು ಸತಿ ಸಹಿತ ಕೈಲಾಸಕ್ಕೆ ತೆರಳುತ್ತಾನೆ.

ಈ ಕಥೆಯನ್ನು ಗುಡಿಶೆಟ್ಟಿ ಅತ್ಯಂತ ರಸಪೂರ್ಣವಾಗಿ ನಿರೂಪಿಸಿದ್ದಾನೆ. ಚಂದ್ರಾಕರ ಕಥೆಯ ಕೇಂದ್ರವ್ಯಕ್ತಿ. ಅವನ ಪಾತ್ರವನ್ನು ಮೈತುಂಬ ಕಣ್ಣಾಗಿ ಮನ್ಮಥನಂತೆ ಚಿತ್ರಿಸಿದ್ದಾನೆ. ಅವನ ರೂಪಾತಿಶಯಗಳನ್ನು ಮನಂಬುಗುವಂತೆ ವರ್ಣಿಸಿದ್ದಾನೆ. ಹೇಮಲತೆ ಕಥಾನಾಯಕಿ. ಅವಳ ಪಾತ್ರವನ್ನಂತೂ ಶೃಂಗಾರ ರಸದಲ್ಲಿ ಅದ್ದಿತೆಗೆದಿದ್ದಾನೆ. ಪೋಷಕ ಪಾತ್ರಗಳಾಗಿ ಬಂದ ರಾಜಕುಮಾರಿ, ಕಾಳಿ, ಶೆಟ್ಟಿಯ ಮಗಳು ಒಂದೊಂದು ಬಣ್ಣದ ಚಂಡುಗಳಂತೆ ಕಂಗೊಳಿಸುತ್ತವೆ. ಉಳಿದ ಪಾತ್ರಗಳಾದ ಅರಸ, ಮಂತ್ರಿ, ಶೆಟ್ಟಿ, ಉಚಿತಕ್ಕೆ ತಕ್ಕಂತೆ ಚಿತ್ರಿತರಾಗಿದ್ದಾರೆ. ಒಂದೊಂದು ವರ್ಣನೆಗಳೂ ಮಾಧುರ್ಯದಿಂದ ತುಂಬಿವೆ. ಎಲ್ಲೆಲ್ಲೂ ರಸಿಕತೆ ಲಾಸ್ಯವಾಡಿದೆ; ಶೃಂಗಾರರಸದ ದಿಗ್ವಿಜಯ ನಡೆದಿದೆ. ಕಾವ್ಯಶರಧಿಯನ್ನು ಪ್ರವೇಶಿಸಿದರೆ ಹೆಜ್ಜೆ ಹೆಜ್ಜೆಗೂ ರಸತಟಾಕಗಳು ಸ್ವಾಗತಗೈಯ್ಯುತ್ತವೆ; ಪ್ರಾರಂಭದಿಂದ ಕೊನೆಯವರೆಗೆ ಬರಿ ಮಧುರ ಮಂದಾರಗಳೇ ಎದುರಾಗುತ್ತವೆ. ಅವುಗಳ ಮಧುವನ್ನು ಸವಿ ಸವಿದು ಓದುಗನ ತನು–ಮನ ತಣಿಯುತ್ತವೆ; ಸಂತೃಪ್ತಿಯನ್ನು ಹೊಂದುತ್ತವೆ. ಆ ತಟಾಕಗಳಲ್ಲಿ ಕೆಲವನ್ನಿಲ್ಲಿ ನೋಡಬಹುದು :

ದೂಷಕನೆಂದೆಂಬ ಶೀಲ ೧-೨೬

ಬಡತನ ಬಂಧನ ಅಡರು ಆಪತ್ತಿಗೆ
ದೃಢಗೆಡದಲಿ ಸತ್ಯಗೆಡದೆ
ಹಿಡಿದ ಛಲವ ಬಿಡದಲಿ ನಡವುತಲಿರೆ
ಮೃಡರಡಿಗೆ ಒಂದಿಸುವೆ ೧-೨೭

ಎಂದು ಹರಿಹರಾದಿ ಕವಿಗಳಂತೆ ಶಿವನಿಷ್ಠೆಯನ್ನು ಮೆರೆದ ಗುಡಿಶೆಟ್ಟಿ ಲಿಂಗಾಯತ ಧರ್ಮಕ್ಕೆ ಸೇರಿದವನೆಂದು ಸ್ಪಷ್ಟವಾಗುತ್ತದೆ. ಅವನ ಈ ಶಿವನಿಷ್ಠೆ ಕಾವ್ಯದುದ್ದಕ್ಕೂ ಹೆಜ್ಜೆ ಹೆಜ್ಜೆಗೆ ಓದುಗರ ಮನವನ್ನು ತಟ್ಟುತ್ತದೆ.

ಕೃತಿ : 'ಮನ್ಮಥಮುಕುರ'[೧೬] ಗುಡಿಶೆಟ್ಟಿಯ ಈಗ ದೊರೆತ ಏಕೈಕ ಕಾವ್ಯ. ಇದರಲ್ಲಿ ೭ ಸಂಧಿ ೬೩೫ ಪದ್ಯಗಳಿವೆ. ಕೃತಿಯ ಹೆಸರು ಹಾಗೂ ಅದರಲ್ಲಿರುವ ಸಂಧಿ ಮತ್ತು ಪದ್ಯಗಳ ಒಟ್ಟು ಸಂಖ್ಯೆಯನ್ನು ಕವಿಯೇ ಬಾಯಿಬಿಟ್ಟು ಎರಡು ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ :

ಮನ್ಮಥ ಮುಕುರವೆನಿಪ ನಾಮವೀಕೃತಿ
ಸನ್ಮಾರ್ಗ ಶರಣರಾಲಿಪುದು
ಚಿನ್ಮಯನೊಲಿದೀವನಿಷ್ಠಾರ್ಥಪದಗಳ
ತನ್ಮನದಣಿವಂದದಲಿ ೧-೨೧

ಏಳು ಸಂಧೊಳಗಾಗಿ ಪೇಳಿದೆನರುನೂರ
ಮೇಲೆ ಮೂವತ್ತೈದನೆಣಿಸಿ
ಶೂಲಿಯ ಚರಣಕರ್ಪಿತವಾದ ಪದಸ್ತುತಿ
ಲಾಲಿಸುವುದು ಭಕ್ತಜನರು ೭-೬೦

ಕಾವ್ಯಾರಂಭದ ೧೧ ಪದ್ಯಗಳಲ್ಲಿ ಶಿವನನ್ನು ವಿವಿಧ ಬಗೆಯಲ್ಲಿ ಭಕ್ತಿಭಾವತುಂಬಿ ಸ್ತುತಿಸುತ್ತಾನೆ. ಅನಂತರ ಪಾರ್ವತಿ, ಗಣೇಶ, ವೀರಭದ್ರರಿಗೆ ವಂದಿಸುತ್ತಾನೆ. ಮುಂದೆ–

ಈಶನ ಕಪಿ ಕಾಳಿದಾಸನ ಹರಿಶ ಭೀ
ಮೇಶ ಪಾಲ್ಕುರಿಕಾರಾಧ್ಯರಿಗೆ
ಲೇಸೆನಿಸಿದ ಭೀಮ ಮಲುಹಣ ನಂಬಿಗೆ

---

೧೬. ಕವಿಚರಿತೆಯಲ್ಲಿ ಅನುಕ್ತ; ಅಪ್ರಕಟಿತ.

ಕುಡಿತೆಗಂಗಳ ಬೆಳಗಿನ ಸೊಡರ್ವರಿವಾಣ
ವಿಡಿದಯವ್ವನ ಕಳಸಗಳು
ಉಡಿಗೆ ಗುಡಿಯ ರನ್ನಗನ್ನಡಿ ಮುಖದರು
ಮಡದಿಯರಿದಿರ್ಯೆದಿದರು ೩–೯೭

ರಾಜಕುಮಾರಿ ಸಿರಿಧರೆ ಮತ್ತು ಗಿಳಿಯಾಗಿ ಬಂದ ಚಂದ್ರಾಕರ ಸುರತಸುಖದ ಸುಗ್ಗಿಯಲ್ಲಿರುವ ಚಿತ್ರವನ್ನು ಕವಿ ಮನ್ಮಥಶಾಸ್ತ್ರ ಪ್ರವೀಣನಂತೆ ಕೊಟ್ಟಿದ್ದಾನೆ :

ಮುಡಿಯೊಲದುದು ಮುಂಗುರುಳು ಲಂಬಿಸುತಲಿ
ಎಡೆಯಾಡುತಲಿ ಹೊನ್ನೋಲೆಗಳು
ತೊಡೆಯಲುಗತ ಕುಂಭಕುಚಕುಣಿದವು ಮೆ
ಲ್ಲೊಡಗಿ ಝುಣಝುಣರೆನುತ ೫–
೪೨

ಹಾವು ಕಡಿದು ಮಡಿದ ಮನ್ಮಥರೂಪದ ಚಂದ್ರಾಕರನನ್ನು ಹುಡುಕುತ್ತ ದುಃಖಿಸುತ್ತಿರುವ ಹೇಮಲತೆಯ ಮಾತುಗಳಲ್ಲಿ ಕವಿ ಕರುಣರಸದ ಕಡಲನ್ನೇ ನಿರ್ಮಿಸಿದ್ದಾನೆ :

ಪರದೇಶಿಯಾಗಿ ಬಂದೆನು ಪರದೇಶಕೆ
ಸಿರಿಯ ಮರೆದು ನಿನ್ನಿಂದ
ಇರಲಿಂತಾಯಿತೆನುತ ಹಾಯೆಂದಾಗ
ಹರಗೆ ಗೋಳಿಟ್ಟಳಾತರುಣಿ ೪–೪೯

ನುಡಿಯಬಾರದೆ ಚಂದ್ರಾಕರಯೆನ್ನೊಳು
ತಡದೇಕೆ ಕರೆ ಕರವಿಡಿದು
ಒಡಲು ಬೇವುತಲಿದೆನ್ನಯದೆಂದಾಗ
ಮುಡಿಬಿಟ್ಟು ಹುಡಿಯೊಳು ಹೊರಳಿ ೪–೫೦

ತಂದೆತಾಯನು ಬಿಟ್ಟು ಬಂಧುಬಳಗವನು
ಬಂದೆವು ಪರದೇಶಿಯಾಗಿ
ಕೊಂದುದು ವಿಧಿ ಚಂದ್ರಾಕರನಗಲ್ದೆನ್ನ
ಬೆಂದುದೊಡಲು ಮುಖದೋರೊ ೪–೫೭

ಬರಿ ಶೃಂಗಾರ ಕರುಣರಸಗಳನ್ನು ಮಾತ್ರ ತಂದರೆ ಕವಿಗೆ ತೃಪ್ತಿಯಿಲ್ಲ.

ಕನ್ನೇರು ಪುತ್ರರು ಹೆಚ್ಚುಗೆ ಶಿವನ
ಸನ್ನಿಧಿಯಿಷ್ಟಪದವು ೭-೫೬

ಲಾಲಿಸಿದರೆ ಓದಿದರೆ ಬರದರಿಗೆ
ಶೂಲಿಯು ಬೇಡಿದನೀವಾ
ಭಾಳಾಕ್ಷನ ನಿರೂಪವೆ ತಾನಿದು
ನಾನು ಹೇಳಿದ ಮಾತಲ್ಲ ೭-೫೭

"ಮನ್ಮಥಮುಕುರ" ಜನಪದ ಕಥೆಯನ್ನೊಳಗೊಂಡ ಒಂದು ಶೃಂಗಾರ ರಸಪೂರ್ಣ ಸುಂದರ ಕಥನಕಾವ್ಯ. ಕವಿ ಇದಕ್ಕೆ ಪೌರಾಣಿಕ ಆವರಣವನ್ನು ತೊಡಿಸಿದ್ದಾನೆ. ಹರಿಹರನ ರಗಳೆಗಳಂತೆ ಕಥೆ ಕೈಲಾಸದಲ್ಲಿ ಆರಂಭವಾಗಿ, ಭೂಲೋಕದಲ್ಲಿ ನಡೆದಾಡಿ ಮತ್ತೆ ಕೈಲಾಸದಲ್ಲಿ ಮುಕ್ತಾಯಗೊಳ್ಳುತ್ತದೆ. ಇದರ ಕಥಾಸಾರ ಹೀಗಿದೆ :

ಮಹಾರಾಷ್ಟ್ರದ ಭುವನಾಕ್ಷಿಯೆಂಬ ಪಟ್ಟಣವನ್ನು ಭಕ್ತಿರೂಪನೆಂಬ ಅರಸು ಆಳುತ್ತಿದ್ದ. ಅವನ ಸತಿ ರತ್ನಮಾಲೆ, ಮಂತ್ರಿ ನಾಮವೇದಿ. ಪ್ರಧಾನಿ ನನ್ನಿಕೀರ್ತಿ. ಶಿವನ ವರದಿಂದ ಅರಸನಿಗೆ ಹೇಮಲತೆಯೆಂಬ ಮಗಳೂ ಮಂತ್ರಿಗೆ ಚಂದ್ರಾಕರನೆಂಬ ಮಗನೂ ಜನಿಸುತ್ತಾರೆ. ಅವರು ಕೂಡಿಯೇ ಆಡಿ, ಕೂಡಿಯೇ ಓದಿ ವಿದ್ಯಾಪಾರಂಗತರಾಗಿ ಯೌವನಕ್ಕೆ ಬರುತ್ತಾರೆ. ಆಗ ಅರಸು ಮಗಳಿಗೆ ಮದುವೆ ಮಾಡಬೇಕೆಂದು ವರನ ಶೋಧ ನಡೆಸಲು ಮಂತ್ರಿಗೆ ತಿಳಿಸುತ್ತಾನೆ. ಅದನ್ನು ಕೇಳಿ ಹೇಮಲತೆ ಚಂದ್ರಾಕರನನ್ನೇ ಮದುವೆಯಾಗುವುದೆಂದು ನಿರ್ಧರಿಸಿ, ಅವನನ್ನು ಕರೆದುಕೊಂಡು ಊರುಬಿಟ್ಟು ಓಡಿಹೋಗಿ, ಕರ್ನಾಟಕ ದೇಶದ ಮಹಿಕಾಂತಿಯೆಂಬ ಪಟ್ಟಣದರಸು ಮಾಧವರಾಯನ ಆಸ್ಥಾನದಲ್ಲಿ ಹಾಡಿ ಅವನಿಂದ ಚಿನ್ನದ ಪದಕವನ್ನು ಕಾಣಿಕೆಯಾಗಿ ಪಡೆದು ಮರಳುವಾಗ ಕತ್ತಲೆಯಲ್ಲಿ ಪದಕ ಎಲ್ಲಿಯೋ ಬಿದ್ದು ಹೋಗುತ್ತದೆ. ಅದನ್ನು ಹುಡುಕಲೆಂದು ಹೋದ ಚಂದ್ರಾಕರ ಹಾವನ್ನೇ ಪದಕವೆಂದು ಹಿಡಿದು ಮಡಿಯುತ್ತಾನೆ. ಅವನನ್ನು ಕಾಳಿಯೆಂಬವಳು ಕಂಡು ಶಿವಾಲಯಕ್ಕೆ ಹೊತ್ತೊಯ್ದು ಶಿವನಲ್ಲಿ ಬೇಡಿ ಪ್ರಾಣ ಪಡೆದು ಗಿಳಿಮಾಡಿ ಅದರ ಕೊರಳಲ್ಲಿ ಒಂದು ಮಂತ್ರದ ದಾರವನ್ನು ಕಟ್ಟಿ ಅದನ್ನು ಜಗ್ಗಿದಾಗ ಪುರುಷನಾಗುವಂತೆ ನಿಯಮಿಸಿ ಸುಖಿಸುತ್ತಿದ್ದಳು. ಒಂದು ದಿವಸ ಪಂಜರವನ್ನು ಹಾಗೇ ಬಿಟ್ಟು ಹೋಗಲು ಗಿಳಿ ಹಾರಿ ರಾಜಕುಮಾರಿಯ ಕರುಮಾಡ ಸೇರಿತು. ಅವಳು ದಾರ ಜಗ್ಗಿ ಪುರುಷನಾಗಲು ಅವನೊಡನೆ ಸುಖವಾಗಿರಲು ಶಿವನು ಇದೆಲ್ಲ ಅರಸನಿಗೆ ತಿಳಿಯುವಂತೆ ಮಾಡಿ ಅವರಿಬ್ಬರನ್ನೂ ಅಗಲಿಸುತ್ತಾನೆ. ಚಂದ್ರಾಕರ ಹಿಡಿಯಲೆಂದು

ಪರಿಷ್ಕರಣ :

ಈ ಸಂಪುಟದಲ್ಲಿ ಸೇರಿದ ಎರಡೂ ಕಾವ್ಯಗಳನ್ನು ಪ್ರಥಮಬಾರಿಗೆ ಒಂದೊಂದೇ ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಲಾಗಿದೆ. ಹೆಚ್ಚಿನ ಪ್ರತಿಗಳು ಸದ್ಯಕ್ಕೆ ದೊರೆತಿಲ್ಲವಾದ ಕಾರಣ ಪಾಠಾಂತರಗಳನ್ನು ಗುರುತಿಸುವ ಪ್ರಮೇಯ ಉಂಟಾಗಿಲ್ಲ. ಎರಡೂ ಕೃತಿಗಳ ಹಸ್ತಪ್ರತಿಗಳು ಹೆಚ್ಚುಮಟ್ಟಿಗೆ ಶುದ್ಧವಾಗಿವೆ. ಅಲ್ಲಲ್ಲಿ ಕ್ವಚಿತ್ತಾಗಿ ತೋರುವ ಅಶುದ್ಧ ಪಾಠಗಳನ್ನು ಊಹಾತ್ಮಕ ಪರಿಷ್ಕರಣ ವಿಧಾನದ ಪ್ರಕಾರ ಪರಿಷ್ಕರಿಸಿ, ಶುದ್ಧ ಪಾಠವನ್ನು ಊಹಿಸಿ ಚೌಕ ಕಂಸಿನಲ್ಲಿ ಹಾಕಿ ಸ್ವೀಕರಿಸಲಾಗಿದೆ. ಮೂಲಪಾಠವನ್ನು 'ಮೂ' ಎಂಬ ಸಂಕೇತದೊಂದಿಗೆ ಅಡಿಯಲ್ಲಿ ಕೊಡಲಾಗಿದೆ. ಊಹೆಗೆ ನಿಲುಕದ ಅಶುದ್ಧ ಪಾಠಗಳನ್ನು ಹಾಗೆಯೇ ಇಟ್ಟು ಪ್ರಶ್ನಾರ್ಥಕ ಚಿಹ್ನೆಯಿಂದ ಸೂಚಿಸಲಾಗಿದೆ. ಎರಡೂ ಕಾವ್ಯಗಳ ಪ್ರತಿ ಸಂಧಿಯ ಅಂತ್ಯದಲ್ಲಿ ವ್ಯತ್ಯಾಸಗೊಂಡ ಪದ್ಯ ಸಂಖ್ಯೆಯನ್ನು ಸರಿಪಡಿಸಲಾಗಿದೆ. ಅನುಬಂಧದಲ್ಲಿ ಪದ್ಯಗಳ ಅಕಾರಾದಿ, ಕಠಿಣಪದಕೋಶ ಮತ್ತು ಪಾರಿಭಾಷಿಕ ಪದಕೋಶಗಳನ್ನು ಕೊಡಲಾಗಿದೆ. ಪಾರಿಭಾಷಿಕ ಪದಕೋಶ ಮಾತ್ರ ಎರಡೂ ಕಾವ್ಯಗಳಿಗೆ ಸೇರಿದಂತೆ ಒಂದೇ ಇದೆ. ಉಳಿದವು ಪ್ರತ್ಯೇಕವಾಗಿವೆ. ಹಸ್ತಪ್ರತಿಗಳ ಸ್ವರೂಪ ಕೆಳಗಿನಂತಿದೆ.

'ತ್ರಿಪುರದಹನ ಸಾಂಗತ್ಯ' ಕಾವ್ಯ ಪರಿಷ್ಕರಣಕ್ಕೆ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಭಾಂಡಾರದ ತಾಳೆಗರಿ ಪ್ರತಿ ಸಂಖ್ಯೆ ೧೪೦೨ ನ್ನು ಬಳಸಿಕೊಳ್ಳಲಾಗಿದೆ. ಇದರ ಉದ್ದ ೧೧", ಅಗಲ–೧.೬". ಒಟ್ಟು ೧ ರಿಂದ ೯೧ ರವರೆಗೆ ಗರಿಗಳಿವೆ. ಒಂದು ಗರಿಯಲ್ಲಿ ೬ ರಿಂದ ೭ ಸಾಲುಗಳಿವೆ. ಕೊನೆಯಲ್ಲಿ ಯಾವುದೇ ರೀತಿಯ ಪ್ರಶಸ್ತಿ ಬರಹವಿಲ್ಲ. ಅಕ್ಷರ ಸಾಧಾರಣ. ಶಕಟರೇಫೆಯನ್ನು ಬಳಸಲಾಗಿದೆ.

'ಮನ್ಮಥಮುಕುರ' ಕಾವ್ಯ ಪರಿಷ್ಕರಣಕ್ಕೆ ಅದೇ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಭಾಂಡಾರಕ್ಕೆ ಸೇರಿದ ತಾಳೆಗರಿ ಪ್ರತಿ ಸಂಖ್ಯೆ ೩೧೭/೨ ನ್ನು ಬಳಸಿಕೊಳ್ಳಲಾಗಿದೆ. ಇದರ ಉದ್ದ–೧೦.೨"; ಅಗಲ–೧.೧/೨". ೧ರಿಂದ ೨೧ ರವರೆಗೆ ಗರಿಗಳಿವೆ. ಒಂದು ಗರಿಯಲ್ಲಿ ೧೦ ರಿಂದ ೧೨ ಸಾಲುಗಳಿವೆ. ಅಕ್ಷರ ಸಣ್ಣ; ದುಂಡಗೆ. ಶಕಟರೇಫೆ ಬಳಕೆಯಾಗಿದೆ. ಹಸ್ತಪ್ರತಿಯ ಆರಂಭದಲ್ಲಿ "ಶ್ರೀ ಗುರುವೆ ಗತಿ, ಶ್ರೀ ವೀರಭದ್ರಾಯ ನಮಃ ಮನ್ಮಥಮುಕುರವ ಬರೆವುದಕ್ಕೆ ಶುಭಮಸ್ತು, ನಿರ್ವಿಘ್ನಮಸ್ತು" ಎಂದಿದ್ದರೆ, ಅಂತ್ಯದಲ್ಲಿ "ಶ್ರೀ ಮತು ಕ್ರೋಧನ ನಾಮ ಸಂವತ್ಸರದ ಮಾಘಶುದ್ಧ ಬಹುಳ ಪಂಚಮಿ ಗುರುವಾರದ ಶಯನ ಕಾಲ ತಾಸಿಗೆ ಮುಗಿಯಿತು ಮನ್ಮಥಮುಕುರವು" ಎಂದು ಪ್ರತಿ ಬರೆದು ಮುಗಿಸಿದ ಕಾಲವನ್ನು ತಿಳಿಸಲಾಗಿದೆ.

'ಶೃಂಗಾರ ಹಾಸ್ಯ ಕರುಣ ವೀರ ರೌದ್ರತೆ। ಅಂಗ ಭಯಾದ್ಭುತ ಶಾಂತ। ಹಿಂಗ ಬೀಭತ್ಸೊಂಬತ್ತು ರಸವನಾಂತ' ಶಿವನ ಮುಡಿಯ ವರ್ಣನೆ ಶೃಂಗಾರದ ಕುಡಿಯಂತಿದೆ:

ನಿಡಿದಾದ ರತ್ನದ ಕುಡಿಗಳೊ ಸುವರ್ಣೆಳೆ
ಯುಡಿಗಳೊ ಪವಳ ಮುಂಬರಿವ
ಕುಡಿಗಳೊ ಮದನನ ತಡೆಗಳೊ ಭಾಳಾಕ್ಷಿ
ಕಿಡಿಯಪ್ಪ ಜಡೆಗೊಂದಿಪೆನು ೧-೨

ಕಾರ್ಗತ್ತಲೆಯೇ ಮೈವೆತ್ತಂತಿದ್ದ ಕಾಡಬೇಡತಿಯ ವರ್ಣನೆ ನವೀನ ಕಲ್ಪನೆಯಿಂದ ಕೂಡಿದೆ:

ಮುಪ್ಪುರದಹನದಿ ಪತಿವ್ರತೆಯಲ್ಲಿ
ಇಪ್ಪುದ ಕಂಡಂಜಿ ಅಗ್ನಿ
ತಪ್ಪಲಿ ಹೊಗೆ ಮಸಗಿಯೆ ಕಪ್ಪುವಿಡಿದಳೆಂ
ದೊಪ್ಪದಲಿಹ ಬೇಡತಿಯರು ೨-೬೨

ಕಡುಗೋಪದಲಿ ಮನ್ಮಥನ ಸುಡಲಿ ಶಿವ
ಮಡದಡ್ಡಲಾಗೆ ನೋವಿನಲಿ
ಹೊಡದುರಿಯಲಿ ಮೈಕಂದಿದ ರತಿಗಡ
ನುಡಿವರೆ ಕಾಡಬೇಡತಿಯೊ ೨-೬೩

ಸೂರ್ಯಾಸ್ತದ ವರ್ಣನೆ ಕವಿಯ ಮನೋಭಾವಕ್ಕೆ ತಕ್ಕಂತೆ ಸುಂದರವಾಗಿದೆ:

ಕಳೆಯೆಲ್ಲವನೊಡಗೂಡಿ ಪಶ್ಚಿಮನಾರಿ
ಯೊಳು ರಾತ್ರಿವಿಟನಾಗಿ ಬಂದು
ಕಳಿವೆನೆನುತಲಾಕೆಯ ಗೃಹಪೊಗುವೊಲು
ತಳರ್ದನಂಬುದಿಗೆ ಮಿಹಿರಾ
೨-೮೬

ಆ ಹೆಣ್ಣಿನ ಕೇಶರಾಶಿಯು ಅರುಣ
ಊಹೆಯಂದದಿ ಮೇಘವೆಸೆಯೆ
ಮೋಹಿಸಿ ಮುಂಗುರುಳ್ಪಿಡಿಯೆ ಕಬರಿ ಕೆದ
ರೀಹಂದದಿ ನಭಗಳನು ೨-೮೭

ಸ್ತ್ರೀವರ್ಣನೆ ಶೃಂಗಾರದ ಸೀಮೆಯನ್ನು ಮೀರಿನಿಂತಿದೆ :

*

ಪರಿವಿಡಿ

ತನ್ನ ಕಾವ್ಯದಲ್ಲಿ ೧೮ ವರ್ಣನೆಗಳೆಲ್ಲ ಬರಬೇಕು, ನವರಸಗಳೆಲ್ಲ ಪ್ರತಿಪಾದನೆಗೊಳ್ಳಬೇಕೆಂಬ ಛಲದಿಂದ ಹೊರಟವನಾದುದರಿಂದ ಕೊನೆಗೆ ಯುದ್ಧವರ್ಣನೆಯನ್ನು ತಂದು ವೀರರಸವನ್ನೂ ಪ್ರತಿಪಾದಿಸಿದ್ದಾನೆ. ಆದರೆ ಶೃಂಗಾರರಸವನ್ನು ಧಾರಾಳವಾಗಿ ಹರಿಸಿದಂತೆ ವೀರವನ್ನು ತೋರುವಲ್ಲಿ ಶಕ್ತಿ ಸಾಲದಾಗಿದೆ:

ಗುಡಿಗೆಲವುಡಿಗದೆಗಳ ಹೊಯಿಲಿಗೆ ಬಿದ್ದು
ಕುದುರೆಯು ಕುಕ್ಕುರಿಸಿದವು
ಒಡದುಕೊಳುತ ಮೂಗುಬಾಯೊಳು ನೆತ್ತರು
ಬದಬದನೊಕ್ಕಾಡಿದವು ೬–೬೯

'ಮನ್ಮಥಮುಕುರ' ಒಂದು ಪ್ರೇಮ ಕಾವ್ಯ. ಇದರ ಕಥೆಗೆ ತೊಡಿಸಿದ ಪೌರಾಣಿಕ ಆವರಣವನ್ನು ತೆಗೆದರೆ ಇದು ಇಂದಿನ ಯುವ ಪ್ರೇಮಿಗಳ ಕಥೆಯನ್ನೇ ಹೋಲುತ್ತದೆ.

ಇಡೀ ಕಾವ್ಯದ ತುಂಬ ಪ್ರೇಮ ಪ್ರಸಂಗಗಳೇ ಮಾಲೆಗಟ್ಟಿರುವುದರಿಂದ ಶೃಂಗಾರರಸ ಇಲ್ಲಿ ಮೇಲುಗೈ ಸಾಧಿಸಿದೆ. ರಸಿಕತೆ, ರಮ್ಯತೆ, ರಂಜಕತೆ, ಮನೋಹರತೆ ಲಾಸ್ಯವಾಡಿವೆ. ಕವಿಯ ಉಜ್ವಲ ಕಾವ್ಯ ಪ್ರತಿಭೆ ಉಲ್ಲಾಸ– ಉತ್ಸಾಹದಿಂದ ನಲಿದಾಡಿದೆ. ಹೀಗಾಗಿ ಈ ಕಾವ್ಯವನ್ನು ಓದಿ ಮುಗಿಸಿದಾಗ ಬಣ್ಣ ಬಣ್ಣದ ಸುಂದರ ಸುಮರಾಶಿಯಿಂದ ಕಂಗೊಳಿಸುವ ಕಾಸಾರದಲ್ಲಿ ಸುಖಯಾನ ಮಾಡಿದ ಅಮೃತಾನುಭವವಾಗುತ್ತದೆ. ಹೀಗಾಗಿ 'ಮನ್ಮಥಮುಕುರ' ಎಂಬ ಹೆಸರು ಇದಕ್ಕೆ ಅನ್ವರ್ಥಕವಾಗಿದೆ.

ಕಾವ್ಯದ ವಸ್ತುವಿಗೆ ತಕ್ಕ ಮೃದುಮಧುರ ಸರಳ ಪದಬಂಧ, ಸುಕೋಮಲ–ಸುಕುಮಾರ ಭಾವ, ಸುಭಗ ಭಾಷಾ ಶೈಲಿ ಸಾಮರಸ್ಯಗೊಂಡಿವೆ. ಕಾವ್ಯದಲ್ಲಿ ವಿಶೇಷವಾಗಿ ಬಳಕೆಯಾಗಿರುವ ರಾಗ–ತಾಳ–ವಾದ್ಯ ವಿಶೇಷಗಳು, ಕಾಮಕಲೆಯ ವಿವಿಧ ಬಂಧ–ಭಂಗಿಗಳು, ಯುದ್ಧದ ವಿಧಿ–ವಿಧಾನಗಳು, ಸಮಕಾಲೀನ ಜನಜೀವನದ ರೀತಿ–ರಿವಾಜುಗಳು– ಕವಿಯ ವಿವಿಧ ಕಲೆ–ಶಾಸ್ತ್ರಗಳ ಮೇಲಿನ ಪ್ರಭುತ್ವ ಪರಿಣಿತಿ ಹಾಗೂ ಲೋಕಾನುಭವಕ್ಕೆ ಸಾಕ್ಷಿ ನುಡಿಯುತ್ತವೆ; ಈ ಕಾವ್ಯದ ಸಾಂಸ್ಕೃತಿಕ ಅಧ್ಯಯನಕ್ಕೆ ಆಹ್ವಾನಿಸುತ್ತವೆ.

ಒಟ್ಟಿನಲ್ಲಿ ಕನ್ನಡ ಶೃಂಗಾರ ಕಥನಕಾವ್ಯ ಪಂಕ್ತಿಯಲ್ಲಿ ಇದಕ್ಕೆ ಒಂದು ಮಹತ್ವದ ಸ್ಥಾನ ಮೀಸಲಾಗಿದೆ.

ಶಿವಕವಿ ಲಿಂಗ ವಿರಚಿತ

ತ್ರಿಪುರದಹನ ಸಾಂಗತ್ಯ

ಕೃತಜ್ಞತೆಗಳು :

ಈ ಎರಡೂ ಕಾವ್ಯಗಳನ್ನು ನಾನು 'ಕನ್ನಡ ಸಾಂಗತ್ಯ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಅಧ್ಯಯನ ಕೈಕೊಂಡ ಸಂದರ್ಭದಲ್ಲಿ (೧೯೭೧–೭೭) ಪ್ರತಿ ಮಾಡಿ ಇಟ್ಟುಕೊಳ್ಳಲಾಗಿತ್ತು. ಇದರಲ್ಲಿ ಒಂದನ್ನು ನನ್ನ ಶ್ರೀಮತಿ ಪ್ರತಿ ಮಾಡಿಕೊಟ್ಟಿದ್ದಳು; ಇನ್ನೊಂದನ್ನು ನಾನೇ ಮಾಡಿಕೊಂಡಿದ್ದೆ. ಇವುಗಳನ್ನು ಪರಿಷ್ಕರಿಸಿ ಪ್ರಕಟಿಸಬೇಕೆಂಬ ಬಯಕೆ ಇದುವರೆಗೆ ಈಡೇರಿರಲಿಲ್ಲ. ಕಳೆದ ವರ್ಷ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯವರು ಕರ್ನಾಟಕ ಸರ್ಕಾರದ ಕೋಟಿ ರೂ. ಅನುದಾನದ ಅಡಿಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆಯನ್ನು ಕೈಗೆತ್ತಿಕೊಂಡರು. ಆ ಯೋಜನೆಯ ಸಲಹಾಸಮಿತಿ ಸದಸ್ಯರಲ್ಲಿ ನಾನೂ ಒಬ್ಬನಾಗಿದ್ದೆ. ಆಗ ಹಸ್ತಪ್ರತಿ ಕುರಿತ ಯೋಜನೆಯನ್ನು ಆಯ್ಕೆ ಮಾಡಿಕೊಂಡ ಡಾ. ನಾಗಾಬಾಯಿ ಬುಳ್ಳಾ ಅವರು ಒಂದು ಕೃತಿ ಪರಿಷ್ಕರಿಸಿ ಕೊಡಲು ವಿನಂತಿಸಿಕೊಂಡರು. ಆಗ ನನಗೆ ಒಮ್ಮೆಲೆ ಹೊಳೆದದ್ದು ಅಪ್ರಕಟವಾಗಿ ಉಳಿದಿರುವ ಸಾಂಗತ್ಯ ಕೃತಿಗಳನ್ನು ಸಂಪುಟ ರೂಪದಲ್ಲಿ ಹೊರತರಬೇಕೆಂಬ ವಿಚಾರ. ತಕ್ಷಣ ಆಗಬಹುದೆಂದು ಒಪ್ಪಿಕೊಂಡೆ. ಅದರ ಫಲವಾಗಿಯೇ ಮೊದಲ ಕಂತಾಗಿ ಈ 'ಸಾಂಗತ್ಯ ಸಂಪುಟ' ಈಗ ಪ್ರಕಟವಾಗುತ್ತಿದೆ.

ಈ ಯೋಜನೆಯನ್ನು ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ಕೊಡಮಾಡಿದ ಕರ್ನಾಟಕ ಸರ್ಕಾರಕ್ಕೆ ಮೊದಲು ಅಭಿನಂದನೆ ಸಲ್ಲಿಸುತ್ತೇನೆ. ಸಲಹಾ ಸಮಿತಿಯ ಸದಸ್ಯನನ್ನಾಗಿ ಆಯ್ಕೆ ಮಾಡಿದ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಅನಂತ ಕೃತಜ್ಞತೆಗಳು. ಸಂಪಾದನೆ ಕಾರ್ಯವನ್ನು ವಹಿಸಿಕೊಟ್ಟ ಡಾ. ನಾಗಾಬಾಯಿ ಬುಳ್ಳಾ ಅವರಿಗೆ, ಹಸ್ತಪ್ರತಿಗಳನ್ನು ಬಳಸಿಕೊಳ್ಳಲು ಅನುಮತಿಯಿತ್ತ ಕನ್ನಡ ಅಧ್ಯಯನಪೀಠದ ಮುಖ್ಯಸ್ಥರಿಗೆ, ಪರಿಷ್ಕರಣ ಕಾರ್ಯದಲ್ಲಿ ನೆರವಾದ ನನ್ನ ಶ್ರೀಮತಿ ಮಂಗಳಾ ರಾಜೂರ ಅವರಿಗೆ, ಡಿ.ಟಿ.ಪಿ ಕಾರ್ಯವನ್ನು ತುಂಬ ಮುತವರ್ಜಿ ವಹಿಸಿ ಮಾಡಿಕೊಟ್ಟ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಹಾಗೂ ಆರ್. ಕೆ. ಹೆಗಡೆ ಅವರಿಗೆ, ಅಂದವಾಗಿ ಮುದ್ರಿಸಿದ ಮೆ॥ ಪ್ರಿಂಟ್ ಪಾರ್ಕ್ ಮುದ್ರಣಾಲಯದ ಒಡೆಯರಾದ ಜಿ.ಬಿ.ಪಾಟೀಲ ಅವರಿಗೆ ಅನಂತ ವಂದನೆಗಳು.

೦೬–೦೬–೨೦೧೨.

–ವೀರಣ್ಣ ರಾಜೂರ

ಸಂಧಿ : ಒಂದು

*ವೃತ್ತ :

ಶ್ರೀ ಭೂಷನಿಂ ಹರಿಯ[೧][ಜಾ][೧]ಮರರಿಂ ನೆಜಿ[೩] ನೊಂದು ತಾರ[೨][ಕಾ
ಕ್ಷಾಸುರರೊಮ್ಮೆ][೨] ಒಂದು ತಪವಂ ಸಲೆ ಮಾಡಿ ವಿಶಾಲ ಭಕ್ತಿಯಿಂ
ಬೇಸರದೊಲ್ದು ಪದ್ಮಜನ [೩][ಪೂ][೩]ಜಿಸಿ ಮೆಚ್ಚಿಸಿ ತಾರಕಾಕ್ಷ[೪][ರು
ದ್ಧಾ][೪]ಸಿಗಳೊ[೫][ಲ್ದು][೫] ಚಂ[೬][ದಿ][೬]ಸಿದರಂಬರದೊ[೭][ಳ್][೭] ವರಮುಪ್ಪುರ[೮]
[ಗಳಂ][೮]

ಕಂದ :

ಶ್ರೀ ಶಶಿಭೂಷ ತ್ರಿಪುರನಿ
ವಾಸಿಗಳಂ ಭಾಳನೇತ್ರದ ಶಿಖಿಯೊಳುರೆ ಸು
[೯][ಟ್ಟಾ][೯]ಸುರಕರ್ಮಕಥೆ[೧೦][ಯುಮಂ][೧೦]
ಲೇಸಾಗಿ ಪೇಳ್ದನೊಲ್ದು ಶಿವಕವಿ ಲಿಂಗಂ ॥೧॥

ಕವಿಮನ ಕಮಲಾದಿತ್ಯಂ
ಸವಿನುಡಿಸಂಪನ್ನನಯಿದೆ ಕನ್ನಡ ಜಾಣಂ
ಶಿವಕವಿ ಲಿಂಗನು ಪೇಳ್ದುದರೆ
ವಿವರಿಸಿದ ತ್ರಿಪುರದಹನದ ಕಥೆಯಂ ॥೨॥

---

* ಶ್ರೀ ಮಹಾಗುರುವೆ ಗತಿ, ತ್ರಿಪುರದಹನದ ಪುಸ್ತಕವ ಬರೆವುದಕ್ಕೆ ಶುಭಮಸ್ತು (ಮೂ).

೧–೧ ಜ(ಮೂ) ೨–೨ ಕಾಸುತರುಂ(ಮೂ) ೩–೩ ಭ(ಮೂ) ೪–೪ ರ್ಜುರ್ಧಾ(ಮೂ) ೫–೫ ಲಿದು (ಮೂ)೬–೬ಡಿ(ಮೂ) ೭–೭ ಳಂ(ಮೂ) ೮–೮ ವಂ(ಮೂ)೯–೯ ಟ್ಟು(ಮೂ) ೧೦–೧೦ ಯಂ(ಮೂ)

ಸಾಂಗತ್ಯ :

ಶ್ರೀ ಗಿರಿಜಾಸ್ಯಾಂಬುಜ.. ದಿನನಾಯಕ
ನಾಗಕುಂಡಲ ಚಂದ್ರಚೂಡ
ಭಾಗೀರತಿಧರ ಭಸ್ಮಲೇಪ ವೇ
ದಾಗಮವಂದ್ಯನೆ ಶರಣು ॥೧॥

ಅಕ್ಷರತ್ರಯ ಲೋಕ ಶಿಕ್ಷರಕ್ಷಕ ತ್ರಿ
ಯಕ್ಷ ಶರಣ ಕಲ್ಪವೃಕ್ಷ
ದಕ್ಷಾಧ್ವರಭಂಗ ಮೋಕ್ಷಸಾಧಕ ವಿಮ
ಲಾಕ್ಷ ರಕ್ಷಿಸು ಕೃಪೆಯಿಂದ ॥೨॥

ಗಂಗಾತರಳ ತರಂಗದ ರುಚಿಯಲಿ
ಶೃಂಗರಿಸಿದ ತುಂಗ ಮಕುಟ
ಮಂಗಳ ಗಿರಿಜಾಲಿಂಗನ ಲೋಲ ನಿ
ರಂಗನಂಘ್ರಿಗೆ ನಮಿಸುವೆನು ॥೩॥

ಕಿಡಿಗಣ್ಣು ನೊಸಲೊಳು ತಲೆಯೋಡು ಕರದಲಿ
ಪಿಡಿದ ಸೂಲದ ಮೇಲೆ ಪೆಣನು
ಜಡೆಯೊಳಗಳ ಗಂಗೆ ತೊಡೆಯ ಮೇಲಣ ನೀರೆ
ಮೃಡ ಕೊಡು ಮತಿಗೆ ಮಂಗಳವ ॥೪॥

ಅಂಧ[೧][ಕಾ][೧]ಸುರ ತಿಮಿರಾರ್ಕ ಪಿನಾಕಿ ಜ
ಲಂಧರ ಸುರಪ್ರಾಣ ವಿಜಯಾ
ಕಂದರ್ಪಹರ ಪುರವೈರಿಯ ಚರಣಾರ
ವಿಂದವ ನಾ ಬಲಗೊಂಬೆ ॥೫॥

ಓಡಿದ ಹಲಗೆ ಕೋರದಾಡೆಯು ಕೈಯೊಳು
ಜಡಿವ ಖಡುಗ ಶರ ಧನುವು
ಮುಡಿಯ ಲಿಂಗದ ಮುದ್ದುಮೊಗದ ವೀರೇಶ್ವರ
ನಡಿಗಳಿಗಾನೆರಗುವೆನು ॥೬॥

೧–೧ ಕ (ಮೂ)

ಮುಕ್ಕಣ್ಣನರಸಿಯ ಮೋಹದ ಕಂದನ
ಒಕ್ಕೊಂಬನಾನೆಮೊಗದನ
ಮಿಕ್ಕು ಮೀರಿದ ದೊಡ್ಡ ಹೊಟ್ಟೆಯ ಜೆನವನ
ನಕ್ಕರುಮಿಗೆ ಬಲಗೊಂಬೆ ||೭||

ವಾಣಿಯ ಸುಗುಣ ಪ್ರವೀಣೆಯ ಜಗಕತಿ
ಜಾಣೆಯನಜನ ರಾಣಿಯನು
ಮಾಣದೆ ನೆನವೆ ಕಲ್ಯಾಣ ಶಾರದೆ ಕೊಡು
ಕಾಣದ ಪದಕೆ ಮತಿಯನು ||೮||

ಭಟ್ಟಿ ಬಾಣನು ವ್ಯಾಸ[೧][ನು][೧]ದ್ಭಟ ಹರಿದೇವ
ಕಟ್ಟಾಣಿ ರಾಘವಾಂಕನನು
ಬೆಟ್ಟಿಹ ಕವಿ ಕಾಳಿದಾಸನಗ್ಗಳರನು
ನೆಟ್ಟನೆ ನಾ ಬಲಗೊಂಬೆ ||೯||

ರಸ ಪದಬಂಧ ವಿಭಕ್ತಿವಡಿ ಸಮಾಸ
ಎಸೆವತಿ ಶೀಲ ಛಂದ ನಾಮ
ಪಸರಿಪಲಂಕಾರ ಯತಿಗಣವನು ಬಲ್ಲ
ರಸಿಕರೀಕೃತಿಯ ತಿದ್ದುವದು ||೧೦||

ಸರಡ ಗಂಟಿಕ್ಕಿ ನಾನಾ ಕಥೆಗಳ ತಂದು
ವಿರಚಿಪ ಭಿತ್ತಿಯಂತಲ್ಲಾ
ಪರಿಕ್ಷಿಸೆ ವೇದ ಸಿದ್ಧಾಂತದ ಕಥೆಯಿದು
ಪರಮ ಶಿವೈಕ್ಯರು ಕೇಳಿ ||೧೧||

ಧಾರೆವಟ್ಟಲ[ದ ಸು] ಸಾರವ ಬಿಟ್ಟು ನಿ
ಸ್ಸಾರವ ಪಿಡಿವ ಖೂಳರಿಗೆ
ದೂರದೊಳಾನೆರಗುವೆ ಶಿವಕಥೆಯಿದು
ಭಾರಿ ಸುಜಾಣರು ಕೇಳಿ ||೧೨||

೧-೧ ನೂ(ಮಾ)

ಎಳೆಯಳ ಪೊಸ ಜವ್ವನದೊಡ್ಡಣೆಯಂತೆ
ತಿಳಿಜೊನ್ನದ ಕಳೆಯಂತೆ
ಚಿಲಿಪಾಲು ಸಕ್ಕರೆಯಂತೆ ಲಿಂಗನ ಕೃತಿ
ತಿಳಿವುದು ಸುಖದಿ ಕೇಳ್ವರಿಗೆ ॥೧೩॥

ದೆಸೆಗೆ ಕಂಪಿಡುವ ಜಾಜಿಯ ಪೂವಿನವೊಲು
ಶಿಶುಗಳ ಮೃದುನುಡಿಯಂತೆ
ಕುಸುಮಾಸ್ತ್ರನ ಬಿಲ್ಲುಲಿಯೊಯೆಂಬಂತೆಯು
ಎಸದುದು ಲಿಂಗನ ಕಾವ್ಯ ॥೧೪॥

ಅಂತಿಂತು ಪೇಳುವ ಸಂದೇಹ ಕವಿಗಳ
ತೊಂತಬೊಂತೆಯ ಕಥೆಯಲ್ಲಾ
ಸಂತತವಿದು ಲಿಂಗನ ಕೃತಿ ಮೋಹದ
ಕಾಂತೆಯನೊಲಿದಪ್ಪುವಂತೆ ॥೧೫॥

ಬಿರಿದು ಸಾಳುವನೆಡವಂಕನಧಿಕ ಪೊಳ
ಲರಸು ಹಂಪೆಯ ನಾಯಕನ
ವರಭುಜ ತಿಮ್ಮಣ್ಣ ಮಂತ್ರಿಯಾತ್ಮಜ ಲಿಂ
ಗರಸನೊರದನೀಕೃತಿಯಾ ॥೧೬॥

ದೇವರ ದೇವ ಗಜಾಸುರ ಮರ್ದನ
ಭಾವಜ ನಿರ್ಧೂಮ ಧಾಮಾ
ಪಾವಕಾಕ್ಷದಿ ತ್ರಿಪುರ ಸುಟ್ಟ ಕಥೆಯನು
ಭಾವಿಸಿ ಲಿಂಗನೊರದನು ॥೧೭॥

ಕಪ್ಪುಗೊರಳ ಸರ್ಪಧರನೊಂದು ಬಾಣದಿ
ಮುಪ್ಪುರಗಳ ಸುಟ್ಟ ಕಥೆಯ
ಒಪ್ಪುವ ತಿಮ್ಮಪ್ಪ ಮಂತ್ರಿಯಾತ್ಮಜನು ಲಿಂ
ಗಪ್ಪನೊಲಿದು ಪೇಳಿದನು ॥೧೮॥

ಧರೆಯ್ಯೈನೂಱು ಯೋಜನ ಸುತ್ತ ವಳಯದಿ
ಸರದಿಗಳೇಳು ತುಂಬಿಹವು
ವರ ಮೇರುಗಿರಿಯ ಮಂದಿರಕೆ ಪೂರ್ವದ ಭಾಗ
ಸರಿಸಮಧ್ಯದೊಳೊಪ್ಪುತಿಹುದು ॥೧೯॥

ಅಳಕಾಪುರ ಮಧುರಾಪುರ ವೈಕುಂಠ
ದೊಳಗುಳ್ಳ ಸಕಲ ಪಟ್ಟಣಕೆ[೧]
ವಿಳಸವಾಗಿಹುದಮರಾವತಿಯೆಂಬುದ
ರೊಳಗೊಪ್ಪುವನು [೨][ದೇವೇಂದ್ರಾ][೨] ॥೨೦॥

ರಂಭೆಯೂರ್ವಶಿ ಮೇನಕೆ ಮಂಜುಘೋಷಣಿ
ಸಂಭ್ರಮ ತಿಲೋತ್ತಮೆಯು
ಎಂಬಯಿವರು ಸತಿಯರು ಸುರನಾರಿಯ
ರಿಂಬಿಗೆ ವಿಳಸವಾಗಿಹರು ॥೨೧॥

ಸ್ಥಿರವಮೃತವನುಂಡು ಜನನಮರಣವಿಲ್ಲ
ಸುರಸತಿಯರ ಮೇಳದಲಿ
ವರ ಸಚಿ ನವ[೩][ನಿಧಿ][೩] ಭಂಡಾರ ಕರ್ತವ್ಯ
ಹರುಷದೊಳಿಹನು [೨][ದೇವೇಂದ್ರಾ][೨] ॥೨೨॥

ನಂದನಬನ ಹೊಂದಾವರೆಗೊಣನೊಳು
ಚಂದ್ರಧರನ ಭವನಗಳೊ
ಮುಂದೆ ಹರಿ[ಯು]ವ ನದಿಯ ಶೃಂಗಾರದಿ
ಇಂದ್ರನ ಪುರ ಮೆಱದಿಹುದು ॥೨೩॥

ಸುರಲೋಕ[ಕೆ]ಯೆದೆದಲ್ಲಣನೆನಿಸುವ
ನೆರದ ರಕ್ಕಸರೊಳಗಧಿಕಾ
ಪರಿಣತೆಯಿಂದ ತಾರಕಸುರ ಕ್ರೌಂಚಿಯ
ಗಿರಿಯೊಳೊಪ್ಪುವ ಮುದದಿಂದಾ ॥೨೪॥

೧–೧ ಕ್ಕೆ(ಮೂ) ೨–೨ ದೇವೀಂದ್ರ(ಮೂ) ೩–೩ ನದಿ(ಮೂ)

ನೋಡಿ ತಾರಕನ ಸಂಗ್ರಾಮವ ಷಣ್ಮುಖ
ಕೂಡೆಯ್ದಿದನು ಕೋಪದಲಿ
ಓಡಿ ಕ್ರವುಂಚ ಪರ್ವತದೊಡಲನು ಹೊಕ್ಕು
ಗಾಡಿಯುಡುಗಿ ದಾನವನು ॥೩೧॥

ಹಲವು ದಿನವು ಸಲೆ ಫಲಭೋಗವನುಂಡು
ತಲೆಯಕ್ಕರವಳಿವಾಗಾ
ನೆಲನ ಹೊಕ್ಕರೆ ಬಿಡದೆನುತ ತಾರಕಗಿರಿ
ಯೊಳಗಡಗಿದನೇನೆಂಬೆ ॥೩೨॥

ಕಡುಗಲಿ ತಾರಕಸುರನನು ಷಣ್ಮುಖ
ಕೆಡೆಯೆಚ್ಚನು ಗಿರಿಸಹಿತಾ
ಮಡಿದನೊಂದಂಬಿಲಿಯಸುರನೆಂಬುದ ಕೇಳಿ
ಬಿಡದೆಲ್ಲರು ಜಯಯೆನಲು ॥೩೩॥

ಕಡುಗಲಿ ತಾರಕ ಮಡಿದನೆಂಬುದ ಕೇಳಿ
ಗುಡಿಗಟ್ಟಿ ಸುರಕಟಕದಲಿ
ಮೊಡವಿಯೊಳಿದಿರಾರು ತಮಗೆಂದು ನಿರ್ಜರ
ಪಡೆ ಕೂಡಿ ಬೊಬ್ಬಿಡುತಿರಲು ॥೩೪॥

ಅಳಿದ ತಾರಕನೆಂದು ಇಳೆಯೆಲ್ಲ ಕೊಂಡಾಡೆ
ಉಳಿದ ಮೂವರು ದಾನವರು
[1][ಕಳೆ][1]ದೋಡಿದರು ತಮ್ಮ ಗುರುವು ಇದ್ದೆಡೆಗಾಗಿ
ಅಳವಳಿದರು ದುಗುಡದಲಿ ॥೩೫॥

ಆರ ಸೇರುವೆವಿನ್ನು ಸೇರರು ಸುರರೆಲ್ಲ
ಧಾರುಣಿಯೊಳು ದೈತ್ಯರೆನಲು
ಮಾರಾರಿ ಮೊದಲಾದ ಸುರರ ಗೆಲುವ ವಿ
ಚಾರವ ತಿಳಿದು ಪೇಳೆಮಗೆ ॥೩೬॥

೧–೧ ಕೆಳ (ಮೂ)

ಮುನಿದರೆ ಮೂಱುಲೋಕವ ನುಂಗುವ ತನ್ನ
ಮನಕೆ ತಾರನು ಪರಿಯಱರಾ
ಕನಕಾದ್ರಿಯೊಡೆಯನೆಂದರೆಯೊಮ್ಮೆ ಮ[೧][ಲೆ][೧]ವನು
ದನುಜ ತಾರಕ ಭುಜಬಲನು ॥೨೫॥

ತಾರಕಾಸುರನ ಮಕ್ಕಳು ತಾರಾಕ್ಷನು
ಧೀರ ಕಮಲಲೋಚನನು
ವೀರ ವಿದ್ಯುನ್ಮಾಲಿ ಇವರು ಮೂವರುಗಳು
ಕಾರಮೇಘದ ಸಿಡಿಲಂತೆ ॥೨೬॥

ನರ ನಾಗ ಸುರಲೋಕವನೆಲ್ಲಾ ತಾರಕ
ಪಿರಿದು ಭಂಗಿಸಿ ಸೂಱೆಗೊಳಲು
ತರಹರಿಸುವರೆಡೆಯಿಲ್ಲದೆಯೋಡಿತು[೨]
ಹರನಿಹ ರಜತ ಪರ್ವತಕೆ ॥೨೭॥

ಶಿವಗೆ ಹುಟ್ಟಿದನಾಱುಮೊಗದವನೇಳನೆ
ದಿವಸವೊಂದಲ್ಲದಳಿಯನು
ದಿವವು ಎಂಟಾದರೆ ಅಸುರನು ಅಳಿಯನು
ಬವರವಾರುಧಿಯು ತಾರಕನು ॥೨೮॥

ತ್ರಿಜಗವೆಲ್ಲವು ಮೊಱೆಯಿಡೆ ತಾರಕ
ಕುಜನ ಕೊಲೆಯ ಕೊಲ್ಲುತಿರಲು
ಗಜಚರ್ಮಧರ ಷಣ್ಮುಖನ ನೇಮಿಸಿಕೊಟ್ಟ
ತ್ಯಜಿಸೆಂದು ಮಲತ ದಾನವನ ॥೨೯॥

ಆ ದೇವ ವಾಹನದಾದಿಯ ಕೊಟ್ಟನು
ಮೇದಿನಿಯಱಿಯೆ ಬಾಲಕಗೆ
ಮೂದೇವರ ಮುಪ್ಪಿಡಿ ಮಾಡಿದ [ಅ]ಸುರನ
ಕಾದಿ ಗೆಲ್ಲೆಂದು ಹರಸಿದಾ ॥೩೦॥

೧-೧ ಲ(ಮೂ) ೨ ಷ್ಟು(ಮೂ)

ಹರನಂಧಕಸುರ ಗಜ[ವ್ಯಾಘ್ರಾ]ಸುರವ್ಯೆರಿ
ಹರಿಯಿಂದ್ರ ಜಂಭ[ಮ]ರ್ದನನು
ಸುರರೊಳಗಾರುವೊಳ್ಳಿದರಿಲ್ಲ ಬ್ರಹ್ಮನ
ನಿರದೆ ಭಜಿಸಿ ನೀವೆಂದಾ ॥೪೩॥

ಅಜನ ಭಜಿಪಡಾವ ಠಾವೆಂದು ಕೇಳಲು
ನಿಜವ ಪೇಳಿದನು ದೈತ್ಯರಿಗೆ
ರಜ ಹೇಮಗಿರಿ ನೀಲ ಮಂದರ ಪರ್ವತ
ತ್ರಿಜಗದೊಳುಳ್ಳ ಶೈಲದಲಿ ॥೪೪॥

ಧರೆಯ ಮಧ್ಯದಲಿಹುದೊಂದು ಚಿನ್ನದಬೆಟ್ಟ
ಪರಮಪುಣ್ಯಗಳೊಟ್ಟಿಲಂತೆ
ಸುರಮುನಿಗಳು ರಾಜಮೌಳಿಯ ಮೆಚ್ಚಿಸಿ
ವರವ ಪಡದ ಸುಕ್ಷೇತ್ರಾ ॥೪೫॥

ಗಿಡು ತರುಲತೆ ಜೇನಾಡು ಡೊಣೆ ಗುಹೆ ಜಜಿ
ಒಡನೆ ಕಿನ್ನರ ಮಿಥುನಾಳಿ
ಅಡರಿದ ಮುಗಿಲ ಪಳುಕಿನಂತೆ ಸಬರವಂ
ಗಡಲೆಸೆಯೆ ರಜತಾದ್ರಿ ॥೪೬॥

ಕಕ್ಕೆ ತಡಸುವತ್ತಿ ಲೊಕ್ಕಿ ಬೆಳಲು ಬೇಲು
ಬಿಕ್ಕೆ ತುಂಬುರ ತೇಗು ಬೂರಾ
ಎಕ್ಕೆ ಗುಗ್ಗುಳ ಜೀವರಕ್ಷೆಯಾರತಿಯಾಲ
ಕಿಕ್ಕಿಜಿದವು ಕುಜಜಾತಿ ॥೪೭॥

ಉಡು ಹೇರಿಣೆಲು ಮುಂಗಿಲು ಮೂಸು ಸೀನ್ನಾಯಿ
ಕಡುವು ಮಾರ್ಜಾಲ ಹೆಬ್ಬಾವು
ಕಡುಗಿದೆಕ್ಕಲ ಕಾಡ್ಕೋಣ ಹೆಬ್ಬುಲಿಯುಜಿ
ಜಡಿದವಾ ಗಿರಿಯ ತಪ್ಪಲಲಿ ॥೪೮॥

ತಾರಕಾಕ್ಷನೆ ಕೈಸಿರಿಯುಳ್ಳ ಕಾಲಕ್ಕೆ
ಸೇರುವರೆಲ್ಲ ಬಂಧುಗಳು
ಭೂರಿ ಸುರರ ಸೇವೆಯ ಮಾಡಿ ನಿಮ್ಮಯ
ಕಾರಿಯ ಗೆಲ[ಲು]ಬೇಕೆಂದಾ ॥೩೭॥

ಬಡತನ ಬಂದರೆ ಕಡುಗೂಪ ಹಗೆಯಹ
ಪಡದರ್ಥ ಕೈಸಾರದೆನಲು
ಬಿಡದಮರರ ಸೇವೆಯ ಮಾಡಿ ಕಾರ್ಯವ
ಪಡವುದೆಂದನು ಕಾವ್ಯಕನು ॥೩೮॥

ಹಗೆಗಳ ಗೆಲುವರೆ ಮಿಗೆ ಸ್ನೇಹವ ಮಾಡಿ
ಹೊಗುವದವರ ಗುಣವರಿದು
ನಗುತ ಸೇವೆಯಲಿ ಕಾರ್ಯವ ಕೊಂಡು ಪ್ರಾಣವ
ತೆಗೆವುದೆಂದನು ದೈತ್ಯರಿಗೆ ॥೩೯॥

ಅಡವಿಯ ಗಿಡುವನು ಸುಡುವರೆ ವೃಕ್ಷದ
ಕಡೆಯಿಂದ ಮಥನಿಸಿದಗ್ನಿ
ಸುಡುವದೆಂದೆನೆ ಹರಿಯಜರ ಸ್ನೇಹವ ಮಾಡಿ
ತಡೆಗಡಿವದು ಸುರಪಡೆಯ ॥೪೦॥

ಕನಸಿನ ಸುಖ ಕಣ್ದೆಱದರೆ ಹೋಹಂತೆ
ಮನಸಿಲಿ ನೆನದ ಕಾರ್ಯವನು
ಅನುಮಿಷ ಪದವಿಯ ಪಡದಲ್ಲದೆ ನಿಮ್ಮ
ಘನಫಲವೀಡೇಱದೆಂದಾ ॥೪೧॥

ಈ ಪರಿಯಸಮ ಮಂತ್ರದ ನುಡಿಯನು ಕೇಳಿ
ಭಾಪುರೆನುತ ಭುಜಹೊಯಿದು
ಗೌಪ್ಯದೊಳಾರ ಭಜಿಪೆವೆಂದು ದೈತ್ಯರು
ಕೂಪ ಗುರುವ ಕೇಳಿದರು ॥೪೨॥

ಮುರುಟಸುತಿಹವು ಅನಲನಂದದಿ ತಾವು
ಪರಿದ ವೃಕ್ಷದ ಮದಕರಿಯ.
ಕೆರಳಿಸುವವು ಪುಂಡರೀಕನನಗ್ಗದ
ಇರುಳಿನಂದದ ನಾಯಿಗಳು ॥೫೫॥

ಬೀಸುವಲೆಯು ಮಣಿವಲೆ ಮಂಜುವಲೆ ಪೊಸ
ಹಾಸುವಲೆಯು ಕಣ್ಣಿವಲೆಯು
ಕೇಸರಿವಲೆ ಹೊಯ್ವಲೆ ಹೆಬ್ಬಲೆಗಳ
ರಾಸಿ ಹೊಜೆಗಳಲ್ಲಿಹವು ॥೫೬॥

ಹರಹುವಲೆಯ ಹಜ್ಜೆವಿಡಿ ಹಕ್ಕಿಯ
ಪರಿದೆಸೆಯೊಳಹೊಕ್ಕು ಸೋಹ
ಕರೆದು ಸನ್ನೆಗೆ ಬಿಡು ಘೂಳಿಗೆ ನಾಯ್ಗಳ
ಭರದಿಂದ ಹಾಸನು ಸರಿದು ॥೫೭॥

ಹುಲಿ ಮಲ್ಲೆ ಸಾರಂಗ ಮೊಲ ಕಾಡಹಂದಿಯು
ಮಲಗಿದೆ ಮರೆನೆಳಲೊಳಗೆ
ಮರೆಯಿಂದಿಳಿದವು ಪೊಸಮದಕರಿಗಳೆಂ
ದುಲಿದರು ಶಬರಾಧಿಪರರು ॥೫೮॥

ತೆಗೆತೆಗೆ ಸುಂಕನ ಸರಿವಂದಿಯಮೇಲೆ
ಉಗಿ ಹಾಸನು ಕೊಂಕನಿಗೆ
ತೊಗರನ ಬಿಡು ಕರಡಿಯಮೇಲೆ ಎನುತಲಿ
ಅಗಣಿತ ಶರಬರರುಲಿದರು ॥೫೯॥

ಇಡು ಬೆಳ್ಳಕ್ಕಿಯ ಗಜ್ಜುಕಕ್ಕರಗಳ
ಗಿಡುಗನೊಳೆಳೆವಲೆಗಳನು
ಬಿಡದೆ ಬೆಂಚೆಯ ತುಳುಕು ಹೆಮ್ಮೀನನು
ಓಡಿಯೆಂದೊದಜೆತು ಶಬರರು ॥೬೦॥

ಹುಲ್ಲೆ ಮೊಲನು ಬೆಕ್ಕು ಭಲ್ಲೂಕ ನರಿ ಮರೆ
ಝುಲ್ಲಿಯು ಮೃಗ ಮದದಾನೆ
ಬಲ್ಲಿದ ಪುಲಿ ಸಿಂಹ ಪಲ್ಲುಗಿರಿವ ಕಪಿ
ಎಲ್ಲಿ ನೋಡಲು ಮೃಗಮಯವು ॥೪೯॥

ಕರಡೆ ಕೋಗಿಲು ಬೆಣ್ಣೆದಲೆಗನ ವರಮಣಿ
ಗೊರವಂಕನುಲಿವ ಟಿಟ್ಟಿಬನು
ದರುವಕ್ಕಿ ದೊರೆಗಂಡಭೇರುಂಡನರಗಿಳಿ
ಪರಿಪರಿಗಳ ಪಕ್ಷಿಯೆಸೆಯೆ ॥೫೦॥

ಚಿಲುಕಿಲಿ ಗಿಡುಗ ಚೆಂಬೋತ ಜಾತಕ ಮಂಡೆ
ಗೊಳವ ಗವುಜ ಗುಮ್ಮಗಾಡೆ
ಉಲಿವ ಲಾವುಗೆ ಹಂಗ ಹಸುಬ ಕಬ್ಬಕ್ಕಿಗ
ಳೊಳಗಾದ ಖಗಕುಲವೆಸೆಯೆ ॥೫೧॥

ಬೆಳ್ಳಕ್ಕಿ ಬೆಳುವ ನವಿಲು ಜಾತಕವಕ್ಕಿ
ಕಲ್ಲಢಾಳಿಯು ಮೀಂಬುಲಿಗ
ಉಳ್ಳಿ ಪಿಕ್ಕಳಿಯು ನೋಪನು ಕೋಪನು ಪಿಗ್ಗ
ಎಲ್ಲೆಡೆಯಲಿ ರಾಜಿಪವು ॥೫೨॥

ಮೆಟ್ಟಿದೆಕ್ಕಟಿ ಬಡಿಕೋಲಿಟ್ಟಿ ಕಾಗಿನ
ದಟ್ಟಿ ಸುರಗಿ ಬಿಲ್ಲಂಬು
ಕಟ್ಟಿದ ಕಲ್ಲಿ ಪಿಡಿದ ಬಿಜುನಾಯ್ಗಳ
ದಿಟ್ಟ ಶರಬರರಲ್ಲಿಹರು ॥೫೩॥

ಕತ್ತರಿವಾಲ ಕಪ್ಪರೆಯನು ಕನಕದ
ಪುತ್ಥಳಿ ನೀಲದ ಚೆಂಡು
ಕಿತ್ತಳಗನು ಬೆಳ್ಳಬಳಗನೆಂದೆನಿಸುವ
ಮೊತ್ತದ ಬಲುನಾಯಿಗಳು ॥೫೪॥

ತುಡುಕಿ ಕವಿದು ಮುಱಿಯಲು ಕುಕ್ಕುರಗಳು
ಕೆಡೆದವು ಮೂಱುರುಳಾಗಿ
ಬಡಿಕೋಲಿನೊಳಿಡೆಯಾ ಶಬರರ ಕಾ
ಲೆಡೆತಪ್ಪಿ ಮೊಲನೋಡಿದವು ||೬೭||

ದಾಡೆಗಡಿವುತ ಮಲತು ಕಿಗ್ಗಣ್ಣೊಳು
ನೋಡುತ ಕೋಡ ಮಸೆವುತ
ಓಡದೆ ನಿಂದಿರ್ದವಾ ಯಕ್ಕಲಗಳು
ಬೇಡರ ಹೇಡಿಗೊಳಿಸುತ ||೬೮||

ಹಿಂಡುನಾಯಿಗಳನು ಬೆದರಿಸಿ ಬೇಡರ
ತಂಡವನೊಡೆಹಾ[೧][ಯ್ದೆತ್ತಿ][೧]
ಗಂಡುಗಲಿಗಳನು ಹೊಯ್ದು ರೊಂಪವನಂಡು
ಗೊಂಡೆಕ್ಕಲನು ಕಾದಿದವು ||೬೯||

ಎತ್ತಿತ್ತೆಕ್ಕಲನುಂಗುಷ್ಠದಿ ಶಬರರು
ನೆತ್ತಿಗೆ ಘಾಯವಡೆಯಲು
ಕತ್ತರಿಸಿತು ತುಡುಕುವ ನಾಯಿಗಳನೆಲ್ಲ
ನೆತ್ತರ ಕೋಡಿವರಿದುದು ||೭೦||

ಕೊಂದಿತೆನ್ನಯ ಮೆಚ್ಚಿನ ನಾಯಿಗಳ ಪಂದಿ
ಯೆಂದೊಬ್ಬನಿಟ್ಟಿಯ ನೆಗಹಿ
ಪಂದಿ ಕಂಡೆತ್ತಲು ತೊಲಗಿ ಹೆಜ್ಜೆಗಳನು
ನಿಂದಿಱಿದನು ಕಲಿ ಶಬರಾ ||೭೧||

ಇಟ್ಟೆಯೊಳೊಱಗಿದ ಪಂದಿಯ ಕಂಬಕೆ
ಕಟ್ಟಿದ ಮದಗಜದಂತೆ
ಕಟ್ಟಿದಿರಿನೊಳಿರೆ ಶಬರಿ ಹೊಗಳಿದಳು
ದಿಟ್ಟಿಸಿ ಗಂಡನ ಬಲುಹಾ ||೭೨||

೧–೧ ಯುದೆತ್ತಿ(ಮೂ)

ಕಡವೆಯನೆಸೆ ಕಾಡೆಮ್ಮೆಯ ತಱಿ ಹೇ
ರುಡುವನು ಹೊಯಿ ಕೊಂಡಗುಱಿಯ
ಕೆಡಹಿಱಿ ಸಾರಂಗವ ಕೈಯ್ಯುವಕ್ಕಿಯ
ಪಿಡಿಯೆಂಟಿನ ಕಣೆಗಳಲಿ ॥೬೧॥

ಅದೆ ಪಿಡಿದುದು ಮೊಲನನು ತನ್ನ ನಾಯಿ
ಅದೆ ಕವಿದುದು ತನ್ನ ಜೊನ್ನ
ಅದೆ ಕೊರಳನು ಪಿಡಿಯಿತು ತನ್ನ ಜೆಳಗನೆಂ
ದೊದಱಿತು ಶಬರಾಧಿಪರರು ॥೬೨॥

ಉಡುಪತಿಯೊಲು ಪುಂಡರೀಕಗಳುರುವನು
ಮಡಗಿಸುವದು ಮಾಂಸಗಳ
ಬಿಡದಂಡಲವುದು ತೀವ್ರದಿ ದಿನಪನಂ
ತಡವಿಯೊಳಗೆ ಬಲುನಾಯಿ ॥೬೩॥

ಹಸುರುಗುಪ್ಪುಸ ಜಂತದೋಲೆ ಸವಡಿ ಬಳೆ
ಮಿಸುಪ ತಳಿರ ಹೀಲಿಯುಡುಗೆ
ಪೊಸಗುಂಜಿಯ ದಂಡೆ ಸುಲಿಪಲ್ಲು ಹದವಿಲ್ಲು
ಎಸೆವ ಶಬರಿಯರಲ್ಲಿಹರು ॥೬೪॥

ಉರವಣಿಸುತ ಕಾಡ್ಕೋಣನು ಹಾಯಲು
ಸಿರಕೆ ನೆಗೆದು ಬೆನ್ನಿಗಡರಿ
ಇರದೆ ಶಬರಿಯೆಸೆದಳು ದುರ್ಗಿ ಮಹಿಷಾ
ಸುರನನು ಮೆಟ್ಟಿ ನಿಂದಂತೆ ॥೬೫॥

ಕಿತ್ತೆತ್ತಿ ಕೆದರಿ ತೂಗಿತ್ತೂಱಿ ಮೊಗವನು
ಎತ್ತಲುಗಿದು ಚಪ್ಪಿಱಿದು
ಒತ್ತೊತ್ತೊರಿಸಿತ್ತು ತಗಿಯಿತ್ತು ಪುದುಗಿತ್ತು
ಮತ್ತೊಂದು ಪಂದಿ ಗರ್ಜಿಸಲು ॥೬೬॥

ಸಿಂಗನಗಿದ ಶಾರ್ದೂಲನೊದದ ಮಾ
ತಂಗವಿಜಿದ ವ[೧][ರಾ][೧]ಹಗಳು
ಪಿಂಗದೆತ್ತಿದ ಗಾಯಗಳ ಕಿ[೨][ರಾ][೨]ತರು
ವಂಗಡಲೆಸದುದಲ್ಲಲ್ಲಿ ॥೭೯॥

ಪುಲಿದೊಗಲೆರಳೆಯಹೊಜೆ ಓಡಿ ಮೊಲಗಳು
ಬಲುಮೀನ್ನುದಿ ಜೇನ್ಗೊಡನು
ತಲೆವಣಿ ಹೀಲಿಯ ಗಜೆವಿಡಿದೊಂದೆಸೆ
ಕಲಿಬೇಡರುಗಳೆಯಿದಿದರು ॥೮೦॥

ಕರಡಿಯ ಬೇಂಟೆ ಬೆಳ್ಳಿಲಿಗಳ ಬೇಂಟೆ ಸೂ
ಕರಗಳ ಹೆಮ್ಮೀನ ಬೇಂಟೆ
ಕರಿಗಳ ಬೇಂಟೆಯಾಡುವ ಬೇಡರ ಬೊಬ್ಬೆ
ಉರವಣಿಸಿತು ಒಂದೆಸೆಯಾ ॥೮೧॥

ಸುವ್ವಿ ನಲ್ಲನೆ ಸುವ್ವಿ ಕಾಡೆಜೆಯನೆ ಪೊಸ
ಜವ್ವನದೊಡೆಯನೆ ಸುವ್ವಿ
ಸುವ್ವಿಯೆಂದೊನಕೆವಿಡಿದು ಬಿದಿರಕ್ಕಿಯ
ಯೌವ್ವನೆಯರು ತಳಿಸಿದರು ॥೮೨॥

ತೋಳಡಿವಿಡಿದೊನಕೆಯು ಪುಟನೆಗೆಯಲು
ಹೀಲಿಯುಡಿಗೆಯೋಸರಿಸೆ
ನೀಲಕುಂತಳ ಸಲೆ ಕುಣಿಯ[೩][ಲು][೩] ಶಬರಿಯ
ಜಾಲ ತಳಿಸುತಕ್ಕಿಯನು ॥೮೩॥

ಕಂದನೆ ಜೋಜೋ ಕಂಗಳ ಹೊನ್ನೆ ಜೋಜೋ
ಎಂದು ಬಾಣತಿ ಶಬರಿಯರು
ಮುಂದೆ ತೊಟ್ಟಿಲ ಶಿಶುದೂಗುತ ಪಾಡುವ
ರೊಂದೆಸೆ ತಳಿಸುತಕ್ಕಿಯನು ॥೮೪॥

೧-೧ ರ(ಮೂ) ೨-೨ ನಾ(ಮೂ) ೩-೩ ಲಿ(ಮೂ)

ಸರಳಿಸಿ ನೆಗದೆರಳೆಯ ಹೊಸ ಬಾಣದಿ
ಕುರನಾಲ್ಕನು ಪರಿದೆಸಲು
ಮರಳಿ ಹೆಬ್ಬುಲಿ ಹಾಯಲು ದಂಡೆಯನೊಡ್ಡಿ
ಸುರಗಿಯೊಳಿಜಿದನಾ ಶಬರಾ ||೭೩||

ಪುಲಿಯೊಳು ಮುಳುಗಿದ ಎಡದ[೧][ಕಣ್ಣು][೧]ಗಳಿಂದ
ಬಲದ ಕಣ್ಣಿನ ಕುಡಿನೋಟಾ
ತೊಲಗದು ನಲ್ಲಳ ಮೇಲದಲೆಕ್ಕಿಸ
ಕಲಿ ಶಬರನ ಬಲುಹೆಂತೊ ||೭೪||

ನಸೆಯೆರಳೆಯ ಮೇಲೆಯಂಬ ತೊಡಲು ಕಂಡು
ಮುಸುಕಿತು ವಿರಹ ಶಬರಗೆ
ಎಸೆವ ಸರಳ ಬಿಟ್ಟು ಅಸಿಯಳ ನೆರದನು
ಕುಸುಮಾಸ್ತ್ರನ ಬಲುಹೆಂತೊ ||೭೫||

ಕಡಿನಡೆ ತೊಲಗಿಜಿ ಹೊಡೆ ಶರೀರವನು ಕೊ
ಟ್ಟಡಿವಿಡಿ ಕೆಡಹು ಬಳಲಿಸು
ಪಿಡಿನೋಡೆಳೆ ತುಡುಕಡೆಗಟ್ಟೆಸೆಯೆಂಬ
ನುಡಿ ವಿಪಿನ ತುಂಬಿಹುದು ||೭೬||

ಇದು ಗಿರಿಜೇಶನ ಪಾರ್ಥನ ಬೇಂಟೆಯ
ಕದನದ ಮೂಕ ದಾನವನು
ಒದಗಿದ ಠಾವಿದು ವರಾಹನೋಯೆಂಬಂತೆ
ಇದಿರಾಗಿ ತಾವು ನಿಂದಿರಲು ||೭೭||

ತೋಹಿನಗೋರಿಯ ಚಿತ್ರದ ಪಟುಹದ
ಸೋಹಿನ ಜಳಪಳೆ ಹರದು
ಮೋಹದ ವಿದ್ಯದೊಳೆಂಟು ತೆಜದಲಿ ಸ
ಮ್ಮೋಹದ ಬೇಂಟೆಯಾಡಿದರು ||೭೮||

೧-೧ ಕಂ(ಮೂ)

ಹದ್ದಿನ ಮೇಲೆ ಹಾವುಗಳು ತಲೆಯ ನೀಡಿ
ಹೊದ್ದಿ ಹುಲಿಯ ಮೊಲೆಗಳನು
ಗುದ್ದಿ ಹುಲ್ಲೆಯಮಱಿ ಉಣುತ ವೈರವಬಿಟ್ಟು
ಇದ್ದವು ಕನಕಾದ್ರಿಯಲ್ಲಿ ॥೯೧॥

ಇಂತು ಮೆಱಿವ ಹೊನ್ನ ಬೆಟ್ಟವ ಹೊಂದಿ ಚೌ
ದಂತ ತಾರಕನಾತ್ಮಜರು
ಚಿಂತಿಸಿದರು ಬಲು ತಪದಲಿ ಬ್ರಹ್ಮನ
ನಂತ ಯುಗವು ಪರಿಯಂತ ॥೯೨॥

ಗಂಡರಗಂಡನುದ್ದಂಡಕನ ಪ್ರ
ಚಂಡನು ಕ್ರೌಂಚಾದ್ರೀಶಾ
ದಿಂಡೆಯ ತಾರಕ ತನುಜರೊಲಿದು ಕೃಷ್ಣ
ದಂಡ ಬ್ರಹ್ಮನ ಭಜಿಸಿದರು ॥೯೩॥

ಬಿರಿದಿನ ದೇವತೆಗಳ ಗೆಲಬೇಕೆಂದು
ಹರಿಯ ಮಗನನವಗಡಿಸೆ
ಧುರದೊಳಳಿದ ತಾರಕಾಸುರ ತನುಜರು
ನಿರರೂಹನ ಭಜಿಸಿದರು ॥೯೪॥

ಯಮ ನಿಯಮಾಸನ ಸಮಾಧಿ ಧಾರಣಯೆಂಬ
ಕ್ರಮದಷ್ಟಯೋಗಾಂಗದಲಿ
ವಿಮಲವಿಪ್ಪತ್ತೈದು ತತ್ತ್ವವನಱಿದಂದು
ಕಮಲಜನನು ಭಜಿಸಿದರು ॥೯೫॥

ಪಂಚೇಂದ್ರಿಯನೊದದರಿಷಡುವರ್ಗವ
ವಂಚಿಸಿಯಷ್ಟಮದಗಳ
ಸಂಚವಱಿದು ನೆಱೆ ಸುಜ್ಞಾನದಲಿ ವಿ
ರಿಂಚಿಯಡಿಯ ಭಜಿಸಿದರು ॥೯೬॥

ಸರವೆತ್ತಿ ಪಾಡುತಕ್ಕಿಯ ತಳಿಸಲು ಕಾ
ಡೆರಳೆಯುರಗ ಕಿವಿಗೊಟ್ಟು
ಮರಳಿ ನಿಂದಿಹವಾ ರಾಗದ ಸೊಗಸಿಗೆ
ತರುಣಿಯರಿಗೆ ನರರಿದುರೆ ॥೮೫॥

ಅಳುವ ಮಕ್ಕಳನೆತ್ತಿ ಶಬರಿಯರಲುಗಾಡಿ
ಹೊಳವ ಕಂಗಳನೀರ ತೊಡದು
ಮೊಲೆಗಳನೂಡಿ ಮೊಗವ ನೋಡಿ ಮುದ್ದಾಡಿ
ಒಲಿದು ಜೋಗುಳವ ಪಾಡಿದರು ॥೮೬॥

ಹಲವು ಛಂದದ ಲಾವಣ್ಯವೆಸದುದಾಗ
ಬಲು ತಪಸಿಗಳೊಗ್ಗಿನಲಿ
ಸುಲಲಿತ ಸುರಮುನಿಗಳುಯೆಸದಿರ್ದರು
ನಲಿದು ಶಿವನ ಧ್ಯಾನದಲಿ ॥೮೭॥

ಕರದ ಕಮಂಡಲ ವರದ ಭಸಿತ ಗಂಧ
ಉರದ ಯಜ್ಞೋಪವೀತಗಳ
ಕೊರಳರುದ್ರಾಕ್ಷಿ ಕೆಂಜೆಡೆ ಸುಲಿಪಲ್ಲಿನ
ವರಮುನಿಗಳ ಮೊತ್ತವೆಸೆಯೆ ॥೮೮॥

ಪ್ರಣಮ ಪಂಚಾಕ್ಷರಿಗಳನುಚ್ಚರಿಸುತ
ಎಣಿಸುತ ಜಪಮಾಲೆಗಳಾ
ತ್ರಿಣಯನ ಶಾಸ್ತ್ರವನೋದುವಬ್ಬರಗಳ
ಗಣನೆಯ ಮುನಿಗಳೆಸೆದರು ॥೮೯॥

ಅಡಿಗಳನೂರ್ಧ್ವ[೧][ಕೆ][೧]ನೆಗಹಿ ಸೂಜಿಯಮೇಲೆ
ಜೆಡೆದಲೆಗಳನೂಜಿ ನಿಂದು
ವಿಡುಕುವ ತುಟಿ ಮುಚ್ಚಿದ ಕಣ್ಣು ಧ್ಯಾನಿಪ
ಕಡುತಪಸಿನ ಮೊತ್ತವೆಸೆಯೆ ॥೯೦॥

೧-೧ ಕ್ಕೆ(ಮೂ)

ವೀರ ವಿದ್ಯುನ್ಮಾಲಿ ಕಮಲಲೋಚನ ಧೀರ
ತಾರಾಕ್ಷನೆಂಬವರುಗಳ
ಭಾರಿಯ ತಪದ ನಿಷ್ಠೆಗೆ ಮೆಚ್ಚಿ ಬಂದನು
ಸಾರಿದನಜನಸುರರನು ॥೧೦೩॥

ನೋಡಿದನವರ ಸಘಾಡದ ತಪವನು
ನಾಡಾಡಿ ಮುನಿಗಳಲ್ಲಿಂತು
ಕೂಡೆ ರೋಮಾಂಚನ ಜುಮ್ಮನೇಳುತ ಮಾತ
ನಾಡಿಸಿದನು ದೈತ್ಯರನು ॥೧೦೪॥

ಮೆಚ್ಚಿದೆ ಮುನಿಗಳಿಗೊಚ್ಚತ ವರವೀವೆ
ಉಚ್ಚಹದಲಿ ಬೇಡೆನಲು
ಬಿಚ್ಚಿ ಕಣ್ಣುಗಳನಚ್ಯುತನ ಮಗನ ಕಂಡು
ಹೆಚ್ಚಿ ನಮಿಸಿದರಾ ಖಳರು ॥೧೦೫॥

ಹೊಕ್ಕುಳ ತಾವರೆಯೊಳು ಪುಟ್ಟಿದಜಗ ಮೈ
ಯಿಕ್ಕಿ ರಕ್ಕಸರು ಬಿನ್ನೈಸೆ
ಮುಕ್ಕಣ್ಣ ಗೋವಿಂದನ ಗೆಲ್ವ ಮೂಜೂರ
ನಿಕ್ಕು ಗಗನದಲಿ ಬೇಗಾ ॥೧೦೬॥

ತಿರುಗಲಂಬರದೊಳು ತಿಪ್ರನೆ ಮುಪ್ಪುರ
ಮರಳಿ ಸಂದಿಸುವ ಸಮಯವ
ಹರಿಹರ ಬ್ರಹ್ಮಾದಿಗಳು ಕಾಣದಿರಲೆಂದು
ವರವ ಬೇಡಿದರಾ ಖಳರು ॥೧೦೭॥

ಮಿಗೆ ಕಲ್ಪತರು ಕಾಮಧೇನಮೃತದ ಭಾವಿ
ಸುಗುಣ ಸೂಳೆಯರ ನಟ್ಟುವರಾ
ಸೊಗಸ ತೋಱುವ ದೇವ ಪಾತ್ರಗಳೆಲ್ಲವು
ಬಗೆಯದೆ ವಶವಾಗಲೆಮಗೆ ॥೧೦೮॥

ಅಡಿಗಳನೂರ್ಧ್ವಕೆ ನೆಗಹಿ ಸೂಜಿಯ ಮೇಲೆ
ಜೆಡೆತಲೆಗಳನೂಜೆ ನೆಗಹಿನಿಂದು
ಮಿಡುಕುವ ತುಟಿ ಮುಚ್ಚಿದ ಕಣ್ಣು ಧ್ಯಾನಿಪ
ಕಡುತಪಸಿಗಳಾದರವರು ॥೯೭॥

ಧರೆ ಕಿಡಿಯಿಡೆ ಹುಡಿ ಗಗನವ ಮುಟ್ಟಲು
ಗಿರಿನದಿ ಭುಗಿಲೆಂದುರಿಯೇ
ಸುರರು ಕೊರಗದೆ ಬಿಸಿಲ ನಿರ್ಧಾರದಿ
ಪಿರಿದು ತಪವ ಮಾಡಿದರು ॥೯೮॥

ಮೊಱೆವ ಸಿಡಿಲು ಪೆರ್ಗತ್ತಲೆ ಬಲು ಮಿಂಚು
ಸುರಿವ ಹೆಮ್ಮಳೆ ಬಲುಗಾಳಿ
ಹರಿವ ಹೊನರುಗಳಲೆಕ್ಕಿಸದಸುರರು
ಪಿರಿದುಗ್ರ ತಪವ ಮಾಡಿದರು ॥೯೯॥

ಬಿರಿವವು ಜನರಂಗ ತರುಮರನೊರತು ಸೀ
ಕರಿಯಾದ ಖಗಮೃಗ ನಡುಗೆ
ತರಣಿ ತಂಪಾಹಂತ ಮಾಗಿಯ ಛಳಿಯ೧[ನ]೧
ಸುರರದ ತಪದಿ ಲೆಕ್ಕಿಸರು ॥೧೦೦॥

ಚಳಿಗಾಲದಲಿ ನದಿಗಳ ತೀರದಲಿ ಪೆ
ರ್ಮಳೆಯೊಳು ಮಲೆಯಡಿಗಳಲಿ
ಬಲುಬೇಸಗೆಯೊಳು ಕೋಡುಗಲ್ಲಿನಮೇಲೆ
ಖಳರುಗ್ರತಪವ ಮಾಡಿದರು ॥೧೦೧॥

ಹಬ್ಬಿದುರಿವರುಬ್ಬಟೆಯ ತಪದ ಧ್ಯಾನ
ಗಬ್ಬರಿಸಿತು ಬ್ರಹ್ಮನೆದೆಯು
ಒಬ್ಬುಳಿಗೊಂಡು ಚಿತ್ತವ ಸೆಱೆವಿಡಿಯಲು
ಹೆಬ್ಬಾಳೆ ಹೊಯ್ತು ಮೂಜಗವು ॥೧೦೨॥

೧–೧ ಸು(ಮೂ)

ಹಾವಿಗೆ ಪಕ್ಕವ ಕೊಲೆಗೇಡಿಗೆ ಸಂ
ಜೀವನವನು ದುರ್ಜನಗೆ
ತೀವಿದೈಶ್ವರಿಯವ ಕೊಡೆ ಧರ್ಮ ಮೆಱೆಯದಿ
ನ್ನೇವೆನೆಂದಜನು ಚಿಂತಿಸಿದಾ ॥೧೧೫॥

ರಜನಿಗೆ ಕಠಿಣವ ಕ್ರೂರಮೃಗಕೆ ಮಿಗೆ
ಭುಜಶೌರ್ಯವ ಗಿರಿಗಳಿಗೆ
ನಿಜಚೈತನ್ಯವ ಕೊಡೆ ಲೋಕ ಉಳಿಯದೆಂ
ದಜ ಚಿಂತಿಸಿದ ಮನದೊಳಗೆ ॥೧೧೬॥

ಕೊಡಬಾರದು ಕೊಡದಿರಬಾರದು ಮೆಚ್ಚ
ನುಡಿದ ಮಾತಿಗೆ ನಮಗಿನ್ನು
ಬಿಡದೆ ಬಹುದು ಖೋಡಿಯೆನುತೊಂದು ಬುದ್ಧಿಯ
ತಡೆಯದೆಣಿಸಿ ಕಂಡನಜನು ॥೧೧೭॥

ನರ ನಾಗನಮರರ ನೊರಜು ದಾನವರನು
ಧುರದೊಳು ಗೆ[ಲ್ಲಿ] ನೀವೆಂದು
ವರವ ಕೊಟ್ಟೊಡನೆ ನೆನೆವನಾವಿದಿರುಗಳ
ಸಿರಿಗೆ ಕಂಟಕವಹ ಮತವಾ ॥೧೧೮॥

ಕೊ[೧][ಟ್ಟ][೧]ನು ವರನೀ ಪರಿಯಲಿ ಗಗನದಿ
ಕಟ್ಟಿದ ಮೂಱುಪುರಗಳಾ
ದಿಟ್ಟಿಸಿ ಕಂಡಾತ ಸುಟ್ಟುರುಹಲಿಯೆಂದು
ಕೊಟ್ಟನು ವರವ [೨][ಖೂಳ][೨]ರಿಗೆ ॥೧೧೯॥

ದೇವತೆಗಳ ದಿವ್ಯ ಸಾವಿರ ವರುಷ[೩][ಕೆ][೩]
ತೀವಿ ಕೂಡುವ ಮೂಱು ಪುರವ
ನಾವಿರೆ ಗೆಲುವನ ತಾಯಿ ಹುಸಿಯೆನುತಲಿ
ತಾವು ಹೊಯ್ದರು ಭುಜಗಳನು ॥೧೨೦॥

೧–೧ ಟ್ಟೆ(ಮೂ) ೨–೨ ಕಳ್ಳ(ಮೂ) ೩–೩ ಕ್ಕೆ(ಮೂ)

ಮಿಕ್ಕಿನ ಮಾತೇನು ದೇ೧[ವೇ]೧ಂದ್ರ ಮೊದಲಾದ
ದಿಕ್ಕಿನ ದೇವಾಸುರರು
ಚುಕ್ಕಿಯಿಲ್ಲದೆವೋಲೈಸಬೇಕೆಂದು ನಿಮ್ಮ
ನಕ್ಕಱು ಮಿಗೆ ಭಜಿಸಿದೆವು ॥೧೦೯॥

ಉಚಿತದಿ ವಾಣಿಯ೨[ಇನಿ]೨ಯನೆ ಬೇಗದಿ
ವಚನ೩[ಕೆ]೩ ಹೊಱೆಯಿಲ್ಲದಂತೆ
ರಚಿಸು ಮುಪ್ಪುರವನು ಅಂಬರದೊಳು ಬೇಗ
ಸಚರಾಚರವಪುಟ್ಟಿಸುವನೆ ॥೧೧೦॥

ಕಪಟವೇಷದ ತಪಸಿಗಳ ನುಡಿಯ ಕೇಳಿ
ಅಪಸರೆಯರು ಖುಲ್ಲರಿವರು
ವಿಪರೀತ ವರವ ಬೇಡಿದರೆಂದು ಬ್ರಹ್ಮನು
ಕುಪಿತದಿ ತಲೆಯ ತೂಗಿದನು ॥೧೧೧॥

ಹಾಲನೆಱೆಯಲು ಹಾವಿಗೆ ವಿಷಬಿಡುವದೆ
ಮೇಲನಱಿಯದ ಖೂಳರಿಗೆ
ಲೀಲೆಯಿಂದಲಿ ಬ್ರಹ್ಮ ವರವೀವೆನೆನೆ ದೇವ
ಜಾಲವ ಸಿರಿಯ ಬೇಡಿದರು ॥೧೧೨॥

ದುರ್ಜನನೇಸು ಶಾಸ್ತ್ರವನೋದಲು ಮಿಗೆ
ಸಜ್ಜನರುಗಳಂತಹರೆ
ವಜ್ಜಲಿಸುವ ಬಚ್ಚಲುದಕವು ತಿಳಿದರೆ
ಮಜ್ಜನಕದು ಯೋಗ್ಯವಹುದೆ ॥೧೧೩॥

ಖೂಳರಿವರು ನೆನದರು ಮದನಾರಿಗೆ
ಕಾಳಗವಹುದು ಮುಂದಣಿಗೆ
ಹಾಳಾಹುದಮರಾವತಿಯ ಪಟ್ಟಣವೆಂದು
ತಾಳಿದನಜ ದುಗುಡವನು ॥೧೧೪॥

೧–೧ ವಿ(ಮೂ) ೨–೨ ವಿನೆ(ಮೂ) ೩–೩ ಕ್ಕೆ(ಮೂ)

ಬಸಿದಸಿಗಳು ಬಂಡಿಯಗಾಲಿ ಬಲುದೊಲೆ
ಎಸೆವ ಬದ್ದರ ತಳಿವಲಗೆ
ಬಿಸಿಯೆಣ್ಣೆ ಕಾಸುವಂಬಲಿಯು ಕೊತ್ತಳದೊಳು
ಕುಸಿಯಲೊಡ್ಡಿಹುದು ದುರ್ಗದಲಿ ॥೧೨೭॥

ಇಡುಗಲ್ಲು ಕವಣೆಗಲ್ಲುಗಳೆತ್ತುಗಲ್ಲುಗ
ಳೊಡನೆ ತುಱುಗಿದೊಡ್ಡುಗಲ್ಲು
ಜಡಿವ ಪೆಟಲಗುಂಡು ಹರಿವ ಮಳಲ ರಾಸಿ
ತಡೆಯದೆ ತ್ರಿಪುರದೊಳೆಸೆಯೆ ॥೧೨೮॥

ಹುಲ್ಲದೊಂದೆಯು ನಾಳಿ ಬಿಲ್ಲಂಬಿನ ಹೊಱೆ
ಘಲ್ಲಿಸಿ ತಿವಿವ ನೆಜ್ಜೆಯವು
ನಿಲ್ಲದೆ ಎಸೆದವು ಉರುಲು ಭೈರವಗತ್ತಿ
ಎಲ್ಲ ಹುಡೆಯದೊಳೆಸೆಯೆ ॥೧೨೯॥

ದಿಕ್ಕುದಿಕ್ಕಿನಲೊಡ್ಡಿದ ಸೂಸುಡೆಂಕಣಿ
ಕಕ್ಕುದಾರಿಯ ಸಾಲುಗಳು
ಲೆಕ್ಕವಿಲ್ಲದೆಯಂಬುಗಂಡಿ ಕೈದಿನ ಮೊತ್ತ
ಕಿಕ್ಕಿಱಿದವು ತ್ರಿಪುರದಲಿ ॥೧೩೦॥

ಹೆಮ್ಮಾರಿ ಬಾಯ್ದೆಱೆದಂತೆ ಹೆಬ್ಬಾಗಿಲು
ಮುಮ್ಮುಖದಲಿ ಬಱಸಿಡಿಲು
ನೆಮ್ಮಿದ ಕೋವಿಗಳೆಸೆದವು ಕಾಲನ
ಕಮ್ಮಟದ ದುರ್ಗದಂತೆ ॥೧೩೧॥

ಮಿಸುನಿಯ ಕೋಟೆಗೆ ಮುತ್ತಿನ ಹುಲಿಮುಖ
ಪೊಸಮಾಣಿಕದಾಳ್ವೇರಿ
ಮಿಸುಗುವ ನೀಲದ ಬಟ್ಟದೆನೆಯ ರತ್ನ
ವೆಸದವು ಮೂಱುಪುರದಲಿ ॥೧೩೨॥

ದಾನವರುಗಳ ಬೀಳ್ಕೊಟ್ಟಿತ್ತ ಬ್ರಹ್ಮ ದು
ಮ್ಮಾನದಿ ಮಯನ ಕರಸಿದ
ತಾನೊಲಿದಿತ್ತ ವರವ ಹೇಳಿ ಕಳುಹಿದ
ಸಾನುರಾಗದಲಾತನನು ॥೧೨೧॥

ಜಗದ ಪಿತನೇಮದಿ ಮಯ ಬಂದನು
ವಿಗಡ ದಾನವರ ಮುಂಗಣಿಗೆ
ಮುಗುಳು ನಗೆಗಳಿಂದ ಗಗನವ ನೋಡಲು
ನೆಗದವು ಮೂಱು ಪುರಗಳು ॥೧೨೨॥

ಚಿನ್ನದಲೊಂದು ಬೆಳ್ಳಿಯಲೊಂದು ಥಳಿಪ
ರನ್ನದಲೊಂದು ಕೋಟೆಯನು
ಬಿನ್ನಾಣಿಸಿದ ಪುರವೊಂದೊಂದಱಗಲವು
ಮುನ್ನೂಱು ಗಾವುದವೆಸೆಯೆ ॥೧೨೩॥

ಹುಲಿಮುಖವಂಕ ವಜ್ರದವಾಳ್ವೇರಿಯು
ಒಲಿದಿಪ್ಪ ಲಾಳುವಿಂಡಿಗೆಯು
ಕಲಿಭಟರಿಳಿದೇರುವ ಚೋರಗಂಡಿಯು
ಕೆಲದಲಗಳುಪತಾಳಾ ॥೧೨೪॥

ಬೆಳುಮುಗಿಲೆದ್ದಂತೆ ಗಣಿಗೆ ಕಟ್ಟಿದ ಝಲ್ಲಿ
ಥಳಥಳಿಸುವ ದೇವನದಿಯು
ಬಳಸಿ ಕಾಲುವೆದೆಗದಂತೆ ಪತಾಕೆಯು
ಹೊಳವ ಸಾಲುಗಳೊಡ್ಡು ಮೆಱೆಯೆ ॥೧೨೫॥

ರವಿಯ ಮುಂಡಾಡುವ ಮುಗಿಲಟ್ಟಳೆಗಳು
ತವಕದಲಿಡುವ ಡೆಂಕಣಿಯು
ಧ್ರುವಲೋಕವ ಹಾಯಲಿಡುವ ಮಕರಬಿಬ್ಬಿ
ತ್ರಿವಿಧ ದುರ್ಗದಲಿ ತೀವಿಹವು ॥೧೨೬॥

ಆನೆಯಸಾಲೆ ಒಂಟೆಯಸಾಲೆ ಹಯಸಾಲೆ
ಜೇನಸಾಲೆಯು ಶಸ್ತ್ರಸಾಲೆ
ಆ ನವ ನಾಟಕ ಸಾಲೆ ಭೋಜನ ಸಾಲೆ
ಏನೆಸದವು ತ್ರಿಪುರದಲಿ ॥೧೩೯॥

ದೊರೆಗಳ ಸರಿಯರಮನೆಗಳೆದ್ದವು ಮೂಜು
ಪುರದಿ ತೊಂಬತ್ತಾರುಕ್ಷೋಣಿ
ಪರಿವಾರ ನಾಯಕವಾಡಿಯ ಮನೆಗಳ
ವರದು ಲೆಕ್ಕಿಪ ಕವಿಯಾರು ॥೧೪೦॥

ಅಲ್ಲಲ್ಲಿಗಂಗಡಿ ಅಲ್ಲಲ್ಲಿ ಗರುಡಿಗ
ಳಲ್ಲಲ್ಲಿ ನವಿಲುಯ್ಯಲೆ
ಅಲ್ಲಲ್ಲಿ ಜೂಜು ಪಗಡೆ ಲೆತ್ತ ಚದುರಂಗ
ಅಲ್ಲಲ್ಲಿಗವ ನಿರ್ಮಿಸಿದಾ ॥೧೪೧॥

ಮಂಡಲಿಕರು ಮನ್ನೆಯ ರಾಜಕುವರರು
ದ್ದಂಡ ರಾವುತ ಪಾಯಕರು
ಗಂಡುಗಲಿಗಳು ಜೋದರು ರಥಿಕರುಗಳ
ತಂಡತಂಡದ ಕೇರಿಯೆಸೆಯೆ ॥೧೪೨॥

ರಾಯಸದರು ಮಂತ್ರಿಗಳು ರಾಜಕುವರರು
ಗಾಯಕಮಲ್ಲ ಚಿತ್ರಕರು
ದೋಯಿಸ ವಿದ್ವಾಂಸರು [1][ಪ್ರೌಢ][1]ಗಳ ವಿ
ಡಾಯದ ಕೇರಿಗಳೆಸೆಯೆ ॥೧೪೩॥

ಸೋಮವೀದಿಯು ಸೂರ್ಯವೀದಿಯ ಕೇರಿಯ
ಸ್ತೋಮವನದನೇನೆಂಬೆ
ಆ ಮೂಜು ಪುರವ ರಚಿಸಿದನೀಪರಿಯಲಿ
[2][ರಾಮಣೀಯಕ][2]ವಾಗಿ ಮಯನು ॥೧೪೪॥

೧–೧ ಪ್ರವುಡಿ(ಮೂ) ೨–೨ ರಾದೂಣ್ಯಕ(ಮೂ)

ರಕ್ಕಸ ಪೊಳಲಿಗಿಕ್ಕಿದ ಪಿಳ್ಳಗೋಟೆಗೆ
ಉಕ್ಕಿನ ತೆನೆ ಪೆಟಲಂಬು
ಸಿಕ್ಕಿದ ದಸಿಗತ್ತರಿ ಬೇಳುವೆಯ ಬೂದಿ
ಸೊಕ್ಕಿನ ಮದ್ದೆಸದಿಹವು ॥೧೩೩॥

ಕತ್ತಲೆಯಾಗಲು ಸುತ್ತ ಪಾರಿಯ ಹಱೆ
ಎತ್ತುವ ಪಂಜಿನ ಹೊಱೆಯು
ಇತ್ತರದಲಿ ತಿರುಗುವ ತಳವಾಱರು-
ವತ್ತಾಱುಕೋಟಿ ದಾನವರು ॥೧೩೪॥

ಬಲಿದವೀಪರಿ ಮೂಱು ದುರ್ಗದ ಕೋಟೆಯ
ಗೆಲುವರೆ ಶಿವಗರಿದೆನಿಸಿ
ಹಲವು ಛಂದದಿ ಮತ್ತೆ ಖಳರರಮನೆಗಳ
ನೆಲೆಯನಱಿದು ನಿರ್ಮಿಸಿದಾ ॥೧೩೫॥

ಪಾಲಗಡಲ ಕಳೆಯನು ಕಡದೆಱದಂತೆ
ಮೇಲೆ ರನ್ನದ ಹೊದಕೆಗಳು
ಕೀಲಿಸಿದೇಳು ನೆಲೆಯ ಹೊಂಗಳಸದ
ಸಾಲುಪ್ಪರಿಗೆಗಳೆಸೆಯೆ ॥೧೩೬॥

ನೆಗಳಿದುಪ್ಪರಿಗೆ ಪಟ್ಟಸಾಲೆಯಿದಿರಿಲಿ
ಪಗಲಾಣ್ಮಗೊಱೆಗಟ್ಟುವಂತೆ
ಝುಗಝುಗಿಸುವ ದಿವಾಣ ಹಜಾರಗ
ಳಗಡ ದಾವರಿಗೊಪ್ಪಿದವು ॥೧೩೭॥

ಗಚ್ಚಿಯ ಕೆಲಸದ ಗೋಡೆ ಮಾಳಿಗೆಗಳ
ಮುಚ್ಚಳವಲಗೆ ವೈಡೂರ್ಯ
ಪಚ್ಚೆಯ ತೊಲೆ ಪುಷ್ಯರಾಗದ ಕಂಬಗ
ಳಚ್ಚರಿಯವರರಮನೆಗೆ ॥೧೩೮॥

ಸುಳಿಗುರುಳುಗಳ ನಿಟ್ಟೆಸಳಗಂಗಳ ಬಟ್ಟ
ಬಲುಮೊಲೆಗಳ ಮುದ್ದುಮೊಗದ
ನಳಿತೋಳುಗಳ ಪೊಂಬಾಳೆದೊಡೆಗಳಿಂದ
ಗಳಹಂಸಗಮನೆಯರೆಸೆಯೆ ॥೧೫೧॥

ಬಡನಡು ಕಿಱುದೊಡೆ ನಿಱಿದಲೆ ತುಱುಬಿಕ್ಕಿ
ನಿಡಿಹುಬ್ಬು ಥಾಳಿಪ ಕದಪು
ಅಡರಿದ ಕಟಿ ಹೆಱನೊಸಲು ಹಂಸೆಯ ನಡೆ
ತೊಡರಿನ ಜಾಣೆಯರೆಸೆಯೆ ॥೧೫೨॥

ಕೆಂದಳಿರುಗಳೊ ಚಂದ್ರನ ಬಿಂಬವೋ ಮಿಗೆ
ಪೊಂದಾವರೆಯ ಸರಳುಗಳೊ
ಕಂದರ್ಪನಲರ ಸರಳುಗಳೋಯೆಂದೆಂಬ
ಚಂದನಗಂಧಿಯರೆಸೆಯೆ ॥೧೫೩॥

ಕೂರುಗುರಿನ ಸೂಲದಿ ಸೆಳವರು ಕ
ಣ್ಣಾರೆಯ ಸಂಕೋಲೆಗಳಲಿ
ತೋರಮುಡಿಯ ದುರ್ಗದಿ ಸೆಱೆವಿಡಿವರು
ಮಾರನ ಮದಕರಿಗಳನು ॥೧೫೪॥

ಅಳಿವೆಱೆ ಕಮಲ ಕುಮುದ ಚಂಪಕ ಬಿಂಬ
ಕುಲಿಶ ಕಮಲಪತ್ರ ಸಂಕಾ
ಪೊಳವ ಕಳಸ ಸುಳಿ ಸಿಂಹಪುಳಿನ ಬಾಳೆ
ತಳಿರಿಂದಲೆಸೆಯೆ ಬಾಲೆಯರು ॥೧೫೫॥

ಮುತ್ತಿನ ಮುಡಿ ಮಿಸುನಿಯ ಹಸ್ತ ಕಂಕಣ
ಹತ್ತೆಗಟ್ಟಿದ ಕಂಠಸರವು
ಕೆತ್ತಿದ ರವೆಯದ ತೋಳಬಂದಿಗಳೊಪ್ಪೆ
ಮತ್ತವಾರಣ ಗಮನೆಯರು ॥೧೫೬॥

ಸುರೆದೊರೆಗಳು ಮಿಗೆ[೧][ಮಾಂಸದ][೧]ಬೆಟ್ಟವು
ಹುರಿದ ಭಂಗಿಯ ರಾಸಿಗಳು
ವಿರಚಿಸಿದನು ಊರಹೊಱವಳಯದಲಿ
ತ್ತರದುದ್ಯಾನದೊತ್ತಿನಲಿ ॥೧೪೫॥

ಅಲ್ಲಲ್ಲಿ ಕುವರರ ಹೆತ್ತೊಸಿಗೆಯ ಹಜೆ
ಅಲ್ಲಲ್ಲಿ ಸೂಲದ ಹಬ್ಬಾ
ಅಲ್ಲಲ್ಲಿ ಕೋಳಿ ತಗರು ಮಲ್ಲಗಾಳಗ
ಅಲ್ಲಲ್ಲಿಗೆಲ್ಲ ನಿರ್ಮಿಸಿದಾ ॥೧೪೬॥

ಕಾಮನಂಬಿನ ಪತ್ತಳಿಕೆಯೊ ಭಾವಿಸೆ
ಸೋಮ ನೋಡುವ ಕನ್ನಡಿಯೊ
ಕಾಮುಕರಱಸುವ ಸೊಬಗಿನೊಬ್ಬುಳಿಯೆನೆ
ಕಾಮುಕಿಯರ ಕೇರಿಯೆಸೆಯೆ ॥೧೪೭॥

ಹದುರಿನ ಬೀಡು ಚದುರಿ[೨]ನಾಗರವದು
ಮದವೆದ್ದ ಜವ್ವನದೇಳ್ಗೆ
ವದವಿದ ವಿಟರ ಮೆಚ್ಚಿನ ಸೂಳೆಗೇರಿಯ
ಮುದದಿ ನಿರ್ಮಿಸಿದನಾ ಮಯನು ॥೧೪೮॥

ಮಂದನಿಲನು ತಳವಾಱ ಮಂತ್ರೀಶನು
ಚಂದಿರ ನಿಜಪರಿವಾರ
ಚಂದನಗಂಧಿನಿಯರ ಕೇರಿಗಳಲ್ಲಿ
ಕಂದರ್ಪನ ಸೋಲಿಪರು ॥೧೪೯॥

ಕಂಗೆ ಮಂಗಳವಹ ಸೂಳೆಗೇರಿಗಳೊಳ
ಗಂಗಜನ[೩][ಧಿ][೩]ದೇವತೆಯರು
ಶೃಂಗಾರಿಸಿ ದೆಸೆಯೊಳು ಮೆಱದರು ಹಲ
ವಂಗದೊಳದನೇನೆಂಬೆ ॥೧೫೦॥

೧-೧ ಮಾರಿಕ್ಷದ(ಮೂ) ೨ +ನ (ಮೂ) ೩-೩ ತಿ(ಮೂ)

ಪಂಕಜದೊಳು ತುಂಬಿ ತುಂಬಿಯೊಳೆಳೆ ಮಿಂಚು
ಬಿಂಕದ ಸಂಕದವೇಣಿ
ಶಂಕು ತಾವರೆಯೊಳು ನಕ್ಷತ್ರ ರಂಜಿಪ
ಕುಂಕುಮಗಂಧಿಯರೆಸೆಯೆ ॥೧೬೩॥

ಇಟ್ಟ ಮುತ್ತಿನಬೊಟ್ಟು ರನ್ನದ ತೆಲುಗೋಲೆ
ಕಟ್ಟಿದ ತೋರದುಙುಬಿನಾ
ಉಟ್ಟ ದೇವಾಂಗದ ನಿಜೆಗಳ ಮೇಲಳ
ವಟ್ಟ ಹೊನ್ನುಡಿದಾರವೆಸೆಯೆ ॥೧೬೪॥

ನಡೆ ಗತಿಗಳಲಿ ಹಂಸೆಯನಣಕಿಪರು ಮೆ
ಲ್ನುಡಿಯಿಂದ ಗಿಳಿಯ ಸೋಲಿಪರು
ಕುಡಿನೋಟದಲಿ ಪೂಸರಗಳ ಜಜಿವರು
ಪಿಡಿನಡುವಿನ ಬಾಲೆಯರು ॥೧೬೫॥

ಸೆಳೆಮಂಚ ಮಣಿಮಂಚ ತೂಗುಮಂಚದ ಸುತ್ತ
ಲುಲಿವ ಶಕುನಿಯ ಮಂಚಗಳು
ಸಲೆ ಹಂಸೆದುಪ್ಪುಳು ವಾಸುಮಂಚದ ಮೇಲೆ
ನಳಿನವದನೆಯರೊಪ್ಪಿಹರು ॥೧೬೬॥

ಒಡದುದ್ದಿ ಹೊರದಡಕೆ ಬಾಗ ಬಿಳಿಯೆಲೆ
ಮುಡಿವ ಜಾಜಿಯ ಪೂಸರವು
ತೊಡವನುಲೇಪನ ಕರ್ಪುರಗರಡಗೆ
ಜಡಿದವಿಕ್ಕೆಲದಿ ಸೂಳೆಯರಾ ॥೧೬೭॥

ನೋಡಿದ ದೆಸೆಯೊಳು ಕಣ್ಣಬೆಳಗು ಮಾತ
ನಾಡಿದ ದೆಸೆಯೊಳು ಸೊಬಗು
ಗಾಡಿಯೊಳೊಲಿದು ನಡವ ದೆಸೆಯೊಳು ತಂಪ
ತೀಡುವರಾ ಲಲನೆಯರು ॥೧೬೮॥

ಸರಮುತ್ತು ಸರಪಳಿ ಕರದ ಕಂಕಣ ಗೌಳ
ಸರ ಪಾದಸರ ಚೆನ್ನಸರವು
ಉರದಮಧ್ಯದಿ ಪವಳಸರ ಕಂಠಸರ
ಸರಯಿಳೆತ್ತೀ ದಿಟ್ಟಿ ಸರವು ॥೧೫೭॥

ಹೊನ್ನಕೇದಗೆ ಪನ್ನೆಯಾ ಗಜೆ ಚಿಂತಾಕ
ರನ್ನದೋಲೆಯು ಮೂಗುತಿಯು
ಕನ್ನೆಗೆ ಕಾಲಂದುಗೆ ಪಿಲ್ಲಿ ಮಂಟಿಕೆ
ಚೆನ್ನಸೂಸಕವು ಸೂಡಂಗಾ ॥೧೫೮॥

ಮುತ್ತಿನಸರ ಸೂಸಕ ಭುಜಪತ್ರವು
ಕೆತ್ತಿದ ಮಾಣಿಕಗಡಗಾ
ಹತ್ತೆಗಟ್ಟಿದ ಕಂಠಸರ ಕಾಲುಂಗುರ
ವೃತ್ತಕುಚೆಯರಿಗೆಸೆದವು ॥೧೫೯॥

ಆಯದ ೧[ಮಿ]೧ಸುನಿದಗಡಿನ ಒಡ್ಯಾಣವು
ಪಾಯವಟ್ಟವು ಹೊನ್ನ ಬಳೆಯು
ಕಾಯವನೊಡದು ಹೃತ್ಕಮಲದ ತಟ್ಟುಚ್ಚ
ಹಾಯಲೊಪ್ಪಿದವಾಕೆಯುರವು ॥೧೬೦॥

ಮೊಳೆಮೊಲೆ ಮೊಗ್ಗೆಮೊಲೆಯು ಹರಳ್ಮೊಲೆಗಳು
ಎಳೆಯ ನುಣ್ಣಾಯಿ ಮೊಲೆಗಳು
ಬೆಳೆದ ಬೆಲ್ಲಾಯಿ ತೆಂಗಾಯಿ ಮೊಲೆಗಳಿಂದ
ಎಳೆವೆಂಗಳೆಸೆದರೊಂದೆಸೆಯಾ ॥೧೬೧॥

ಹೊಸಹರೆಯದ ಮದದಲಿ ಮುಂದುಗಾಣದೆ
ರಸದಂಬುಲವಗೆ ನಗುತಾ
ಅಸಿಯಳು ಸಖಿಯರ ಕಟಕಿಯನಾಡುತ
ರಸಿಕವಿಟರುಗಳ ಕಂಡು ॥೧೬೨॥

೧-೧ ನಿ(ಮೂ)

ಬಟ್ಟಮೊಗದ ಬಡನಡುವಿನ ಮುತ್ತಿನ
ಬೊಟ್ಟಿನ ಹೆಱನೊಸಲವಳಾ
ಮುಟ್ಟದೆ ನೋಡದೆ ನುಡಿಸದೆ ನೆಱೆಯದೆ
ಬಿಟ್ಟು ತೊಲಗುವನೆ ಪಾಪಿ ॥೧೭೫॥

ಎರಳೆಗಂಗಳ ತೆಳುವಸುರಿನ ಬಿಂಬಾ
ಧರದ ಎಳೆ ಹರೆಯದ ಹೆಣ್ಣಾ
ಕರತುಂಬಿ ಬಿಗಿಬಿಗಿದಪ್ಪಿಕೊಂಡಿಹ ಸುಖ
ಸಿರಿಯು ಮುಪ್ಪುರದೊಳಗೆಸೆಯೆ ॥೧೭೬॥

ರನ್ನದ ಹಾವುಗೆ ಮೆಟ್ಟಿ ಬಣ್ಣವನುಟ್ಟು
ಹೊನ್ನ ಪುತ್ಥಳಿಗಳಂದದಲಿ
ಚೆನ್ನೆಗಣಿಕೆಯರೊತ್ತಿಗೆ ನಿಂದು ಬಾಗಿಲೊ
ಳುನ್ನತ ಮೌಳಿಮಾಡುವರು ॥೧೭೭॥

ಮೆಟ್ಟಿದ ಕಾಸೆ ಕಠಾರಿ ಕೈಯೊಳು ಬಿಗಿ
ದುಟ್ಟದುವ್ವಟದ ಕೋಮಳವು
ಬಿಟ್ಟ ಸೆಱಗಿನೊಲ್ಲಿ ನೆತ್ತಿಯಚುಂಗಿನೊ
ಳಿಟ್ಟಣಿಸಿದ ಕೊನಬುಗಳು ॥೧೭೮॥

ಮುಂಗಯ್ಯ ಮುಱಿ ಮುರುಡಿಯ ಸರವಣಿ ಹೊ
ನ್ನುಂಗರ ಮುತ್ತಿನ ಕಡುಕು
ಹಿಂಗಲೊತ್ತಿದ ಪನ್ನೆ ಕೊನೆಮೀಸೆಯೆಸೆವ ಭು
ಜಂಗರಾಕೇರಿಯೊಳೆಸೆಯೆ ॥೧೭೯॥

ಮುಂಬಾಯ ಕರ್ಪುರ ವೀಳೆಯ ಮಿಗೆ ಕಿವಿ
ತುಂಬಿದ ಪುಣುಗು ಜವಾದಿ
ಹೊಂಬರಹದ ಚಿಂದಿ ಮುಱಿಮೀಸೆಯೆಸೆವ ವಿ
ಡಂಬರಾ ಕೇರಿಯೊಳೆಸೆಯೆ ॥೧೮೦॥

ನಳಿತೋಳುಗಳೆಲ್ಲ ಮಣಿಗಚ್ಚುಯಿಟ್ಟಡೆ
ಮೊಲೆಗಳೆಲ್ಲವು ನಖರೇಖೆ
ಹೊಳವಧರದೊಳೆಲ್ಲ ನಸುಗಪ್ಪು ರಂಜಿಪ
ಬೆಲೆವೆಣ್ಣುಗಳಲ್ಲಿಹರು ॥೧೬೯॥

ಉರತುಂಬಿದ ಮೊಲೆ ಮೊಗತುಂಬಿದ ಕಣ್ಣು
ಸಿರತುಂಬಿದ ತುಂಬೆಗುರುಳು
ಕರತುಂಬಿ ಬಿಗಿಬಿಗಿದಪ್ಪಿಕೊಂಡಿಹ ಸುಖ
ಸ್ಥಿರ ರಾಜ್ಯದ ಹಂಗೇಕೆ ॥೧೭೦॥

ಬಡನಡು ಬಳುಕೆ ಕುಚದ ಭಾರಕೆ ತೋರ
ಮುಡಿ ಜಡಿಯಲು ಕೊರಳಳುಕೆ
ತೊಡರಿನ ಕಾಲಂದುಗೆ ಘಣಘಣರೆನೆ
ನಡದು ನಟನೆಯ ತೋಜುವರು ॥೧೭೧॥

ಕಡೆಗಂಗಳ ಕುಡಿನೋಟದಿ ಮೋಹಿಸಿ
ಕೆಡಹುವ ರಾತ್ರಿ ಭುವನವ
ಅಡರಿದಿಟ್ಟೆಡೆ ಮೊಲೆಗಳ ಶೃಂಗಾರಕೆ
ತಡೆಯದಿನ್ನಿದಿರಹರಾರು ॥೧೭೨॥

ಪೊಸಮಾಣಿಕದ ಮಣೆಯ ಮೆಟ್ಟಿ ಕುಸಿವುತ
೧[ಮಿ]೧ಸುನಿಯ ಸರಪಣಿವಿಡಿದು
ಕುಸುಮಸರನ ಬಿಲ್ಲನೇಜಿಸಿದಂದದಿ
ಅಸಿಯಳುಯ್ಯಲೆಯಾಡಿದಳು ॥೧೭೩॥

ತೂಗುತೂಗುಯ್ಯಾಲೆ ಭಾವೆಯರುರತುಂಬಿ
ಮೇಗ ರಂಜಿಯ ಪಾಡುತಲಿ
ತೂಗೆಂದು ವಸವಂತ ಗೌಳ ಗುಜ್ಜರಿ ಶ್ರೀ
ರಾಗಗಳನು ಪಾಡಿದಳು ॥೧೭೪॥

೧-೧ ನಿ(ಮೂ)

ನೋಟ ಸರಸ ಲಲ್ಲೆ ಬೇಟ ಮೋಹನ ಮು
ದ್ದಾಟವಾಲಿಂಗನ ತವಕ
ಕೂಟ ಕೊಸಱುಬಾಯಿಗೂಟಾದಿ ನಾನಾ
ಚಾಟುತನದಿ ಕೂಡುವರು ||೧೮೭||

ಚಿಕ್ಕೊತ್ತೆಗೊಲಿದು ಬಂದರೆ ನಿದ್ರೆಗೊತ್ತೆಯ
ಅಕ್ಕಱಿಂ ತೆಗದೊಡಂಬಡಿಸಿ
ಸಿಕ್ಕಿಸಿಕೊಂಡುವೋಳಿಯ ಕೊಂಬರಿಚ್ಚೆಗೆ
ತಕ್ಕಂತೆ ನಡದು ಜಾಣ್ಮೆಯಲಿ ||೧೮೮||

ಅಕ್ಕಕ್ಕ ಪೊಸನಲ್ಲ ಬಂದನೊತ್ತೆಯ ಪಿಡಿ
ದಕ್ಕಱಿಂದವನುಪಚರಿಸು
ಸಿಕ್ಕದಿರತಿಢಾಳಕನೆಂದು ಕನ್ನಡ
ವಕ್ಕಿ ಪಂಜರದೊಳಗುಲಿಯೆ ||೧೮೯||

ಕೆನೆವಾಲೋ ಜೇನ್ಗೊಡನೋ ಕಬ್ಬೋ ಮಾವಿನ
ತನಿವಣ್ಣಿನ ಪೊಸರಸವೊ
ವನಿತೆಯರಧರಾಮೃತವನಿತ್ತ[ರು] ಮಿಗೆ
ಇನಿಯನಿಗೇನು ಸುಕೃತವೊ ||೧೯೦||

ಮನೆಗೆ ಬಂದುಱೆ ನಾಗಲಿಕ ವಿಟರು ಪೋಗೆ
ಕನಲಿ ಹೆಬ್ಬುಲಿಯಂತೆ ಮೊಱೆದು
ತನುಜೆಯ ಬಯ್ಯುತ ಹಲುದಿನುತ ಮಾತೆ
ತನುಜೆಗೆ ಬುದ್ಧಿವೇಳಿದಳು ||೧೯೧||

ಮಗಳೆ ಜಾಣರ ಸಂಗ ಬೇಡ ಹಣವ ಕೊಡ
ಮುಗುದವಿಟರ ಮೋಹಮಾಡು
ತೆಗೆ ಧನವನೆಂದು ತರಳೆಗೆ ಬುದ್ಧಿಯ
ಮಿಗೆ ಮುದಿ ಸೂಳೆ ಹೇಳಿದಳು ||೧೯೨||

ತಿದ್ದಿದ ಪನ್ನೆ ಮುರಿದ ಮೀಸೆ ಸುಲಿಪಲ್ಲು
ಮಧ್ಯದಲುಟ್ಟ ಪಟ್ಟೆಗಳು
ಹೊದ್ದ ದೇವಾಂಗ ವಸ್ತ್ರದ ಜಾಣಕೊನಬುಗ
ಳಿದ್ದರು ಸೂಳೆಗೇರಿಯಲಿ ॥೧೮೧॥

ನೀಲಮುತ್ತಿನ ಚೌಕುಳಿ ತಾತಿಯಮಣಿ
ಕಾಲಿಲಿಕ್ಕಿದ ಲುಳಿ ಪದಕಾ
ಕೀಲಗೌಳಸರ[ದ] ಕರದ ಕರ್ಪುರದ
ವೀಳೆಯಗಳ ವಿಟರಿಹರು ॥೧೮೨॥

ಹಡಪದವನ ಕೈಯಲಿ ಹೊನ್ನ ಮುತ್ತಿನ
ಕಡೆಸೆಱಗಿನ ಹೊಸ ಸೀರೆ
ಮುಡಿಗೆ ಹೂಗಳನಿತ್ತು ಮುನಿದ ವನಿತೆಯರ
ನೊಡಂಬಡಿಸುತ ನಡೆತಂದಾ ॥೧೮೩॥

ಕಡೆಗಂಗಳ ನೋಟ ನಸುನಗೆಗಳ ಮೇಳ
ಬೆಡಗಿನ ಜಾಣ್ನುಡಿಗಳಲಿ
ಕಡುನಟನೆಯ ಮಾಡುವ ಪ್ರೌಢೆಯರಲ್ಲಿ
ಬಿಡದೆ ವಿಟರ ಕೆಣಕುವರು ॥೧೮೪॥

ನೆಱೆದಿಂಗಳುದಯಾದ್ರಿಯೊಳೆಸೆವಂದದಿ
ಪೊಱವಾಗಿಲ ಕುಸುಕದಲಿ
ಹೆಱನೊಸಲಿನ ಸಱಿಮಿಂಡಿ ಮೋಹಿಸಿ ಬಂದು
ಸೆಱವಿಡಿದಳು ಜಾಣವಿಟರಾ ॥೧೮೫॥

ಇಟ್ಟ ದೃಷ್ಟಿಗಳನು ತೆಗೆಯಲಾಱದೆ ಕ
ಣ್ಣಿಟ್ಟು ಸೈವೆಱಗಾಗಿರಲು
ಮುಟ್ಟಿದ ಮೋಹವೀರ್ವರ ಮೇಲಲರಂಬ
ನೆಟ್ಟನೆ ಕುಣಿಸುವ ಮದನಾ ॥೧೮೬॥

ನೋಡೆನೆಂದರೆ ಕಣ್ಣು ನೋಡದಿರವು ಮಾತ
ನಾಡೆನೆಂದರೆ ಬಾಯಿ ನಿಲದು
ಕೂಡೆನೆಂದರೆ ತನು ಸೋಂಕದಿರದುಯೇನ
ಮಾಡುವೆನೆಂದಳಾ ಬಾಲೆ ॥೧೯೯॥

ಅಸಿಯಳೆ ಕೇಳಾದರೆ ನಿಚ್ಚ ಪಡಿಹೊನ್ನ
ಹೊಸಸೀರೆ ಬಂಗಾರವನು
ರಸಿಕರೊಡನೆ ನೆರವುದುವೊತ್ತೆಗೊಳ್ಳೆಂದು
ಉಸುರಿದಳಾ ಮಗಳೊಡನೆ ॥೨೦೦॥

ಹವಣಿಗೆ ನಿಲ್ಲದು ಕನಲಿಕೆ ಬಿದ್ದಸ್ತ್ರ
ಅವನ ನೀ ತೋಱಿಸಲೆನಗೆ
ಜವಳಿ ಹಣವು ಉಂಟಾದರುಸುರು ನೀನು
ಕಿವಿಗೆ ಕಕ್ಕಸವಹ ಮಾತ ॥೨೦೧॥

ಬೆಲ್ಲನುಡಿಗೆ ಬೆಱಗಾಗಿ ಸಿಲುಕಿ ನೀನು
ಚಲ್ಲವನಾಡಲು ಸಲ್ಲಾ
ಕಲ್ಲತಾಗಿದಮಿಟ್ಟೆಯಂತಹ ಬಿಱುನುಡಿ
ನಿಲ್ಲಗೊಡೆನು ಹಣಗೊಡ[ನು] ॥೨೦೨॥

ಮುನ್ನಲೆವ್ವನದಲಿ ಸೋತುದಿಲ್ಲವೆ ತಾಯೆ
ಚೆನ್ನಿಗರಿಗೆ ಮೋಹಮಾಡಿ
ನಿನ್ನಂತೆ ಹೆಱರಬಗೆಯದನ್ಯರುಗಳನು
ಚುನ್ನವನಾಡಲುಬಹುದೆ ॥೨೦೩॥

ಹುಸಿಸ್ನೇಹ ನಸು ಮುನಿಸಕ್ಕೆ ಮೋಹನ ಮುದ್ದು
ರಸಮಾತು ಸತ್ಯಸುರಳನು
ಎಸಗಿ ಹಣವ ತೆಗೆದೊಸವಿಲ್ಲವದಕೆಂದು
ಉಸುರಿದಳಾ ಮುದಿಸೂಳೆ ॥೨೦೪॥

ಸಿಡಿಲಧ್ವನಿಗೆ ವರರಾಜಹಂಸೆಯ ಮಱಿ
ಉಡುಗುವಂತಸವಳಿದಬಲೆ
ಕೆಡದಳು ಮಣಿಮಂಚದ ಮೇಲೆ ಇನಿಯನ
ಬಿಡುಯೆಂಬ ಜನನಿಯ ನುಡಿಗೆ ॥೧೯೩॥

ಕೂಡಿ ಕುಶಲ ಕಲೆಯಿಂದ ಪ್ರೌಢ ನಲ್ಲ
ಬೇಡಿತ್ತನೊಲಿದೀವಂತೆ
ಮೂಢವಿಟನು ಹಣಗೊಡುವನೆ ಎಲೆ ತಾಯೆ
ಕಾಡದಿರೆಂದಳಲಿದಳು ॥೧೯೪॥

ಅಂಬುಜಮುಖಿ ಕೇಳು ಹಣವಿಲ್ಲದವ ಹೆಣ
ನೆಂಬರೀ ಗಾದೆಯನಱಿದು
ನಂಬದಿರೊಲಿದು ಮಾತಾಡದೆ ಚದುರನ
ಹಂಬಲ ಬಿಡು ಸಾಱಿದೆನು ॥೧೯೫॥

ಹಣವೊಂದು ತೃಣ ಮನಮಚ್ಚಿದೆಡೆಗೆ ಬಿ
ನ್ನಣಿಸಿದ ಕಡು ಸ್ನೇಹದೆಡೆಗೆ
ದಣಿಯದೆ ರತಿಸುಖವಿತ್ತು ಹೊನ್ನಿನ ಹಳಿ
ಹಣವನೀನಱಿಯೆಲೆ ತಾಯೆ ॥೧೯೬॥

ನೆರೆಯ ಸೂಳೆಯರ ಹ[ದ]ವ ಕಂಡು ನೀನಿಂತು
ಮರುಳಾದೆ ಬಣ್ಣಗರುವಗೆ
ತರಳೆ ನೀನಱಿಯೆ ಹೇಳಿದರೆ ಮುನಿಸ ತಾಳಿ
ಪರಿಕ್ಷಿಸೆ ನೀ ನನ್ನ ಮಾತ ॥೧೯೭॥

ಒಲ್ಲೆನೆಂದರೆ ಮನವಲ್ಲದಿರದು ಮಾತ
ಸೊಲ್ಲೆನೆಂದರ ಬಾಯಿ ನಿಲದು
ನಲ್ಲನ ಸವಿಸಂಗ ಕಳುಪೆನೆಂದಡೆ ಸೋಲ
ವಿಲ್ಲದೆ ರತಿಗೆಳಸುವದು ॥೧೯೮॥

ಎಲವೊ ಮಿಂಡರದೇವ ನಿನಗೆ ನಾಚಿಕೆಯಿಲ್ಲ
ಬೆಲೆವೆಣ್ಣು ಬಱಿದೆ ಸೋಲುವಳೆ
ಹುಲಿಸವ ಕೊಡದೆ ಪುಕ್ಕಟೆ ಸೂಳೆಗ್ಯೆವರೆ
ಸುಲಭ ನೀನೀ ಮೋಱೆಗಂಡು ॥೨೧೧॥

ನೆರಮನೆ ಮುಮ್ಮನೆಯಕ್ಕಗಳಿರ ಕೇಳಿ
ವರುಷವರೆಯು ಮೊದಲಾಗಿ
ಬರುವರ ಬರಲೀಸ ತರುಣಿಗೊತ್ತೆಯ ಕೊಡ
ಮರುಳು ಮಾಡಿದನೆನ್ನ ಮಗಳಾ ॥೨೧೨॥

ಮೊಱೆಯಿಡುವೆನು ಊರ ತಳವಾಱಿಗೆ ಹೇಳಿ
ಸೆಱೆಯ ಮನೆಯ ಕೂಡುವೆನು
ಬಱಿಯ ಬೋಸರಿಗ ನೀ ಮನೆಯಿಂದ ಹೊರಡೆಂದು
ಉಱುಬಿದಳಾ ಮುದಿಸೂಳೆ ॥೨೧೩॥

ಮತ್ತೊಂದು ಕೇರಿಯೊಳೊತ್ತಿಗೆ ನಿಂದಿಹ
ಮುತ್ತಮುದುಕಿ ಸೂಳೆಯರು
ಹೊತ್ತನೋಡುವರರೆ ಗದವಿನ ಮಱೆಯಲಿ
ಕತ್ತಲೆಯಂತಹದೆನುತಾ ॥೨೧೪॥

ಕೀನಿ[ಯ]ವಲ್ಲು ಗುಂಗುರಗಣ್ಣು ನರೆತೆಗ
ದಾನನ [೧][ಚೆ][೧]ಪ್ಪರೆ ಮೂಗು
ಹೀನ ಬಲದಿ ತಱಿತಱಿಸಿ ನಡವ ಮುದು
ಹೋನದ ಸೂಳೆಯರಿಹರು ॥೨೧೫॥

ಅಲುಗಾಡುವ ಹಲ್ಲು ಬಿದ್ದ ಮೊಲೆಯು ಪಱಿ
ದಲೆ ನೀರೊಱತ ಕಣ್ಣುಗಳು
ಬೆಳುವಾಯೊಳು ಮುದಿಗೂಗೆಗಳಂದದಿ
ಎಳೆಯ ವಿಟರ ಕಾಡುವರು ॥೨೧೬॥

೧–೧ ಬೆ(ಮೊ)

ಬೆಳುದಿಂಗಳೆರಳೆ ಬೇಂಟೆಯ ಕಣ್ಣಿವಲೆಯೊಳು
ಸಿಲುಕಬಲ್ಲುದೆ ಜಾಣವಿಟನು
ಒಲಿವನೆ ಕುಟಿಲದೊಲುಮೆಗೆ ಹಲವು ಮಾತ
ಗಳಹದಿರೆಲೆ ಖೂಳ ಜನನಿ ॥೨೦೫॥

ಪ್ರಾಯವುಳ್ಳಲ್ಲಿ ಹಣವ ಗಳಿ[ಸ]ದ ಸೂಳೆ
ಗಾಯಸವಹುದು ಮುಪ್ಪಿನಲಿ
ತಾಯ ಮಾತನು ವೀಜೆ ನಡವ ಮಕ್ಕಳುಗಳು
ನಾಯಬಾಯರುವೆಯಾಗುವರು ॥೨೦೬॥

ಮುಂಬನಿಯನು ಸೇವಿಸುವ ಜಾತಕವಕ್ಕಿ
ಕೊಂ[೧][ಬು][೧]ದೆ ಕೂಪಜಲವನು
ಇಂಬುಳ್ಳ ಸುಲಭನೊಡನೆ ಬೆಜಿಸಿದ ಮನ
ಕೊಂ[ಬು]ದೆ ಮತ್ತೊಬ್ಬರಿಗೆ ॥೨೦೭॥

ಸೋಲದರಾರು ನಿನ್ನಯ ರೂಪಿಗೆ [೨][ಬೆಂ][೨]
ಬೀಳದರಾರು ಕಣ್ಣಿಟ್ಟು
ಲೋಲಲೋಚನೆ ನಿನಗೊತ್ತೆಗೊಡದರಾರು
ಮೂಲೋಕದ ವಿಟರೊಳಗೆ ॥೨೦೮॥

ಅಕ್ಕಟ ಕುಟಿಲ ನಾಯಕರೆ ಮಗಳು ಮನ
ವಿಕ್ಕಿ ಲೆಕ್ಕಿಸಳೆನ್ನ ಮಾತಾ
ರಕ್ಕಸಿಯಂತೆ ತಲೆಯ ಹೊಯಿಕೊಂಡತ್ತು
ಕೆಕ್ಕಸಗೆಲದಳಾ ಮುದುಕಿ ॥೨೦೯॥

ಹೋಗೆಂದರೆ ಹೋಗ ಮನೆಯಿಂದ ಹೊಜವಂಡ
ಏಗುವೆಯಿಂ[೩][ತಹ][೩]ದುಂಟೆ
ಮೂಗಿಯ ಮಾಡಿ ಮಗಳ ಬಾಯ ಕಟ್ಟಿದ
ನೋಗರ ಮಾಡಿದ ನನ್ನಾ ॥೨೧೦॥

೧-೧ ಬ(ಮೂ) ೨-೨ ಬೇ(ಮೂ) ೩-೩ ತಾಹಾ(ಮೂ)

ತಳಿರ್ವಾಸಿಕೆಯೊಳು ಮಲಗಿ ಪನ್ನೀರ್ಗಳ
ತಳಿದಲರ್ವೀಸಣಿಗೆಯಲಿ
ಸಲೆ ವೀಸಿಕೊಳುತ ವಿಯೋಗದಿ ಬಳಲುವ
ಮಲಯಜಗಂಧಿಯರೆಸೆಯೆ ॥೨೨೩॥

ತಿರುಪಿನೊಳಡಸಿ ಸರಿಸದೊಳ೧[ಗೆಯ್ತರೆ]೧
ವಿರಹದ ಸತಿ ಕೈದುಡುಕಿ
ಪರಿಮಳದರಳ ಪಿಡಿದು ನಡೆತಂದಳು
ಸ್ಮರಗಿದಿರಾದಳು ಚೋದ್ಯ ॥೨೨೪॥

ತಿಲಕುಸುಮವನಡರಿತು ಹರರಿಪು ಪೊಸ
ಜಲದೊಳಗೊಪ್ಪಿತು ರಂಭಾ
ನೆಲಸಿತು ಅನಿಲಬಂಜವು ದೇವಗಿರಿಯಲ್ಲಿ
ತಳಿರೊಳಡಗಿತೆಳೆ ಜೊನ್ನಾ ॥೨೨೫॥

ಬಿಡದುಡುಪನು ವಿಯೋಗವನುಡುಪನು
ಕಡುಚಂದ್ರಮನಳಿದುಡುಪಾ
ಉಡುಗಿಪ ದಯಭೃಂಗನಡಗೆವ್ವನವ ನಲ್ಲ
ನೊಡನಗಲಿದ ಸತಿಯರಿಗೆ ॥೨೨೬॥

ಮಾರನ ಮದಗಜವಿಟ್ಟುಕೊಂಡಂದದಿ
ನಾರಿಯೋರ್ವಳು ವಿರಹದಲಿ
ಕೇರಿಕೇರಿಯೊಳು ನಲ್ಲನನಜಿಸುತ ಬಂದ
ಳಾರುಬಣ್ಣಿಪರವಳದಟಾ ॥೨೨೭॥

ಎಣ್ಣೆಗಂಟಿನ ಕೊನೆ ಸಣ್ಣ ಕಸ್ತುರಿಬೊಟ್ಟು
ಕಣ್ಣ ಕಪ್ಪಿನ ನಸುರೇಖೆ
ನುಣ್ಣಿಸಿದಳಕ ಲಾವಣ್ಯವೆಸೆಯೆ ಬೆಲೆ
ವೆಣ್ಣು ಬಂದಳು ನಲ್ಲನೆಡೆಗೆ ॥೨೨೮॥

೧-೧ ಗೆಯಿತಾರೆ(ಮೂ)

ಮೊಱಗಿವಿ ಹಱಿದಲೆ ಪಱೆಗಣ್ಣು ಮುಱಿವಲ್ಲು
ಉಱುಗಿದ ನಡು ಭಂಗುಮುಸುಡು
ದುಱದುಂಬಿ ಮಱದಾಡಿದಾಗ ಮಗಳ ಕಂಡು
ಮಱುಗಿದಳಾ ಮುದಿಸೂಳೆ ||೨೧೭||

ಕೊಳೆಗಣ್ಣಿಗೆ ಕಾಡಿಗೆಯ ತೀವರನಿಕ್ಕಿ
ಹಳೆಯಱುವೆಯ ನಿಱಿವಿಡಿದು
ಘಳಿಲನೆ ಸದೆ ಸೊಪ್ಪನಣಲೊಳಡ್ಗಿಸಿಕೊಂಡು
ನಳಿನ ಕಸಡಿ ಬಂದಳಲ್ಲಿ ||೨೧೮||

ಮೊಗಗತ್ತಲೆಯೊಳು ನಿಂದು ಮುಸುಕನಿಟ್ಟು
ನಗುತ ವಿಟರುಗಳ ಕಂಡು
ಸುಗುಣ ನೀ ಕೊಟ್ಟ ವೀಳೆಯ ಸಾಕು ಬಾಯೆಂಬ
ಮಿಗೆ ಮುದಿ ಪಾಱೆಯರೆಸೆಯೆ ||೨೧೯||

ಆಗಳಿಪ್ಪರು ನಾಯಿಗೆ ಮುದ್ದಕೊಡುವರು
ಕಾಗೆಗೆ ಜೋಹರಿಸುವರು
ತೇಗುವರೇಡಿಸುವರು ಪೋಟತನದಿಂದ
ಆಗ ಕಾಳ್ಗುಡಿವ ಜಾಲೆಯರು ||೨೨೦||

ಉಗಿವದವೊಯಿಯೆಂಬರು ಉಟ್ಟ ಸೀರೆಯ
ತೆಗೆವರು ತಲೆಗೆ ಸುತ್ತುವರು
ಮಿಗೆ ಕಾಕೋಳಿಯ ಮರಿಯಂತೆ ಉಲಿವರು
ನಗುವರು ಮಾತನಾಡುವರು ||೨೨೧||

ಇದಿರಿಕ್ಕಿ ಮೋಹವ ಮಾಡುವಳೋರ್ವಳು
ಮುದುಕಿ ಹುರುಡಿಸಿ ವಲ್ಲಭನಾ
ಚದುರ ತಡದ ಯಾತಕೆ ಬಾರನೆನುತಲಿ
ಮುದುಕಿ ಹಾದಿಯನು ನೋಡುವಳು ||೨೨೨||

ಮಾತುಮಾತಿಗೆ ಮುನಿಸನು ಬಲಿದೆನ್ನನು
ಧಾತುಗೆಡಿಸುವರೆ ಪ್ರಿಯನೆ
ಸೋತು ಬಂದೆನು ಸಲಹೆನುತ ನುಡಿದಳು ಕಾ
ಮಾತುರದಿಂದೊಬ್ಬ ತರಳೆ ॥೨೩೫॥

ತೊಲಗಿ ಜೀವಿಸುವರೆ ನೆಲೆಯಿಲ್ಲವಸುವಿಗೆ
ಹಲವುಂಟೆ ಕಡುಮಚ್ಚಿದೆಡೆಗೆ
ತೊಲಗಿ ಬಾಳ್ವರೆ ಜಕ್ಕವಕ್ಕಿಗಳೊ ಸಂ
ಚಲಮೋಹ ಬೇಡ ಮಾತಾಡು ॥೨೩೬॥

ಒಲುಮೆಯುಳ್ಳರೆ ಸವಿಮಾತುಗಳಲ್ಲದೆ
ಕಲಹ ಕಟಕಿ ಯಾತಕೆನುತ
ತೊಲತೊಲಗೆಲವೊ ಸೆಱಗ ಬಿಡುಬಿಡುಯೆಂದು
ಲಲನೆ ಮುಖವ ತಿರುಹಿದಳು ॥೨೩೭॥

ಹೆಂಗಳಾಭರಣವೆ ಕಂಗಳ ಪುಣ್ಯವೆ
ತಿಂಗಳಪೋಲ್ವ ಮೊಗದಳೆ
ಹಿಂಗಲಾಱೆನುವಂಗನೆ ನಿನ್ನನೆನುತಲಾ
ಲಿಂಗ[ನ]ವನು ಮಾಡಿದನು ॥೨೩೮॥

ತಿಂಗಳಿಗೊಮ್ಮೆ ಹೆಱೆಯನು ಕಾಬರು ಜನ
ಹಿಂಗದೆ ದಿನಚರಿ ನಿನ್ನಾ
ಅಂಗವ ತಲೆದೋಱು ನೀನೆಂದು ದೈನ್ಯದಿ
ಅಂಗನೆ ನುಡಿದಳಿನಿಯಗೆ ॥೨೩೯॥

ಮತ್ತೊಬ್ಬ ಸತಿ ತಮ್ಮಕ್ಕನಲ್ಲಿಗೆ ಹೋಗಿ
ಅತ್ಯಂತ ದುಃಖಿತೆಯಾಗಿ
ವಿಸ್ತರಿಸಿದಳಿರುಳಿನಿಯನನಗಲಿದ
ವೊತ್ತುವ ವಿರಹ ವರದಿಯ ॥೨೪೦॥

ಜನ[೧][ವ][೧]ಸ್ಯದ ತಿಲಕವನಿಟ್ಟು ಕಾವನ
ಘನ ಮೋಹದ ರತಿಯಂತೆ
ಕನಕದ ಬೊಂಬೆಯೊ ಬೆಲೆವೆಂಗಳರಸಿ[೨][ಯೊ][೨]
ವನಿತೆ ಬಂದಳು ನಲ್ಲನೆಡೆಗೆ ॥೨೨೯॥

ಮೊರೆವಾಜಿಡಿ ಮೈಗಂಪಿಗೆರಗಿ ಬರೆ
ಸ್ಮರನಾನೆಯ ಮುಂದೆಸೆವಾ
ಬಿರಿದಿನ ಡಂಗುರ ಉಲಿವಂತೆ ಬಂದಳು
ಸರಸಿಜಮುಖಿ ನಲ್ಲನೆಡೆಗೆ ॥೨೩೦॥

ಮುಡಿಯ ತಿದ್ದುತ ಕುಡಿಹುಬ್ಬ ನೇವಜಿಸುತ
ಪಿಡಿದೋಸರಿಸುತ ನಿಜೆಯನು
ಕಡೆಗಣ್ಣ ಕಾಂತಿಯ ಸೂಸುತ ವಿಟರ ಕಂ
ಗೆಡಿಸುತ ಬಂದಳಾ ವನಿತೆ ॥೨೩೧॥

ಅವಳರೆನೋಟ ಮದನಸರದೆಡೆಯಾಟ
ಅವಳೆಳೆನಗೆ ಕಾವ ಕಾಟಾ
ಅವಳ ಮೈಗಂಪಲರೊಲುಮೆಗೆ ಸವಿವೇಟ
ಅವಳಿಗೆ ಸಿಲುಕದರಾರು ॥೨೩೨॥

ನೆಲೆಮೊಲೆ ಕೆಡೆಯ ಬಾಸೆಯು ಖಡ್ಗವು ಮುಡಿ
ದಲರಟೌಳಿ ಹಯನೇತ್ರ
ಮಲಯಜ ಮೈಜೋಡೆನೆ ಸತಿಕಾಮನ
ಬಲುರಾವುತನಂತಿಹಳು ॥೨೩೩॥

ನಲ್ಲನ ಕಾಣುತ ನಿಲ್ಲಲಾರದೆ ಪೂ
ವಿಲ್ಲನ ಗಣೆಗಳಿಗಾಕಿ
ಮೆಲ್ಲನೆ ತನ್ನ ವಲ್ಲಭನಲ್ಲಿಗೆಯ್ತಂದು
ಸೊಲ್ಲಿದಳೊಡನೆ ವಿರಹವಾ ॥೨೩೪॥

೧–೧ ವೈ(ಮೂ) ೨–೨ ಯೆ(ಮೂ)

ಮುಗಿದ ಕೆಂದಾವರೆಗಳ ಮೊಗವರಳದು
ನಗೆಯಡಗದು ಕುಮುದಗಳ
ಮೊಗಸಿರಿ ಹಾಱದು ಪಾಪಿ ಚಂದಿರಗೆಂದು
ಮೃಗಧರ ಮುಖಿಯುಸುರಿದಳು ॥೨೪೭॥

ಮುನ್ನನಾ ಬೇಡವೆಂದೆನು ಲಲಿತಾಂಗಿನಿ
ಚೆನ್ನಿಗಗೊಲಿಯಬೇಡೆಂದು
ನನ್ನ ಮಾತು ತಲೆದಾಗಿತ್ತೆ ವಿರಹದೊ
ಳಿನ್ನುಣ್ಣು ನೀ ಮಾಡಿದನಿತಾ ॥೨೪೮॥

ನಿಲ್ಲು ಸೈರಿಸು ಕಾತರಿಸದಿರೆಲೆ ತಂಗಿ
ನಲ್ಲರಾರಿವರೊಳಪೊಗುವಾ
ಮೆಲ್ಲನೆ ದೂತಿಯರಿಂದ ಮಾತಾಡಿಸಿ
ವಲ್ಲಭನನು ಕರಸುವೆನು ॥೨೪೯॥

ಕೊರಡ ಕೊನರಿಪರು ಬರಡ ಹಯನಮಾಡಿ
ಹುರಿದ ಮಳಲೊಳೆಣ್ಣೆದೆಗೆವಾ
ಪರರಿಂಗಿತವ ಬಲ್ಲ ಬೆದೆಗುಂಟಣಿಯರು
ತರಳೆಯ ನುಡಿಯ ಕೇಳಿದರು ॥೨೫೦॥

ಕನ್ನೆವೆಣ್ಣಿಗೆ ತಿಂಗಳಿಲ್ಲ ಜವ್ವನದೋಱಿ
ಮುನ್ನ ಮುಂಬಾಗಿಲಜೆಯಳು
ಮನ್ನಿಸಿ ಸವಿಗಲೆಯನು ತೋಱಲೊಲ್ಲದೆ
ಚೆನ್ನಾಯಿತು ಮುನಿದಿಹುದು ॥೨೫೧॥

ನೀನು [ಮ]ದಂಗನೆ ಬಾಳ್ವಡೆಯಾಸೆಯ
ನಾ ನುಡಿದವಳನುಳುಹಿದೆ
ಜೇನಕೊಡದಿ ನೀರನು ಬೆರಸಿದವೊಲು
ಮಾನುನಿಯೊಳು ಮುನಿಸೇಕೆ ॥೨೫೨॥

ಏಗುವೆ ಜವ್ವನ ನಿಲ್ಲದಿಳಿಯುತ್ತಿದೆ
ಮಾಗಿಯ ಪೊಂಬಿಸಿಲಂತೆ
ಸಾಗಿದ ಹರೆಯ ಮರಳುವರೆ ರವಿಯಲ್ಲ
ಭೋಗಿಪ ನಲ್ಲ ತಡದನು ॥೨೪೧॥

ಅಕ್ಕ ಕೇಳೌ ಮಕರಾಂಕನ ಬಾಣಕೆ
ಸಿಕ್ಕಿಸಿ ಹೋದ ನಲ್ಲನನು
ಅಕ್ಕಟ ನಾನೆಂತು ಕಾಣ್ಬೆನೆನುತ ಕಾಂತೆ
ವೊಕ್ಕಳು ಕಣ್ಣ ನೀರ್ಗಳನು ॥೨೪೨॥

ಕನಸಿನೊಳಗೆ ಕಂಡು ಕಾಣದೆ ನಲ್ಲನ
ಮನೆಯೊಳಗಱಿಸಿ ನೋಡಿದೆನು
ಇನಿತು ಗುಟುಕುದಂಬುಲವಿತ್ತು ಕೂಡುವ
ಇನಿಯನನೆಂತು ಮಱವೆನು ॥೨೪೩॥

ಬೆಳುದಿಂಗಳು ಬಿಸಿಲಾಯಿತು ಟೆಂಕಲ
ಸುಳಿವ ಮಾರುತ ವಿಷವಾ[೧][ಯ್ತು][೧]
ಅಲರ್ವಾಸಿಕೆ ಪಾವಾದುದೇಗುವೆಯೆಂದು
ಲಲನೆ ನಲ್ಲಗೆ ಹಲುಬಿದಳು ॥೨೪೪॥

ಕೂಗುವ ಕೋಳಿ ಕೊರಳ ಬೆಕ್ಕು ಮುಱಿಯಿತೊ
ಕಾಗೆಯನೊಯಿದನೊ ಜವನು
ಏಗುವೆ ರಾವು ನುಂಗಿತೊ ರವಿಯನು ಬೆಳ
ಗಾಗದೆನುತ ಹಲುಬಿದಳು ॥೨೪೫॥

ಹೊಲ್ಲಹ ಕನಸ ಕಂಡೆನು ನಿನ್ನಿರುಳಕ್ಕ
ನಲ್ಲನ ತೋಳಮೇಲೊಱಗಿ
ಮೆಲ್ಲನೆಚ್ಚತ್ತು ನೋಡಲು ಕಾಣದಿರೆ ಕನ
ಸಿಲ್ಲವೆಂಬರೆ ಪ್ರಿಯ ತಡದಾ ॥೨೪೬॥

೧-೧ ಯಿತ್ತು(ಮೂ)

ಮಾತುಮಾತಿಗೆ ಮುನಿಸನು ಬಲಿದೆನ್ನನು
ಧಾತುಗೆಡಿಸುವರೆ ಪ್ರಿಯನೆ
ಸೋತು ಬಂದೆನು ಸಲಹೆನುತ ನುಡಿದಳು ಕಾ
ಮಾತುರದಿಂದೊಬ್ಬ ಸತಿಯು ॥೨೫೯॥

ಕೊನೆವೆರಳೊಳು ಪರದಳಕವ ತಿದ್ದಿಪೆ
ದಿನಸೂಸುವ ಬೆವರ್ವನಿಯಾ
ಇನಿತು ಗುಟುಕುದಂಬುಲವಿತ್ತು ಕೂಡುವ
ಇನಿಯನನೆಂತು ಮಱವೆನು ॥೨೬೦॥

ಎಸೆವ ಪಣ್ಯಾಂಗನೆಯ ಸೊಬಗನು ಕಂಡು
ನಸುನಗೆಗಳ ಮೇಳದಲಿ
ವಿಸರುಹಭವನ ಕೊಂಡಾಡುತ್ತ ಬಂದನು
ಅಸುರರೋಲಗಕಾಗಿ ಮಯನು ॥೨೬೧॥

ನಲ್ಲನೊಲುಮೆಯಂತೆ ಪುಲ್ಲಸರನ ಕೈಯ
ಬಿಲ್ಲಜೇವಡೆಗೆಯಿದಂತೆ
ಎಲ್ಲ ಮೋಹಿಗಳಿಗೆ ಸುರತರುವೆನಿಪುದ
ದೊಳ್ಳಿತು ಲಿಂಗನ ಕಾವ್ಯ ॥೨೬೨॥

ಚಂದ್ರಶೇಖರ ಭುಜಗೇಂದ್ರ ಭೂಷಣ ವಿಷ
ಕಂಧರನಿಂದ್ರವೊಂದಿತನೆ
ನಂದಿಸಿಂಧನ ಮಹಿಮಾಬ್ಧಿವರ್ಣನೆಗಳು
ಸಂಧಿ ಮುಗಿದುದು ಒಂದನೆಯ ॥೨೬೩॥

ಅಂತು ಸಂಧಿ ಒಂದಕ್ಕಂ ಪದ ೨೬೩ಕ್ಕಂ ಮಂಗಳ ಮಹಾಶ್ರೀ.

ಮೇಲುಪ್ಪರಿಗೆಯನೇಜೆ ನೋಡುವಳು
ಯ್ಯಾ[೧][ಲಾ][೧]ಡೊ [೨][ನೆ][೨]ವದಿ ಜಾಣರನು
ಬಾಲಕಿ ನೋಡಿ ಕಾಣದೆ ಸುಯ್ವುತ ಪೂ
ಮಾಲೆಯನೊಲಿದು ಪಾಡುವಳು ॥೨೫೩॥

ಜಾಣ ನಲ್ಲನ ಕಾಣದಳಲುವ ಸತಿಯರ
ಹೂಣಿಸಿ ನೋಡಿ ದೂತೆಯರು
ಪ್ರಾಣನಾಯಕಗಱುಹಲು ತನ್ನ ಸತಿಯಳ
ಮಾಣದೆ ನೆಱದುಳುಹಿದನು ॥೨೫೪॥

ಬಪ್ಪುದ ಕಾಣುತಲಪ್ಪಿ ಚುಂಬಿಸಿ ಪೊಸ
ಕರ್ಪೂರ ವೀಳೆಯವಿತ್ತು
ಒಪ್ಪವಿಟ್ಟಳು ಕಂದರ್ಪನ ಮುದ್ರೆಯ
ಕೂರ್ಪಳಿನಿಯನಂಗದಲಿ ॥೨೫೫॥

ಕೊಳರ್ವಕ್ಕಿಗಳ ಕೊರ[೩][ಳ್ತಾ][೩]ಣವೊಯೆಂದೆನೆ
ನಲಿದಾಡುವ ಪಾರಿಯವೊ
ಗಳರವಗಳ ರಂಗಾಟವೊ ಎಂಬಂತೆ
ಒಲಿದು ಕೂಡಿದರು ಪ್ರಿಯರನು ॥೨೫೬॥

ನೋಡುವ ಮೊಗವಧರವನು ಚುಂಬಿಸುವ ಮು
ದ್ದಾಡುವ ಬಿಗಿದಪ್ಪಿಕೊಳುವಾ
ಕೂಡೆ ಮೈಮಱದೆಚ್ಚತ್ತು ಮಾತಾಡುವ
ಕೂಡಿದರೊಲಿದು ಪ್ರಿಯರನು ॥೨೫೭॥

ಮುಡಿಬಿಟ್ಟು ಕಡೆಗಣ್ಣು ಕೆಂಪೇಱೆ ಬೊಟ್ಟಳಿ
ತೊಡಿಗೆ ಸಡಿಲಿಗೊರದಧರ
ಬಿಡದೆ ಮೈ ಬೆವರಿಕ್ಕಲು ಸುರತಾಂಕದ
ಕಡು ನೀಱೆಯರುಗಳೆಸೆಯೆ ॥೨೫೮॥

೧–೧ ಲೆ(ಮೂ) ೨–೨ ನ(ಮೂ) ೩–೩ ಳಾ(ಮೂ)

ಸಲ್ಗೆ ಸರ್ವಸುಖದಾಗರ ದುಜ್ಜಸವೆಣ್ಣ
ನೆಲೆ[೧][ವೀಡು][೧] ಹರುಷದ ಸ್ಥಾನಾ
ಸುಲಲಿತವಹ ಲ[೨][ಕು][೨]ಮಿಯ ಚಾವಡಿಯಂತೆ
ಬಲುಮೂಱು ದುರ್ಗವೆಸದವು ॥೩॥

ಕಳುಹಿದರುಡುಗೊಱೆಯಿತ್ತು ತಾರಕನ ಮ
ಕ್ಕಳುಗಳು ಮನ್ನಿಸಿ ಮಯನಾ
ಹೆಳಹಿದರಾಳು ಕುದುರೆ ಗಜ ರಥ ಮು
[೩][ಪ್ಪೊ][೩]ಳಲಿಂಬಿಲ್ಲವೆಂಬಂತೆ ॥೪॥

ಕಾಳರಕ್ಕಸರು ತೊಂಬತ್ತಾಱು ಕ್ಷೋಣಿಯು
ಮೇಳದ ಮಕುಟವರ್ಧನರು
ಹೇಳಲಱಿಯೆ ತಾರಕನ ಮಕ್ಕಳುಗಳ
ತೋಳಬಲುಹ ಶಿವಬಲ್ಲಾ ॥೫॥

ಕಡಲೇಳುಗಳನೊಕ್ಕುಡುತೆಯ ಮಾಡುವ
ಪಿಡಿದಷ್ಟಕುಲಪರ್ವತವಾ
ಜಡಿದು ಕಿತ್ತೀಡಾಡುವ ಭುಜಬಲ ಸತ್ವ
ತಡೆಯದಿಹುದು ಮೂವರಿಗೆ ॥೬॥

ತಂದೆಯ ಕಾಲದ ಪಟ್ಟಣವವರಿಗೆ
ಸಂದಿಹುದಾ ಕ್ರೌಂಚಾದ್ರಿ
ಬಂದು ಜನರು ಶತಕೋಟಿ ದನುಜರಾಗ
ಬಂದರು ದೊರೆಗಳ ಹೊಱಗೆ ॥೭॥

ಸಿರಿ[೪][ವೊ][೪]ಗದ ಗರ್ವಗಿರಿಯೊಳು ನೆಱೆ ಮದ
ಕರಿ ನೀರೊಳು ರಾಜಿಪಂತೆ
ಸಿರಿ ಮಹಾಲಕ್ಷ್ಮಿಯೊಳಲ್ಲದುಳಿದರೋ
ಳ್ಗಿರ[ವ]ಲಿವರೆ ದಾನವರು ॥೮॥

೧–೧ ವಿಡಿ (ಮೂ) ೨–೨ ಕ್ಷು (ಮೂ) ೩–೩ ಪೊ (ಮೂ) ೪–೪ ವಾ(ಮೂ)

ಸಂಧಿ : ಎರಡು

[೧]ವೃತ್ತ :

ಕರುಳಲೆದಾಡೆ ಕಂಪಿಸೆ ಕುಚದ್ವಯವಂಗದ ಕಾಂತಿಯುಣ್ಮೆ ಅಂ
ಬರದ ನೆಣಮೆಳಸೆ ವಿಲಾಸದೊಳುಯ್ಯ[೨]ಲನಾಡು ಕೊರಳಾ
ಪರಿಯ ನಿಜಕಾಂತಿ ಬಹುಳಿ ವಿಮಳ ಮಜ್ಜರಿಗುಜ್ಜರಿಯಿಂಪು ಕಂಪು ನುಣ್ಗ
ಭರದೊಳು ಪಾಡಿದಳೊಸದು ಲಿಂಗನ ಕರಜಾತ ಹರನಂ॥೧॥

ತಾರಕಾತ್ಮಜರೊಂದುಪರೂರ ಮಕ್ಕಳೆಸಗೀಗ(?)
ಮಾರಹರಂಗೆ ಬಂದು ಮೊಱೆಯಿಟ್ಟುದನು ಕರುಣಾಳು ಕೇಳ್ದು ಸ
ತ್ಕಾರದೊಳಂತವರ್ಗಭಯವಂ ಕೊಡಲದ್ರಿಜೆಯಾಣ್ಮಗೊಲ್ದು
ಸುರಾಸುರ ಮುಖ್ಯರುಂ ನೆರದು ಪಟ್ಟಮಂ ಕಟ್ಟಿದರಂದು ದೇವಗಂ

ಪದ:

ಕಮಲಸಖನ ಕಿರಣದ ಕಾಯಕಾಂತಿಯ
ಕಮಲಾರಿಯ ಸೂಡಿದನೆ
ಕಮಲಬನಕೆ ಕಾಮಿತವೀವ ಶಂಕರ
ನಮಗೆ ಕೊಡುಗೆ ಸುಮತಿಯಾ ॥೧॥

ಓದಿ ಕೇಳಿಯೆ ಆನಂದಿಸಿ ರಸಿಕರು
ಮಾದೇವಯೆಂದು ತಮ್ಮೊಳಗೆ
ಆದರಿಪುದು ಲಿಂಗನ ಕೃತಿಯನು ಇನ್ನು
ಮೇದಿನಿಗಿದು ಹೊಸತೆನಿಸಿ ॥೨॥

೧+ ಶ್ರೀಗುರುವೆ ಗತಿ (ಮೂ)

೨+ಲುಯ್ಯ (ಮೂ)

ಎತ್ತಲೊಲದು ನೋಡಲು ಮಗುಟದ ನೃಪ
ರಿತ್ತರದಲಿ ಸೂಳೆಯರು
ಸುತ್ತಲೆಸವ ದೊರೆಗಳ ಕಂಡು ಉಸುರಿದ
ಚಿತ್ತಯಿಸೆಂದು ಪ್ರಧಾನಾ ||೧೫||

ಹೆಚ್ಚಿತು ಠಾಣ್ಯಯ ಮುನ್ನಿಗಿಂದೆಗ್ಗಳ
ವೆಚ್ಚವಾಯಿತು ಭಂಡಾರಾ
ರಚ್ಚೆಯೊಳುಸುರಲಮ್ಮೆವುಯೆಂದು ಮಂತ್ರಿಗ
ಳೆಚ್ಚಜಿಸಿದರೊಡೆಯಂಗೆ ||೧೬||

ಮಂತ್ರಿಗಳಾಡಿದ ನುಡಿಗೇಳಿ ಮನದಿ ಕು
ಮಂತ್ರವನೆಣಿಸಿ ದಾನವರು
ತಂತ್ರ ಹಣ್ಣಿದ ಭುವನದೊಳಗಿಹ ಜೀವ
ಜಂತ್ರವನಳಿವಂದದಲಿ ||೧೭||

ತಮ್ಮನ ಮೊಗವ ನೋಡಲು ವಿದ್ಯುನ್ಮಾಲಿ
ಗಮ್ಮನೆದ್ದನು ತಾರಕನು
ನಿಮ್ಮಡಿಗಳ ಬೆಸನಾಗಲಿ ದಿವಿಜರ
ಸೊಮ್ಮನೆಲ್ಲವ ತಾಪೆನೆಂದಾ ||೧೮||

ಸಿಡಿಲಿನೊಳುಪದೇಶವಡದಾನಲನಂತೆ
ಘುಡುಘುಡಿಸುತ ತಾರಕನು
ಕಡುಮೂರ್ಖನು ಮುನ್ನನವನಣ್ಣ ಬೆಸಸಲು
ಸುಡದಿಹನೆ ಮೂಱುಜಗವಾ ||೧೯||

ಧರೆಯ ರಾಯರುಗಳ ಹಣವನೆಲ್ಲವ ತಂದು
ಹಿರಿಯರ ಮನೆಯ ತುಂಬುವೆನು
ಬರಸು ಕಡುತಕೆ ಭಾಷೆಯನೆಂದು ಅನುವಾಗಿ
ದುರುಳ ಕಮಲಲೋಚನನು ||೨೦||

ಪುರದೊಳಗೀಪರಿ ತಾರಕ ಪುತ್ರರ
ಸಿರಿ ದಿನದಿನಕೊಪ್ಪಿ ಬರಲು
ಉರವಣಿಸಿದ ದೊರೆಗಳ ಸಂಭ್ರಮಗಳ
ಪರಿಯನದಾರು ಬಣ್ಣಿಪರು ॥೯॥

ಅವರ ಬಲುಹನದರದಟಿನ ಕೀರ್ತಿಯ
ಅವರ ಖಂಡೆಯದ ಸಿರಿಗಳ
ವಿವರಿಸಿ ಕೊಂಡಾಡೆ ಶೇಷನಿಗಳವಲ್ಲ
ಹವಣಿಸಬಲ್ಲರಾರದನು ॥೧೦॥

ದೊರೆಗಳ ರಾಣಿವಾಸದ ದಂಡಿಗೆಗಳು
ಪರಿವಾರದ ಲಲನೆಯರು
ತೆರಳಿ ಸಂದಣಿಸಿತು ಕ್ರೌಂಚಾದ್ರಿಯ ಮು
ಪ್ಪುರದ ಹೆಬ್ಬಾಗಿಲ ನಡುವೆ ॥೧೧॥

ನಿಚ್ಚ ಮದುವೆ ಬಾ[೧][ಸಿ][೧]ಗಗಟ್ಟಿ ಮದುಮಕ್ಕ
ಳಚ್ಚಳಿಯದ ನಾಗವಾಲೆ
ಹೆಚ್ಚಿದ ಸೂಲದ ಹಬ್ಬದ ಬೊಬ್ಬೆಯು
ರಚ್ಚೆ ತ್ರಿಪುರದೊಳಗೆಸೆಯೆ ॥೧೨॥

ತಗರು ಪುರುಲೆ ಕೋಳಿಯ ಅರ್ತಿಗಳಾಗ
ಜಗಜಟ್ಟಿಗಳ ಹೋರಾಟ
ಪಗಡೆ ಕವಡೆ ಲೆತ್ತ ಚದುರಂಗ ಜೂಜಿನ
ಅಗಣಿತದೊರೆಗಳೊಪ್ಪಿಹರು ॥೧೩॥

ಹರನು ತ್ರಿಸೂಲದಲಿಜೆಯಲುಳಿದವರು
ಹರಿಯ ಚಕ್ರಕೆ ಮಲತವರು
ಸುರಪ ವಜ್ರದಿ ಹೊಯ್ಯಲುಳಿದ ರಕ್ಕಸರುಗ
ಳುರುವಣಿಸಿತು ಮೂಜು ಪುರದಿ ॥೧೪॥

೧-೧ ಸಿಂ (ಮೂ)

ಮೂಱುಲಕ್ಕದ ಮೂವತ್ತಾಱು ಸಾವಿರ
ನೀಱೆಯರೆನಿಪ ಸೂಳೆಯರ
ಗಾಱುಮಾಡಿಯೆ ಬೇಱೆಬೇಱವರನು ತಂದು
ಮೂಱು ಪುರದೊಳಿರಿಸಿದರು ॥೨೭॥

ಕಿತ್ತರಮೃತದ ಕೊಣನ ಕಲ್ಪತರುವನು
ಉತ್ತುಮ ಚಿಂತಾಮಣಿಯನು
ಹೊತ್ತು ಹೆಗಲಿನಲಿ ಸುರಧೇನುವನು ಪಿಡಿ
ದೊತ್ತೆಯಿದಿದರು ಮುಪ್ಪುರಕೆ ॥೨೮॥

ದಾಳಿ ಮಾಡಿದರಷ್ಟದಿಕ್ಕಿನ ರಾಜ್ಯವ
ಹಾಳುಮಾಡಿಯೆ ನಾಡ ಸುಡುತ
ಕಾಳಗದೊಳು ಗೆದ್ದು ದೂಳಿಗೋಟೆಯ ಕೊಂಡು
ಮೇಲೆ ಹಿಡಿದರರಸುಗಳಾ ॥೨೯॥

ಸುರರಾಜನುರಿರಾಜನೆಮರಾಜ ನೈಋತ್ಯ
ವರುಣನನಿಲ ಕುಬೇರಾ
ಬಿರಿದಿನೀಶಾನ್ಯನೆನಿಪ ದಿಕ್ಕು ನಾಲ್ಕರ
ಒರದಿ ಕೈಸೆಱೆಗೊಂಡರವರು ॥೩೦॥

ಕುದುರೆಯ ಖು[1][ರಪು][1]ಟ ಮಣಿರಥಗಳ ಘೋಷ
ಮದಕರಿಗಳ ನಿಡುರಭಸ
ಸದವ ವಾದ್ಯದ ಧ್ವನಿ ಕಾಲಾಳಿನ ಬೊಬ್ಬೆ
ಬೆದರಿಸಿತಖಿಳ ಲೋಕವನು ॥೩೧॥

ದಂಡೆತ್ತಿ ನಡೆಯಿತು ಮತ್ತೆ [2][ಪಾ][2]ತಾಳಕ್ಕೆ
ಹಿಂಡುಹಾವುಗಳೆಲ್ಲ ಬಡಿದು
ಮಂಡೆಯೊಳಿಹ ಮಾಣಿಕಗಳ ಸೆಳದರು
ದಿಂಡೆಯ ರಕ್ಕಸರುಗಳು ॥೩೨॥

೧–೧ ರುಪಾ (ಮೂ) ೨–೨ ಪ (ಮೂ)

ತತ್ತ ಹೊತ್ತಿನೊಳವನೇಱಿಸಿ ಭಾಷೆಯ
ನಿತ್ತನು ಮಝಭಾಪೆಂದು
ಹತ್ತಿರೆ ಕರದನುಜರಿಗೊಪ್ಪಿ ವೀಳೆಯ
ವಿತ್ತನು ವಿದ್ಯುನ್ಮಾಲಿ ॥೨೧॥

ಕಾಲ ಕಡೆಯ ಘಲಘಲರೆನಲೆದ್ದನು
ವಾಲಗದಿಂದನುಜೇಂದ್ರಾ
ಕಾಳೆಗಳೊದಱೆ ಕೊಳಲು ತಪ್ಪಟೆ ನಿ
ಸ್ಸಾಳ ಭೇರಿಗಳುಲಿಯಾಗ ॥೨೨॥

ಬಂದು ಮೆಲ್ಲನೆ ಒಯ್ಯಾಳಿಯ ಬಯಲೊಳು
ನಿಂದು ಪವುಜ ನೆಱೆ ನೋಡಿ
ಅಂದಿನ ಮಱುದಿನ ದನುಜೇಂದ್ರನು ಮಾ
ಸಂದು ಸಮರಕನುವಾದಾ ॥೨೩॥

ಚತುರಾನನು ಕೊಟ್ಟ ವರಹಿನ ಬಲುಹಿಲಿ
ಅತಿಶಯ ಸಿರಿಯ ಮದದಲಿ
ಮತಿಮಱದೊಡನೆ ಹೆಕ್ಕಳಿಸಿ ರಕ್ಕಸರು ದೇ
ವತೆಗಳ ಬೇಂಟೆಯಾಡಿದರು ॥೨೪॥

ಇತ್ತಿತು ಪಾಳೆಯವಮ[೧][ರಾ][೧]ವತಿಗಾಗಿ
ಮುತ್ತುಗೋಟೆಯ ಮಾಡಿ ಬಿಟ್ಟು
ತೆತ್ತೀಸಕೋಟಿ ದೇವರ್ಕಳೊಡನೆ ಕಾದಿ
ಮತ್ತೆ ಭಂಗಿತರ ಮಾಡಿದರು ॥೨೫॥

ಹೊಕ್ಕರಮರವತಿಯನು ರಾಜನಿಕರವ
ಲೆಕ್ಕ ತುಳುವ ದೇವಗಣವಾ
ಒಕ್ಕಲಿಕ್ಕಿಯೆ ಚಲ್ಲಿ ಬಡಿದು ಹಿಡಿದರವ
ರೊಕ್ಕಲುಮಕ್ಕಳು ಸಹಿತಾ ॥೨೬॥

೧–೧ ರ(ಮೂ)

ದಿವಿಜರು ದಿವ್ಯ ಸಾವಿರ ವರುಷವು ಮಿಗೆ
ಶಿವನೊಡನೆತ್ತಿ ಕಾದಿದರು
ಬವರಕ್ಕೆ ಸ್ವರ್ಗ ಮರ್ತ್ಯವು ಪಾತಾಳದೊ
ಳಿವರಿಗಿನ್ನಿದಿರಾಹರಿಲ್ಲಾ ॥೩೯॥

ಡಮ್ಮನೆ ವಾದ್ಯವು ಪಮ್ಮೈಸುವರೆಲ್ಲ
ಹೆಮ್ಮೆಯ ಬಿಟ್ಟು ಮೂಜಗವು
ಸುಮ್ಮನಿಹರು ಮಾತನಾಡಲಮ್ಮದೆ ಮಿಗೆ
ತಮ್ಮೊಳಿಬ್ಬಿಬ್ಬರೊಂದಾಗಿ ॥೪೦॥

ನೆಲನಾಗ ಸ್ವರ್ಗದವರ ಅಷ್ಟದಿಕ್ಕಿನ
ಮಲತ ಮನ್ನೆಯರೆಲ್ಲರನು
ಬಲುಸಂಕೋಲೆಯನಿಕ್ಕಿ ತ್ರಿಪುರದಲಿ
ಹಲವು ಊಳಿಗ ಮಾಡಿಸುವರು ॥೪೧॥

ಲಲನೆಯರುಪ್ಪಾರತಿಗಳ ಬೆಳಗುತ
ಕೆಲಬಲದಲಿ ಪಾಡುತಲಿ
ಒಲಿದು ಮೂಲೋಕದ ಸೆಜೆಗಳನೀಪರಿ
ಹಲವು ಊಳಿಗ ಮಾಡಿಸುವರು ॥೪೨॥

ಸುರ೧[ಪ]೧ತಿ ವಾಸವು ವಿದ್ಯುನ್ಮಾಲಿಗೆ
ನರ[ಪ]ತಿ ವಾಸವು ತಾರಕಗೆ
ಉರಗ[ಪ]ತಿವಾಸವು ಕಮಲಲೋಚನಗೆಂದು
ಭರದಿಂದ ಕುಳಿತರೋಲಗದಿ ॥೪೩॥

ತಾರಕಸುತರೋಲಗದಿಂದಲೇಳೆ ಜಂ
ಭಾರಿ ಕೈಲಾಗಗೊಡುವನು
ಮಾರುತ ಚಮ್ಮಾವುಗೆ ಮೆಟ್ಟಿಸುವನು
ನೈಋತ್ಯ ಸಮ್ಮುಖವೆಂಬಾ ॥೪೪॥

೧–೧ ರ (ಮೊ)

ಪಿಡಿದರುರಗರಾಜನ ಮಕ್ಕಳುಗಳ
ಮಡದಿಯರೆಲ್ಲರು ಸಹಿತಾ
ಬಿಡದೆ ರಾಜ್ಯಕೆ ಬಲುಗಾವಲನಿಕ್ಕಿಯೆ
ಒಡೆಯರು ತಾವಾಗಿಹರು ॥೩೩॥

ಕೊಳ್ಳೆ ಮಂದಿಯ ಕಾಲ್ಹೊಳಿ ಗೋಟೆಯ ಕೊಂಡು
ಅಳ್ಳೆದೆಯಾದ ಮನ್ನೆಯರು
ಹಳ್ಳಿಪಳ್ಳಿಯ ಕೊಟ್ಟ ಕುರುವ ಕುತುರುಗಳ
ಜಳ್ಳುಗಳವರ ಪಾಡೇನು ॥೩೪॥

ಮಾಳವ ಮಗಧ ಮಂಗಳ ಗುಜ್ಜರ ಮಲೆ
ಯಾಳ ತುಳುವ ಲೇಪಾಳ
ಗೌಳ ಕೊಂಕಣ ಪಾಂಡ್ಯ ಚೋಳ ಹಮ್ಮೀರರು
ಆಳಾಗಿಪರವರೊಡನೆ ॥೩೫॥

ತರುಗಿರಿಗಳನೊಕಿಕ್ಕಲಿಕ್ಕುವ ತೋಱ ಮಿಕ್ಕ
ಮೊರಡಿಯನೇಣಿಕೆ ಮಾಡುವದೆ
ದುರದೊಳು ದೇವ ದಾನವರ ಕೊಲುವದಿನ್ನು
ನರರ ಲೆಕ್ಕಿಪರೆ ರಕ್ಕಸರು ॥೩೬॥

ಇರಿದರು ವೈಕುಂಠ ಪುರಪಾರಿಯಂಕರ
ತಱಿದರು ತಮಗಾಂತವರ
ಸೆಱೆತುಱುವಿಡಿದರು ಬ್ರಹ್ಮಲೋಕವ ಮುತ್ತಿ
ಸಱಿಗರಕ್ಕಸರನೇನೆಂಬೆ ॥೩೭॥

ಪೊಡೆಯೆಲ್ಲಱನು ವೈಕುಂಠವ ಬಿಟ್ಟು ಪಾ
ಲ್ಗಡಲನು ಬಲಿದುಕೊಂಡಿಹನು
ನಡಿಗಿ ಬ್ರಹ್ಮನು ಧೃವಲೋಕವ ಮಱೆಗೊಂಡ
ದಡಿಗದನುಜರುರವಣೆಗೆ ॥೩೮॥

ಬಯ್ವರು ಬ್ರಹ್ಮನ ಸುಯ್ವರು ಚಿಂತಿಸಿ
ಕೈಗಳ ಗಲ್ಲಕೆ ಚಾಚಿ
ಐಮೊಗದನನೊಯ್ಯನೆ ನೆನವರು ನಮ್ಮ
ನೊಯ್ವ ದೈವವ ಕಾಣೆವೆನುತಾ ||೫೧||

ಬಾಡಿದ ವದನವು ಮೂಡಿದ ಚಿಂತೆಯು
ಹೇಡಯಿಸಿದ ಧೈರ್ಯಗಳಾ
ಪಾಡಳಿದಂಗದ ಘಾಡವಳಿದನೆನ
ಪೋಡಿದಮರರೊಮ್ಮಜೆದು ||೫೨||

ಆವ ಸುವ್ರತಿಗಳ ಕೆಡಿಸಿದೆವೋ ಮುನ್ನ
ಆವ ಧರ್ಮಕೆ ಅಳುಪಿದೆವೊ
ಆವ ಶಿವಾರ್ಚಕರನು ಜರದೆವೊ ನಮ
ಗೀ ವಿಧಿಯಾಯಿತೆಂದೆನುತ ||೫೩||

ಸುರರು ದೇವರ್ಕಳು [೧][ಆ][೧]ದಿಕ್ಕುಪಾಲಕರು
ಅರಸು ದೇವೇಂದ್ರನ ಬಳಿಗೆ
ಭರದಿಂದ ಬಂದು ಕಂಡರು ತಮ್ಮ ದುಃ[೨][ಖ][೨]ಮ
ನಿರದೆ ಬಿನ್ನಹವ ಮಾಡಿದರು ||೫೪||

ಬೇಸತ್ತೆವು ಖಳರೂಳಿಗವನು ಮಾಡಿ
ಘಾಸಿಯಾದೆವು ಪಿರಿದಾಗಿ
ನೀ ಸುಮ್ಮನಿರೆ ಗತಿ ನಮಗಾರುಂಟೆನೆ
ವಾಸ[ವ] ನುಡಿದನವರಿಗೆ ||೫೫||

ವಾರಿಜಸಂಭವನೊಲುಮೆಯಿಂ ಬಂದಿತು
ತಾರಕಸುತರಿಗೈಶ್ವರಿಯು
ಆರಿಗೊಜಿಲುವೆವು ತಾಯಿ ವಿಷವನಿಕ್ಕ
ಲಾರ ಸಾರುವೆವೆಂದನಿಂದ್ರ ||೫೬||

೧-೧ ವಾ (ಮೂ) ೨-೨ ಷ್ಕ (ಮೂ)

ಅಡಿಯಿಡಲಸುರರೋಲಗದಿ ಹೋಹೋಯೆಂದು
ತಡೆಯದುಗ್ಗಡಿಪ ಕುಬೇರ
ಬಿಡದೆ ಮೇಲುಪ್ಪಾರವವಧಾನವೆಂದೆಂಬ
ನುಡಿವ ಕಟ್ಟಿಗೆಯವರಾಗಿ ॥೪೫॥

ಹಡಪ ಚಾಮರ ಕಾಳಂಜಿ ಸಗ್ಗಳೆಗಿಂಡಿ
ಪಡುಗ ಬೊಕ್ಕಸ ಬೆಳುಗೊಡೆಯ
ಪಿಡಿದಮರರು ಕಿಂಕರರಾಗಿ ಇರುತಿಹ
ದಡಿಗದನುಜರಿಗಾಳಾಗಿ ॥೪೬॥

ಮೂವತ್ತು ಮೂಱು ಕೋಟಿ ದೇವರ್ಕಳ
ಸೇವಕರನು ಮಾಡಿಕೊಂಡು
ತಾವೆ ದೊರೆಗಳಾಗಿ ರಕ್ಕಸರೀ ಪರಿ
ಠೀವಿಯೊಳೆಸದರೇನೆಂಬೆ ॥೪೭॥

ಅವರ ಬಲುಹನವರದಟಿನ ಕೀರ್ತಿಯ
ನವರ ಖಂಡೆಯದ ಸಿರಿಗಳ
ವಿವರಿಸಿ ಕೊಂಡಾಡೆ ಶೇಷನಿಗಳವಲ್ಲ
ಹವಣಿಸಬಲ್ಲರಾರದನು ॥೪೮॥

ಹತ್ತಿರೆ ಕುಳಿತೋಲಯಿಸುವ ದೊರೆಗಳ
ಮೊತ್ತ ತೊಂಬತ್ತಾಱಕ್ಷೋಣಿ
ಎತ್ತ ನೋಡಿದಡತ್ತ ಲೆಕ್ಕಿಸಬಾರದು
ಭತ್ತೀಸಾಯುಧವಾಂತ ಭಟರು ॥೪೯॥

ಇತ್ತ ದೇವತೆಗಳು ಹೊತ್ತು ದುಗುಡವನು
ಚಿತ್ತದಿ ನೊಂದು ತಮ್ಮೊಳಗೆ
ತೊತ್ತಿರಾದರು ತಮ್ಮ ಹೆಂಡರೆಂದತ್ತತ್ತು
ಬತ್ತಿ ಬಾಯಾರುತಲಿಹರು ॥೫೦॥

ತೆರೆ ನೊರೆ ಮಾರ್ದರೆ ಬುದ್ಬುಧ ಪಾಟಿನ
ವರರತ್ನನಿಚ್ಚೈಯ ಪ್ರವಳಾ
ನೆರಸಿ ತುಂತುಱವನಿಯಾಟ ಭರತದಿ ಭೋ
ಗರ್ರೆದು ಪಾಲ್ಗಡಲೊಪ್ಪುತಿಹುದು ॥೬೩॥

ಕ್ಷೀರಾಬ್ಧಿಯೊಡೆಯನಲ್ಲಿಗೆ ಬಂದು ಬ್ರಹ್ಮನು
ತಾರಕ ಸುತರಟ್ಟುಳಿಯನು
ಭೂರಿ ಸುರರ ದುಗುಡವ ಪೇಳೆ ಕೇಳಿ ಮು
ರಾರಿ ನಗುತಲಿಂತೆಂದಾ ॥೬೪॥

ಒಂದು ಕೈಯಲಿ ನಟ್ಟು ಎರಡು ಕೈಯಲಿ ಕೀಳ್ವ
ಅಂದವ ನೀ ಮಾಡಿಕೊಂಡೆ
ಮುಂದಱಿಯದೆ [೧][ಖ][೧]ಳರಿಗೆ ವರವ ಕೊಟ್ಟು
ತಂದೆ ತ್ರೈಜಗಕೆ ತಲ್ಲಣವಾ ॥೬೫॥

ನಮ್ಮಯ ರಾಜ್ಯವೆಲ್ಲವು ಸೂಱೆಹೋಯಿತು
ನಿಮ್ಮ ಪಾಡೇನೆಂದ ನಗುತ
ಬ್ರಹ್ಮನೊಡನೆ ಮಾತಾಡುತ ಕೃಷ್ಣನು
ಹಮ್ಮಿದ ರಾಜ ಕಾರ್ಯವನು ॥೬೬॥

ಮಱೆಯ ಮಾತೇಕಿನ್ನು ನಮ್ಮ ನಿಮ್ಮೊಳಗೀಗ
ಹಱಿಯದು ತ್ರಿಪುರದ ಜಯವು
ಇಱುದೇನುಪಾಯವು ಇದಕೆಂದು ಮುರಾರಿ
ತೆಱನ ನುಡಿದ ಬ್ರಹ್ಮನೊಡನೆ ॥೬೭॥

ಖುಲ್ಲ ರಕ್ಕಸರ ಗೆಲ್ಲೊಡೆ ಶಿವನಲ್ಲದೆ
ಬಲ್ಲಿದರಿಲ್ಲ ಲೋಕದೊಳು
ನಿಲ್ಲದೆ ನೀ ಮುಂದೆ ನಡೆ ಕೈಲಾಸಕ್ಕೆ
ಮೆಲ್ಲನೆ ನಾ ಹಿಂದೆ ಬಹೆನು ॥೬೮॥

೧-೧ ಕ (ಮೂ)

ಆತನೆ ಗತಿಯು ಮತ್ತಾತನೆ ಹೇಳುವ
ಯಾತಕೆ ಚಿಂತೆಯೆಂದೆನುತಾ
ಕಾತರಿಸುವ ದೇವವ್ರಾತ ಸಹಿತ ಲೋಕ
ತಾತನ ಬಳಿಗೆಯಿತಂದ ||೫೭||

ಹಸುಬನ ಬಲಗಾಲುಳಿಯ ಒಳ್ಳೆಯಗಳು
ಎಸೆವ ತಿದ್ದುಡುಕೆ ಹಂಗಗಳಾ
ಎಸೆವ ಸಕುನವ ನೋಡುತಲಿಂದ್ರ ಬಂದನು
ವಿಷರುಹಭವನೋಲಗಕೆ ||೫೮||

ಮೂಜಗವನು ಪುಟ್ಟಿಪ ಚಿತ್ರ ಪಾತ್ರಗ
ಳೋಜೆಯ ಹೊಜೆಗೆಯೊಳೆಸವಾ
ರಾಜವೋರುವನಲ್ಲಿಗೆ ಬಂದನು ಸುರ
ರಾಜ ಕಿನ್ನರಗಣ ಸಹಿತಾ ||೫೯||

ಕಂಡು ಕಾಣಿಕೆಯಿಕ್ಕಿ ಮಂಡಿಗೆ ಕೈಯ್ಯೊತ್ತಿ
ಪುಂಡರೀಕಜನಡಿಗಳಿಗೆ
ದಿಂಡುಗೆಡವುತೊಡನೆದ್ದು ಬಿನ್ನಯಿಸಿದ
ಚಂಡವಿಕ್ರಮನು ದೇವೇಂದ್ರಾ ||೬೦||

ತಾರಕಸುತರಿಂದ ಬಂದ ವಿ[೧][ಪತ್ತು][೧] ಜಂ
ಭಾರಿಯುಸುರೆ ದುಗುಡದಲಿ
ನೀರಜಭವ ಕೇಳುತೀ ಕಾರ್ಯವನು ಮು
ರಾರಿಗಜುಪಬೇಕೆಂದಾ ||೬೧||

ಹದ್ದಿನ ವಾಹನನಿದ್ದ ಸ್ಥಾನಕೆ ಹೋಗಿ
ಬುದ್ಧಿಗಲಿಸಿಕೊಂಬನೆಂದು
ಎದ್ದನೋಲಗದಿ ಪದ್ಮಜನು ಹಂಸೆಯನೇಜಿ
ಹೊದ್ದಿದ ಕ್ಷೀರಾಬ್ಧಿಯನು ||೬೨||

೧-೧ ಪಾತ (ಮೂ)

ವರವಸಂತನ ಗೊತ್ತು ಅರಳುದೊಂಗಲ ಬಿತ್ತು
ಮೊರೆವ ತುಂಬಿಯ ಸವಿದುತ್ತು
ಸ್ಮರರಾಜನ ಕರ್ತೃ ವಿರಹಿ ಜನರ ಮೃತ್ಯು
ಸಿರಿವನ ಕಂಗೊಳಿಸಿತ್ತು ॥೭೫॥

ಬರೆ ಬರೆ ಕಂಡನು ನೀಲಕಂದರನಿಪ್ಪ
ವರರಾಜ ಗೃಹದ ಶೃಂಗರವ
ತರಣಿಯ ಬೆಳಗನೊದದು ಥಾಳಿಸುತಿಪ್ಪ
ಸುರಚಿರ ಕರುವಾಡಗಳ ॥೭೬॥

ನೀಲದ ನೆಲೆಗಟ್ಟು ಗೋಮೇಧಿಕದ ಕಂಬ
ಸಾಲುಮಾಣಿಕದ ತೊಲೆಗಳ
ಮೇಲೆ ಮುತ್ತಿನ ಸೂಸಕದ ಲೋವೆಗಳಿಂದ
ವಾಲಗಸಾಲೆ ಕಣ್ಗೆಸೆಯೆ ॥೭೭॥

ಹೊನ್ನ ಕಳಸವಿಕ್ಕಿದ ಬಾಗಿಲು ಪೊಸ
ರನ್ನದ ಕುಸುಮದ ಮಾಟ
ಕನ್ನಡಿ ಮಕರತೋರಣಗಳು ಎಸೆದವು
ಪನ್ನಗಧರನರಮನೆಗೆ ॥೭೮॥

ಮುಕ್ಕಣ್ಣನೋಲಗಸಾಲೆ ಮೂವತ್ತಾಱು
ಲಕ್ಕಗಾವುದ ನೀಳದಲಿ
ಚೊಕ್ಕಟವಾಗಿ ಕಟ್ಟಿರ್ದ ಕೈಲಾಸದ
ಲೆಕ್ಕವನಾರು ಬಣ್ಣಿಪರು ॥೭೯॥

ತೋಱಿತು ಪಂಚವಾದ್ಯದ ಒಡ್ಡೋಲಗ
ಚೀಱುವ ಶೃತಿಗಳೊಗ್ಗಿನಲಿ
ನೀಱಿ ಗೌರಿ[ಯು] ತೊಡೆಯೊಳಗೆಸೆವನ ಕಂಡು
ಏಱಿತು ಅಜಗೆ ಸುಮ್ಮಾನ ॥೮೦॥

ಎಂದು ನುಡಿದ ಗೋವಿಂದಗೆ ಬೀಳ್ಕೊಂಡು
ಸಂದಣಿಸುವ ದೇವಗಣವಾ
ಹಿಂದಿಕ್ಕಿಕೊಂಡೆಯ್ತಂದ ಚತು[೧][ರಾನನ][೧]
ನಂದಿವಾಹನನುಯಿದ್ದೆಡೆಗೆ ॥೧೯॥

ಬಂದು ಕಂಡನು ಚಂದ್ರಶೇಖರನಪರಿಹ
ಥಂದದ ರಜತಾದ್ರಿಯನು
ಮುಂದೆ ಮೆಱೆವ ನಂದನವನವ ನೋಡುತಾ
ನಂದದಲೆಯ್ತಂದನಜನು ॥೨೦॥

ಬಳಸಿ ಪರಿವ ಪನ್ನೀರ ಕಾಲುವೆಗಳ
ಪೊಳೆವ ಕರ್ಪೂರವಾಳೆಗಳ
ಎಳೆದಳಿರುಗಳ ಹೊಂದಾವರೆ ಗೊಣನೊಳು
ತೊಳಗಿತು ದೇವನುದ್ಯಾನ[೨] ॥೨೧॥

ಉಲಿವ ಕೋಗಿಲೆಗಳ ಕೆಲೆವ ಪಾರಿವಗಳ
ನಲಿದು ನಾಟಣಿಸುವಂಚೆಗಳ
ತೊಲಗಿ ಕುಣಿವ ನವಿಲೋದುವ ಗಿಳಿಯಿಂದ
ಚೆಲುವೆನಿಸಿತು ಶಿವ[ನು]ದ್ಯಾನಾ ॥೨೨॥

ಈಳೆ ಕಿತ್ತೀಳೆ ಮಾದಲ ನಿಂಬೆ ಕರ್ಜೂರ
ನಾಳಿ ಹೇರೀಳೆ ದ್ರಾಕ್ಷಿಗಳು
ದಾಳಿಂಬ ಸಿಹಿಮಾವು ಪಲಸಡಕೆಯ ವೃಕ್ಷ
ಸಾಳಿ ವಸವು ಸುತ್ತಲೆಸೆಯೆ ॥೨೩॥

ಇರವಂತಿಗೆ ಸೇವಂತಿಗೆ ಜಾಜಿಯು
ಬಿರಿದ ಮಲ್ಲಿಗೆ ಮೊಲ್ಲೆ ದವನ
ಕರವೀರ ಪಡ್ಡಳೆ ಪಾರಿಜಾತಗಳೆಲ್ಲ
ಮೆಱೆದವಾ ವನದ ಮಧ್ಯದಲಿ ॥೨೪॥

೧–೧ ರನಾನಾ (ಮೂ) ೨+ ವು (ಮೂ)

ಚರಣದೊಳಿಂದ್ರ ಗುಹ್ಯದಿ ಬ್ರಹ್ಮ ನಾಭಿಯೊ
ಳ್ಸಿರಿಪತಿ ಮೊಗದೊಳು ರುದ್ರ
ನೆರದ ಜಗವ ಹೂಂಕರಣೆಯಿಂದಲಿ ಪೆತ್ತ
ಪರಶಿವನನು ಕಂಡನಜನು ॥೮೭॥

ಶರಣ ರಕ್ಷಾಮಣಿ ಸೌಭಾಗ್ಯದ ಖಣಿ
ವರಫಣಿಧರ ನಿಜಕರುಣಿ
ದುರಿತಗಜಾಶ್ರಣಿ ವಿತರಣ ಸದ್ಗುಣಿ
ಹರನ ಕಂಡನು ವಾಣಿಯರಸಾ ॥೮೮॥

ತಾಗು ನಿರೋಧವಡೆಯದಳಿಯದ ಭಾವ
ರಾಗದಿ ನಿಜ ಕಳೆಗಳಲಿ
ಬೇಗದಿಂಗಳೆಯದ ಪೊಸ ಮಾತಿನಂತಿಹ
ನಾಗಧರನ ಕಂಡನಜನು ॥೮೯॥

ಪುಂಡರೀಕೋದ್ಭವಸಿರನಾಶ ಕುಸುಮ ಕೋ
ದಂಡ ನಿರ್ಧೂಮಧಾಮನನು
ರುಂಡ ಮಾಲಾಧರ ಚಂಡಸುತೇಜನು
ದ್ದಂಡ ಶಿವನ ಕಂಡನಜನು ॥೯೦॥

ಎಳೆವೆಳುದಿಂಗಳೊಳೆಸೆವ ಕೆಂಜೆಡೆಗಳ
ತೊಳಗುವ ಪಂಚಮುಖಗಳ
ಥಳಥಳಿಸುವ ದಶಭುಜದೊಳೆಸೆವ ಕಪ್ಪು
ಗಳದ ಶಿವನ ಕಂಡನಜನು ॥೯೧॥

ಓಂದೆ ಮುಂದೆಡಬಲದಲಿ ತನ್ನನರ್ಚಿಪ
ಸಂದ ಪುರಾತರುಗ್ಗಡಣೆ
ಕಂದ ಗಣಪ ವೀರಭದ್ರ ಮಹಾಂಕಾಳ
ನಂದಿಕೇಶ್ವರನೊಂದೆಸೆಯಾ ॥೯೨॥

ಇದ್ದುದು ಹರಿಯಜ ರುದ್ರರು ಶತಕೋಟಿ
ಇದ್ದರಿಂದ್ರರು ಪದ್ಮ ಸಂಖ್ಯೆ
ಹೊದ್ದಿ ಓಲೈಸುವ ಸುರರಸಂಖ್ಯಾತರೊ
ಳಿದ್ದ ದೇವನ ಕಂಡನಜನು। ॥೮೧॥

ವೇದವೇದಾಂತ ವೇದ್ಯನ ನಿತ್ಯತೃಪ್ತನ
ನಾದಿಸಿದ್ಧನನಪ್ರಮೇಯನ
ವಾದಿಸಿದಜಹರಿಯನು ಗೆದ್ದ ಶೂಲಿಯ
ಭೇದಿಸಿ ಕಂಡನಾ ಬ್ರಹ್ಮ ॥೮೨॥

ರವಿ[ಶತ]ಕೋಟಿ [೧][ದೀಧಿತಿ][೧] ಕಾಯಕಾಂತಿ[ಯ]
ನವದಿವ್ಯ ಪರಿಮಳವೆಸೆವ
ಭವದೂರ ನಿತ್ಯ ನಿಜಾನಂದ ನಿಶ್ಚಿಂತ
ಶಿವನ ಕಂಡನು ಪರಮೆಷ್ಟಿ ॥೮೩॥

ತುಱುಗಿದ ಹದಿನಾಲ್ಕು ಭುವನಕೊಬ್ಬನೆಯಿನ್ನು
ಹೆಱನೊಸಲನೆ ದೇವಯೆಂದು
ತುಱುಗಿ ಬೊಬ್ಬಿಡುವ ನಿಗಮದಬ್ಬರದೊಳು
ಮೆಱೆವ ಶಿವನ ಕಂಡನಜನು ॥೮೪॥

ಇದಿಱಿಲೊದಱುವಾಗಮಗಳ ಘೋಷವ
ಹೊದಱಿನ ಮಂತ್ರಮಧ್ಯದಲಿ
ಸದಮಳ ಚಿತ್ತ್ರಕಾಶದ ಬೆಳಗಿನಲಿಪ್ಪ
ಮದನವೈರಿಯ ಕಂಡನಜನು ॥೮೫॥

ಪುಟವಿಟ್ಟು ಕಾಸಿ ಕರಗಿದಪರಂಜಿಯ
ಕುಟಿಲವ ಕಳದು ನಿಂದಂತೆ
ಪಟುತರವಹ ಶುದ್ಧ ಬ್ರಹ್ಮದೊಳೆಸೆದಿರ್ಪ
ನಿಟಿಲನೇತ್ರನ ಕಂಡನಜನು ॥೮೬॥

೧–೧ ದಿದ್ಧಿತಿ ಮೂ)

ಆಡುವ ಪಾತ್ರವು ಪಾಡುವ ಗಾಸರ
ಕೂಡೆಯುಗ್ಗಡಿಪ ನಟ್ಟುವರಾ
ಜೋಡಿಸಿ ಧಿಮಿಧಿಮಿಕೆಂಬ ಮದ್ದಳೆಗಳ
ಘಾಡವೊಂದೆಸೆಯೊಳಗೆಸೆಯೆ ॥೯೯॥

ಝುಗಝುಗ ಝುಂಝುಂಕು ಟಾರ್ಮಿಣಾರ್ಮಿಣ
ಧಿಗಿಧಿಗಿಧಿಗಿಧಿಮಿಕೆಂದು
ತೊಗತೊಗ ಕಿಣಿಕಿಣಿ ಧಗಧಗಧಮ್ಮೆಂದು
ಅಗಣಿತ ವಾದ್ಯಗಳುಲಿಯೆ ॥೧೦೦॥

ಶುದ್ಧಾಂಗವು ಹೋಗೆಲ್ಲೆನೆ ನಟ್ಟುವ
ರೆದ್ದರು ಬೆರಳ[೧][ಸನ್ನೆಯಲಿ][೧]
ಹೊದ್ದವು ದೆಸೆಯ ಪಾತ್ರವೆನಲು ಪಂ
ಜೆದ್ದವು ಜವನಿಕೆಯೊಳಗೆ ॥೧೦೧॥

ಕಿನ್ನರಿ ತಾಳ ದಂಡಿಗೆ ಚಂದ್ರಮಂಡಲ
ಸನ್ನೆಗೆ ನುಡಿವ ಬೋಪಾಳ
ಸನ್ನುತ ದುಱುಮೆ ಚೆಂಗಿನ ವಾದ್ಯ ಉಪ್ಪಂಗ
ಉನ್ನತ ರಚನೆಯೊಳೆಸೆಯೆ ॥೧೦೨॥

ಕೊಱವಂಜಿಯನಂದ ಜೋಗಿಪಳ್ಳಿಯು ಪಳ್ಳೆ
ತೆಱದ ಸುವ್ವಲಧರ ವೇಸಿ
ನೆಱೆ ಸೋಂಕಲು ಬೊಮ್ಮನ ಪಾದಪಟ್ಟಿಯು
ಮೆಱೆದಳಾ ಪಾತ್ರದ ಲಲನೆ ॥೧೦೩॥

ಕೊಂಡಳು ವಾದ್ಯ ದುವ್ವಾಡವ ಲಾಗಿಸಿ
ಮಂಡರಿ ಪುಲ್ಲಣಿಗಳನು
ಗುಂಡಲವೊದಗೆ ನಾರ[೨][ರಂಗಾ][೨]ಲಿನ
ತಂಡವುನೆಱೆ ರಾಜಿಸಿತು ॥೧೦೪॥

೧–೧ ಸ್ನೇಯದಲಿ (ಮೂ) ೨–೨ ರಾಂಗ (ಮೂ)

ಸನಕ ಕಾಸ್ಯಪ ನಾರದ ಭೃಗು ಜ[ಮ]ದಗ್ನಿ
ತನುಜ ವಶಿಷ್ಠ ದಧೀಚಿ
ಮನುಗಳಗಸ್ತ್ಯ ವಿಶ್ವಾಮಿತ್ರರೊಳಗಾದ
ಮುನಿಗಳಿರ್ದರು ಪದ್ಮಸಂಖ್ಯೆ ||೯೩||

ಗೀತ ಪ್ರಬಂಧ ಜಕ್ಕಡಿ ಜೋಡಿಪ ಪಾದ
ಜಾತಿ ಕಾವುಲು ಚಿಂದು ಜತಿಯ
ಧಾತುಸ್ಥಾನದರಳವಜಿದು ಪಾಡುವ ಘನ
ವ್ರಾತ ಮುಸುಕಿತೊಂದೆಸೆಯಾ ||೯೪||

ದೆರೆ ಪಂಜು ಕಹಳೆ ಮದ್ದಳೆಗಳುಭಯ ಚಾ
ಮರವು ಪುಷ್ಪಾಂಜಲಿಯೆಱೆವಾ
ಬಿರಿದಿನ ಪಾತ್ರವು ಮೆಱೆವ ಸಘಾಡದ
ಪರಿಯನದಾರು ಬಣ್ಣಿಪರು ||೯೫||

ನೆಱೆದಿಂಗಳು ಕಾರ್ಮುಗಿಲನುಳಿದು ಸಲೆ
ಪೊಱಮಡುವೊಲು ತೆಱೆ ಸಱಿಯೆ
ಮಿಱುಗುವ ಚಂದ್ರವದನೆ ನಾಟ್ಯಕೆ ನಿಲ್ಲೆ
ಬೆಱಗಾಯಿತು ಸುರಕಟಕ ||೯೬||

ಅರರೆ ನವಿಲುಗಱಿಯನು ಪಸರಿಸುವಂತೆ
ತರಳೆ ಮಂಟಪದೊಳಗೆಸೆಯೆ
ಚರಣ ಕುಣಿಯೆ ತಾಳಸಂಚ ಕರಗಳಿಂದ
ಪುರಹರ ಭಲರೆಂದುಗ್ಗಡಿಪ ||೯೭||

ತಿರುಪು ಮುರುಪು ರೂಪು ಕರತಳ ಲಾವಣ್ಯ
ಪರತಳ ಸಂಚಮೇಲ್ದಿರುಪು
ಭರದಲುಚ್ಚರಿಯ ಮಂಡಿ ಕಳಾಸದ
ವರದೇವ ಪಾತ್ರವೊಂದೆಸೆಯಾ ||೯೮||

೧-೧ ವ (ಮೂ)

ಪರಚಿತ್ತವಿಲ್ಲದೆ ಹರನೆ ಚಿತ್ತೈಸೆಂದು
ತೆರೆಯ ತೆಗದು ಭೃಂಗಿ ನಿಲಲು
ಭರದಿ ನಾಂಟ್ಯವನಾಡುತ ಮುಱುಕದಲಿರೆ
ನೆರದ ಸುರರು ಗಹಗಹಿಸೆ ॥೧೧೧॥

ವರದ ವಿಭೂತಿ ಸಿರದ ದಂಡೆ ಕಾಸೆಯು
ಚರಣದ ಗೆಜ್ಜೆಯೆಸೆದವು
ಕರವ ಮುಗಿದು ನಿಂದು ಹರನೆ ಚಿತ್ತೈಸೆಂದು
ಭರದಿಂದ ಕುಣಿದ ಭೃಂಗೀಶಾ ॥೧೧೨॥

ಸಾರದ ಮೇಘವೊ ಮೋಕ್ಷದ ಸರದಿಯೊ
ಮಾರಹರನ ಕೀರ್ತಿಯೆನಿಪಾ
ಭೂರಿ ಸುಜ್ಞಾನದ ಬೆಳೆಯೊ ನಲುವೋ
ಯಾರಾಗದಿ ನಿಂದನು ಭೃಂಗಿ। ।೧೧೩॥

ಪಲ್ಲುಗಿರಿದು ಕಣ್ಣಮೆಳ್ಳಿಸಿ ಮೋಱೆಯ
ಮೆಲ್ಲನುಱುಗಿಸಿ ಹೊಟ್ಟೆಯಾ
ನಳ್ಳಿಸಿ ನಾಲಿಗೆಯನು ನೀಡುತೇಡಿಸು
ತಲ್ಲಿ ನಗಿಸುತ ಭೃಂಗೀಶಾ ॥೧೧೪॥

ಹಗರಣವಾಡುತ ಠಾಣವ ಮಾಡುತ
ಅಗಜೆಯ ಮೊಗವನು ಜಱದು
ಜಿಗಿದುವೊಂದೆಸೆಯಲಿ ಬಯಲ ಮಹಿ[ಮೆ]ಯನು
ಮಿಗೆ ತೋಱಿದನು ಭೃಂಗೀಶಾ ॥೧೧೫॥

ಮುಱುಕಿಸಿ ಮೋಱೆಯ ಸಂಸಾರಿಗಳನಾಗ
ಜಱದನು ದೇವನಿಕರವ
ಹುಱಿಹುಱಿಗುಟ್ಟುತ ಮಾಯಾಂಗನೆಯನು
ಮೀಱೆ[೧] ನಗಿಸುತ ಭೃಂಗೀಶಾ ॥೧೧೬॥

೧+ಗಿ (ಮೂ)

ತಿರುಗುವಳುಜ಼ ತಿಜ್ರ್ಸೆ ಚೌರಿಗೆಯೊಲು
ಪರಿಣಸಂದದಿ ಲಾಗಿಪಳು
ಪರಿವಳು ಪರಿವದೊಳು ತಾಳಸಂಚದಿ
ಮುರಿವಳು ಮಜಿಮೀನಂತೆ ॥೧೦೫॥

ಪರಿಣಸ ಪುಟದಂತಿಹುದುಪ್ಪರಸಂಚು
ತೆರಳಿಕೆ ಖಗದಂತಿಹುದು
ತರಳ ಮಾರುತನೊಲು ಮೃದುಗಾತಿಯೆಸೆಯಲು
ತರಳೆಯ ಲಾಸ್ಯದ ಸೊಬಗು ॥೧೦೬॥

ಕಾರಮಿಂಚೆದ್ದಂತೆ ಕಂಗಳ ಬೆಳಗುಗ
ಳ್ವಾರಣಗಳ ಸಿರದಂತೆ
ತೋರಮಾಲೆಯ ಪದ್ಮಿನಿಜಾತದ ವರ
ನಾರಿಯೆಸೆದಳು ಲಾಸ್ಯದಲಿ ॥೧೦೭॥

ಪಾತ್ರ ಸಿಖಾಮಣಿ ಪಾತ್ರ ಗಜಾಶ್ರುಣಿ
ಪಾತ್ರ ಕುಲಕೆ ಕಟ್ವಾಣಿ
ಪಾತ್ರ ನಿವಹಕಣಿಯೆಂದವಳನು ಭಾಳ
ನೇತ್ರನ ಸಭೆ ಪೊಗಳಿದರು ॥೧೦೮॥

ಹರನ ಸಭೆಯೊಳಾವೇಳೆದಲ್ಲೈತಂದು
ಅರರೆ ನಿಲಲು ಭೃಂಗೀಶಾ
ವರದ ವಿಭೂತಿ ಸಿರದ ಕವಡೆಯ ದಂಡೆ
ಚರಣದ ಗೆಜ್ಜೆ ಸಹಿತಲಿ ॥೧೦೯॥

ಭರದಿ ನಾಂಟ್ಯದ ಭೃಂಗಿ ಜವನಿಕೆಯೊಳಗಿರ್ದು
ಅರರೆ ಚಿತ್ತೈಸೆನ್ನ ಹರನೆ
ಸರಿಯಿಲ್ಲ ತೂಗಲು ಪರಶಿವ ನಿನಗೆಂದು
ಗಿರಿಜೇಶ ಚಿತ್ತಯಿಸೆನುತಾ ॥೧೧೦॥

ಭಕ್ತಿವತ್ಸಲ ಮುಕ್ತಿ ಸಾಧಕ ಸರ್ವೇಶಾ
ಯುಕ್ತಿಗೆ ನಿಲುಕದಪ್ರತಿಮ
ಶಕ್ತಿ ವಿರಹಿತ ವಿವೇಕ ಶಂಕರ ಮಧು
ರೋಕ್ತಿಯಿಂದಲಿ ಸಲಹೆನ್ನ ॥೧೨೩॥

ಪ್ರೇಮ ಪುಳಕದಿಂದ ರೋಮಾಂಚನದಿ ಸು
ತ್ರಾಮನೊಡನೆ ಸುರನಿಕರ
ವ್ಯೋಮಕೇಶನೆ ಸಲಹೆನುತಡ್ಡಗೆಡದರು
ಕಾಮಾಂತಕನಿದಿರಿನಲಿ ॥೧೨೪॥

ತೊಲತೊಲಗಿಂದ್ರ ಕುಳ್ಳಿರು ಬ್ರಹ್ಮ ಗಜಬಜ
ನಿಲಲೆಂದು ದೇವ ಸುರರಾ
ಉಲಿಯದಿರಷ್ಟದಿಕ್ಪಾಲರು ಹೋಯೆಂದು
ಸಲೆ ಕಂಚುಕಿಯರೊದಜಿದರು ॥೧೨೫॥

ಕರದು ಹತ್ತಿರೆ ಕುಳ್ಳಿರಿಸಿ ಬ್ರಹ್ಮನಸುಜಿ
ಕರುಣವಾರುಧಿಯೊಳಗದ್ದಿ
ನೆರೆದಸಂಖ್ಯಾತರ ಸುರರ ಸಂದೋಹವ
ಹೊರದು ಹೊಂಗಿರಿಸಿ ನೋಟದಲಿ ॥೧೨೬॥

ಏನು ಬಂದಿರಿ ಕಾರ್ಯವಾವುದುಸುರಿ ದು
ಮ್ಮಾನವೇಕೆನ್ನೆ ಶಶಿಮೌಳಿ
ಭಾನುಕೋಟಿಪ್ರಭನಡಿಗೆ ನಮಿಸಿ ಚತು
ರಾನನು ಬಿನ್ನಯಿಸಿದನು ॥೧೨೭॥

ತಾರಕಾಸುರನ ಮಕ್ಕಳು ಸುರರುಗಳನು
ಗಾಜುಮಾಡಿಯೆ ಹಿಡಿಹಿಡಿದು
ಭೂರಿ ಸುರಾಂಗನೆಯರು ಸೂಜೆಹೋದರು
ಮಾರಹರನೆ ಚಿತ್ತಯಿಸು ॥೧೨೮॥

ಗರಳದುರಿಗೆ ಸುರರೋಡಿ ದಕ್ಷಾಧ್ವರ
ಉರುವಣಿಸಿದ ಸುರರಜರ
ಬಿರಿದಿನ ಅಸುರರ ಶಿರವ ಚೆಂಡಾಡಿದ
ಪರಿಯ ತೋಱಿದನು ಭೃಂಗೀಶಾ ॥೧೧೭॥

ಕಱಕಱಿಸುವ ಸಜ್ರನೆ ಜಾಜುವ ಕೈಯು
ತುಱಿಯುದಿಂದಲಿ ಬೆದರಿಸುವ
ಪಿರಿಚುವ ಮುಕ್ಕಾಲನು ಬೊಡ್ಲೊನವನು
ಎಱಗಿ ಕುಣಿವನು ಭೃಂಗೀಶಾ ॥೧೧೮॥

ಮುಗಿಲಿಂದವೊಸರಿಸಿದ ರವಿಯೋ ಭೃಂಗಿ
ಹೊಗೆ ತಗ್ಗಿದ ಹುತವಾಹನೊ
ಜಗದಂಬುಧಿ ಮೇರೆಯದಪ್ಪಿದುದೊಯೆಂದು
ನಗುತಿರೆ ಹರನೋಲಗವು ॥೧೧೯॥

ರಂಜಿಪ ಪಾತ್ರದ ಪುಂಜದ ಸಭೆಯೊಳು
ಕೆಂಜೆಡೆಯಭವನೆಸೆಯಲು
ಕಂಜಜನೆವೆ ಹಳಚದೆ ನೋಡಿದನು ಕುಸು
ಮಂಜೊಳಿಗಳನು ಮಾಡಿದನು ॥೧೨೦॥

ಕಾಣುತ ಹರುಷದಿ ವಾಣಿಯ ಗಂಡನು
ಕೇಣಿಗೊಂಡನು ಭಕ್ತಿಯಲಿ
ಸ್ಥಾಣುವಿನಡಿಯನು ಹೂಣಿ ಹೂಮಳೆಯಲಿ
ಮಾಣದೆ ಮೈಯ್ಯಿಕ್ಕಿದಜನು ॥೧೨೧॥

ಜಯ ಜಯ ದೇವ ಶಿಖಾಮಣಿ ಜಯ ಜಯ
ಜಯ ದಯವಾರುಧಿ ಜಯತು
ಜಯ ಜಯ ಗಿರಿಜಾಲಿಂಗನ ಲೋಲನೆ
ಜಯಯೆಂದು ಅಜ ಪೊಗಳಿದನು ॥೧೨೨॥

೧+ಯು (ಮೂ)

ಅಂಜಬೇಡಿನ್ನು ಭಂಜಿಸುವೆನು ಕಳ್ಳರ
ಸಂಜಯಂಬಕದೊಳಗೆಂದು
ನಂಜುಗೊರಳ ಕಟಕಂಜದಭಯನಿತ್ತು
ಅಂಜಿಪ ಸುರರ ಮನ್ನಿಸಿದಾ ॥೧೩೫॥

ಕೊಡಿ ಕೊಡಿ ಪಶುಪತಿತನವನು ನಮಗಿಂದು
ತಡೆಯದೆ ಪಶುವಾಗಿ ನೀವು
ಸುಡುವೆನೀಕ್ಷಣದಲಿ ಮುಪ್ಪುರಗಳನೆಂದು
ಮೃಡ ನುಡಿದನು ಕಟಕಿಯನು ॥೧೩೬॥

ಅರಿಷಡುವರ್ಗದೊಳಗೆ ಸಿಕ್ಕಿ ಬೆಂಡಾಗಿ
ನೆರದಷ್ಟಮದದೊಳು ಮಗ್ಗಿ
ಪರಮನನಱಿಯದ ಕರ್ಮಿ ಕಿಂಕರರಾದ
ವರ ಪಶುಗಳು ನೀವೆಂದಾ ॥೧೩೭॥

ಮೆಱೆವ ಮೂವತ್ತಾಱು ತತ್ವ ನಾಯಕರನು
ಅಱಿಯದೆ ಬಯಲ ಬ್ರಹ್ಮದಲಿ
ಬೆಱೆವಿರಿ ಭವಪಾಶದಲಿ ಕಟ್ಟುವಡದಲ್ಲಿ
ವಱಿತ ಪಶುಗಳು ನೀವೆಂದಾ ॥೧೩೮॥

ಜೇನತುಪ್ಪದಿ ಬಿದ್ದ ನೊಣವಿನವೊಲು ಸು
ಜ್ಞಾನವ ಕೆಡಹಿ ಕಾಮದಲಿ
ಭಾನುಪ್ರಕಾಶದ ನಿತ್ಯವಱಿಯದ [ಅ]
ಜ್ಞಾನಿಪಶುಗಳು ನೀವೆಂದಾ ॥೧೩೯॥

ವಾದಕ್ಕೆ ಸಿಕ್ಕಿ ವಿರೋಧದೊಳಗೆ ಬಿದ್ದು
ಆದಿ ಭೌತಿಕದೊಳಗದ್ದಿ
ವೇದದರ್ಥವ ಕಾಣದೆ ವ್ಯರ್ಥರಾಗಿಪ್ಪ
ಕ್ರೋಧಿ ಪಶುಗಳು ನೀವೆಂದಾ ॥೧೪೦॥

ಸುರಪನ ಹೆಂಡರು ಭಂಡಾರ ಸುರತರು
ವರ ಕಾಮಧೇನು ಸಹಿತಲಿ
ಸುರೆಗೂಡಿಗಳು ಸೂಱೆಯನು ಕೊಂಡೊಯ್ದರು
ದುರಿತವಿಪರೀತ ಚಿತ್ತೈಸು ॥೧೨೯॥

ಒಡನೆದ್ದು ಬಿನ್ನಯಿಸಿದರಿಂದ್ರ ಮೊದಲಾದ
ಕಡು ಬೋವ ದಿವಿಜ ಸಮೂಹ
ತಡೆಗಡಿದಸುರರ ತ್ರಿಪುರವ ಸುಟ್ಟೆಮ್ಮ
ಮೃಡ ಸಲಹೆಂದೆಱಗಿದರು ॥೧೩೦॥

ಬಳಿವೆಸರುಗಳಿಟ್ಟು ಹಲವು ಬಿಟ್ಟಿಯ ಮಾಡಿ
ಬಳಲಿದೆವವರ ಸೇವೆಯಲಿ
ಖಳರ ನೆನದರೊಡಲುಗಳು ನಡುಗುತಿವೆ
ಸುಲಭದೇವನೆ ಚಿತ್ತಯಿಸು ॥೧೩೧॥

ಹೆಣ್ಣುಗೋಟಲೆ ಗಂಡುಗೋಟಲೆಯನು ಮಾಡಿ
ಬಣ್ಣಗೆಟ್ಟೆವು ಸೇವೆಯಲಿ
ಉಣ್ಣದುರಿವುತ್ತೈದರೆ ದೈತ್ಯರು ಮು
ಕ್ಕಣ್ಣ ಭವನೆ ಚಿತ್ತಯಿಸು ॥೧೩೨॥

ಒಱವ ಕಂಬನಿ ತಱೆದೊಡಲು ಕಱಗಿದುಬ್ಬು
ಅಱಿತ ಹರುಷ ಬಱಿತಧರ
ಮೊಱೆಯ ಬಾಯ್ಗಳ ಕೈಮುಗಿದ ಸ್ವರ್ಗಧಱನ
ಹೆಱೆನೊಸಲನು ಕಂಡು ನುಡಿದಾ ॥೧೩೩॥

ಅಕಟಕಟಮರರೈಶ್ವರಿಯು ಹೋಯಿತುಯೆಂದು
ಮಕುಟವ ತಾನೊಲದೊಲದು
ಸಕಲಾಗಮವಂದ್ಯ ಶಿವನು ಬ್ರಹ್ಮನ ನೋಡೆ
ಅಕುಟಲ ತಲೆಗುತ್ತಿದನು ॥೧೩೪॥

ಪಶುಪತಿಯೆಂಬ ಬಿರಿದು ದೇವ ನಿಮಗಿಂದು
ಪೊಸತೆ ಭುವನ ಪಾಲಕನೆ
ಎಸೆವ ನಾಟಕವು ಭಜಕರೊಳಗೇಕೆಂದು
ಬಿಸರುಹನೇತ್ರ ಬಿನ್ನೈಸೆ ॥೧೪೭॥

ಹರಿಯ ಮನ್ನಿಸಿ ಹರಕರುಣದಿ ತೆಗಸಿದ
ವರಪಾಶುಪತದ ಬಾಣವನು
ಹೊಱಕಿಡಿಗಳ ಕರ್ಬೊಗೆಯೆ ತುಂತುಱುಗಳ
ತರಣಿಕೋಟಿಯ ಕಾಂತಿಯೆಸೆಯೆ ॥೧೪೮॥

ಅದುರಿತು ಧರಣಿಯಲ್ಲಾಡಿತು ಬ್ರಹ್ಮಾಂಡ
ಪೆದಱಿತು ರಾಕ್ಷ ನಿಕರಾ
ಕುದಿದು ಚೊಯ್ಯೆಂದೇಳುಸರದಿಯುಕ್ಕಿದವಾಗ
ಅದುಬುತ ಸರಳಿನುದ್ಭಟಿಗೆ ॥೧೪೯॥

ತೆಗೆದು ಸರಳ ತೋಱಿಸಲಿಂತಾಯಿತು
ಹೊಗಲೆಸೆಯಲು ಪರಶಿವನು
ಜಗವುಳಿಯದು ತ್ರಿಪುರದ ಪಾಡೇನೆಂದು
ಅಗಣಿತ ಸುರರು ಬಿನ್ನೈಸೆ ॥೧೫೦॥

ಈ ಸರಳಿಲಿ ಕೊಲ್ಲುವೆ ಮೂಱು ಜಗವನು
ಘಾಸಿ ಮಾಡುವೆ ರಕ್ಕಸರಾ
ಲೇಸ ಮಾಡುವೆ ನಿಮಗೆನುತಮರರನು ನಂ
ದೀಶ ಸಂತಯಿಸಿದನೊಲಿದು ॥೧೫೧॥

ಹರದಮರರುಗಳ ನೆರಹಿ ಬೇಗದಿ ನೀವು
ವರರಥವನು ಮೇಳೈಸಿ
ಪುರಮೂಱ ಸುಟ್ಟು ತೋಱುವೆನೆಂದು ಮದನಾರಿ
ಹರಿಯಜರೊಡನುಸುರಿದನು ॥೧೫೨॥

ಪರಮಾತ್ಮನೆ ಪಶುಪತಿ ಜೀವನಕೆಲ್ಲ
ವರ ಪಶುಗಳಿಗೆ ಜೀವನದಿ
ಚರಿಸುವ ಪಶುಗಳು ನೀವೆಂದು ಮದನಾರಿ
ಇರದುಸುರಿದ ಸುರರೊಡನೆ ॥೧೪೧॥

ಪಶುಗಳೆಂದರೆ ಭೇದವೇನು ನಿಮಗೆ ಕೇಳಿ
ಪಶುಪತಿಯೆಂಬ ಬಿರಿದನು
ವಸದು ಪಟ್ಟವ ಕಟ್ಟಿ ನಮಗೆಂದು ಮದನಾರಿ
ನಸುನಗೆ ಮಿಸುಗೆ ನುಡಿದನು ॥೧೪೨॥

ರವಿಯ ಬೆಳಗಿಗೆ ಕತ್ತಲೆಯೋಡುವಂದದಿ
ದಿವಿಜರ ಹೃದಯದಜ್ಞಾನ
ಶಿವನುಪದೇಶದ ಕಾಂತಿ ಪಸರಿಸಲು
ತವೆ ಹರದುದು ದುಗುಡಗಳು ॥೧೪೩॥

ಎದ್ದುದು ದಿವಿಜರು ಪದ್ಮಜನೊಡನೆ ಸ
ಮುದ್ರದ ಘೋಷದಂದದಲಿ
ನಿರ್ಧರದಲಿ ಪಶುಪತಿಯೆಂಬ ಬಿರಿದ ಕ
ಪರ್ದಿಗೆ ಪಟ್ಟಗಟ್ಟಿದರು ॥೧೪೪॥

ಮೊಳಗಿತು ದೇವದುಂದುಭಿ ಕಱೆತರಳಿನ
ಮಳೆ ಶಿವನಂಘ್ರಿಯಂಗಳಲಿ
ನಲಿದು ಮೂಲೋಕವು ಗುಡಿಗಟ್ಟಿ ಕುಣಿವುತ
ಉಲಿದುದು ಜಯಜಯಯೆನುತಾ ॥೧೪೫॥

ಆ ವೇಳೆಯೊಳು ಬಂದ ಮಹಲಕುಮಿಯ ಗಂಡ
ಭಾವಜವೈರಿಗೆ ನಮಿಸಿ
ದೇವ ಚಿತ್ತಯಿಸು ಮುಪ್ಪುರದ ಖಳರ ಕೊಂದು
ಕಾವುದು ತ್ರಿಜಗವೆಂದಾ ॥೧೪೬॥

ಸಂಧಿ : ಮೂರು

*ವೃತ್ತ :

ಧಾರುಣಿ ತೇರು ಇಂದು ರವಿ ಗಾಲಿಗಳಚ್ಚು ಸಮುದ್ರ ವೇಧಗ
ಳ್ಸಾರಿದ [೧][ದೇವತತಿ][೧] [೨][ಬೆಳ್ಗೊಡೆ][೨] ತಾರೆಗಳಿಸು ಪದ್ಮಜಂ
ಸಾರಥಿಯನಘಾದ್ರಿ ಧನುವಾ ವಾಸುಗಿ ಮೌಳಿ[೩][ಮಾಲೆ][೩] ಮುರಾರಿಯಂಬಿನಿಂ
ತಾರಕಪುತ್ರರಾ ಪುರವನೆಚ್ಚು ತಗುಳ್ದ ಭುಜಂಗಭೂಷಣಂ॥(?)

ಪದ :

ಶ್ರೀಮದಮರಗಣ ಮಕುಟ ಸುರಂಜಿಪ
ಕೋಮಲ ಚರಣಕಮಲನ
ಸೋಮಧರನ ಕೊಂಡಾಡು ಲಿಂಗನ ಪುಣ್ಯ
ನಾಮ ಶಿವನ ಭಜಿಸುವೆನು ॥೧॥

ಮುಂದಣ ಕಥೆಯ ಕರ್ಣಾಮೃತ ರಸವನು
ಇಂದುಧರನ ಕೀರ್ತಿಯನು
ಕುಂದಿಲ್ಲದೊಸದು ಸಜ್ಜನರಾಲಿಪುದಾ
ನಂದದಿ ಲಿಂಗನ ಕೃತಿಯಾ ॥೨॥

---

* + ಶ್ರೀ ಗುರುವೆಗತಿ (ಮೂ)

೧–೧ ವೇದಲತೆ(ಮೂ) ೨–೨ ಬೇಳೋತೆ(ಮೂ) ೩–೩ ಹೆದೆ (ಮೂ)

ಜೀಯ ಹಸಾದವೆನುತ ಹರಿ ಬ್ರಹ್ಮರು
ಕೈಯ ಮುಗಿದು ಶಿವನಡಿಗೆ
ಮುಯ್ಯಾಂತು ನಿಂದಿರಲತ್ತ ಸೂರ್ಯನರಥ
ಒಯ್ಯನಿಳಿದುದಸ್ತಗಿರಿಗೆ ॥೧೫೩॥

ಹರದುದು ಹರನೋಲಗವಾಕ್ಷಣದಲಿ
ಹರಿಯಜ ದಿವಿಜರುಗಳಿಗೆ
ಪರುಡವಿಸಿತು ಬೀಡಾರ ಕೈಲಾಸದಿ
ಉರಿಗಣ್ಣನ ನೇಮದಲಿ ॥೧೫೪॥

ಮಾಸಿತು ದಿವ ಸೂಸಿದವು ತಾರಕಿಗಳಾ
ಕಾಶದಿ ಖಗಜಾತಿಗಳು
ಓಸರಿಸಿದವು ಗೂಡೊಳು ಚಕ್ರವಾಕಗ
ಳಾಸರಡಗಿತಿರುಳಿನಲಿ ॥೧೫೫॥

ಹಾಜಿತು ತಾವರೆಗಳ ನಗೆಮೊಗ ಸೊಂ
ಪೇಜಿತು ನೈದಿಲುಗಳಿಗೆ
ಬೀಜಿತು ಬಿಜುಗತ್ತಲೆ ಜಗದೊಳು ಕೂಡೆ
ಹೇಜಿತು ಹರುಷ ಚಂದಿರಗೆ ॥೧೫೬॥

ಚಂದ್ರಶೇಖರ ಭುಜಗೇಂದ್ರ ಭೂಷಣ ವಿಷ
ಕಂದರನಿಂದ್ರವಂದಿತನೆ
ನಂದಿಸಿಂಧನ ಮಹಿಮಾಬ್ಧಿವರ್ಣನೆಗಳ
ಸಂಧಿ ಮುಗಿದುದೆರಡನೆಯಾ ॥೧೫೭॥

ಅಂತು ಸಂಧಿ ೨ಕ್ಕಂ [೧][ಪದ ೪೨೦ ಕ್ಕಂ][೧] ಮಂಗಳ ಮಹಾಶ್ರೀ

●

೧–೧ ಪದ ೪೨೩ ಕ್ಕಂ (ಮೂ)

ಬೇಡ ತೊಡಕು ಚಂದ್ರಜೂಟನೊಡನೆ ಮತ್ತೆ
ನಾಡಾಡಿ ದೇವರಂತಲ್ಲಾ
ಹೂಡುವ ಜಗವನಳಿವ ಸ್ವತಂತ್ರನ
ಕೂಡೆ ಭಜಿಸಿ ನೀವೆಂದಾ ||೯||

ಕೆಡಬೇಡ ನೀವಿನ್ನು ಬಿಡಿ ಮೂಜುಲೋಕದಿ
ಒಡಿದ ಕೈಸೆಜೆಗಳೆಲ್ಲವನು
ಕೊಡಿ ಸುರತರು ಕಾಮಧೇನುವ ಸುರರಿಗೆ
ಮೃಡನ ಪಾದವ ಕಂಡು ಬದುಕಿ ||೧೦||

ತಾರಕಸುರನಂಧಕಸುರ ಕಮಠದ
ಧೀರ ಗಜಾಸುರಗಧಿಕ
ಮಾರಿಮೊಗದ ವ್ಯಾಘ್ರಾಸುರ ಮೊದಲಾಗಿದ್ದ
ಭೂರಿ ಸುರರ ಕೊಂದ ಶಿವನು ||೧೧||

ಅವರ ಹವಣಿನ ದನುಜನೆ ಜಲಂಧರ
ಅವನ ಸಿರವು ಧರೆಯಗಲ
ಭವನದೊಳವಗಡಿಸಲು ಚಕ್ರದೊಳಿಟ್ಟು
ಅವನ ಕೊಂದನು ಗಿರಿಜೇಶಾ ||೧೨||

ಈ ಸೌಭಾಗ್ಯವೀ ದುರ್ಗವೀ ಸುದತಿಯು
ಈಸು ದೊರೆಗಳೀ ಸುಬಲವು
ವಾಸವಗಿಲ್ಲ ಮುನ್ನಾಳ್ದರಾಯರಿ[ಗಿ]ಲ್ಲ
ಈಶನಂಘ್ರಿಗಳಾಣೆಯೆಂದಾ ||೧೩||

ಹೊನ್ನಂಬ ನೀರೊಳಗೆಚ್ಚು ಕೆಡಿಸುವಂತೆ
ಉನ್ನತವಾದಯಿಶ್ವರಿಯ
ಇನ್ನು ಹೋಗಾಡಬೇಡಭವನ ಕೆಣಕಿ ನೀ
ವೆನ್ನ ಮಾತನು ಕೇಳಿಯೆಂದಾ ||೧೪||

ತಂಗಾಳಿಯು ತಂಪೊ ನೆಱೆ ಪೊಸ ಪೂಗಳ
ದೊಂಗಲ ನಿಜ ಪರಿಮಳವೊ
ಅಂಗಜ ಚಾಪದ ೧[ಜೇವಡೆಯೋ]೧ ಎನೆ
ಲಿಂಗನ ಕೃತಿಯು ರಾಜಿಸಿತು ॥೩॥

ಬೇಹಿನ ಚರರು ಪರಿದರಾಕಾಶದಿ
೨[ಮೋಹದ]೨ ಮುಪ್ಪುರಗಳಿಗೆ
ಸಾಹಸಮಲ್ಲ ತಾರಕನ ಮಕ್ಕಳ ಕೂಡೆ
ಈ ಹದನನು ಹೇಳಿದರು ॥೪॥

ಸ್ವರ್ಗದವರ ಮೊಱೆಯನು ಕೇಳಿ ದೇವರೊ
ಳಗ್ಗದ ಬಿಸಿಗಣ್ಣ ಮುಳಿದು
ಮಗ್ಗಿಸುವೆನು ಮುಪ್ಪುರವಾಸಿಗಳನೆಂದು
ವೆಗ್ಗಳ ಭಾಷೆ ಮಾಡಿದನು ॥೫॥

ಮಱೆಯ ಮಾತೇಕಿನ್ನು ಕಱೆಕಂಠನ ಕೂಡೆ
ತುಱುಗಿತು ಹರಿಯಜ ಸುರರು
ಉಱುಬಿ ಹುಯ್ಯಲು ನಾಳೆ ಬರುತದೆಯೆಂದು ತ
ಮ್ಮೆಱೆಯನ ಕೂಡೆ ಹೇಳಿದರು ॥೬॥

ತಪ್ಪದು ಶಿವನಾಡಿದ ಭಾಷೆಗಳೀಗ
ಮುಪ್ಪುರ ಕೆಡುವಂದಗಳು
ಕೂರ್ಪರೊಡನೆ ಕಾರ್ಯವನೆಸಗಿಯೆ ನೀ
ನೊಪ್ಪವಿಡಲು ಸಾಕೆಂದಾ ॥೭॥

ಆ ಸಮಯದಲಿ ನಾರದ ಬಂದು ನುಡಿದನು
ಲೇಸಿನ ಮಾತ ೩[ಖಳರಿಗೆ]೩
ಈಶನ ಖತಿ ನಿಮ್ಮ ಕೆಡಿಸದೆ ಬಿಡದೆಂದು
ತಾ ಸಭೆಯೊಳಗೆ ಸಾಜಿದನು ॥೮॥

೧-೧ ಜೇಡಿಯೊ (ಮೂ) ೨-೨ ಯೋಹಿದ(ಮೂ) ೩-೩ ಕಳ್ಳರಿಗೆ (ಮೂ)

ದೇವರೊಳಧಿಕ ತಾನೆಂದು ಬೆಱೆಯಲೇಕೆ
ಗೋವಿಂದರಜಸುರನಿವಹ
ಭಾವಿಸಿ ಹಿತಶತ್ರುತನದಿ ಸೇರದೆ ತನ್ನ
ನೀ ವಿಧಿಯಲಿ ಕೆಡಿಸುವರು ॥೨೧॥

ಬಡಹಾರುವನ ಮೊಗವನುವಳಿದನು ಕೂಡೆ
ಕಡಿದನು ಬಿಡದೇ[೧][ಶಿವನು][೧]
ಮಡುಹಿದ ಗಡ ಹುಲುದನುಜನನೀಗನೀ
ಮೃಡನ ಸಾಹಸಕೆ ಬೆಱತೆಯೊ ॥೨೨॥

ಕನ್ನಗಳ್ಳನ ಶಿಶುವಧೆಗಾರನ ಹೊಲೆ
ಚೆನ್ನನ ಮನೆಯಲುಂಡವನಾ
ಕನ್ನೆತನದ ಸತಿಯರಿಗಳುಪಿದನನು
ಇನ್ನು ಬಿನ್ನಯಿಪರೆ ಮುನಿಪಾ ॥೨೩॥

ನರಿಯ ಸಂಗೀತಕ್ಕೆ ಕೋಡಗ ಮೋಹಿಸಿ
ಸಿರದೂಗುವಂತೆ ನಾರಂದ
ಗೊರವನ ಬೀರಕೆ ಮೆಚ್ಚಿದೆ ನಿನ್ನಿಂದ
ಮರುಳುಗಳಾರೆಂದು ಜಱದಾ ॥೨೪॥

ಕಿಚ್ಚ ಹಾಯ್ವಳನುಬ್ಬಿಸುವಂತೆ ಗೊರವನ
ಹೆಚ್ಚಿಸಿ ಕಲಿಮಾಡಿ ಸುರರು
ವಚ್ಚತ ರಣದಲಿಡಹಿ ಓಡುವರದ
ಎಚ್ಚತ್ತು ಬರಹೇಳು ರಣಕೆ ॥೨೫॥

ಹೆಬ್ಬುಲಿಯನು ಸೀಳಿ ಕಬ್ಬುವಿಲ್ಲನ ಕೊಂದ
ಕೊಬ್ಬು ನಮ್ಮೊಡನೆ ಬೇಡೆಂದು
ಹೆಬ್ಬಾವ ತೊಟ್ಟ ಹಾವಡಿಗಗೆ ಹೇಳೆಂದು
ಕೊಬ್ಬಿ ನುಡಿದರು ದಾನವರ ॥೨೬॥

೧–೧ ಸಿನವನು(ಮೂ)

ಓಂದಕೊಬ್ಬನು ಮಂದಮತಿ ದಕ್ಷ ನಿಂದಿಸಿ
ಇಂದುಧರನ ಕೂಡ ಸೆಣಸಿ
ಅಂದವಾಗಿರ್ದ ತಲೆಯ ಹೋಗಾಡಿದ
ಛಂದವಹುದು ನಿಮಗೆಂದಾ ॥೧೫॥

ಜಗದೊಳಧರ್ಮಶೀಲರ ತಲೆಯನು ತಂದು
ಬಗೆಯದೆ ಚೆಂಡನಾಡುವನು
ಮೃಗಧರ ಮೌಳಿಗೇಜೆಸಿದ ಬಿರಿದು ಕೇಳಿ
ಮಿಗೆ ಸಾಜಿದೆನು ಪುಲ್ವಿಡಿದು ॥೧೬॥

ಮುನಿಪನಾಡಿದ ಮಾತ ಕೇಳುತಲಸುರರು
ಕನಲಿ ಕೋಪದಿ ಕಿಡಿಯಿಡುತ
ನಿನಗೀ ಮಾತು ಮನ್ನಣೆ ನಾರದಯೆಂದು
ಘನ ಪೌರುಷವನಾಡಿದರು ॥೧೭॥

ಓರಿಯನ ಮಾಡಿಕೊಂಡಿದ್ದೆವು ಗೊರವನ
ಕೆರಳಿಸಿದನೆ ನಮ್ಮವನು
ಮರಳಿಸುವೆವು ತಂದೆಯ ಹರಿಬ[ವ]ನೆಂದು
ಇರದೆ ಖಡ್ಗವನು ಜಡಿದರು ॥೧೮॥

ಎಲುವ ಕೊರಳಿನಲಿ ತೊಟ್ಟೆತ್ತನೇಜಿದ
ಹಲವು ಭೂತದ ಸಂಗಡಿಗನ
ಕೊಲುವೆವಂಗದಲು ಹೂಸಿದ ಬೂದಿ ಹಾರಲಿ
ನ್ನುಳಿದ ಮಾತೇಕೆಂದರವರು ॥೧೯॥

ಬಡಿಹೋರಿಗಳಜಹರಿದೇವೇಂದ್ರರು
ಕಡೆಯಲೊಬ್ಬನು ಮಾನ್ಯ ತಾನು
ಕೆಡಿಸಿಕೊಂಡನು ಇನ್ನದನು ಕೈಲಾಸಕ್ಕೆ
ತಡೆಯನಿಕ್ಕುವೆವೆಂದರವರು ॥೨೦॥

ಮೂಡಣಾದ್ರಿಯೊಳೊಗೆದನು ದಿನಮಣಿ ತೆಗ
ದೊಡೆ ಕತ್ತಲೆಯ ಪಾಳೆಯವು
ಕೂಡೆ ಕಂಗಳ ಸೆಜಿ ಬಿಟ್ಟವು ಪೊಡವಿಯೊ
ಳಾಡೆ ಝೇಂಕರಿಸಿ ತುಂಬಿಗಳು ॥೩೩॥

ಪರಮಶಾಂತಿಯ ರೂಪು ಕರುಣಸಾಗರದಂತೆ
ಸಿರಿ ವಾಣಿಯರ ಶೃಂಗರವು
ತರುಣಿಯರನು ನೋಡುತ ನಾರದ ಬಂದ
ಗಿರಿಜೆಯರಸನೋಲಗಕೆ ॥೩೪॥

ದಂಡಿಗೆವಿಡಿದು ತುಂಬುರ ನಾರಂದರು
ತೋಂಡಿ ಭೂಪಾಳಿ ಧನ್ವಾಸಿ
ಗುಂಡಕ್ರಿಮಲಹರಿ ದೇಸಿಯ ಪಾಡುತ
ಖಂಡೇಂದುಧರನುಪ್ಪವಡಕೆ ॥೩೫॥

ತಿಳಿದುದು ನಿದ್ರೆಯೋಲಗಸಾಲೆಗೈತಂದು
ಸುಲಭದೇವನು ಮಂಡಿಸಿರಲು
ಕಲಹಪ್ರಿಯನು ನಾರದ ಬಂದು ತ್ರಿಪುರದ
ಖಳರ ಬಲುಹ ಬಿನ್ನಯಿಸೆ ॥೩೬॥

ಹೊಗುವದರೊಳು ಹುಲ್ಲಹಾಕುವ ತೆಜನಂತೆ
ಮಿಗೆ ಬಿತ್ತಿದನು ಕೊಂಡೆಯವ
ಅಗಜೆಯರಸ ಕೇಳಿ ಭುಗಿಲೆಂದು ಕೋಪದಿ
ನಗುತ ನುಡಿದ ನಾರದಗೆ ॥೩೭॥

ಹುಲುರಕ್ಕಸರು ಸಾವವರು ಬಲುಹನಾಡೆ
ಕಲಿಗಳಿದನು ಲೆಕ್ಕಿಪರೆ
ಘಳಿಲನೆ ಸುಡುವೆ ನಾರದ ನೋಡು ತ್ರಿಪುರವ
ಹಲವು ಮಾತೇಕೆಂದನಭವಾ ॥೩೮॥

ಕದನಕೆ ಬಂದನಾದರೆ ನಮ್ಮ ಪುಣ್ಯವು
ಹೆದರಿ ಕಾಳಗಕೆ ಬಾರ[1][ದಿ][1]ರೆ
ಉದಯಕ್ಕೆ ದಾಳಿಯನಿಟ್ಟು ಕೈಲಾಸದ
ಮದಮುಖಿನನು ಹಿಡಿತಹೆವು ॥೨೭॥

ಜಡರ ಪೋಟರ ನೀಚರ ನಿಂದ್ಯ ಚರರ
ಕಡುಮೂರ್ಖರ ಪಾತಕರ
ನುಡಿಸಲುಚಿತವಲ್ಲ ಉತ್ತಮರಿಗೆಯೆಂದು
ಒಡನೆ ಮುನಿಪ [2][ಖ][2]ತಿವಿಡಿದಾ ॥೨೮॥

ಕೆನೆವಾಲಿನೊಳು ಕಹಿ ತಿಳಿಜೊನ್ನದೊಳು ಸಿಖಿ
ದಿನನಾಯಕನೊಳು ಕಪ್ಪು
ಜನಿಸಿದಂದದಲುದಿಸಿತು ಕೋಪ ನಾರಂದ
ಮುನಿಪನ ಶಾಂತಿಗಳಡಗಿ ॥೨೯॥

ಸುರೆಗೂಡಿಗಳ ಕೆಣಕಿ ಶಿವನಿಂದ್ಯವ
ನಿರದೆ ಕೇಳಿದೆನು ನಾನೆಂದು
ಹರಹರಯೆನುತ ಕಿವಿಯ ಮುಚ್ಚಿ ನಾರಂದ
ಪಿರಿದು ನೊಂದನು ಮನದೊಳಗೆ ॥೩೦॥

ಶಾಪವ ಹಿಡಿ ಹಿಡಿ ಶಿವದ್ರೋಹಿಗಳಿರೆ ನಿ
ಮ್ಮೀ ಪುರ ಹಾಳಾಗಲೆಂದು
ಕೋಪದಿ ಶಾಪಿಸಿ ತಿರುಗಿದ ಕಾಲಾಗ್ನಿ
ರೂಪುವಡದವೊಲು ಮುನಿಪಾ ॥೩೧॥

ಅಲ್ಲಿಂದಲಿರದೆ ಬೆಳ್ಳಿಯ ಬೆಟ್ಟಕ್ಕೈತಂದ
ನಿಲ್ಲದೆ ನಾರಂದ ಮುನಿಪ
ಎಲ್ಲ ದೇವರ್ಕಳ ವಲ್ಲಭನನು ಕಾಬ
ತಲ್ಲಣದಲಿ ಬರುತಿರ್ದ . ॥೩೨॥

೧-೧ ದ(ಮೂ) ೨-೨ ಕ(ಮೂ)

ತಾರೆ ಹೊರೆಯು ಲಗ್ನ ಚಂದ್ರ ತಾರಾಬಲ
ವಾರ ತಿಥಿಯ ಕೇಳುತೊಡನೆ
ಮಾರಹರನು ಹೊಜಿಗುಡಿಗಳ ಹೊಯ್ಸಿದ
ಭೂರಿ ವಾದ್ಯದ ರಭಸದಲಿ ॥೪೫॥

ಅನುಮಿಷ ಕುಲವಿತ್ತ ನೆರದಾಳೋಚಿಸಿ
ಘನರಥವಾಗಬೇಕೆನುತಾ
ವಿನಯದಿ ವಿಶ್ವಕರ್ಮಗೆ ಬೆಸಸಲಿಕವ
ಮನಹರುಷದಲಿ ನಿರ್ಮಿಸಿದಾ ॥೪೬॥

ಭುವನದೊಳ್ಳೈವತ್ತು ಕೋಟಿ ಗಾವುದದೊಳೊ
ಪ್ಪುವ ಭೂಮಿ ತೇರಿನ ಹಲಗೆ
ಲವಣಾಂಬುಧಿಯದರಚ್ಚು ಪಾಲ್ಗಡಲನು
ತವೆ ಹೊರಜಿಯನು ಮಾಡಿದನು ॥೪೭॥

ಧರಣಿ ರಥವು ಚಂದ್ರಸೂರ್ಯರೆರಡು ಗಾಲಿ
ತುರಗ ನಾಲುಕು ವೇದಗಳು
ಪರಮ ಪುರಾಣ ಧ್ವಜದ ಕಂಬ ಶೃತಿಗಳು
ವರ ಪತಾಕೆಯೊಪ್ಪಿದವು ॥೪೮॥

ಥಳಿವೆಟ್ಟು ನೊಗನು ಕತ್ತಲೆಯ ಕಣ್ಣಿಗಳುಜಿ
ಮಿಳಿ ಜಪಮಂತ್ರ ಕೀಲುಗಳು
ಮೊಳೆಯ ಚಮ್ಮಟಿಗೆ ಪ್ರಣಮ ಋತ್ವಕ್ಕುಗಳಾಗೆ
ಬಳಿಯಚ್ಚು ದಿಗಗಳಂದದಲಿ ॥೪೯॥

ಕಾಲದಂಡವು ಬ್ರಹ್ಮದಂಡ ವರೂಥದ
ಮೇಲುವಲಗೆಗಳ ಮಾಡಿ
ಮೇಳಯಿಸಿದ ಚಾಮರಿ ಧ್ವಜಕಂಬದ
ಜಾಲದ ಮೇಲೆ ನಂದಿಯನು ॥೫೦॥

ಆ ವೇಳೆಯದಲೆದ್ದನು ವೀರಭದ್ರನು
ಆವದೊಡ್ಡಿತು ಈ ತ್ರಿಪುರಾ
ದೇವ ಬೆಸಸು ಕಡಿದೀಡಾಡುವೆ ದೈ
ತ್ಯಾವಳಿಯನುಯೆಂದು ನುಡಿದಾ ॥೩೯॥

ತಮತಮಗೆದ್ದು ಗರ್ಜಿಸಿ ರುದ್ರಗಣವೆಲ್ಲ
ಉಮೆಯರಸನ ಮೊಗನೋಡಿ
ಸಮರಕೆ ಬೆಸಸು ಬೆಸಸುಯೆಂದೆನುತಲಿ [ಸಂ]
ಭ್ರಮದಿಂದಲೊದಜಿದರವರು ॥೪೦॥

ಗುರುವೆದ್ದು ಹಗರಣವೇಕೆಲೆ ದೇವನೀ
ಪುರಪರಿಯಂತ ಕಾಳಗಕೆ
ಅರಿಗಳ ಪುರವನೊದೆವೆನೆನುತಲಿ ನಂದಿ
ಕರಿಮುಖ ಗುಹರೊದಜಿದರು ॥೪೧॥

ಮೊರೆವ ಸಿಡಿಲ ಕೋಳಾಹಳವೊ ಕೂಡೆ ಭೋ
ರ್ಗರೆವ ಕಲ್ಪಾಂತ ಶರಧಿಯೊ
ಹರ ನನಗೇ ತನಗೆಂದೆಂಬ ರಭಸದ
ಬ್ಬರ ಜಗವನು ನಡುಗಿಸಿತು ॥೪೨॥

ನಿಲ್ಲಿ ಸೈರಿಸಿ ಪ್ರಮಥಗಣಂಗಳು ನಿಮ
ಗಿಲ್ಲ ಕಾಳಗವಿದು ನಮಗೆ
ಕುಲ್ಲರಕ್ಕಸರೊಡನರ್ತಿಗಾಳಗವೆಂದು
ಎಲ್ಲರೊಡನೆ ಶಿವ ನುಡಿದಾ ॥೪೩॥

ಪ್ರಮಥನಾಯಕ ಸಮರಕೆ ನಡೆವೆನೆಂದು
ಅಮರರ ಗುರುನಾಥನನು
ಸುಮುಹೂರ್ತವ ಕೇಳಲವನು ಬಿನ್ನೈಸಿದ
ವಿಮಲ ತತ್ವಜ್ಞಾನದಲಿ ॥೪೪॥

ನಿಜೆಯುಡಿಗೆಯ ಮಲ್ಲಗಾಸೆಗಳೆಡೆ ಫಣಿ
ತುಱುಗಿದ ಹೆಡೆಯ ಗೊಂಡೆಯದ
ಮಿಱುಗುವ ಹೊಗರ ಹೊನ್ನೊಱೆಯ ಕಠಾರವು
ಮೆಱೆದುದು ಕಿ[೧][ಗ್ಗ][೧]ಟ್ಟಿನಲ್ಲಿ ॥೫೭॥

ಕಡಗ ಪೊಂಗಲು ಕಂಠಮಾಲೆ ಓರಾವಳಿ
ಕಡುಕುಂಗರ ಭುಜಕೀರ್ತಿ
[೨][ಕ][೨]ಡೆಯ ಪೆಂಡೆ ಉತ್ತರಿಗೆ ಬಾವುಲಿಯಾಗಿ
ಹೆಡೆಯ ಮಣಿಗಳ ಹಾವೆಸೆಯೆ ॥೫೮॥

ದಡಿಗದಾನವರ ಗಂಡನುಯೆಂಬ ಬಿರುದಿನ
[೨][ಕ][೨]ಡೆಯ ಮುತ್ತಿನ ಬೊಂಬೆಗಳ
ಒಡಗೂಡಿ ಕನಕದ ಗಂಟೆ ರನ್ನದ ಗೆಜ್ಜೆ
ಮೃಡನ ಮುಂಗಾಲೊಳೊಪ್ಪಿದವು ॥೫೯॥

ನೊಸಲ ತಿಲಕ ಕೊನೆಮೀಸೆ ಬವರಿಗಡ್ಡ
ಪೊಸ ಮುತ್ತಿನ ಕಂಠಮಾಲೆ
ದೆಸೆಗೆ ಕಂಪಿಡುವ ಜವಾದಿ ಕಸ್ತುರಿಯನು
ಒಸೆದು ಲೇಪಿಸುತ ಶೃಂಗರಿಸಿ ॥೬೦॥

ಹರನು ಶೃಂಗರಿಸಿ ಕಾಳಗಕೆ ನಡವುದನು
ಗಿರಿಜೆ ಕೇಳುತ ಹರುಷದಲಿ
ಅರಮನೆಯನು ಹೊಱವಂಟಳು ಸ್ತ್ರೀಯರ
ಹರಿವಾಣದಾರತಿ ಸಹಿತಾ ॥೬೧॥

ಪಟ್ಟದರಸಿ ಪಾರ್ವತಿದೇವಿ ನಡೆ ತಂದು
ಇಟ್ಟಳು ವೀರಸೇಸೆಯನು
ದಿಟ್ಟ ರಕ್ಕಸರ ಗೆಲ್ಲೆನುತ ಹರಸಿ ಬೀ
ಳ್ಕೊಟ್ಟಳಭವನ ಚರಣಕೆ ॥೬೨॥

೧–೧ ಗ(ಮೂ) ೨–೨ ಖ(ಮೂ)

ಜಗದ ಪಿತನು ಬ್ರಹ್ಮ ಬಂಡಿಯ ಬೋವನು
ನೆಗದ ಸತ್ತಿಗೆಯು ತಾರಾಳಿ
ಗಗನ ಗಂಗಾನದಿ ಚಾಮರ ತಿಥಿ ಮಾಸ
ನೆಗಳ ಟೆಕ್ಕೆಯ೧[ವಾ]೧ದವಲ್ಲಿ ॥೫೧॥

ಪೊನ್ನ ಬೆಟ್ಟವೆ ಬಿಲ್ಲು ಧಾರುಣಿಯನು ಪೊತ್ತ
ಪನ್ನಗನದು ಹೆದೆಯಾಯ್ತು
ಉನ್ನತದಂಬಾಗಿ ಹರಿಯ ನಿರ್ಮಿಸಿದನು
ಸನ್ನುತದಲಿ ವಿಶ್ವಕರ್ಮ ॥೫೨॥

ನಿರ್ಮಿಸಿ ಬಲಿದನೀಪರಿ ರಥವನು ವಿಶ್ವ
ಕರ್ಮ ಜಗಕೆ ಹೊಸತೆನಿಸಿ
ಧರ್ಮರೂಪನ ಕೂಡೆ ಬಂದು ಬಿನ್ನಯಿಸಿತು
ನಿರ್ಮಳ ಮನಸಿನ ಸುರರು ॥೫೩॥

ಏಳು ದೇವರದೇವ ಕಾಳಗಕನುವಾಗಿ
ಮೇಳವಾಯಿತು ರಥ ನಿಮಗೆ
ಭಾಳಲೋಚನ ಕೇಳುತೋಲಗದಿಂದೆದ್ದ
ಜಾಳಿವೇದಗಳು ಕೊಂಡಾಡೆ ॥೫೪॥

ತಲೆ ಮಾಲೆಗಳ ತೊಟ್ಟ ಕೆಂಜೆಡೆಗಳ ಪೊಳ
ವೆಳೆವಾವ ಬಿಗಿದು ಚಿಮ್ಮುರಿಯಾ
ಪುಲಿದೊಗಲಿನ ಮಲ್ಲಗಾಸೆಯನುಟ್ಟನು
ಹಲವು ಪರಿಯ ದೆಸೆ ಮೆಱೆಯೆ ॥೫೫॥

ಬಲಿದು ವಿಭೂತಿಯ ಜೋಡನುರಾಗಾ
ವಳಿಗಳು ಗಜಚರ್ಮಾಂಬರವು
ಅಳವಡೆ ಕಂಜಸಖನನರ್ಘಚಂದ್ರನ
ತಲೆ ಟ೧[ವು]೧ಳಿಯನು ಇಕ್ಕಿದನು ॥೫೬॥

೧–೧ ಉ(ಮೂ)

ಮಂಗಳಾರತಿಯನು ಚಾಂಗು ಭಲರೆಯೆಂದು
ತುಂಬು ಕುಚೆಯರೆತ್ತಿ ನಡಿಯೆ
ಮುಂಗುಡಿಯಲಿ ದೇವದುಂದುಭಿ ಮೊಳಗಲು
ಗಂಗಾಧರ ನಸುನಗುತಾ ||೬೩||

ಜಡಿದು ತ್ರಿಶೂಲವನೆತ್ತಿ ನೋಡಲು ಮಿಗೆ
ನಡುಗಿದುದಖಿಳ ಬ್ರಹ್ಮಾಂಡ
ಅಡಹಿಲ್ಲ ಕದನಕೆಂದದನಿರಿಸಿಯೆ ಮೃಡ
ತುಡಿಕಿದನುಗ್ರ ಚಾಪವನು ||೬೪||

ಜಡಿದು ಪೊಂಬೆಟ್ಟದ ಬಿಲ್ಲ ತೊಡೆಯೊಳೊತ್ತಿ
ಪಿಡಿದು ಬಾಗೊತ್ತಿಕೊಪ್ಪಿನಲಿ
ತೊಡಿಸಿ ಶೇಷನ ಹೆದೆಯ ಮಾಡಿಕೊಂಡನು
ಕಿಡಿಗೆದರುವ ಬಾಣವನು ||೬೫||

ಕರೆ ಕರೆ ನಂದಿಕೇಶನ ವೀರಭದ್ರನ
ಬರಹೇಳು ಮಕ್ಕಳುಗಳನು
ನೆರೆಯಲಿ ಭೂತಗಣದ ಹಿಂಡುಯೆನುತಲಿ
ಕರದು ಹೇಳಿದರೂಳಿಗರಿಗೆ ||೬೬||

ಶಿವನ ಮೈಗಾವವೆಕ್ಕಡಿಗರು ಬಂದರು
ಬವರಕೆ ಮರುಳು ತಂಡಗಳು
ಕವಿದುದೊಡನೆ ಮೋಹದ ತರುವಕ್ಕಳು
ಜವದಿ ಬೊಬ್ಬಿಡುತ ಭೂತಗಳು ||೬೭||

ನಡುನೆತ್ತಿಯಲಿ ಬಾಯಿ ಹೆಡತಲೆಯಲಿ ಕಣ್ಣು
ಅಡರಿದ ಕಿವಿ ಹೆಗಲಿನಲಿ
ಒಡಲು ಬೆನ್ನೊಳು ಹೆಜ್ಜೆ ಹಿಂದು ಮುಂದಾಗಿರ್ದ
ದಡಿಗ ಮರುಳುಗಳು ನೆರೆಯೆ ||೬೮||

ಹತ್ತಿದೊಡಲು ಹೊಱೆಹಲ್ಲುಱುಗಿದ ಬಾಯಿ
ಬತ್ತಿದ ಕದಪುಳ್ಳಿ ಗಡ್ಡಾ
ನೆತ್ತಿಯ ಜೆಡೆ ಹೆಮ್ಮೂಗಿನ ಮರುಳುಗ
ಳಿತ್ತರದಲಿ ವದಗಿದವು ॥೬೯॥

ಕಡಿತಲೆ ಹಲಗೆ ಸುರಗಿ ಕಾರ್ಮುಕ ಚಕ್ರ
ಒಡಗೂಡಿದಾಯುಧವಾಂತು
ಸಿಡಿಲು ಮೋಹರದಂತೆ ರೌದ್ರವೇಷದಿ ಬೊ
ಬ್ಬಿಡುತೆಯ್ದಿತು ಭೂತಗಣವು ॥೭೦॥

ಗರುಡ ಗಂಧರ್ವ ಕಿನ್ನರ ಯಕ್ಷ[೧][ಗುಹ್ಯಕ][೧]
ಸುರರದಟಿನ ನವ ಅಜರು
ಉರಗ ಮಯೂರರು ಸಿದ್ಧರಾಯುಧವಾಂತು
ನೆರದುದಸಂಖ್ಯಾತ ರಣಕೆ ॥೭೧॥

ಪಲ್ಲವ ಸತ್ತಿಗೆಗಳ ನೆಳಲೊಳು ಶಿವ
ಪಲ್ಲಕ್ಕಿಯನೇಱೆ ನಡೆಯೆ
ಜಲ್ಲ[೨][ನೆ][೨] ಢಾಳಿಸಲುಭಯ ಚಾಮರಗಳ
ಅಲ್ಲಿ ನವಗ್ರಹರುಗಳು ॥೭೨॥

ಎಡಬಲದಲಿ ಶತಕೋಟಿ ನಿಗಮಗಳು
ಬಿಡದೊದಱುವ ರಭಸದಲಿ
ಕಡುಗಲಿ ದಿವಿಜರುಪ್ಪರವೆಂಬ ಮೇಳದಿ
ಮೃಡ ನಡದನು ರಥಕಾಗಿ ॥೭೩॥

ಉಘೆ ಉಘೆಯೆಂದೆಂಬ ಮುನಿಗಳ ಘೋಷವು
ಮಿಗೆ ಚಾಂಗು ಭಲರೆಂಬ ರಭಸ
ಒಗೆವ ಶಬ್ದದ ರಚನೆಯಲಿ ಶ್ರೀಚರಣವ
ನೆಗಪಿದ ರಥ ಮುಂದಣಿಗೆ ॥೭೪॥

೧–೧ ಗೂಹಕ(ಮೂ) ೨–೨ ನು(ಮೂ)

ಝಣ ಝಣರೆನೆ ಮುತ್ತಿನ ಕಡೆಯದ ಧ್ವನಿ
ಗಣಿಗಣಿರೆನೆ ಗಂಟೆಗಳು
ಢಣಢಣರೆನೆ ಡಮರುಗವು ವಿಗಡದಲಿ
ತ್ರಿಣಯನದ್ವಯವನೇಜಿದನು ॥೭೫॥

ಉಂಗುಷ್ಠ ತುದಿಯನಂಗಜ ಹರನೂಜಲು
ಕಂಗೆಟ್ಟು ವೇದವಾಜಿಗಳು
ಮುಂಗುಡಿಯಲಿ ಮುಗ್ಗಿ ಪಾತಾಳಕದ್ದಿತು
ಶೃಂಗರಿಸಿದ ರಥ ಸಹಿತ ॥೭೬॥

ತೇರು ಪಾತಾಳಕದ್ದಲು ಜೊಮ್ಮನುಬ್ಬಿ ಕೆ
ನ್ನೀರು ಚಿಮ್ಮಿದುದಂಬರಕೆ
ತಾರಾಮಂಡಲ ಮುಳುಗೆ ಪ್ರಳಯವೆಂದು
ಭೂರಿದೇವತೆಗಳೊದಜಿತು ॥೭೭॥

ಕುಲಗಿರಿಗಳ ಕೀಲುಗಳು ಪೋಳಾದವು
ಬಳಿಯೀಸಿನ ದಿಗ್ಗಜವು
ಘಳಿಲನೆ ಘೀಳಿಟ್ಟು ಕೊಂಬೂಜಿ ಕೆಡೆದವು
ನಳಿನಸಂಭವ ಕಳವಳಿಸೆ ॥೭೮॥

ಹರಿಯಜ ಸುರರೆಲ್ಲ ನೆರಹಿದ ರಥ ನಮ್ಮ
ಚರಣವೊತ್ತಲು ನುಗ್ಗಾಯ್ತು
ಅರರೆ ತಪ್ಪಾಯಿತೆಂದೆನ್ನುತ ಪಾದವನೆತ್ತಿ
ಹರನಮರರ ನೋಡಿದನು ॥೭೯॥

ಹಿಂದಕ್ಕೆ ಪಾದವ ತೆಗೆದು ಕಪರ್ದಿ ಮು
ಕ್ಕುಂದನ ಮುಖವ ನೋಡಿದರೆ
ಒಂದಿಸುತೊಡನಿಳಿದನು ಪಾತಾಳಕ್ಕೆ
ನಂದಿಕೇಶ್ವರನ ಧ್ಯಾನಿಸುತ ॥೮೦॥

ಹರಿ ವೃಷಭನ ರೂಪ ತಾಳಿ ಪೆಗಲಿನಲಿ
ಭರದಲದ್ದಿದ ತೇರ ನೆಗಪೆ
ಸರಿಸವಾಯಿತು ರಥಯೆಂದಿನ ಪರಿಯಂತೆ
ಸುರರಿಗೆಸೆಯಲು ಸುಮ್ಮಾನಾ ॥೮೧॥

ಕೊಡಹಿ ನಿಂದವು ವೇದವಾಜಿ ವಳಯಗಳ
ಕುಡಿನೊರೆ ಕಟವಾಯೊಳೆಸೆಯೆ
ಬಿಡದೆ ಪೊಯ್ವಳ್ಳೆಯ ರಥವಾಜಿಯನಜ
ಮೃಡನಿದಿರೊಳು ನಿಲಿಸಿದನು ॥೮೨॥

ಪಱಿದಲೆಯನ ಮೈ ಮುಱಿದೀಕ್ಷಿಸಿ ಮೊಗ
ಗುಱುಹನಱಿದು ಶ್ರುತಿವಾಜಿ
ನೆಱೆ ನೋಡುತ ಸುಮಾನಿಸಿ ¹[ಖುರ]¹ಗಳಲಿ
ಇಱಿದು ಕೆರದವು ಧರೆಯನು ॥೮೩॥

ದೇವ ನಿಮ್ಮಯ ರೋಮರೋಮದ ತುದಿಯೊಳು
ತೀವಿಹುದಖಿಳ ಬ್ರಹ್ಮಾಂಡ
ನೀವೊತ್ತಿ ಮೆಟ್ಟಲು ರಥ ನಿಲುವುದೆಯೆಂದು
ಗೋವಿಂದರಜರು ಬಿನ್ನಯಿಸೆ ॥೮೪॥

ದಿವಿಜರ ನುಡಿಯ ಕೇಳುತ ಲಾಗಿಸಿದನು
ಶಿವ ಲಘುವಿನಲಾ ರಥಕೆ
ಕವಿದಮರರು ಬೊಬ್ಬಿಡೆ ವಿಧಿಗುದುರೆಯ
ಜವದಿ ಚಪ್ಪಳಿಸಿ ನೂಕಿದನು ॥೮೫॥

ಚಪ್ಪಳಿಸಲು ಕಿತ್ತುಪ್ಪರಿಸುತ ದಾಂಟು
ತ್ತುಪ್ಪರಿಸಿದವು ಗಗನಕೆ
ತಪ್ಪಡಿಗಳಲೊಪ್ಪುವಶ್ವವ ಬ್ರಹ್ಮನು
ಮುಪ್ಪುರಕಾಗಿ ನಡಸಿದಾ ॥೮೬॥

೧–೧ ಕುಱ(ಮೂ)

ಸೆಳೆದು ವಾಘೆಗಳಾಂತು ಬಲಿದು ಕುಣಿಸಿ ಕೂಡೆ
ಪೊಳಚಿ ದುವ್ವಾಳಿಸುತೊಡನೆ
ಚಳಕದಿ ಕಂದವ ತಟ್ಟಿ ದೋಳೈಸುತ
ನಳಿನಸಂಭವ ನಡಸಿದನು ||೮೭||

ಪಡೆ ನಡೆದುದು ದೇವೇಂದ್ರನೊಡನೆ ಮುಂದೆ
ಹೊಡೆವ ವಾದ್ಯದ ರಭಸದಲಿ
ಖಡುಗವು ಕರಿ ತುರಗವು ರಥ ಕಾಲಾಳು
ನಡೆದುದು ಪಯಣಗತಿಯಲಿ ||೮೮||

ಪಲ್ಲಕ್ಕಿ ದಂಡಿಗೆ ಕೊಲ್ಲಾರಿಯ ಬಂಡಿ
ಹಲ್ಲಣಿಸಿದ ಕುದುರೆಯನು
ನಿಲ್ಲದಡರಿ [೧][ವಾರ][೧]ನಾರಿಯರೆಯಿದಿತು
ಮೆಲ್ಲನೆ ಪಾಳೆಯದೊಡನೆ ||೮೯||

ಮಲ್ಲರು ಬಾಗಿಲ ಗೊಲ್ಲರು ಕುದುರೆಯ
ಹುಲ್ಲೊಳಿಗದರು ನಟ್ಟುವರು
ಎಲ್ಲ ಕಲೆಗಳನು ಬಲ್ಲ ವಿದ್ವಾಂಸರು
ಅಲ್ಲಿ ಪಾಳೆಯಗೂಡಿ ನಡಿಯೆ ||೯೦||

ಕೊಟ್ಟಿಗೆ ಹಯ [೨][ಲಾ][೨]ಯ ಪೆಟ್ಟಿಗೆ ಭಂ[೩][ಗಾ][೩]ರ
ಒಟ್ಟಿದ ಸರಕಿನ ಬಂಡಿ
ಬಿಟ್ಟಲ್ಲಿ ಹೊಯಿವ ಗುಡಿಗಳು ಸಾಗರ ಧನ
ಇಟ್ಟಣಿಸಿತು ಸುರರೊಡನೆ ||೯೧||

ಪಡುಗ ಕೊಪ್ಪರಿಗೆ ದೀಪಸ್ತಂಭ ಕಾಳಂಜಿ
ಹಿಡಿವ ಸಗ್ಗಳೆ ಮಣಿಮಂಚ
ಅಡರಿದ ಚದುರಂಗ ಲೆತ್ತದ ಹಲಗೆಯು
ತೊಡರಿನ ಹೊಜೆಯು ಸಾಗಿದವು ||೯೨||

೧-೧ ವರ(ಮೂ) ೨-೨ ಲ(ಮೂ) ೩-೩ ಗ(ಮೂ)

ಚರರು ಸವಾರರು ಮೃಗಬೇಂಟೆಕಾರರು
ಸರವೊಂದಿಗರು ಶಕುನಿಗರು
ಪರಿಹಾಸಕರು ಕವಿಗಳು ಮಾಗಧಜನ
ತೆರಳಿತು ಪಾಳೆಯದೊಡನೆ ॥೯೩॥

ಸನ್ನೆಯ ಜಾಗಟೆ ನಿಸ್ಸಾಳ ಹೊಯಿಸುತ
ಮನ್ನೆಯ ದಿಕ್ಕುಪಾಲಕರು
ಸನ್ನದ್ಧರಾಗಿ ಪವುಜಮಾಡಿ ನಡದರು
ಪನ್ನಗಧರನೆಡಬಲದಿ ॥೯೪॥

ಸುರರೆಡವಂಕ ಮರುಳು ಬಲವಂಕವು
ನೆರದಿಹ ಸಚರಾಚರವು
ಹಿರಿಯ ಪವುಜು ಸಾಗರದಂತೆ ಮೆಱವುತ
ಉರವಣಿಸಿತು ಶಿವನೊಡನೆ ॥೯೫॥

ಸುರಪನಲೆಮ ನೈಋತ್ಯ ವರುಣ ವಾಯು
ಹರಸಖರೀಶಾನ್ಯರೊದಗಿ
ಕರಿ ಕುಱಿ ಕೋಣ ಮನುಜ ನೆಗಳೆರಳೆಯ
ತುರಗೆತ್ತನೇಱಿ ನಡದರು ॥೯೬॥

ಗರುಡನನೇಱಿ ಮುರಾಂತಕ ಚಕ್ರವ
ತಿರುಹುತ ಹರನೆಡದಲ್ಲಿ
ಹಿರಿಯ ಪವುಜಿನೊಳು ಸುರರು ದೇವರ್ಕಳು
ಪರಿದೊಡನೈದಿದರಲ್ಲಿ ॥೯೭॥

ಕುಱುಹಿನ ವೃಷಭಧ್ವಜಗಳನುಯೆತ್ತಿ ಬೊ
ಬ್ಬಿಱಿವುತ ಭೂತದ ಹಿಂಡು
ಬಿಱುದನಿಗಳ ಲಗ್ಗೆವಱೆಯಲಿ ನಡಯಿತು
ಸಱಿಯೆದೆ ಬಿಱಿಯೆ ಕಮಠನ ॥೯೮॥

ಕದನ ಚೌಪಟಮಲ್ಲ ದಕ್ಷಾಧ್ವರಭಂಗ
ಮದನಾರಿಯಜೆಗಜಸಿಂಹಾ
ಪದದ ಪೆಂಡೆಯ ಝಣಝಣರೆನೆ ನಡೆದನು
ಮದಮುಖ ವೀರೇಶ ಸಹಿತ ॥೯೯॥

ರೋಮ ರೋಮದಿ ಕೋಟಿಲಿಂಗ ರಂಜಿಪ ಪುಣ್ಯ
ನಾಮ ಹೊಳೆವ ಶುಭ್ರಕಾಯ
ಭೀಮವಿಕ್ರಮ ನಂದಿಕೇಶ್ವರ ನಡದ ಸಂ
ಗ್ರಾಮಕ್ಕೆ ತಾ ಮುಂದಂಡಾಗಿ ॥೧೦೦॥

ಏಜೆ ನವಿಲ ಕುಣಿಸುತ ಮೆಲ್ಲ ಮೆಲ್ಲನೆ
ಹಾಜೆಸಿ ಗಗನಕ್ಕೆ ನೆಗಸಿ
ಆಱು ಮೊಗದ ವೀರನು ನಡದನು ಮುಂದೆ
ತೋಱೆ ಖಂಡೆಯದ ಬೆಳಗನು ॥೧೦೧॥

ಬೆಳ್ಳಿಲಿಯನು ಬೆಂಗೆಯಿದು ದುವ್ವಾಳಿಸಿ
ನಿಲ್ಲದೆ ಕೊಡಲಿಯ ಪಿಡಿದು
ಕಳ್ಳ ರಕ್ಕಸರ ಕೊಲ್ಲುವೆನೆಂದೆನುತಲಿ
ಡೊಳ್ಳಿನ ಬೆನವ ನಡದನು ॥೧೦೨॥

ಚೇಳನುಯೇಜೆ ಅಡ್ಡಾಡುತ್ತ ನಡದನು
ಮೇಳಯಿಸುತ ಪವುಜುಗಳಾ
ಕಾಳರಕ್ಕಸರ ಕೊಲ್ಲುವೆನೆಂದು ಭೈರವ
ಬಾಳವ ಜಡಿದು ನಡದನು ॥೧೦೩॥

ಘುಡುಘುಡಿಸುವ ಸಿಡಿಲಿನ ಸಡಗರದಂತೆ
ಮುಡುಹ ತಟ್ಟಿಸಿ ಹಲಗೆಯನು
ಜಡಿದು ಕತ್ತಿಗಳ ಬೊಬ್ಬಿಜೆದು ಶಿವನ ಮುಂದೆ
ನಡದರು ವೀರಪ್ರಮಥರು ॥೧೦೪॥

ಮಚ್ಚರಿಸುವ ದಾನವರ ಮಸ್ತಕಸೂಲ
ಕಿಚ್ಚುಗಣ್ಣನ ತೋಟಿ ಬೇಡ
ಹೆಚ್ಚಿದ ಬೊಮ್ಮನ ಸಿರವನಜಿದನೆಂದು
ನಿಚ್ಚಟಗಾಳೊದಜಿದವು ॥೧೦೫॥

ಕುದುರೆ ರಥವು ಕರಿ ಕಾಲಾಳುಗಳೆಲ್ಲ
ಕದನಕೆ ನಡಿಯೆ ತ್ರಿಪುರಕೆ
ಪದಹತಿಗಳಲೆದ್ದ ಕೆಂಧೂಳ ಮುಸುಕಿತು
ವದವಿ ಬ್ರಹ್ಮಾಂಡಮಂಡಲವಾ ॥೧೦೬॥

ಪಗಲೊಡೆಯನ ರಥ ಗಗನಕೆ ನಡವುದ
ಕೊಗೆದ ನೆಲನೊಲೆಂಬಂತೆ
ಮಿಗೆ ತಾವರೆಗಳ ಪೊಸ ಜವ್ವನವೆನೆ
ನೆಗೆದುದು ಧೂಳವಂಬರಕೆ ॥೧೦೭॥

ದಿನಪನಸ್ತಾದ್ರಿಯನೈದಲಾಕಾಶದಿ
ಮಿನುಗುವ ನಕ್ಷತ್ರದಂತೆ
ಅನುಮಿಷ ಕುಲದ ಮಕುಟದ ರತ್ನದಕಾಂತಿ
ಘನಧೂಳ ಹೊದಜಿನೊಳೆಸೆಯೆ ॥೧೦೮॥

ಬಂದು ಬಿಟ್ಟಿತು ಸರ್ವದಂಡು ಪಾಳೆಯವನು
ಮುಂದೆ ತ್ರಿಪುರವ ವೇಡಯಿಸಿ
ಚಂದಚಂದದ ಕೈದುಗಳ ಝಳಪಿಸುತ
ನಿಂದರು ವೀರಪ್ರಮಥರು ॥೧೦೯॥

ಮಣಿವ ಕಾಲುಗಳ ಕುಣಿವ ವೇದವಾಜಿಯ
ನಣದು ಪಿಡಿದು ವಾಘೆಗಳ
ತ್ರಿಣಯನೇಜಿದ ಮಣಿರಥವ ನಿಲಿಸಿದ ದ್ರು
ಹಿಣೆಯು ಮುಪ್ಪುರದ ಸರಿಸಕೆ ॥೧೧೦॥

ಅಂಬರದಲಿ ಸಂಭ್ರಮದೊಳಗಾಡುವ
ಇಂಬಿನ ಮೂಜು ಪುರಗಳು
ಅಂಬರದಲಿ ನೋಡುತಂಬ ತೂಗಾಡಿದ
ಅಂಬಿಕೆಪತಿ ನಸುನಗುತ ॥೧೧೧॥

ಬಳಸಿ ಹೊಯ್ದವು ದೊರೆಗಳ ಗುಡಿಯಲ್ಲಲ್ಲಿ
ಬೆಳುಮುಗಿಲಿಳೆಗೆ ಬಿದ್ದಂತೆ
ಹಳದಿ ಬಿಳಿದು ಕೆಂಪು ಕಾಗುಪಟ್ಟೆಗುಡಿ
ಹೆಳಹಿತು ದೊರೆದೊರೆಗಳಿಗೆ ॥೧೧೨॥

ಮಾಡಿತು ಕರಿ ತುರಗಕೆ ಸುತ್ತ ಲಾಯವು
ಕೂಡೆ ಸಾಗರದಾನಗಳಿಗೆ
ವೇಡೆಯವಾಗಿ ದುಮ್ಮಾಳವ ಹೊಯಿದರು
ಜೋಡಿಸಿ ಸುರರ ಪಾಳೆಯಕೆ ॥೧೧೩॥

ಕೋಟೆಯಗಳು ತಳಿವೇಲಿ ಜವಳಿಗದ
ಮೀಟಿನ ಬಾಗಿಲುಗಳನು
ಪಾಟಿಸಿದನು ವಿಶ್ವಕರ್ಮ ಪಾಳೆಯದೊಳು
ಕೋಟಿ ಸುರರ ಕಾಹಿನಲ್ಲಿ ॥೧೧೪॥

ಒಪ್ಪಿತಿತ್ತಲು ಸರ್ಪಧರನ ಪಾಳೆಯವತ್ತ
ದರ್ಪದ ಜವ್ವನವಳಿದು
ಮುಪ್ಪು ನೆಗದು ಸತ್ವಗುಂದಿ ಬಿದ್ದನು ರವಿ
ದೊಪ್ಪನೆ ಪಶ್ಚಿಮಾದ್ರಿಯಲಿ ॥೧೧೫॥

ಬೆಳಗಿತು ಸೊಡರೇಳ್ಗೆ ಮನೆಮನೆಯಲ್ಲಿ ಭೂ
ವಳಯದಿ ಮಂಜು ಮುಸುಕಿತು
ಎಳೆವೆಜ಼ ಗಗನಂಗಳದೊಳು ತೊಳಗಿತು
ಕಳೆ ಕಳೆ ಪೆಚ್ಚೆ ವಾರಿಧಿಗೆ ॥೧೧೬॥

ಪಾಳೆಯದೊಳು ತಿರುಗುವ ತಳವಾಜಿನು
ಸೂಲಿಯಣುಗ ವೀರೇಶ್ವರನು
ಕಾಳಗತ್ತಲೆ ನಡುವಿರಳುಪಪರಿಯ
ಜೋಳಿ ಮರುಳು ತಿರುಗಿದವು ॥೧೧೭॥

ನಾಗಭೂಷಣನ ಕಾಳಗವ ನೋಡುವೆನೆಂದು
ಬೇಗದಿ ಪೂರ್ವಾದ್ರಿಯಲಿ
ಕೂಗುವ ಕೋಳಿಯ ಕಾಳೆಯಿಂಚರಗಳ
ರಾಗದಿ ದಿನಪನುದಿಸಿದಾ ॥೧೧೮॥

ಉದಯವಾಗದ ಮುನ್ನ ಹುಯ್ಯಲ ತಂಬಟೆ
ಸದೆದವು ಪಾಳೆಯದೊಳಗೆ
ಮದನವೈರಿಯ ನೇಮದಿ ದಳ ಮಾಡಿತು
ತ್ರಿದಶದ ಚಾತುರ್ಬಲವು ॥೧೧೯॥

ಮದದಂತಿಗಳನೇಜಿ ಜೋದರು ನಡದರು
ತ್ರಿದಶ ನಾಯಕನ ಬಲದಿ
ಒದಗಿ ಕುದುರೆಕಾಜಿರು ರಥಿಕರುಗಳು
ಮುದದಿ ಸಂದಣಿಸಿತಾಸವಕೆ ॥೧೨೦॥

ಕಾಲನ ಬೆರಳ ಸನ್ನೆಯಲಿ ನೂಕಿ ತುರ[೧][ಗ][೧]
ಜಾಲ ದೇವತೆಗಳೊಗ್ಗಿನಲಿ
ಕಾಲಾಳು ಫೌಜುದೋಜಿತು ನೈಋತ್ಯನ
ಹೇಳಿಗೆಯಜ್ಜಡಿತೆಯಲಿ ॥೧೨೧॥

ಕೊಳಲು ತಪ್ಪಟೆ ಜೇಗಟೆ ಹಜಿ ಬೊಬ್ಬುಳಿ
ಉಲಿವ ಕಹಳೆ ತಂಬಟವು
ದಳಪತಿ ದಳಕೆ ಶೃಂಗಾರಿ ಬಸವರಾಜ
ದಳ ಮಾಡಿದನೊಂದೆಸೆಯಾ ॥೧೨೨॥

೧-೧ ದ(ಮೂ)

ಅರೆನೆಲೆಯಾಗಿ ನಂದೀಶ ಪವ್ರುಜನಿಕ್ಕಿ
ಮರುಳು ತಂಡವ ಕೂಡಿ ನಡಿಯೆ
ಅರಸು ದಳವು ಹರನೊಡನೆಯ್ದಿತು ಗುಹ
ಕರಿವೀರಭದ್ರ ಪ್ರಮಥರು ॥೧೨೩॥

ಹರಿದುದು ದಾಳಿ ತ್ರಿಪುರದತ್ತ ಮುಂತಾಗಿ
ಸುರರು ಕೈದುವ ಝಳಿಪಿಸುತ
ಪುರದ ಸುತ್ತಣ ತುಱು ಹುಲು ದನುಜರುಗಳ
ಬೆರಸಿ ಹಿಡಿದರಗಲದಲಿ ॥೧೨೪॥

ಹೊಕ್ಕಿಱಿದರು ತ್ರಿಪುರದ ಹೊಱಕೇರಿಯ
ಸಿಕ್ಕಿದ ಸೆಱೆಹಿಡಿಯಾಳು
ಲೆಕ್ಕಿಸಬಾರದು ಸುರರ ಬೊಬ್ಬಾಟವ
ದುಕ್ಕಿತು ಪುರದ ಬಾಹ್ಯದಲಿ ॥೧೨೫॥

ಹಿಡಿಯಾಳು ತಲೆ ಮೂಗು ಸಹ ತುಱುಪಿಂಡನು
ಹೊಡದು ತಂದರು ದೇವನಿಕರ
ಕಡುಗಲಿ ದೇವೇಂದ್ರಗೊಪ್ಪಿಸಲದ ಕಂಡು
ಒಡನೆ ಹಿಗ್ಗಿದ ಮನದೊಳಗೆ ॥೧೨೬॥

ಕಟ್ಟಿದ ಕಂಠಮಾಲೆಯ ಕಿತ್ತಿಟ್ಟನು
ತೊಟ್ಟ ಹೊಂದೊಡಿಗೆಯ ಕಳದು
ಕೊಟ್ಟನು ಸುರನಾಥ ನಗುತ ಪರಷ್ಟವ
ಮೆಟ್ಟಿಱಿದೆಕ್ಕಟಿಗರಿಗೆ ॥೧೨೭॥

ಹಿಡಿದು ರಕ್ಕಸನೊಬ್ಬನ ಮೂಗಿನ ಮೇಲೆ
ಒಡನೆ ಸುಣ್ಣವನು ಲಚ್ಚಣಿಸಿ
ಬಿಡಲವನೋಡಿದನಯ್ಯೊ ಪುಣ್ಯವೆಯೆಂದು
ತಡಹುತ ತನ್ನ ತಲೆಯನು ॥೧೨೮॥

ಓಡುತೋಡುತ ಹಿಂದೆ ನೋಡುತ ಹಮ್ಮೈಸಿ
ಕೂಡೆ ಬೀಳುತಲೇಳುತವಗೆ
ಕಾಡಿನ ಗಿಡುಮರ ಮಂದಿ ಕುದುರೆಯಾಯ್ತು
ಹೇಡಿ ರಕ್ಕಸನ ಕಂಗಳಿಗೆ ॥೧೨೯॥

ಬಂದನಾ ದೂತ ತಾರಕನ ಮಕ್ಕಳುಗಳ
ಗೊಂದಣದೊಡ್ಡೋಲಗಕೆ
ಹಿಂದೆ ಮುಂದೆಡಬಲದಲಿ ಜೀಯಯೆನುತಿರ್ಪ
ವೃಂದರಕ್ಕಸರ ಮಧ್ಯದಲಿ ॥೧೩೦॥

ನಡುಗುವ ತನು ಬೆಚ್ಚುವ ಮನ ಹೊಯಿವಳ್ಳೆ
ಕಡುಧಗೆಯಿಂದ ತಲ್ಲಣಿಸಿ
ನುಡಿವ ದೂತನ ಕಂಡು [1][ಇದುಯೇ][1]ನೆಂದೆನುತಲಿ
ಅಡಿಗಡಿಗಸುರರು ಕೇಳೆ ॥೧೩೧॥

ಏನ ಹೇಳುವೆ ಜೀಯ ಶಿವನ ನೇಮದಿ ಸುರ
ಸೇನೆ ಹರಿದು ದಾಳಿಮಾಡಿ
ಈ ನಮ್ಮ ನಗರಿಯ ಹೊಜಕೇರಿಯನನು
ಮಾನಿಸದಿಜಿದರಿಂದಿನಲಿ ॥೧೩೨॥

ಎಲ್ಲಿಯ ಶಿವನೆಲ್ಲಿಯ ಸುರನಿಕರವ
ದೆಲ್ಲಿಯ ಹುಯ್ಯಲೆಂದೆನುತ
ತಲ್ಲಣಿಸುವ ದೂತನ ಮತ್ತೆ ಬೆಸಗೊಂಡ
ರೆಲ್ಲ ಸುದ್ದಿಯನು ದೊರೆಗಳು ॥೧೩೩॥

ತೆಗದೋಡಿ ಬರುತದೆ ನಾಡಗೂಳೆಯ ನಮ್ಮ
ನಗರಮೂಜಿರ ಹೊರೆಗಾಗಿ
ತೆಗಸಿ ಸೂಳೆಯರ ವಾಲಗವ ಬೇಗದಿ ನೀವು
ಬಗೆಯದಾಪವಕನುವಾಗಿ ॥೧೩೪॥

೧-೧ ಇದೇ(ಮೂ)

ದೂತನ ಬಾಯ ಹೊಯ್ ಹೊಯ್ ಹುಸಿಯಿದು ದೇವ
ವ್ರಾತವೆಮಗೆ ತಪ್ಪುವದೆ
ಯಾತಕೆ ಜೀಯ ಕೋಪವು ಹುಸಿಯಲ್ಲೆನ್ನ
ಮಾತು ನಿಮ್ಮಯ ಪಾದದಾಣೆ ॥೧೩೫॥

ಹೊಸವುರಿ ಹೊಗೆಯದೆ ಹೊಱಕೇರಿಯನು ಸುಟ್ಟ
ಅಸಮಾಕ್ಷನ ಪರಿವಾರ
ವಸುಧೆ ಹೊಱದು ದಿವಿಜರ ದಂಡು ಬಿಟ್ಟದೆ
ಮಸಗಿದ ಮಾರಿಯಂದದಲಿ ॥೧೩೬॥

ಮೂಗಿನ ಮೇಲೆ ಬೆರಳನಿಟ್ಟು ತಲೆಯನು
ತೂಗಿ ತಾರಕನಾತ್ಮಜರು
ಆಗೊಂದು ಘಳಿಗೆ ಮೋನದಲಿ ವಿದ್ಯುನ್ಮಾಲಿ
ಮೇಗಣ ರಾಜಕಾರ್ಯವನು ॥೧೩೭॥

ಹುಲುಪಱೆಗಳು ಶಿವನಿಕರವೀ ತ್ರಿಪುರದ
ನೆಲನ ಮೆಟ್ಟುವ ಬಲುವಾಯ್ತೆ
ಸಲೆ ತಮಗಿದು ಕಡೆಗಾಲವೆನುತ ಕೂಡೆ
ಖಳರು ನಿಶ್ಚಯಿಸಿ ಮನದಲಿ ॥೧೩೮॥

ಭಾಳಲೋಚನನು ಕಾಳಗಕೆ ಬಂದುದನುಱೆ
ಕೇಳುತಲದಟ ರಕ್ಕಸರು
ಭಾಳವ ಜಡಿವುತೋಲಗದಿಂದಲೆದ್ದರು
ಜೋಳಿಭಟರು ಕೊಂಡಾಡೆ ॥೧೩೯॥

ಉಟ್ಟರು ದೇವಾಂಗದಿ ಮಲ್ಲಗಾಸೆಯ
ತೊಟ್ಟರು ಆತ್ಮದೊಡಿಗೆಯ
ಕಟ್ಟಿ ಬದಿಗೆ ವಜ್ರದ ಕವಚವನಾಂತು
ದಿಟ್ಟ ರಕ್ಕಸರಾಯುಧವಾ ॥೧೪೦॥

ದೆಸೆಯ ದೇವರ್ಕಳ ಗಂಡನೆಂದೆನಿಸುವ
ಮಿಸುನಿಯ ಬಿರುದಿನ ಬೊಂಬೆ
ಅಸುರರು ಮುತ್ತಿನ ಕಡೆಯದಲೆಸೆದರು
ಉಸುರಲಳವೆ ಪೌರುಷವಾ ||೧೪೧||

ಕರೆಕರೆ ಪದ್ಮನಾಯಕರನು ಬಲೆಗಳ
ತರಹೇಳು ಸುರಮೃಗ ಕುಲಕೆ
ಧುರದೊಳು ಕೈಯ ತಿಮಿರವ ಕಳವೆವೆಂದು
ನೆರಹಿದರವರು ಪೆರ್ಬಲವಾ ||೧೪೨||

ಮುತ್ತಿನ ಚಾವಡಿಯಲಿ ದನುಜರು ನಿಂದು
ಮತ್ತೆ ಪ್ರಧಾನರ ಕರಸಿ
ಮೊತ್ತದ ಮಗುಟವರ್ಧನರು ಬರಲಿಯೆಂದು
ಬಿತ್ತರದಲಿ ಬೆಸಸಿದರು ||೧೪೩||

ಸಾಱಿತು ಡಂಗುರ ಮೂಱು ಪುರದೊಳಗೆ
ಮೀಱಿ ಸೂಳಯಿಸೆ ನಿಸ್ಸಾಳ
ಮೂಱು ಕಣ್ಣನ ಕೂಡೆ ಕಾಳಗ ನಮಗೆಂದು
ಚೀಱುವ ಕಹಳೆಯಲ್ಲಲ್ಲಿ ||೧೪೪||

ಹಿಂಚಿತು ಡಂಗುರ ಮುಂಚಿತು ಕಾಲಾಳು
ಮಿಂಚಿನ ಬಳಗದಂದದಲಿ
ಸಂಚಲಿಸದೆ ತಳಪಿನ ಕತ್ತಿಗಳ ಹೊತ್ತು
ವಂಚನಿಲ್ಲದೆಯೆಯ್ದಿದರು ||೧೪೫||

ಕಡಿವಾಣ ಕಬ್ಬಿಟ್ಟಿಸೂತ್ರಿಕೆ ದಂಡೆ ಕಿಱುಗೆಜ್ಜೆ
ತಡಿಕೆ ಹಕ್ಕರಿಕೆ ಹಲ್ಲಣವ
ತೊಡರಿ ವಾಜಿಗೆ ಜೋಡ ತೊಟ್ಟು ಭಲ್ಲೆಯವಾಂತು
ನಡದುದು ರಣಕೆ ರಕ್ಕಸರು ||೧೪೬||

ಹೊರಜಿಯ ಬಿಗಿದು ರಂಚಿಕೆ ಹಮ್ಮಿ ಕೈಯೊಳು
ಪಿರಿದಂಕುಶ ಪಟ್ಟೆಯವು
ಬಿರಿದಿನ ಟೆಕ್ಕೆ ಪಲ್ಲವ ಸತ್ತಿಗೆಗಳ
ಕರಿಗಳ ರಕ್ಕಸರೊದಗೆ ||೧೪೭||

ಕರದನೆಜ್ಜೆಯ ಪಕ್ಕಗಂಟೆ ಬಿಗಿದ ರಂಚಿ
ಶಿರದಂಕುಶ ಹೊನ್ನ ಹೊರಜಿ
ಬಿರಿದಿನ ಡವುಡೆ ಡಮಾಮಿ ತುಡುಮುಗಳು
ನೆರದರು ರಣಕೆ ರಕ್ಕಸರು ||೧೪೮||

ಕೀಲಚ್ಚು ಬಲಿದು ಗಾಲಿಗೆ ನಿಡುನೊಗನಿಕ್ಕಿ
ಮೇಳೈಸಿ ತುರಗವ ಹೂಡಿ
ಮೇಲೆ ಸಾರಥಿಗೂಡಿ ರಥಿಕರಾಯುಧವಾಂತು
ಸಾಲ ಸಂದಣಿಗಳೊದಗಿತು ||೧೪೯||

ಹರಿಗೆ ಹಲಗೆ ಕೊಂತ ಕೂರಿಟ್ಟಿ ಕಕ್ಕಡೆ
ಪರಸು ತೋಮರ ಪಿಂಡಿವಾಳ
ಸುರಗಿ ಸಬಳ ಇಟ್ಟಿ ಬಿಲ್ಲಂಬುಗಳನಾಂತು
ನೆರದುದು ರಣಕೆ ರಕ್ಕಸರು ||೧೫೦||

ಚಿನ್ನದ ಕಟ್ಟು ಬೆಳ್ಳಿಯ ಕಟ್ಟಿನ ಬಿಲ್ಲು
ಬೆನ್ನ ಪತ್ತಳಿಕೆ ಝಲ್ಲಿಗಳು
ಹೊನ್ನ ಸುರಗಿ ರನ್ನ ಗಂಟೆಯಕ್ಕಟಿಗರು
ಸನ್ನೆಯೊಳೊದಗಿತು ಕ್ಷೋಣಿ ||೧೫೧||

ಕಾಲಾಳ ಸತ್ತಿಗೆ ಹೀಲಿಯ ಚಾಮರ
ಕಾಲ ತೊಡರು ಹೊನ್ನ ಘಂಟೆ
ಸೂಲವ ತೊಲಗದ ಬಿರಿದಿನ ಹರಿಗೆಯ
ಕಾಳರಕ್ಕಸರೊದಗಿದರು ||೧೫೨||

ಬೆನ್ನ ಚಮ್ಮಟಿಗೆ ಗಂಟಲ ಗಾಣ ಬಿರುದಿನ
ಹೊನ್ನ ಸಂಕೊಲೆ ಪೇರಡವುಡೆ
ಸನ್ನೆಯ ಜೇಗಟೆ ಪಿಡಿದ ಜವನಿಕೆಯ
ಮನ್ನಣೆಯಸುರರೊದಗಿತು ||೧೫೩||

ಅಗಿವ ಗುದ್ದಲಿ ತೂಱುವ ಮೊಱ ಸರಬೊಂಬೆ
ಹಗಲ ಪಂಜೆತ್ತಿದ ಗುದಗೆ
ಜಗ ಬಿರುದಿನ ಜುಂಜದಲೆಯ ರಾಕ್ಷಸರು
ಅಗಣಿತ ನೆರದುದೇನೆಂಬೆ ||೧೫೪||

ಕರಿದು ಮಾಣಿಕ ಪಚ್ಚೆ ಕೆಂಪು ಮುಗಿಲ ತೆರೆ
ಬಿರುದಿನ ಝುಲ್ಲಿ ಘಂಟೆಗಳು
ವರ ಸಂಕೋಲೆ ಹುಲಿಯ ತಟ್ಟು ಶಂಖದ
ಹರಿಗೆಯಕ್ಕಡಿಗರೊದಗಿತು ||೧೫೫||

ಕೆಂಜುರಿಗಣ್ಣು ಕೆಮ್ಮೀಸೆ ಕಕ್ಕಸಭುಜ
ಜುಂಜುರುದಲೆ ಕಾರೊಡಲು
ರಂಜಿಪ ಕೋಱೆದಾಡೆಯಯೇಱು ರೋಮದ
ನಂಜೆದೆಯಸುರರೊದಗಿತು ||೧೫೬||

ಕಾಳದ ಮೊತ್ತವೊ ಬಱಸಿಡಿಲೇಳ್ಗೆಯೊ
ನೀಲ ಚಳದ ಹಬ್ಬುಗೆಯೊ
ಕಾಲಮೃತ್ಯುವಿನ ಪಡೆಯೊ ಎನಲಸುರರ
ಆಳು ನೆರದುದು ಮೇಘದಲಿ ||೧೫೭||

ಎತ್ತ ನೋಡಿದಡತ್ತ ಕುದುರೆ ಕಾಲಾಳಿನ
ಮೊತ್ತ ಗಜದ ಸಂದಣಿಯು
ಸುತ್ತಲೆಸವರಧಿಕರುಗಳ ಕೆಂಪಿನ
ಸತ್ತಿಗೆಗಳ ಸಾಲು ಮೆಱೆಯೆ ||೧೫೮||

ಜಂಭ ಮುಸುಂಡ ಜಂಭಾರಿ ಜಟಾಸುರ
ಶುಂಭ ತ್ರಿಶಂಖ ದುರ್ಮಾಕ್ಷಾ
ಕುಂಭ ವಿಚಿತ್ರ ಗಾವಿಲ ಯತ್ರಿ ಕೆಮ್ಮುಖ
ರೆಂಬ ರಕ್ಕಸರೊದಗಿದರು ||೧೫೯||

ಮಲ್ಲಾಸುರ ಮೆಲ್ಲಾಸುರ ಬಲ್ಲಿದ
ಕೊಲ್ಲಾಸುರ ದಂಡಧರನು
ಎಲ್ಲಾಸುರರೊಳಗಾದ ನಿಶಾಚರ
ಜಲ್ಲನೆರದುದು ಮೇಘದಲಿ ||೧೬೦||

ಎತ್ತಿ ನುಂಗುವರು ಹಸಿದರೆ ಗಿರಿಗಳನು
ಮತ್ತೆ ಬಾಯಾಜಿ ವಾರುಧಿಯ
ಬತ್ತಿದಂದದಲೊಂದುಕ್ಕುಡುತೆಯ ಮಾಡುವ
ಮೊತ್ತದ ಖಳರೊದಗಿದರು ||೧೬೧||

ತರಸಿಕೊಟ್ಟರು ಒಳಲಾಯದ ಕುದುರೆಯ
ಸರಿದೊರೆಗಳ ರಥಗಳಿಗೆ
ಹಿರಿಯಲಾಯದ ವಾಜಿಗಳೆಜ್ಜವಾದವು
ಬಿರುದಿನ ರಾವುತ ಪಡೆಗೆ ||೧೬೨||

ತಾರಕನಂದನರೊಳು ಪಟ್ಟದ ದೊರೆ
ವೀರವಿದ್ಯುನ್ಮಾಲಿಯೊಡನೆ
ಭೂರಿ ಭಟರು ಭಾಷೆಯ ಮಾಡುತ ಮಿಗೆ
ಹೋರಿ ಹೊಳಕೆಗಳ ಬರಸಿ ||೧೬೩||

ಡೊಳ್ಳು ದಮ್ಮೆನ್ನದ ಮುನ್ನಿಱುವೆನು ನಾ
ನಲ್ಲಿ ಹುಯ್ಯಲೊಳೆನುತಾ
ಮಲ್ಲಾಸುರ ನಿಂದು ದೊರೆಗಳಿದಿರಿನೊಳು
ವಿಳ್ಳೆಯವನು ಬೇಡಿದನು ||೧೬೪||

ಮೊದಲೊಳು ಮಲ್ಲಾಸುರ ವೀಳೆಯವನು
ಮುದದಿ ಬೇಡುವದನು ಕಂಡು
ಕದನವಿಜಯ ಮಲ್ಲಾಸುರ ತಾನು ತ
ಡದನಾಕ್ಷಣದಿ ವೀಳೆಯವ ॥೧೬೫॥

ಉರಗಪತಿಯ ಮೇಲೆ ದಾಳಿಯನಿಡುವಂದು
ಧುರದೊಳಿವನ ಬಿಲ್ಲ ಝಲ್ಲಿ
ಧರೆಗುರುಳಿದರೆ ಎನ್ನಯ ಬಂಟ ತಂದನು
ದೊರೆಗಳ ದೇವ ಚಿತ್ತೈಸು ॥೧೬೬॥

ಸುರಪತಿಗಳ ಮೇಲೆ ದಾಳಿಯನಿಡುವಂದು
ಧುರದೊಳಿವನು ಹರಿಗೆಯನು
ಕರದ ಕತ್ತಿಯ ಹಾಕಲು ನನ್ನ ಬಂಟನು
ಕರತಂದೆಂದ ಕೊಲ್ಲಾಸುರನು ॥೧೬೭॥

ನರಪತಿಗಳ ಮೇಲೆ ದಾಳಿಯನಿಡುವಂದು
ಧುರದೊಳಿವನು ಓಡಿ ಬರಲು
ಪಿರಿದು ಸಂತೈಸಿದ ನನ್ನ ಬಂಟನುಯೆಂದು
ಇರದೆ ನುಡಿದ ದಂಡಧರನು ॥೧೬೮॥

ಮೂಱು ತುಂಡನು ಮಾಡುವೆ ಹರನಂಬ[೧][ನು][೧]
ಸೂಱೆಗೊಂಬೆನು ಹಣೆಗಿಚ್ಚಾ
ಮೂಱು ಪುರವ ಕಾವೆನುಯೆಂದು ದುರ್ಮಾಕ್ಷ
ಏಱಿಸಿ ಭಾಷೆ ಮಾಡಿದನು ॥೧೬೯॥

ಅಱಿಯರೆಂದೆಲವೋ ದುರ್ಮಾಕ್ಷ ನೀ ಪಂಥವ
ಮೆಱವೆ ಕೆಳದಿಯರಂದದಲಿ
ಮುಱಿದ ಹುಯ್ಯಲ ನೀನೆಂತು ತಡವೆಯೆಂದು
ಜಱದನು ಮೇಘನಿಕಾಯ ॥೧೭೦॥

೧–೧ ನ(ಮೂ)

ಬಲ್ಲೆನಿವನ ಬೀರವ ಹುಯ್ಯಲೊಳು ಹಿಂದೆ
ನಿಲ್ಲಲೀಸನು ತೊಡೆನಡುಗಾ
ಬಲ್ಲಿದನಲ್ಲೆಂದು ಮೇಘನಿಕಾಯನ
ಹೊಳ್ಳುಗಳದ[ನು] ಕೆಮ್ಮೂಕಾ ||೧೭೧||

ಸಜೆಯವು ಕೂಳ ಪಂತವನು ಬಲ್ಲವರೊಳು
ಜಜಿದಾಗ ಹಾಜಿ ಕೆಮ್ಮುಕನ
ಧುರದೊಳೊಡೆಯನ ಬಿಟ್ಟೋಂದಿದೆಯೆಂದಾಗ
ಗಿರಿಗನೆಂಬಸುರನು ಜಜಿದಾ ||೧೭೨||

ನಾಲಗೆ ಘನ ನಿನಗೇತಕೆಲವೊ ನಾ
ಕಾಳಗದೊಳು ನಿನ್ನ ಮೇಲೆ
ಸಾಲು ಬೊಂಬೆಯ ಕಟ್ಟಿದೆನೆಂದು ಗಿರಿಗನ
ಜಾಳಿಸಿ ನುಡಿದ ಶಂಭರನು ||೧೭೩||

ಜಜಿವನಿದಿರ ತನ್ನನಾಳಿಗೊಂಬವರನು
ಅಜಿಯನು ಶಂಭರಸುರನು
ಕೊಜಿತೆ ಬಿಡದು ಹರಿಗೆಯ ಹಾಕಿದನೆಂದು
ಮುಜಿದು ನುಡಿದ ನೀಲಂಜಾ ||೧೭೪||

ಬಾಯ ಹವಣ ತುತ್ತ ಕೊಳ್ಳೊ ನೀಲಂಜ ವಿ
ಡಾಯದ ನುಡಿ ನಿನಗೇಕೆ
ರಾಯದಟಿನೊಳಿರೆ ನಿನ್ನ ಹವಣೆಯೆಂದು
ನಾಯಕರೊಡನೆಂದರವನಾ ||೧೭೫||

ಗಳಪದಿರೆಲವೊ ನೀಲಂಜನ ನೀನು ಕ
ತ್ತಲೆಯ ಮನೆಯ ಹೊಗಲಮ್ಮೆ
ಹೊಳಕೆಗೆ ಸೋತುದು ಲೆಕ್ಕವಿಲ್ಲವುಯೆಂದು
ನಿಲದೆ ನಾಗಾಸುರ ಜಜಿದಾ ||೧೭೬||

ನಾಗಾಸುರ ನೀ ನಡೆವೆಣ ನೆಜ಼್ ಪಾಂಡು
ರೋಗಿ ಹುಲ್ಲೆಡಹಿ ರಣದಲಿ
ನೋಗರ ಹಳಿಯ ಸಲ್ಲದುಯೆಂದಾ ವೈ
ರಾಗಿ ಜಲಾಸುರ ಜಜಿದಾ ॥೧೭೭॥

ದಾರಿಯ ಜಗಳವ ಬೆರಳಲಾಡಿಗಳಲಿ
ಹೋರಿ ತೆಗವೆ ಜಲಾಸುರಾ
ವೀರನಲ್ಲವೊ ನೀನು ಸಾರೆಲೊ ಎನುತಲಿ
ಮೀಜಿ ಜಜಿದನಾ ಕುಂಭಾ ॥೧೭೮॥

ಒಳಜಗಳಕೆ ಹಾವಳಿಕಾರ ಕುಂಭ ಮಾ
ರ್ಮಲತರೆ ಬಿಟ್ಟುವೋಡುವೆಯೊ
ಹೊಳಕೆಗೆನ್ನೊಳಗಿದಿರಿಲ್ಲೆಂದು ಖಡ್ಗವ
ಜಳಪಿಸಿ ನಿಂದನಾ ಜಂಭಾ ॥೧೭೯॥

ಕೊಡುಕೊಡು ಬೆಸನನೀರೇಳು ಲೋಕದೊಳಿಹ
ಕಡುಗಲಿ ದೊರೆಗಳ ಕಿವಿಗೆ
ತೊಡಚಿಯಂಬನು ಕಟ್ಟಿ ತಹೆನೆಂದು ಜಂಭನು
ಓಡಿದನು ಮುಂದೆ ವೀಳೆಯವಾ ॥೧೮೦॥

ಜಂಭನೆಂಬವ ಮುಂದೆ ವೀಳೆಯವಿಡಿದನು
ಎಂಬುದ ಕೇಳಿ ಮುಸುಂಡಾ
ಹೆಂಬೇಡಿಗೆ ಮುಂದೆ ವೀಳೆಯವೇಕೆಂದು
ತುಂಬಿದೋಲಗದೊಳು ಜಜಿದಾ ॥೧೮೧॥

ವೀಳೆಯವನು ತನಗಿಂದ ಮುನ್ನವೆ ಪಿಡಿ
ದೋಲೆಯಕಾಜಿನ ಗಂಡಾ
ಹೇಳದೆ ಕೊಟ್ಟೊಡೆಯನ ಗಂಡನೆಂದವ
ತೋಳನೆಗಹಿ ಭಾಳ ಜಡಿದಾ ॥೧೮೨॥

ಮುಗಿಲ ತೊಡವೆಯ ಕೀಳುವೆನು ಸಿಡಿಲಿನ ನಾ
ಲಗೆಯ ಕೊಯ್ವೆನು ಮಾರಿಯನು
ಬಗೆಯದೆ ಹಿಡಿತಹೆ ಜವನ ನಿಟ್ಟೆಲುವನು
ಉಗಿವೆನೆಂದನು ದಾನವನು ॥೧೮೩॥

ದೊರೆಗಳಲ್ಲದೆ ಬಿನುಗುಗಳ ಹಿಡಿದರೆನ್ನ
ಉರುತರ ಮೀಸೆಯ ಕೊಯಿಸು
ತರಿಸು ಬಂಗಾರವ ಭಾಷೆಯ ಕಡುತಕ್ಕೆ
ಬರಸೆಂದನು ದಾನವನು ॥೧೮೪॥

ಕೇಳೆಲೊ ಮೂಳ ಮುಸುಂಡ ಬಂಗಾರವ
ಸೂಳೆಯರಂತೆ ಬೇಡುವರೆ
ವಾಲೆಯಕಾರಗೇತಕೆ ಬಂಗಾರವು
ತಾಳದಕೇನೆಂದ ಜಂಭಾ ॥೧೮೫॥

ನಂಟನೆಂದೆಲವೊ ಸೈರಿಸಿದೆನು ರಕುತವ
ನೀಂಟುವೆನೆಂದ ಮುಸುಂಡ
ಗಂಟಲನಜಿವೆ ನೀನುಸುರಿದರೆಂದವ
ಗಂಟಿಕ್ಕಿದ ಜಗಳವನು ॥೧೮೬॥

ಕೊಬ್ಬಿ ರಕ್ಕಸರು ತಮ್ಮೊಳು ಹೋರಿ ಹೊಳಕೆಯ
ನಿಬ್ಬರದಲಿ ಮೂದಲಿಸಿ
ಕಬ್ಬುವಿಲ್ಲನ ವೈರಿಯ ದಂಡನಿಜಿವೆನೆಂ
ದುಬ್ಬಿ ನುಡಿದರು ಭಾಷೆಯನು ॥೧೮೭॥

ಒಳಜಗಳವು ಬೇಡ ಹೊಯಿ ಹೊಯಿ ಹುಯ್ಯಲು
ತಲೆದೋಜಿದೆ ತಮಗೆನುತ
ಕಳುಹಿದರವರೀರ್ವರ ದೊರೆಗಳು ಬಲು
ಹೊಳಕೆಯ ವೀಳೆಯವಿತ್ತು ॥೧೮೮॥

ಒಡ್ಡಿದರವರು ತಮ್ಮೊಡ್ಡನು ಗಗನ ಕಾ
ರೊಡ್ಡಿನ ಮೇಘದಂದದಲಿ
ಅಡ್ಡಾಯುಧವಾಂತು ಖಡ್ಡಮನದವರು
ಸಡ್ಡೆ ಮಾಡರು ಸಮರವನು ॥೧೮೯॥

ತಾರಕಸುರನ ಮಕ್ಕಳು ಮೂವರುಗಳು
ಧೀರರೊಬ್ಬೊಬ್ಬರ ಕೂಡೆ
ಭೂರಿದೊರೆಗಳ ಸತ್ತಿಗೆಗಳು ನೆಗಹಿತು
ಸೇರಿ ತೊಂಬತ್ತಾಱಕ್ಷೋಣಿ ॥೧೯೦॥

ಧನಪತಿ ದಲ್ಲಣನಿಂದ್ರ ಕೋಳಾಹಳ
ಅನಲಾ ಶರಭ ಭೇರುಂಡ
ಅನಿಲ ವಿಜಯನೆಮಗರ್ವವಿದಾರಣ
ರೆನುತ ರಕ್ಕಸರೊದಱಿದರು ॥೧೯೧॥

ಗಿಡಿಬಿಡಿ ತಂಬಟ ಡಿಂಡಿಮ ನಿಸ್ಸಾಳ
ನಡೆ ಡೊಳ್ಳು ಭೇರಿ ಡಮಾಮಿ
ಜಡಿವ ಬೊಬ್ಬುಳಿವಱಿ ಕೊಂಬು ಕಹಳೆ ಚಿನ್ನ
ಹೊಡದುದು ದೆಸೆ ಬಿರಿವಂತೆ ॥೧೯೨॥

ಲೋಹದ ಗಾಲಿ ಘೀಳಿಡೆ ಹೊಂದೇರನು
ಸಾಹಸಮಲ್ಲರೇಱಿದರು
ಮೋಹರಿಸಿದ ಹಿಂದಣ ಸೇನೆ ನಡದುದು
ಆಹವಕರಸುಗಳೊಡನೆ ॥೧೯೩॥

ಚಂದ್ರಶೇಖರ ಭುಜಗೇಂದ್ರ ಭೂಷಣ ವಿಷ
ಕಂಧರನಿಂದ್ರವೊಂದಿತನೆ
ನಂದಿಸಿಂಧನ ಮಹಿಮಾಬ್ಧಿವರ್ಣನೆಗಳ
ಸಂಧಿ ಮುಗಿದುದು ಮೂಱನೆಯ ॥೧೯೪॥

ಅಂತು ಸಂಧಿ ೩ಕ್ಕಂ [೧][ಪದನು ೬೧೪ ಕ್ಕಂ][೧] ಮಂಗಳ ಮಹಾಶ್ರೀ

೧-೧ ಪದನು ೬೧೭ಕ್ಕಂ(ಮೂ)

ಸಂಧಿ : ನಾಲ್ಕು

ವೃತ್ತ :

ಸುರರತಿ ವೇಗದಿಂ ನಡದು ತ್ರೈಪುರದೇಶದೊಳೊತ್ತಿ ಕಾದಲಾ
ಧುರದಲಿ ದಾನವರ್[೧] ತ್ರಿದಶರಂ ಮುಜಿದೊತ್ತಿಸೆ ಕಂಡು ನಂದಿಕೇ
ಶ್ವರ ನಡಹಾಯ್ದು ದಾನವರ ತಳ್ಗಿ[೨]ದಿರಾಂತಿರೆ ಶಿಂಸುಮಾರನಂ
ಚರಣದೊಳೊತ್ತಿ ಮೆಟ್ಟಿಯೆ ಸಜಿಸಜಿನೆ ಸೀಳ್ದ[೩]ನದೇಂ[೩] ಪ್ರತಾಪಿಯೋ॥

ಪದ :

ಪಾಪರಹಿತ ದಯರೂಪ ಕನಕಗಿರಿ
ಚಾಪ ಬಾಗಿ[೪]ದ ಜನರಕ್ಷ
ಗೋಪತಿಧರ ಶ್ರೀಪತಿ ನಯನಾರ್ಚಿತ
ಗೋಪತಿವಾಹನ ಜಯತು ॥೧॥

ಸವಿನುಡಿ ಸರದಿ ತರಂಗ ರಸಿಕ ರನ್ನ
ಕವಿಮನ ಕಮಲಾದಿತ್ಯನು
ವಿವರಿಸಿದನು ಲಿಂಗನೊಲಿದು ಸುಜಾಣರ
ಕಿವಿಗಿಂಪಿನ ಶಿವಕಥೆಯೊ ॥೨॥

ತಾರಮಂಡಲವನು ತುಡುಕುವ ತಲೆಗಳು
ಕಾರಿರುಳೆಜಿಕದಂದದಲಿ
ಧೀರ ತಾರಕನ ಮಕ್ಕಳು ಹೊಜಿವಂಟರು
ಮಾರಾರಿಯೊಡನೆ ಕಾಳಗಕೆ ॥೩॥

---

೧ ರು(ಮೂ) ೨ಜೆದಿ(ಮೂ) ೩–೩ ದೆಂಥ (ಮೂ) ೪ಗ(ಮೂ)

ಎದ್ದುದೊಂದರ್ಬುದ ಪದ್ಮನಾಯಕರು
ಬ್ಬೆದ್ದು ಸಮರ ಭೂಮಿಯಲಿ
ಹೊದ್ದಿ ಭಾಷೆಗಳ ಮಾಡಿದರಸುರರು ರಾಜ
ವಿದ್ಯುನ್ಮಾಲಿಯ ಕೂಡೆ ॥೪॥

ಹೊಡೆದು ತಹೆವು ದಿಕ್ಕುಪಾಲ್ಕರ ತಲೆಯನು
ಹಿಡಿದು ತಹೆವು ಸುರಗಣವಾ
ಮೃಡನ ದಂಡನು ಮುಚಿದೋಡಿಸುವೆವುಯೆಂದು
ಒಡೆಯನ ಬೆಸನ ಬೇಡಿದರು ॥೫॥

ಕೊಟ್ಟರು ನಗುತ ಕರ್ಪುರ ವೀಳೆಯವ ಹೊಂ
ಬಟ್ಟಲೊಳತುಳ ಭಟರಿಗೆ
ಬಿಟ್ಟರು ಜೋಣಿಗೆ ಹೊಣಕೆಯ ದೈತ್ಯರಂ
ನಿಟ್ಟಿಸಿ ತಾರಕಸುರರು ॥೬॥

ಸೂಳಯಿಸಿತು ಶತಕೋಟಿ ನಿಸ್ಸಾಳವು
ಹೋಳಾದವು ದಿಗುತಟವು
ಕಾಳೆಗಳೊದಜಿತಸಂಖ್ಯಾತ ಜೋಣಿಯೊ
ಳಾಳು ಹೊಕ್ಕದು ಮೂದಲಿಸಿ ॥೭॥

ಪುರವಳಯದಲೊಡ್ಡಿದ ದಿವಿಜರ ದಂಡು
ಕರಿಗೆ ಮುನಿವ ಸಿಂಹದಂತೆ
ಉರವಣಿಸಿತು ಕೋಜಿದಾಡೆಯ ದೈತ್ಯರು
ಬೆರಳತುಟಯ ಬೊಬ್ಬೆಗಳಲಿ ॥೮॥

ಹಿಡಿದುದು ಹುಯ್ಯಲೆರಡು ಭಾಗದಲಿ ಬೊಬ್ಬೆ
ತುಡುಕಿತು ಮೂಲೋಕವನು
ಬಡವರು ಕಾದುವರಳವಲ್ಲ ದೈತ್ಯರ
ಪಡೆಯನದಾರು ಬಣ್ಣಿಪರು ॥೯॥

ಅದೆಯದೆ ಹುಯ್ಯಲಗಾಳೆಯೊದಱುತದೆ
ಮೊದಲಿಜೆತವು ನಮಗೆನುತ
ಕದನಗಲಿಗಳಾಳುದೋಱೆ[೧][ತು][೧] ಸಮುದ್ರದ
ಹೊದರುದೆರೆಗಳಂದದಲಿ ॥೧೦॥

ಚೂಣಿ ಗಂಟಿಕ್ಕಿತು ಕದಲದೆ ಗೊಣಸಿನ
ನೇಣಸಜೆದ ತೆಜನಂತೆ
ಪ್ರಾಣಕೋಸರಿಸದೆ ಹೊಣಕೆಯ ದೈತ್ಯರು
ಮಾಣದೆ ಕಡಿದಾಡಿದರು ॥೧೧॥

ಝಲ್ಲಿಯ ಬಿಲ್ಲು ಸುಲಿಗೆವಿಲ್ಲು ನಾಳಿಯ
ಬಿಲ್ಲು ಸಿಂಗಾಡಿಯ ಬಿಲ್ಲು
ಬೆಳ್ಳಿ ಚಿನ್ನದ ಕಟ್ಟಿನ ಬಲು ಬಿಲ್ಲಿನ
ಬಲ್ಲಿದರೆಚ್ಚಾಡಿದರು ॥೧೨॥

ಝಲ್ಲಿಯ ಬಿಲ್ಲ ಜೇವಡೆಗೆಯ್ದು ಹಿಡಿಯಂಬ
ಮೆಲ್ಲನೆ ಮಡಲಿಜೆದೊತ್ತಿ
ನಿಲ್ಲದೆ ತೆಗತೆಗದೆಸವುತ ದನುಜರ
ರೆಲ್ಲರೊರಗಿತು ಘಾಯದಲಿ ॥೧೩॥

ವೀರರ ಜೀವರನ್ನಕೆ ಹಣವೆನೆ ಸುರ
ನಾರಿಯರುರೆ ಬೆಲೆಯಾಗೆ
ಧಾರುಣಿಗತಿ ಚಿತ್ರವೆನಲಂಬ ಸುರಿದರು
ಧಾರೆಯ ಕಿಡಿಗಳಂದದಲಿ ॥೧೪॥

ಸಿಡಿಲ ಕಿಡಿಗಳೊ ಕಾರ್ಮುಗಿಲೆಡೆಮಿಂಚಿನ
ಗಡಣವೋ ವಡಬಾನಳನ
ಕುಡಿನಾಲಗೆಗಳ ಬಳಗವಿಂಡುಗಳೆನೆ
ಇಡಿಲಿಜೆದವು ಸರಳುಗಳು ॥೧೫॥

೧–೧ ತ(ಮೂ)

ಕವಲಂಬು ಕಣಗಿಲೆ ಹೊಡೆಯಂಬು ಕುಪ್ಪಿನ
ನವಬೋಳೆಯು ಮಸದಂಬು
ರವೆಯದ ಲೋಹದ ಅಲಗಿನಂಬುಗಳಲ್ಲಿ
ಬವರದೊಳೆಚ್ಚಾಡಿದರು ॥೧೬॥

ತಲೆವಿಲ್ಲು ಗೊಂಡೆ ಸವರುಗಣೆ ತಪ್ಪದೆ
ವಲವರು ತಳಸಂಚದಲ್ಲಿ
ಸೆಳದು ಸರಳನು ಗುಂಪರಿನ ಮೇಲೆಸೆವರು
ಚಳಕವನದನೇನೆಂಬೆ ॥೧೭॥

ಕುದುರೆಯ ತಟ್ಟುಗಿಯಲೆಸೆವರತಿ
ಮದಕರಿಗಳ ಸಿರಗಳನು
ವದವಿ ಪಚ್ಚಳದಲಿ ಮೂಡುವಂತೆಸೆವರು
ಕದುಬಿ ಸರಳ ಹೊರಳಿಯಲಿ ॥೧೮॥

ರುಧಿರದೊಳಗೆಂಬುದಿಬುದಿ ನಿಂದೆಸೆಯಲು
ಅದನು ಲೆಕ್ಕಿಸದೆ ಬಿಲ್ಲವರು
ಮದಸುರಿವಾನೆಯವೋಲುಬ್ಬಿ ರೋಷದಿ
ಕದುಬಿಜೆದರು ಸುರಗಿಯಲಿ ॥೧೯॥

ಮುಗಿಲ ಹೊರಳಿ ಮೋಹರಿಸಿದ ತೆಜಿನಂತೆ
ಅಗಣಿತ ಹರಿಗೆಯ ಭಟರು
ತಗರು ತಗರು ಮಿಗೆ ಕಾದಿದೊಳಳಲಿಕೆ
ತೆಗದು ತಿವಿದರುಬ್ಬಿನಲಿ ॥೨೦॥

ಕರಿಯ ಮಾಣಿಕವಟ್ಟಿ ಕೆಂಪು ಮುಗಿಲ ತೆರೆ
ಬಿರಿದಿನ ಝುಲ್ಲಿ ಘಂಟೆಗಳು
ವರಕೋಲು ತಟ್ಟು ಹುಲಿಯವೊಂಟಿ ಶಂಖದ
ಹರಿಗೆಯ ಭಟರೊದಗಿದರು ॥೨೧॥

ಅರರೆ ರಾವುರೆ ಧೀರದಣು ಮಜ ಭಲ ಮಾ
ತುರೆ ಚಾಂಗು ಭಾಪು ಹೋಯೆನುತಾ
ಬೆರಸಿ ಖಂಡೆಯದಲಿ ಕಡಿದಾಡಿತು ಕ
ತ್ತರಿಸೆ ಟವುಳಿ ಜೋಡುಗಳು ||೩೪||

ತೆಗವರು ಚಾಳೆಯಗಳನೊಡ್ಡುವರು ಹೊ
ಜಗುಮಾಡುವರು ಹೊಯಿಲುಗಳ
ಮಗುಚಿ ತುರಗವ ಕಡಿದು ಕಿತ್ತುಭಯ ಕ
ತ್ತಿಗಳಲಿ ಕಡಿದಾಡಿದರು ||೩೫||

ತಾಟಿಸಿ ಮಡದಿ ವಾ[೧][ಘೆಯ][೧]ವನೊತ್ತಿ ತುರಗವ
ದಾಟಿಸಿ ಸರಿಸದೊಳೇಜಿ
ಮೀಟ ಕಡಿವ ತಳಪಿನ ಕತ್ತಿ ಕಿತ್ತು ಸ
ಘಾಟದಿ ಹೊಯಿದಾಡಿದರು ||೩೬||

ಕತ್ತಿ ಕತ್ತಿಗಳು ಮುಜೆಯಲು ಹತ್ತಿರೆ ಸಾರಿ
ಕಿತ್ತು ಕೊಂಡುಡಿಯದ ಸುನಿಯಾ
ಒತ್ತಿ ತಿವಿಯಲೆದೆ ಬದಿ ಹಜಿದು ಕಂಗಲು
ಹೊತ್ತ ಗಾಯದಲುರುಳಿದರು ||೩೭||

ತರಕಸ ಸಿಂಗಾಡಿ ಜವದಾಡೆ ಕತ್ತಿ ಹೊಂ
ಬರಹದದ ಸುನಿ ಭಲ್ಲೆಯವು
ವರ ಜೋಡು ಕೆಡೆಯ ಝುಲ್ಲಿ ಹಕ್ಕರಿಕೆಯ
ಬಿರುದಿನ ರಾವುತರೇಜಿ ||೩೮||

ರಕ್ಕಸರುಜು ಬೇಗೆ ತೆರಳದೆ ದಿವಿಜರು
ಹೊಕ್ಕು ತಿವಿದು ಸಬಳದಲಿ
ಸೊಕ್ಕಿದರೆದೆಯ ಮೇಲಿಕ್ಕಿ ಭಲ್ಲೆಯವ ಕೈ
ಯಿಕ್ಕಿ ಬಾದಣಗೊಜದಂತೆ ||೩೯||

೧–೧ ಗ್ಯವ (ಮೂ)

ಅರೆಘಾಯದಿ ಬೀಳುತೇಳುತೊಯ್ಯನೆ ಹೊಕ್ಕು
ಬೆರಳಿಲಿ ಸುತ್ತಿ ಮುಂದಲೆಯಾ
ಕರದ ಕಠಾರದೊಳಿಜೆದಾಡುತುರುಳಿತು
ಭರದಿ ಕಾಲಾಳು ರಣದಲಿ ॥೨೮॥

ಹಿಂದಕೆ ಸಾಸಾಯೆನುತ ಕಾಲಾಳು ಉ
ಬ್ಬಿಂದ ನಗುತಲಿ ಮೇಲಾಳು
ಮುಂದಕೆ ಕುದುರೆಯ ದುವ್ವಾಳಿಸಿ ಹೋ
ಯೆಂದು ಕಂದವನು ತಟ್ಟಿದರು ॥೨೯॥

ಬೋರ ಕತ್ತಳ ಪಿಂಗಳ ಮಾಣಿಕ ಜನ್ನ
ಚೇರ ಮಾರುತ ಮದನೆಗಳ
ಕೈರ ಮಂಗಳ ಹೊನ್ನ ನಡಗನೆಂದೆನಿಸುವ
ಓರುವಗಳ ನೂಕಿದರು ॥೩೦॥

ಕಿಜಿದಿನೊಳಗೆ ನಡಸಿಯೆಯಡ್ಡತರದಲಿ
ಭರದಿ ದುವ್ವಾಳಿಸುತೊಡನೆ
ನೆರೆವೆಡೆಯದಲಿವೊದದು ಸರಾಗದಿ
ಮೆಱೆದರು ಹಯದತಿ ಒಳರು ॥೩೧॥

ಕಂಗಲು ಜೋಡಿನ ಬಲುರಾವುತರನೆಲ್ಲ
ಸಿಂಗಡಿ ತೆಗದೆಸೆವುತ್ತ
ಶೃಂಗರದೊಡ್ಡನು ತಟ್ಟುಗಿದೆಸೆವರು
ಅಂಗಯಿಸುವರಾರದನು ॥೩೨॥

ಅರರೆ ಭಲರೆ ರಾವುತ ಜಗಜಟ್ಟಿ ನೀ
ತಿರುರೆ ಸರಿಸನಿಲ್ಲೆನುತಾ
ಬೆರಸಿ ಹೊಯ್ದಾಡಲು ಜೋಡು ಕತ್ತರಿಸಿಯೆ
ಬಿರಿಯೆ ತಲೆಯ ಟವುಳಿಗಳು ॥೩೩॥

ಸುತ್ತ ಕಟ್ಟಿದ ಝಲ್ಲಿ ಹೊಳವ ಹೊಂಗಂಟೆಗ
ಳೊತ್ತಿ ಬಿಗಿದ ಹೊನ್ನ ಹೊರಜೆ
ಇತ್ತರದಲಿ ಬೀಸಿದರಂಚೆ ಪಲ್ಲವ
ಸತ್ತಿಗೆ ಮುಸುಕಿತಂಬರವಾ। ।೪೬॥

ಗಜ ಮಾಣಿಕವಾರಣ ಗುಂಡಿಗೆ ರಣ
ವಿಜಯಕದನಸೊಕ್ಕೊಂಬಾ
ನಿಜದವುಡೆಯ ಮಲ್ಲ ಮದಮಾವತಿಗ ಧೀರ
ದಜವೆನಿಪಾನೆಯೆಯ್ದಿದವು ॥೪೭॥

ಸೊಕ್ಕಿದಾನೆಗಳ ಮೋಹರವಱುವತ್ತಾಱು
ಲಕ್ಕ ಘಟೆಯು ಮೇಳೈಸಿ
ಹೊಕ್ಕವು ದವುಡೆಯ ತೂಳುವಱಿಗಳಂತೆ
ದಿಕ್ಕಿನ ಗಿರಿಗಳೆದ್ದಂತೆ ॥೪೮॥

ಕಂಡನಿತ್ತಲಿ ಮದಗಜದುರುವಣೆಯನು
ದ್ದಂಡ ಮುಸುಂಡನೆಂಬಸುರ
ಖಂಡೆಯವನು ಜಡಿದೊಡೆಯನ ಮುಂದೆ ಮುಂ
ಕೊಂಡು ಕಾಳಗಕನುವಾದ ॥೪೯॥

ಓಂದಕೆ ಹೆಱಿಸಾಱು ಜಂಭ ನಿನಗೆ ಸಲ್ಲ
ದಿಂದಿನ ಗಜದ ಕಾಳಗವು
ಬಂದೆನು ದೊರೆಗಳ ಕೈಯ ವೀಳೆಯವಗೊ
ಡೆಂದು ಮುಸುಂಡ ಮಾಱಾಂತ ॥೫೦॥

ಕಟ್ಟಿದ ಕರದ ಪಟ್ಟೆಯದಲಿ ಹೊಯ್ಯಲು
ನಿಟ್ಟೆಲು ತುಂಡಿಸುವಂತೆ
ಕಟ್ಟಿದಿರಿನೊಳವ ತಪ್ಪಿ ಮೇಲೊಳ ಹೊಗೆ
ಮೆಟ್ಟಿದವಾನೆ ಕಾಲ್ಗಳಲಿ ॥೫೧॥

ಏಜೆತು ಮತ್ತೆ ಮೂದಲಿಸಿ ಗಂಧರ್ವರು
ನೂಱೊಂದರ್ಭುದ ರಾವುತರು
ಮೀಱೆತು ಕೆಂಧೂಳ ಸೂರ್ಯಮಂಡಲವನು
ತೋಱೆತು ಕತ್ತಿಯ ಬೆಳಗು ॥೪೦॥

ನೋಡುನೋಡಸುರೇಂದ್ರ ನೀನೀ ಕುಬೇರನ
ಕೂಡಿದಶ್ವಗಳೊಗ್ಗುಗಳ
ಗಾಢವ ಮುಱೆವೆನೆಂದಿಳಿದ ರಥವನು ಕೈ
ಮಾಡಿದ ಜಂಭನೆಂಬಸುರಾ ॥೪೧॥

ಬಿಲ್ಲನೊಕ್ಕೈಗೊಂಡು ದನುಜ ಕಠಾರದಿ
ನಿಲ್ಲದೊಂದೊಂದು ಗಾಯವನು
ಘಲ್ಲಿಸಿ ತಿವಿದನುಗ್ಗಡದ ರಾವುತರನು
ಡೊಳ್ಳು ಮೇಲಾಗಿ ಕೆಡದರು ॥೪೨॥

ಚುಚ್ಚಿದ ಗಾಯಕೆ ಬೆಚ್ಚಿ ಕುದುರೆಗಳು
ಬಿಚ್ಚಿ ಬೀಸಾಟಿ ರಾವುತರಾ
ಪುಚ್ಚವ ನೆಗಹಿ ನಿಚ್ಚಳವಾಗಿ ತಮತಮ
ಗಚ್ಚರಿಯಲಿ ಓಡಿದವು ॥೪೩॥

ಹರಿದು ಹಕ್ಕರಿಕೆ ಹಲ್ಲಣ ಬಲು ಕಡಿ ಸೀಳಿ
ಖುರನಾಲ್ಕು ಮೇಲಾಗಿ ಕೆಡದು
ಹರಿದವು ಹರಿಗಳು ರಣದಿ ರಕ್ತದ ಕೋಡಿ
ವರಿದುದು ಹೆಣನೆಸದಾಡೆ ॥೪೪॥

ಕೊಂದನು ನೂರೊಂದು ಕೋಟಿ ತುರಗವ ತಾ
ನೊಂದು ನಿಮಿಷ ಮಾತ್ರದಲಿ
ಓಂದಣೆಂದುಱುಬಿತು ಗಜದ ದಳವು ದೇ
ವೇಂದ್ರನ ಬೆರಳ ಸನ್ನೆಯಲಿ ॥೪೫॥

ಮುಗ್ಗುವ ರಥಿಕರನೀಕ್ಷಿಸಿ ದೊರೆಗಳೊ
ಳಗ್ಗದ ಕಮಲಲೋಚನನು
ಹೆಗ್ಗಾಳೆಯನೂದಿಸಿ ಕೊಳುತಿದಿರಾದ
ಸ್ವರ್ಗದವರ ಮೂದಲಿಸಿ ॥೫೮॥

ಕಮಲಲೋಚನನುರವಣೆ[ಯ]ನೀಕ್ಷಿಸಿ ಮುನಿ
ದಮರರು ಹದಿನಾಜು ಕ್ಷೋಣಿ
ಸಮರಥದವರು ಬಿಲ್ವಿಡಿದೆಚ್ಚು ಹೂಳಿದ
ರಮಮ ಸಮರದೊಳಸುರರಾ ॥೫೯॥

ನಗುತಲೊಡನೆ ಸುರರೆಚ್ಚಂಬ ತಜಿದೊಟ್ಟಿ
ಮಿಗೆ ಮಾಯಾರೂಪನು ತಾಳಿ
ಜಗದೊಳಚ್ಚರಿಯದ ಕೊಲೆಯ ಕೊಲ್ಲುವೆನೆಂದು
ವಿಗಡ ದಾನವನನುವಾದ ॥೬೦॥

ಹೆಬ್ಬುಲಿಯಾಗಿ ಹೆಬ್ಬಾವಾಗಿ ತುಡುಕಿದ
ಹೆಬ್ಬೆಟ್ಟವಾಗಿ ಹೊರಳಿದ
ಕರ್ಬೊಗೆಯಾಗಿ ಕವಿದನೊಂದೆಸೆಯಲಿ
ಬೊಬ್ಬಿಜಿದನು ಸಿಡಿಲಾಗಿ ॥೬೧॥

ಶರಭನಂತೊದೆದ ಶಾರ್ದೂಲನಂತೆಜಿಗಿದ
ಪಜಿದನುರಿವ ಕಿಚ್ಚಿನಂತೆ
ಹರಿಯಂತೆ ಎಜಿಗಿದನುರಗನಂತೂರಿದ
ಅರದನು ಗಿರಿಗಳಂದದಲಿ ॥೬೨॥

ಕಜಿದನು ಕಲ್ಪಾಂತಜಿದ ಹೆಮ್ಮಳೆಯಾಗಿ
ಮುಜಿದು ಮೋದಿದ ಭೂತವಾಗಿ
ನೆಜಿ ಕಚ್ಚಿ ಪಜಿದನು ಗಂಡಭೇರುಂಡನಂ
ತೊಜಿಗಿಸಿದನು ನಿದ್ರೆಯಾಗಿ ॥೬೩॥

ಸೆಳದು ತೋಳ್ಗಳನು ಕೋಡುಗಳಿಂದಲಿಜಿದೆತ್ತಿ
ತುಳಿದು ಹಿಂಗಾಲೊಳಗೊದಿಯೆ
ಖಳನದ ತಪ್ಪಿ ಮೇಲ್ವರಿದು ಗರ್ಜಿಸಿದನು
ಕಲಿ ಸಿಂಹವಾಗಿ ರಣದಲಿ ॥೫೨॥

ಸೊಂಡಿಲ ನೆಗಹಿ ತೂ[೧][ಗಾ][೧]ಡುತ ಕಿವಿಯನು
ಮಂಡಿಸಿ ಜೊಲ್ಲ ಬಿಡುತಲಿ
ಹಿಂಡೊಡದವು ಸಿಂಹನಾದವ ಕೇಳಿ ಮು
ಸುಂಡ ಹೊಕ್ಕೊಡನೆ ತಜಿದನು ॥೫೩॥

ಕಿತ್ತು ಹೆಗ್ಗೊಂಬು ಸೊಂಡಿಲನು ಕೃಪಾಣದಿ
ಕತ್ತರಿಸುತ ಜಿಗಿದೆದ್ದು
ನೆತ್ತಿಯನೊತ್ತಿ ಮೆಟ್ಟಲು ರಕ್ತ ರಂಜಿಸೆ
ಮುತ್ತುಗಳುದುರಿತಲ್ಲಲ್ಲಿ ॥೫೪॥

ಸಜ್ರನೆ ಸೀಳಿ ಮತ್ತೊಂದು ಗಜವನೆತ್ತಿ
ತಿಜ್ರನೆ ತಿಱುಹುತಪ್ಪಳಿಸಿ
ಸುಜ್ರನೆ ಸುಜಿದು ಚಪ್ಪಿಜಿದು ರಕುತವನು
ಡಜ್ರನೆ ತೇಗಿದನಸುರಾ ॥೫೫॥

ಸೊಂಡಿಲು ಹರಿದು ಕೊಂಬೂಜಿ ಮುಂಗಾಲ್ಗಳು
ತುಂಡಿಸಿ ತೊರಳೆ ಚಿಪ್ಪೊಡದು
ಖಂಡಗೆದಜಿ ಘೀಳಿಟ್ಟು ಜೋದರುಗೂಡಿ
ದಿಂಡುರುಳಿದವಾನೆಗಳು ॥೫೬॥

ನೂಕಿತು ಹದಿನಾಱು ಕ್ಷೋಣಿ ರಥವು ಮತ್ತೆ
ನಾಕಧರನನಾಜ್ಞೆಯಲಿ
ಆಕವಾಳರು ಕೋಲ ಹೊದೆಗಳ ಜೋಡಿಸಿ
ತಾಕಿದರಸುರ ಬಲವನು ॥೫೭॥

೧-೧ ಗೆ(ಮೂ)

ಅಳ್ಳಿದೆಯಮರರೊಳ್ಳೆಗಳ್[೧] ಹೊಯ್ ಹೊಯ್‌ಯೆಂದು
ಬಿಲ್ಲಿ ತುಡುಕಿದ ದೇವೇಂದ್ರಾ
ನಿಲ್ಲದೆ ಪಂದೇರನಡ್ಡಹಾಯಿಸಿದನು
ಚೆಲ್ಲಿದ ಬಲವ ಸಂತೈಸಿ ॥೭೦॥

ದೊರೆಯಾಂತು ಕೊಂಡನು ಮುಱಿದ ಹುಯ್ಯಲ ನೋಡ
ದಿರಿ ಹೋ ಹೋ ನಿಲ್ಲಿ ನಿಲ್ಲೆನುತಾ
ತಿರುಗಿತು ದೇವ ಬಲವ್ರು ಕೈದುವನಾಂತು
ಮೊರೆವ ವಾದ್ಯದ ರಭಸದಲಿ ॥೭೧॥

ಹತ್ತುಸಾವಿರ ವಾಜಿ ಹೂಡಿದ ಹೊಂದೇರ
ನತ್ಯಂತ ಕೈಚಳಕದಲಿ
ಒತ್ತಿ ವಾಘೆಗಳಾಂತು ಸಾರಥಿ ಚಪ್ಪಳಿ[೨][ಸೆ][೨]
ಹತ್ತಿದವಶ್ವ ಗಗನವಾ ॥೭೨॥

ಚೂಣಿಯ ಬಲವನು ತುಳುಸಿದ ಕುದುರೆಲಿ
ಬಾಣದ ಮಳೆಗಱದಿಂದ್ರಾ
ಗೋಣ ತಱಿದು ಹತ್ತು ಸಾವಿರ ದೈತ್ಯರ
ಕಾಣಿಸಿದನು ಯಮಪುರವಾ ॥೭೩॥

ಉಬುಬಿತು ತೆತ್ತೀಸಕೋಟಿ ಸುರರು ತಮ್ಮ
ಎಱೆಯನ ಕೂಡೆ ಬೊಬ್ಬಿಱಿದು
ಮುಱಿಯಲಿಕ್ಕುತ ದೈತ್ಯರ ದೊರೆಗಳ ಮೇಲೆ
ನೆಱೆ ಕೆಡಹಿದರು ಹುಯ್ಯಲನು ॥೭೪॥

ಹುಲುದಿವಿಜರಿಗೀಸು ಬಲುವಾಯಿತೆಯೆಂದು
ಮುಳಿದೇಳೆ ತಾರಕಾತ್ಮಜರು
ಸಲೆ ತಿದಿಯೂದುಗಿಚ್ಚಿಲಿ ಕಾದ ಕಬ್ಬುಕ್ಕಿ
ನೊಲು ಕೆಂಪಾದವು ವದನಾ ॥೭೫॥

---

೧ ರ(ಮೂ) ೨-೨ ಸಲು(ಮೂ)

ಹೆಚ್ಚನಿಱಿದನು ಕೊಚ್ಚಿದನು ತೊಗಟನುಚ್ಚಿ
ಬಿಚ್ಚಿ ಬೀಸಾಟಿ ಕರುಳುಗಳ
ನುಚ್ಚುಗುಟ್ಟಿದ ಹೆಚ್ಚಿನ ದೇವನಿಕರವ
ಕೆಚ್ಚೆದೆಯಾದ ದಾನವನು ||೬೪||

ತಱಗೆಲೆಗಳ ಬಣಬೆಯನು ದಾವನಲನು
ಉಱುಬಿ ಸುಡುವ ತೆಱನಂತೆ
ಮುಱಿಯಲಿಱಿದನಾಕ್ಷಣ ಶಿವನೆಡೆಗಳಿ
ಗಱಿಯಟ್ಟಿದನಮರರನು ||೬೫||

ಚೆಲ್ಲಿತು ಗರುಡ ಗಂಧರ್ವರು ನಿಂದಲ್ಲಿ
ನಿಲ್ಲದೋಡಿದರು ಗುಹ್ಯಕರು
ಬಿಲ್ಲ ಬೀಸಾಟಿಯೆ ಸಿದ್ಧವಿದ್ಯಾಧರ
ರೊಲ್ಲೆವು ರಣವನೆಂದೆನುತಾ ||೬೬||

ಸಾರಥಿ ಮಡಿದಚ್ಚು ಮುಱುದುವೋರುವನೊಂದು
ತೇರಿನ ಗಾಲಿ ನುಗ್ಗಾಗಿ
ಸೋರುವ ಮೈಯ ರಕ್ತದೊಳರೆ ಮಾಯದಿ
ಭಾರಿ ರಥಿಕರೋಡಿದರು ||೬೭||

ಕೊಯಿ ಕೊಯಿ ಜೋಡು ಹಕ್ಕರಿಕೆ ಟೈಕ್ಕೆಯಗಳ
ಹಾಯಿಕಿ ಸಾಯಬೇಡೆನುತ
ಆಯುಧವನು ಬೀಸಾಟಿ ಚತುರ್ಬಲ
ಹಾಯ್ದರು ಕಂಡಕಡೆಯಲಿ ||೬೮||

ಬಿಟ್ಟಿಯಾಳಾಗಿರದಸುರರೊಡನೆ ಕಾದಿ
ಕೆಟ್ಟೆವು ನಾವುಯೆಂದೆನುತಾ
ಬಿಟ್ಟ ಮಂಡೆಯಲೋಡುವ ದೇವತೆಗಳ
ನೆಟ್ಟನೆ ಕಂಡನಾ ಸುರಪಾ ||೬೯||

ಗಾಜುಗೆಡೆಯದಿರು ಬಿನುಗು ದನುಜ ಕೈ
ದೋಜು ನಿನ್ನಂಬನೆಂದೆನುತಾ
ನೂಜು ಕಣೆಯೊಳಜೆ ಸರವ ತಜೆದು ನಾ
ನೂಜು ಬಾಣದಲೆಚ್ಚನಿಂದ್ರಾ ॥೮೨॥

ಎಲವೊ ಗಿರಿಗಳ ಪಕ್ಕವನು ತಜೆದ ತೋಳ
ಬಲುವಹುದಿದು ತಪ್ಪಲ್ಲಾ
ಮಲತು ನಿಂದರೆ ತಲೆಗಡಿವೆನೆನುತ ಖಳ
ತುಳುಕಿದನಂಬಿನಂಬುಧಿಯಾ ॥೮೩॥

ಕಪಟದಿ ಬ್ರಹ್ಮನನೊಲಿಸಿ ಗಗನದಲಿ
ತ್ರಿಪುರವ ಪಡದ ಕೊಬ್ಬುಗಳೆ
ಅಪಹರಿಸುವೆನೆನುತೆಚ್ಚನಾ ಪುರಹೂತ
ಉಪಮಿಸಲಜೆಯೆನಾ ಸರಳಾ ॥೮೪॥

ಅಂಬಂಬನೀದುದೊ ಅಂಬಿನಂಬುಧಿಯೊ ಮೇ
ಣಂಬರದಲಿ ಸಂಭ್ರಮಿಸಿತೊ
ಅಂಬಂಬುಜ ಮಿತ್ರ ಬಿಂಬವ ತುಂಬಿತಂ
ಡಂಬರವಾಯಿತವರೆಸುಗೆ ॥೮೫॥

ಕಡಿದಂಬುಗಳನುವನುವ ಕಂಡು ದನುಜನು
ಬಿಡದೆ ರಜನಿಯ ಬಾಣದಲಿ
ಕೆಡೆ ಕೆಡೆಯೆನುತೆಸೆ ಹಗಲುಗತ್ತಲೆಯಾಗೆ
ನಡುಗಿದುದಖಿಳ ಬ್ರಹ್ಮಾಂಡಾ ॥೮೬॥

ಬೆದಱಿದಿರಮರಗಣಗಳು ಹೋ ಹೋಯೆಂದು
ಕದನ ಪ್ರಚಂಡ ದೇವೇಂದ್ರಾ
ಕದುಬಿ ರವಿಯ ಬಾಣದಲೆಸೆ[ಯೆ] ಕತ್ತಲೆ
ಹೊದಱೊಡದುದು ನಿಮಿಷದಲಿ ॥೮೭॥

ಅಮೃತ ಮಥನದೊಳೊಗ[೧]ದ ವಿಷವೊ ಮೇಣು
ತಮವೆ ತಾನೊಂದು ರೂಪಾಯ್ತೊ
ಅಮರರ್ವೈರಿಗಳ ಮೈಗಪ್ಪ ಬಣ್ಣಿಪರಾರು
ಸಮರಕೆ ನಡೆತಂದರವರು ॥೮೬॥

ಪ್ರಳಯುದ ಶತಕೋಟಿ ಸಿಡಿಲು ಮೊಳಗಿದಂತೆ
ಖಳರು ಮೂವರು ಘರ್ಜಿಸಲು
ನೆಲಸಾಗ ಸೀಳ್ದು ನಾಲ್ದೆಸೆಗಳು ಬೆಚ್ಚಿತು
ಕುಲಗಿರಿಗಳು ಪೋಳಾದವು ॥೮೭॥

ಚೀಟಿ ರಕ್ಕಸರು ಬೊಬ್ಬಿಡೆ ದಿವಿಜರ ಪಡೆ
ಹಾಜಿಹೋಯಿತು ದೆಸೆದೆಸೆಗೆ
ಮಾಜಾನುವರಾರಿನ್ನವರಿದಿರಿಗೆ ಮೈ
ದೋಱುತೊಬ್ಬನೆ ನಿಂದನಿಂದ್ರಾ ॥೮೮॥

ಕೋದಂಡವ ಜೇವೊಡದು ವಿದ್ಯುನ್ಮಾಲಿ
ಸೇದಿದ ಸರಳ ಕೆಂಗರಿಯಾ
ಮೂದಲಿಸುತ ಸುರಬಲವ ತಱುಬಿದನು
ಮಾದೇವನು ಬೆಱಗಾಗೆ ॥೮೯॥

ಇತ್ತಿತ್ತಲಿದಿರಾಗು ದೈತ್ಯ ನೀ ಹೋಪರೆ
ಹೆತ್ತ ತಾಯುದರಪಿಂಬಿಲ್ಲಾ
ಮೃತ್ಯು ನಿನಗೆ ನಾನೆನುತ ಬಿಲ್ವಿಡಿದು ತೊಂ
ಬತ್ತು ಬಾಣದಲೆಚ್ಚನಿಂದ್ರಾ ॥೯೦॥

ಕೊಚ್ಚಿದನೆಡೆಯೊಳು ಸರಳ ವಿದ್ಯುನ್ಮಾಲಿ
ಮೆಚ್ಚಿದನೆಲವೊ ದೇವೇಂದ್ರಾ
ಬೆಚ್ಚದಸ್ನಿದಿರೊಳು ನಿಂದೆ ಸಾಲದೆಯೆನು
ತೆಚ್ಚನೈವತ್ತು ಬಾಣದಲಿ ॥೯೧॥

೧+ಳ(ಮೂ)

ಪತ್ತು ಸಾವಿರ ವಾಜಿ ಸಾರಥಿ ಧನುವನ್ನೈ
ವತ್ತು ಬಾಣದಿ ಕೆಡೆಯೆನಲು
ಮತ್ತೆ ಗಜವನೇಜೆ ದೇವೇಂದ್ರನಿದಿರಾದ
ಕಿತ್ತು ಜಡಿವುತೊಜ್ರಾಯುಧವಾ ॥೯೪॥

ಕೊಲ್ಲದುಳುಹಿದರಾನೆಯನೇಜೆ ಬಂದೆ ನಿ
ನ್ನಲ್ಲಿ ತಪ್ಪಿಲ್ಲವೆಂದೆನುತಾ
ಬಿಲ್ಲ ಜೇವಡೆಗೈದು ಶರವೈಯ್ದರಲಿ ದೇವ
ನೊಲ್ಲಭನೆದೆಯ ಕೀಲಿಸಿದಾ ॥೯೫॥

ಗಾಯವಡದು ರಕುತವ ಕಾರುತೋಡಿದ
ಆಯುಧವನು ಬೀಸಾಟಿಂದ್ರಾ
ಮಾಯಾವೇಷಿಗಳು ತನ್ನಯ ಬಿಳಿಯಾನೆಯ
ಹಾಯಿದು ಓಡಿಯೆ ರಣದಲಿ ॥೯೬॥

ಸುರಪನೊಬ್ಬನೆ ನಿಂದು ಕಾದುವದನು ಕಂಡು
ಧುರದೊಳು ದಿಕ್ಕುಪಾಲಕರು
ವರಕೊಂತ ಪಾಸವ ಪಿಡಿದೆಂಟು ದಿಕ್ಕಿನೊ
ಳುರವಣಿಸಿತು ಬೊಬ್ಬಿಡಿದು ॥೯೭॥

ದೊರೆಯ ದುಗುಡವನು ಕಂಡುರವಣಿಸಿತು
ಪರಿಬವೆನಗೆ ತನಗೆನುತಾ
ಉರಿಪೊಗೆಯನು ತೋಱುತಗ್ನಿ ನಡಿಯೆ ಮುಂದೆ
ಮರುತ ಬೆಂಬಲವಾಗಿ ಕವಿದಾ ॥೯೮॥

ರಕ್ಕಸನಸುವ ಸೇದುವೆನೆನುತೆಮನೊಳ
ಪೊಕ್ಕ ನೈಋತ್ಯನೊಡಗೂಡಿ
ಮಿಕ್ಕಿನ ವರುಣ ಕುಬೇ೧[ರ ಈ]೧ಶಾನ್ಯರು
ಲೆಕ್ಕಿಸದುಱುಬಿತೊಂದೆಸೆಯಾ ॥೯೯॥

೧-೧ ರೀ(ಮೂ)

ಆವ ಚಳಕದೆಸುಗೆಯೋ ಕಾಣಿಸಿಕೊಳ್ಳ
ದಾವ ಬಿಲ್ಲಾಳೊ ದಾನವನು
ಹಾವಿನ ಬಾಣದಿ ಹೆಡಗುಡೆಯನು ಕಟ್ಟಿ
ದೇವತೆಗಳನೊಱಲಿಸಿದಾ ॥೮೮॥

ಅರರೆ ನೀ ಬಲುಗೈಯನಹುದೆಂದು ಸುರಪತಿ
ಹರುಷದಿ ಕೈಚಳಕದಲಿ
ಗರುಡಸ್ತ್ರದಲೆಸೆ[ಯೆ] ಹಾವುವೊಂದೊಂದಕೆ
ಎರಡು ಹಾವಾಗಿ ನುಂಗಿದವು ॥೮೯॥

ಕಂಡು ಬಲ್ಲೆನು ಸುರಪತಿ ನಿನ್ನನುವನು
ಗುಂಡಿಗೆತನದ ಸತ್ವವನು
ಕೆಂಡದ ಮಳೆಯ ಸರದಲೆಸೆಯಲು ಭೂ
ಮಂಡಲ ಗದಗಂಪಿಸಿತು ॥೯೦॥

ಇಱಿಯದೆ ಗಱುವವ ಮೆಱವನೆ ಜಗಭಂಡ
ಹೊಱಿಗೆಗೆ ನೀ ನಿಲ್ಲೆಯೆನುತಾ
ತಱಿದನು ಜಲಸರದಲಿ ಸುರಪತಿಯಾಗ
ತುಱುಗಿದುರಿಯ ಬಾಣವನು ॥೯೧॥

ಕೆಂಗಱಿಗಳ ಮೇಲೆ ಹೊಂಬರಹದ ಮಿಂಚು
ಪಿಂಗದೆ ಬಲು ರವ ಮೊಳಗು
ಮುಂಗುಡಿಯಂಬಿನ ಸೋನೆಯಂತೆಸೆದುದು
ಮುಂಗಾರ ಸಿಡಿಲಂತೆ ಸಮರಾ ॥೯೨॥

ಸುರಪನನಿನಿತು ಕೊಂಡಾಡೆ ನಗುವರು ಮು
ಪ್ಪುರದ ಸೂಳೆಯರೆಮ್ಮನೆನುತಾ
ಪಿರಿದು ಕೋಪದಲಿ ವಿದ್ಯುನ್ಮಾಲಿ ನೆಱಿ ದಿವ್ಯ
ಸರಳನಾರ್ಯೆದು ಹೂಡಿದನು ॥೯೩॥

ಕಾಲನವನ ಕಂಡಗ್ನಿಯ ಮಱಗೊಂಡು
ಶೂಲಿಯ ಹೊರೆಗೋಡಿದನು
ಕಾಲುವಿಡಿದು ಬ್ರಹ್ಮಾಂಡಕಿಟ್ಟನು ಬಲು
ಘಾಲಿಯನೆರಳೆಯು ಸಹಿತಾ ॥೧೦೬॥

ಕುಱುಹ ಕಂಡರೆ ಹಿಂದನು ಬಿಡರೆಂದಗ್ನಿ
ಕುಜೆಯನಿಳಿದು ಜಾಣ್ಮೆಯಲಿ
ತುಱುಗಿದ ಕಿಡಿಗಳನಾಜಿಸಿ ಮಂದಿಯ
ಮಱೆಯಲೋಡಿದನು ಪಾವಕನು ॥೧೦೭॥

ನರುತಿಯನೆಮ ನಿನ್ನಿಂದವೆ ಮುನ್ನಲೋಡಿದ
ವರುಣನದಕೆ ಮುನ್ನ ಸರಿದ
ತುರಗವ ಹೆಸರಿಡಬೇಕು ಕುಬೇರನು
ಹರನೆಡೆಗದು ಸಾಗಿಸಿತು ॥೧೦೮॥

ಎಱಗಲು ಉಱುತರ ಸಾಳುವ ರಭಸಕೆ
ಕಿಱುವಕ್ಕಿ ಬೆದಱುವಂದದಲಿ
ಸಜೆಗ ರಕ್ಕಸರೈದಿದ ಕಾಲ್ವೇಗಕೆ
ನೆಱೆ ಹಮ್ಮೈಸಿತು ಸುರರು ॥೧೦೯॥

ಹೊಕ್ಕನೊಂದೆಸೆ ತಾರಕಾಕ್ಷ ಮತ್ತೊಂದೆಸೆ
ಥಕ್ಕಡ ಕಮಲಲೋಚನನು
ಲೆಕ್ಕಿಸದುಳಿದ ಭಟರುಗಳ ತಜೆದೊಟ್ಟಿ
ಒಕ್ಕಲಾಡಿದರು ಬೇಸಱದೆ ॥೧೧೦॥

ಸಿಕ್ಕಿದಿರಿನ್ನಾವ ದಿಕ್ಕಿಗೋಡುವಿರೆಂದು
ರಕ್ಕಸ ಘರ್ಜಿಸೆ ಸುರರು
ದೊಕ್ಕನೆ ಕಾಲ್ಗೆಱಗಿಯೆ ನಿಮ್ಮ ಹೆಸರನು
ಇಕ್ಕುವೆನೆಂದೊದಜೆದರು ॥೧೧೧॥

ಪುಲಿಯ ಮೀಸೆಯ ನರಿಯುಯ್ಯಾಲಾಡುವವೊಲು
ಮಲತರು ದಿವಿಜರೆಮ್ಮೊಡನೆ
ತಲೆಯ ಚೆಂಡಾಡುವೆನೆನುತ ವಿದ್ಯುನ್ಮಾಲಿ
ಬಲುಬಿಲ್ಲ ಮಾತಾಡಿಸಿದನು ॥೧೦೦॥

ಸೆಳದು ಕೂರಂಬನು ಕರ್ಣಪೂರಿತವಾಗಿ
ಜಿಲದೆಗದಸುರನಿಂದಿರಲು
ಗಿಳಿಗಳು ಗಿಡುಗನ ಬನವ ಹೊಗದವೊಲು
ವಲದರು ಹಿಂದಕಡಿಗಳಾ ॥೧೦೧॥

ಉಱುಬಿ ಕವಿವದೊದ್ದೆ ಸುರರಿಗೆ ಹಿಂದಕೆ
ಹೆಱ್ಸಾಜೆ ಸದರವಾದಂತೆ
ತೆಱಹುಗೊಟ್ಟೊಳಪೊಕ್ಕು ಸದೆದನಸುರಪತಿ
ಬಱಸಿಡಿಲೆಱಗಿದಂದದಲಿ ॥೧೦೨॥

ಮೂಱುಕಣೆಯೊಳನಲನನೆಮರಾಜನ
ನೂಱು ಮಾರ್ಗಣದಿ ಮಾರುತನ
ನೂಱು ಬಾಣದಿ ಮಿಕ್ಕ ದಿಗುಪಾಲರೆದೆಯನು
ಸೂಱು ಬಾಣದಿ ಡೋರುಗಳೆದ ॥೧೦೩॥

ಎರಳೆವಿಂಡನು ಒಂದು ಹೆಬ್ಬುಲಿ ತಾ ಬಂದು
ಭರದಿಂದ ಬೆದಱಿಸುವಂತೆ
ಸುರಬಲವನು ತಾರಕಸುರನಟ್ಟಿದ
ಹರಿಗೆಯಡ್ಡಾಯುಧಪಿಡಿದು ॥೧೦೪॥

ಓಡಿಯ ಪಿಡಿಯಲೋಡಿತು ನವಬ್ರಹ್ಮರು
ವಡಮುಱಿದಿಳಿದು ರಥವನು
ಪಿಡಿದು ಚೆಲ್ಲಿತು ಕಿನ್ನರರು ಕಿಂಪುರುಷರು
ಮೃಡನೆಡೆ ಯಾವುದೆಂದನುತಾ ॥೧೦೫॥

ಜಗದೊಡೆಯನು ಬೆನ್ನೊಳಗೆಯಿದನೆ ಹೋ ಹೋ
ತೆಗದೋಡದಿರಿ ನಿಲ್ಲೆನುತ
ನಗುತ ನಂದೀಶನು ಸುರರಿಗಭಯನಿತ್ತು
ತೆಗದನಸುರರುರವಣೆಯ ॥೧೧೮॥

ಬರಹೇಳು ಶಾಕಿನಿ ಡಾಕಿನಿಯರ ಪೊಟ್ಟೆ
ಬಿರಿಯಲೆಜವೆ ರಕುತವನು
ನರಿ ಹದ್ದು ಕಾಗಿಗೌತಳವ ಮಾಡುವೆನೆಂದು
ಮರುಳು ತಂಡವ ಕೂಡಿ ನಡದ ॥೧೧೯॥

ಒದಜೆ[ದ]ವಖಿಳ ಕಪಾಳೆ ತಂಬಟಗಳು
ಸದೆಯಲದುರೆ ಬ್ರಹ್ಮಾಂಡಾ
ಕದುಬಿ ನಡಿಯೆ ಮರುಳಿನ ತಂಡ ಕೆಂಧೂಳ
ವದವಿ ಮುಸುಕಿತಂಬರವ ॥೧೨೦॥

ಜವನ ನೆರಪಿಯೊ ವಿಷದ ಹೊರಳಿಯೊ ಮೇಣು
ಭುವನವನಳಿವ ಶರಧಿಯೊ
ರವಿಯ ಮೊಗ್ಗರವೊ ಸಿಡಿಲಿನುರವಣೆಯೊ ತಾ
ಶಿವನಾಳುಗಳೊದಗಿದರು ॥೧೨೧॥

ಇವನೀಗ ಚೆನ್ನಬಸವನೆಂಬಾತನು
ದಿವಿಜರ ಬಲಕೆ ತೆತ್ತಿಗನು
ಇವನೀಗ ರಕ್ಕಸ ಕೋಳಾಪಳೆನುತಲಿ
ತವಕಿಸಿ ಕಾಳ್ಗೊದಜೆದವು ॥೧೨೨॥

ನಂದಿಕೇಶ್ವರನುರವಣೆಗಂಡು ಮುಜೆದುದು
ಮುಂದಣ ಚೂಣಿಯ ಖಳರು
ಸಂದಣಿಸಿ ಹಿಂದಣ ಸೇನೆ ಕೋಯೆಂ
ದೊಂದು ಲಗ್ಗೆಯಲೇಜೆದರು ॥೧೨೩॥

ನೋಡಬಂದೆವು ನೋಟಕ ಜನವೆಂದರು
ಪಾಡುವ ಗಾನರು ನಾವು
ಆಡಬಲ್ಲೆವು ಭೃಂಗಿನಾಂಟ್ಯವ ನಾವೆಂದು
ಆಡಿ ಸುರರು ನಗಿಸಿದರು ॥೧೧೨॥

ಬಿಡುವೆವು ವಿದ್ಯಾ ವಸ್ತುಗಳಾದರೆ
ಒಡಿವೆವು ನಿಮ್ಮಾಟಗಳ
ಕಡೆತನಕದ ನೋಡಿಯೆನಲು ಹರಣವನು
ಒಡಿಯಾಳುಗಳ ಮಾಡಿದರು ॥೧೧೩॥

ಕೆಲಬರು ಬಿದ್ದುಯೆದ್ದಾಡಿತುವಾಗಲು
ಕೆಲಬರು ಕೈಚಪ್ಪಳೆಯಲಿ
ಕೆಲಬರು ನಾಂಟ್ಯ ಜಕ್ಕಡಿಗಳ ಪಾಡುತ
ಕೆಲಕೆಲರಾಡಿ ತೋಱಿದರು ॥೧೧೪॥

ಒಡಲೊಡವಂದದಲಸುರರು ನಗುತಲಿ
ಒಡಿಯಾಳುಗಳನು ಬಿಟ್ಟು
ಕಡಿತಲೆ ಪರಿಗೆಯಭ್ಯಾಸದೊಳಗೆಯವ
ರಡಿಯಿಟ್ಟರು ರಣದೊಳಗೆ ॥೧೧೫॥

ತಗರು ಕೋಣನು ಮನುಜನು ನೆಗಳೆರಳೆ ತು
ರಗವೆತ್ತೆನಿಪ ವಾಹನದಾ
ದಿಗುಪಾಲಕರು ಗಾಯವಡದು ಬಿಟ್ಟೋಡಿದ
ರಗಜಾಧಿಪತಿಯಿದ್ದೆಡೆಗೆ ॥೧೧೬॥

ಮೊಱೆಯಿಡುತಾ ಬಲ ಕೆಱೆಯೊಡವಂದದಿ
ಮುಱಿದೋಡಿ ಬರೆ ಶಿವನೆಡೆಗೆ
ಕಱೆಕಂಠನಿದಿರೊಳಗಿರ್ದ ದ್ವಿತೀಯಶಂಭು
ಮೆಱವ ವೃಷಭ ಕಂಡನದನು ॥೧೧೭॥

ಹೆಚ್ಚಿದ ಮೇಘದ ಮಱೆಯೊಳು ಮರುಳುಗ
ಳೆಚ್ಚವು ತಿರುಗಿ ರಕ್ಕಸರಾ
ಎಚ್ಚರಲೀಸದೆಯಸುರರ ಬಲವನು
ಹುಚ್ಚುಗೊಲೆಯ ಕೊಂದವಾಗ ॥೧೩೦॥

ಅಂತಕಸುಂತಕ ಕೈಗೆಱಗುವ ಖಗ
ಸಂತತಿಯೋ ಪಾವುಗಳೊ
ತಿಂತಿಣಿಯುರವಣಿಯೋಯೆನೆ ಸರಳಿನ
ಭ್ಯಂತರದೊಳಗೆಚ್ಚರವರು ॥೧೩೧॥

ಅಸುರರೆಚ್ಚಂಬನು ಪಿಡಿದು ಮುಱಿದು ಕೂಡೆ
ಅಸಮಾಕ್ಷನ ಪರಿವಾರ
ಮಸಗಿದ ಮಾರಿಯಂದದಿ ಹೊಕ್ಕು ತಱಿದೊಡ
ನಸುವ ಕಳದವೋವಿದಿರನ ॥೧೩೨॥

ಮರಳಿಸುವಂಬಿನ ಮಳಗಾಲವ ಕಂಡು
ಧುರದೊಳು ಬೆದಱಿ ರಕ್ಕಸರು
ಗಿರಿಗಳ ಕಿತ್ತು ಮಱೆಯ ಮಾಡಿಕೊಂಡರು
ಸಿರವೆತ್ತಿ ನೋಡರು ಮೇಲೆ ॥೧೩೩॥

ಎತ್ತಿದ ಪರ್ವತದಗ್ರವ ದನುಜರ
ನೆತ್ತಿಗೆ ಕೀಲಿಸುವಂತೆ
ತೆತ್ತಿಸಿದರು ವಜ್ರದ ಸರದಲಿ ಮತ್ತೆ
ಚಿತ್ತಜವೈರಿಯ ಭಟರು ॥೧೩೪॥

ಮತ್ತೆ ಹೊಕ್ಕರು ರಾವುತರು ಕತ್ತಿಯ ಕಿತ್ತು
[೧][ಮ][೧]ತ್ತ ಗಜ[೨][ವ][೨] ತುಳಿವುತಲಿ
ಇತ್ತಿತ್ತಲೆನುತ ರಥಿಕರೇಱೆ ಕಾಲಾಳು
ಒತ್ತೊತ್ತೆಯಾಗಿ ಕವಿದರು ॥೧೩೫॥

೧–೧ ಮೊ(ಮೂ) ೨–೨ ವು(ಮೂ)

ಚೂಣಿಯ ಬಿನುಗು ಮುಱಿಯಲು ತೊಂಬತ್ತಾರು
ಕ್ಷೋಣಿ ದೊರೆಗಳೇಱಿ ರಥವಾ
ಹಾಣಹಣಿಯಲೊದಗಿತು ದೆಸೆದಿಕ್ಕನು
ಕಾಣೆನುರವಣೆ[ಯ]ದ್ಭುತವಾ ॥೧೨೪॥

ಜಂಭ ಮುಸುಂಡ ಜಂಭಾರಿ ಜಟಾಸುರ
ಶುಂಭ ತ್ರಿಶಂಕ ದುರ್ಮಕ್ಷಾ
ಅಂಬಿಕಾಪತಿಯ ಬಲವನು ತಱುಬಿದರು
ಡಂಬರವೆಸೆವ ವಾದ್ಯದಲಿ ॥೧೨೫॥

ಮಸಣಗಾಡಿನೊಳಿಪ್ಪ ಮರುಳು ಭೂತಕೆ ರಣ
ವ್ಯಸನವು ನಿಮಗೇಕೆಂದು
ಅಸುರರು ಮುನಿದು ಹೆಬ್ಬೆಟ್ಟವ ಕಿತ್ತಿಟ್ಟ
ರುಸುರಲಳವೆ ಪೌರುಷವ ॥೧೨೬॥

ಇಟ್ಟ ಬೆಟ್ಟವ ಕೈಗಳಲಾಂತು ಮರುಳುಗ
ಳಿಟ್ಟವು ಮರಳಿ ರಕ್ಕಸರಾ
ತೊಟ್ಟನವರ ತಾಗಿ ಹಾರಿ ಬಿದ್ದರು ಹೆಣ
ನೊಟ್ಟಿಲಾಯಿತು ಸಮರದಲಿ ॥೧೨೭॥

ಸುರಿದ ಕಳ್ಳನು ತಿಂದ ಭಂಗಿಯ ಸೊಕ್ಕನು
ನೆಱಿ ಕಾಱಿಸುವೆವೆಂದೆನುತ
ಜಱಿದವರಿಟ್ಟ ಬೆಟ್ಟವನೆತ್ತಿಟ್ಟವು
ತುಱುಗಿದ ಮರುಳುತಂಡಗಳು ॥೧೨೮॥

ಕವಲಂಬು ಕಣಗಿಲೆಯಂಬು ಕೋಲುಳಿವಾಯಿ
ನವಬೋಳೆಯು ಮಿಟ್ಟೆಗಳಲಿ
ತವಕದಿ ಬಿಲ್ಲ ಜೇವಡೆಗೆಯಿದೆಚ್ಚರು
ಶಿವನ ಮೆಚ್ಚಿನ ಮರುಳುಗಳ ॥೧೨೯॥

ಕಂಡರಿತ್ತಲಿ ದೈತ್ಯರ ಬಲವನು ಉ
ದ್ದಂಡ ರುದ್ರನ ಪರಿವಾರ
ಖಂಡೆಯಗಳನೆತ್ತಿ ಹೊಯಿದರೋಹಿಲದಿ
ದಿಂಡೆಯ ರಕ್ಕಸರುಗಳ ॥೧೩೬॥

ಒಂದೆಸೆ ಭೂತಗಣಗಳು ಮತ್ತೊಂದೆಸೆ
ನಂದಿಕಾಳನು ಮಹಾಂಕಾಳ
ಒಂದೆಸೆ ಜ್ವಾಲಾಗ್ನಿ ಘಂಟಾಕರ್ಣರು ಹೊಕ್ಕು
ಒಂದೆಸೆಯಲಿ ಸವರಿದರು ॥೧೩೭॥

ಬಿದ್ದುದು ಬೇಹದ ದೈತ್ಯರು ರಣಹೊನ
ಲೆದ್ದುದು ರಕುತ ಭೂಮಿಯಲಿ
ದೊದ್ದೆಗರೆಲ್ಲರು ತೆಗದೋಡಿದರು ವೀರ
ರುದ್ರನ ಬಂಟರಬ್ಬರಕೆ ॥೧೩೮॥

ಮುಱಿದೋಡುವ ನಿ[illegible]ಯವನು
ಸೆಱಗುದೋಱಲು ಮಾರಿ ಮೊಗದ
ಸಱಿಗನೆದ್ದನು ಶಿಶುಮಾರನು ಸಿಡಿಲಿನ
ಸೆಱೆಯ ಬಿಟ್ಟಂತೆ ಬೊಬ್ಬಿಱಿದ ॥೧೩೯॥

ತಾರಕಸುತರ ಮೈದುನ ಶಿಶುಮಾರನು
ಧೀರನೆಂಬತುಳ ದಾನವನು
ಈರೇಳು ಲೋಕವ ಮುಱಿದು ನುಂಗುವೆನೆಂ
ದ್ಘಾರಿದನವ ಜಗ ನಡುಗೆ ॥೧೪೦॥

ಮೊಗವಾಱು ಗಾವುದ ಇಗ್ಗಾವುದ ಬಾಯಿ
ಅಗಲ ಹೆಮ್ಮೂಗಿನ ನೀಳ
ಮಿಗೆ ಮೂಗಾವುದ ಉನ್ನತ ದೇಹವ
ಮೊಗಳಲಱಿಯೆ ದಾನವನ ॥೧೪೧॥

ಅಲದವು ದಾಡೆಯ ಬೆಳಗುಗಾಣುತಲಂದು
ಕಳವಳಿಸಿತು ಸುರಕಟಕ
ನೆಲನಾಕಾಶಕೆ ಕೀಲ ಕೊಟ್ಟಂದದಿ
ಚಲದಂಕಮಲ್ಲ ನಿಂದಿರಲು ॥೧೪೨॥

ತಂದು ಸುರಿದರವನೂಟಕೆ ಕೂಳನು
ಮಂದರಗಿರಿಯ ಉದ್ದದಲಿ
ಒಂದು ತುತ್ತನು ಮಾಡಿಯಸುರ ನಿಮಿಷದಲಿ
ತಿಂದು ಡಙ್ರ್ರನೆ ತೇಗುವನು ॥೧೪೩॥

ನೀರಡಿಸಿದರೆ ಮೇಘವನು ಬಗಿದು ಶಿಶು
ಮಾರ ಮುಕ್ಕುಳಿಸುಗುಳಿದರೆ
ಭೋರನೆ ಕಾಱ ಹೆಮ್ಮಳೆಯಂತೆ ಸುರಿಯಲು
ಭೂರಿ ದಿವಿಜರೆಲ್ಲ ನೆನಿಯೆ ॥೧೪೪॥

ಬಿಗಿದುಟ್ಟ ಮಲ್ಲಗಾಸೆಯನುಱ್ ಕಂಡನು
ನಗುತ ಕರ್ಪುರ ವೀಳೆಯವ
ಮೃಗಮದ ಸಾದು ಜವಾದಿಯ ಲೇಪಿಸಿ
ಮಿಗೆ ಮೊಲ್ಲೆ ಮಲ್ಲಿಗೆದುಱುಬಿ ॥೧೪೫॥

ಮಲ್ಲಿಗೆಯರಳೆಂದು ತಾರಾವಳಿಗಳ
ನಲ್ಲಿಗಲ್ಲಿಗೆ ಜಡಿದುಱುಬಿ
ಮೆಲ್ಲನೆ ಪಿಡಿದು ಕನ್ನಡಿಯೆಂದು ನೋಡುವ
ನಲ್ಲಿಯ ರವಿಶಶಿಗಳನು ॥೧೪೬॥

ಬೆರಳಿಲಿ ಬೆಟ್ಟವನಾಣೆಕಲ್ಲಾಡುವ
ತರುಣಿಯರುಗಳೊಡಗೂಡಿ
ಶರಧಿಯನುಱ್ ಜಲಕೇಳಿಗೆ ತುಳುಕುವ
ಸುರರಿಪುಗಿದಿರಹರಾರು ॥೧೪೭॥

ಎರಡು ಕರದಿ ಕಬ್ಬ ಮುಱಿದಡಸುವವೊಲು
ಹರನಾಳುಗಳ ನುಂಗಿದರೆ
ಮರಳಿ ಹೆಮ್ಮೂಗಿಲಿ ಕಿವಿಯ ಲಾಳಗದಲಿ
ಮರುಳುತಂಡಗಳಡಗಿಹವು ॥೧೫೪॥

ಜಡಿಮಳೆಯೊಳು ಮಲೆಯಲಿ ಮದಕರಿಯನು
ತೊಡರುವ ಜಿಗುಳೆಯಂದದಲಿ
ಯಡಬಲದಲಿ ಭೂತಗಣವು ಬೊಬ್ಬಿಡುವಾಗ
ಕಡಿದನು ಕರದ ಖಡ್ಗದಲಿ ॥೧೫೫॥

ಓಂದು ಮರುಳುಗಳ ನೋಯಿಸಿ ದಿವಿಜರ
ತಂಡವನುಱಿ ಬೆದಱಿಸುತ
ಗಂಡೆದ್ದು ಅಸುರ ರಣದಿ ಪರಿದಾಡಿದ
ಖಂಡೆಯದಲಿ ಕಡಿವುತಲಿ ॥೧೫೬॥

ತೋರದೈತ್ಯನ ಕಂಡು ನಿಂದುದಲ್ಲಿಯದಲ್ಲಿ
ಮಾರಾರಿಯ ಭಟರುಗಳು
ಸಾರತ್ತ ಭೂತಗಣವು ಹಿಂದಕೆಯೆಂದು
ಧೀರವೃಷಭನಿದಿರಾದ ॥೧೫೭॥

ದನುಜನ ಮೊಣಕಾಲುದ್ದವಾಗಿದ್ದವು
ಕನಕಾಚಲ ನೀಲಗಿರಿಯು
ಘನತರದಲಿ ಹೆಚ್ಚಿ ಬೆಳದ ದೈತ್ಯನ ಕಂಡು
ಮನದೊಳಗಿಂತೆಂದ ವೃಷಭ ॥೧೫೮॥

ಯಮಗಿಮ ಅಗ್ನಿ ಗಿಗ್ನಿಯು ನೈರುತ್ಯರ
ಕಮಲ ಮಿತ್ರವ ಗಿತ್ರವರ
ಸಮರದೊಳಿವರ ಲೆಕ್ಕಿಸುವನೆ ಶಿವಯೆಂದು
ವಿಮಲ ಮಗುಟವನು ವಲದಾ ॥೧೫೯॥

ಮೀಸೆಯ ತಿದ್ದುತ ಕೆದಱಿದ ಗಡ್ಡವ
ನೋಸರಿಸುತ ರಿಪು ಬಲವ
ರೋಷದಿ ನೋಡುತಲ್ಲವಡಗಚ್ಚುತಲ
ಭ್ಯಾಸದಿ ಗದೆಯ ತಿಱುಹುತ ॥೧೪೮॥

ಕಟ್ಟಿದುಡಿಯ ಘಂಟೆ ಢಣಢಣರೆನೆ ರವ
ಮುಟ್ಟಿ ದಿವಿಜರ ಕಿವಿಗಳು
ಕೆಟ್ಟೊಂದೆರಡು ಘಳಿಗೆ ಕಿವುಡಾಗಲು
ದಿಟ್ಟ ದನುಜ ನಡೆತಂದಾ ॥೧೪೯॥

ಮಱೆಯೊಕ್ಕಮರರ ಸಂತಯಿಸುತ ನಂದಿ
ಸಱೆಗ ರಕ್ಕಸಗಿದಿರಾದ
ತುಱುಗಿದ ಮರುಳುತಂಡವನು ಹರಿಯಬಿಟ್ಟು
ನೆಱೆ ನೋಡಿದನರ್ತಿಯನು ॥೧೫೦॥

ಮಂದರಗಿರಿಯ ಶಿಖರದ ತುದಿಯ ಖಗ
ವೃಂದವು ನೆಱೆ ರಾಜಿಪಂತೆ
ಸಂದಣಿಸಿತು ದನುಜನ ಮಗುಟದ ಮೇಲೆ
ಅಂದು ಕುಣಿಯೆ ಮರುಳುಗಳು ॥೧೫೧॥

ಹೆಗಲೆರಡನು ಮೆಟ್ಟಿ ಕುಣಿವುತ ಮಗುಟಕೆ
ನೆಗವುತ ವಲವಲದಾಡಿ
ತೆಗವುತ ಕರ್ಣಕುಂಡಲವ ನಲಿದು ಭೂತ
ಮಿಗೆ ನೆಱೆ ಚೇಷ್ಟೆ ಮಾಡುತಲಿ ॥೧೫೨॥

ಜಡೆಯ ಪಿಡಿದುಕೊಂಡುಯ್ಯಾಲೆಯಾಡುತ
ಉಡಿಯ ಘಂಟೆಯನಲುಗಿಸುತಾ
ಜಡಿದು ಮುತ್ತಿನಹಾರವ ಕೀಳುತಲಿರೆ
ದಡಿಗ ರಕ್ಕಸನದನಱಿಯ ॥೧೫೩॥

ಬಾಯ ಬಡುಕುತನ ಬೇಡ ರಕ್ಕಸಗುನ್ನಿ
ಹೊಯ್ದು ತೋರೊಂದು ಗಾಯವನು
ಕಾಯದೊಳಿರ್ದು ನಿನ್ನಸುವ ಹಿಂಡುವೆನೆಂದು
ಮಾಯವೇಷಿಯನುಚಿ ಜಱದ ॥೧೬೬॥

ಅರ್ತಿಗೆ ಕಾರ ಹಬ್ಬವ ಮಾಳ್ಪರಲ್ಲದೆ
ಎತ್ತ ಬಿಡುವರೆ ಕಾಳಗಕೆ
ಹೊತ್ತುಗಳವುತಿರಬೇಡ ಬೇಗದಿ ನಿನ್ನ
ತೆತ್ತಿಗನನು ಕರಸೆಂದಾ ॥೧೬೭॥

ಕಟಕಿಯನಾಡಿದೆ ಜಗದಾದಿ ದೈವವ
ಕುಟಿಲ ರಕ್ಕಸ ರಣದೊಳಗೆ
ಕಟವಾಯನು ಸೀಳದಿರ್ದರೆ ನಾ ನಿನ್ನ
ಜಠರದಿ ಜನಿಸಿದೆನೆಂದಾ ॥೧೬೮॥

ಕಡುಗಲಿ ನಂದಿಕೇಶ್ವರನ ಮೂದಲೆಗಂಡು
ದಡಿಗ ದಾನವ ಕೋಪದಲಿ
ಪಿಡಿದು ಕಿತ್ತನು ಕುಲಗಿರಿವೊಂದನವ ಕೂಡೆ
ಫಡಫಡಯೆನುತಿದಿರಾದ ॥೧೬೯॥

ಎರಡು ಕೈಯಿಂದೆತ್ತಿ ಹೊಯಿದನು ಗಿರಿವೊಂದ
ಬೆರಸಿ ನಂದಿಯ ನಡುಬೆನ್ನ
ಬಿರಿದುದು ಹೆಬ್ಬೆಟ್ಟ ಹದಿನೆಂಟು ಹೋಳಾಗಿ
ವರವೃಷಭನ ರೋಮ ಸೋಂಕಿ ॥೧೭೦॥

ಬಿರಿದುದು ಗಿರಿಯೂರಿ ನೆಗದಂಬರವ ಕೊಂಡು
ಹರಿಯದಿರಲುವೊಂದು ರೋಮ
ಅರರೆ ಪುಸಿದುದು ಗಾಯವುಯೆಂದೆನುತ ಪ
ಲ್ಮೊರವುತ ದನುಜನಂಬರದಿ ॥೧೭೧॥

ಈಸು ಸಾಹಸ ದನುಜರಿಗಿರ್ದ ಕಾರಣ
ಅಸುರರೆಲ್ಲರು ಬೆದಱಿ
ಈಶನ ಮಱೆಯೊಗುವರುಯೆಂದು ತ್ರಿಪುರ ನಿ
ವಾಸಿಗಳನು ಪೊಗಳಿದನು ॥೧೬೦॥

ಕಂಡನಿತ್ತಲಿ ನಂದಿಕೇಶ್ವರ ರಣದೊಳು
ಚಂಡವಿಕ್ರಮ ಶಿಶುಮಾರನ
ಓಂಡುವೆನಿವನಸುವನುಯೆಂದು ಚೀಱೆ ಭೂ
ಮಂಡಲ ಗದಗಂಪಿಸುತ ॥೧೬೧॥

ಬಿಲ್ಲನು ತಾರ್ಕ್ಯೆ ಪಂತವನಾಡಿದ
ಕುಲ್ಲನಿವನ ನಾಲಗೆಯ
ಎಲ್ಲವ ಕೊಯ್ವೆನೆನುತ ನಂದಿಕೇಶ್ವರ
ನಿಲ್ಲದೆ ಗೂರ್ಮಿಸುತಿರಲು ॥೧೬೨॥

ಕರದೊಳು ಪಲಗೆ ಖಂಡೆಯವಿರೆ ಚಾಪವ
ಎರವ ಬೇಡುವರೆ ಬಂಟಗಳು
ಮರುಳು ವೃಷಭ ಕೊರತೆಯ ನುಡಿಗಳನು ನೀ
ನರಿಯದೆ ಮಾತನಾಡುವರೆ ॥೧೬೩॥

ಒಡಲೊಳು ಬೆಟ್ಟದನಿತು ಕೋಪವು ಪು
ಲ್ಲಿಡಿಯೆ ನಿನಗೆ ಬಲುಹಿಲ್ಲಾ
ಬಡನಂದಿ ನಿನ್ನೊಳು ಗೆಲವಿಲ್ಲ ನೆಱೆ ಸೋ
ತಡೆ ಸೋಲಗಳಿಲ್ಲವೆಂದಾ ॥೧೬೪॥

ಮೂದಲಿಸುತ ನಡೆತಂದನಸುರ ಮೇಘ
ನಾದದಿ ಮುಡಿದ ವೃಷಭಗೆ
ಕಾದುವರೆನಗಿದಿರಿಲ್ಲ ರಣಕೆ ಯಮ
ಹಾದೆವನ್ನರಸೆಂದನಸುರಾ ॥೧೬೫॥

ಬಲ್ಲವರಿಗೆ ನೆಱೆ ಪುಲ್ಲೆ ಕೈದುಗ
ಳಲ್ಲವೆ ಮಝಭಾಪೆನುತ
ಮಲ್ಲರಂದದಿ ಭುಜವನು ಹೊಯಿವುತ ರಿಪು
ದಲ್ಲಣ ದನುಜ ನಿಂದಿರಲು ॥೧೭೮॥

ಕಾಣಬಹುದಕಿನ್ನು ಕನ್ನಡಿವಿಡಿವರೆ
ತ್ರಾಣ ನಿನ್ನಯ ಬಲುಮೆಯನು
ಊಣೆಯವನು ನೋಡು ನೋಡೆನುತಲಿ ಮತ್ತೆ
ಹೂಣಿಸಿ ತಱುಬಿದ ನಂದಿ ॥೧೭೯॥

ಉಕ್ಕುಕ್ಕು ಪಳಚಿದವೋ ಗಿರಿಗಿರಿ ಕೈ
ಯಿಕ್ಕಿದವೋ ಸಮರದಲಿ
ಕಕ್ಕಸದಿಂದಲಿಬ್ಬರು ನಿಲ್ಲೆ ಕೆಂಪನು
ಮುಕ್ಕುಳಿಸಿದ ವಾಲೆಗಳು ॥೧೮೦॥

ಇದೆ ತಪ್ಪು ಗಾಯವ ಜಗಜಟ್ಟಿ ಭಲರೆಯೆಂ
ದಿದಿರೆದ್ದು ನಂದಿ ತಿವಿಯಲು
ರುಧಿರವಾಗಲು ಬುದಬುದನದನಂತುಱೆ
ಬೆದಱದಸುರ ಮಾಱಾಂತ ॥೧೮೧॥

ಪ್ರಳಯದ ಹರನಾಭರಣಗಳೊ ಸಿಡಿಲಿನ
ಕಳವಳವೋ ತಿಥಿಗಳಿನಾ
ಬಲು ರಭಸವೊಯೆನೆ ಕಿಡಿಗಳುದಿರಿದವು
ಖಳ ನಂದಿಯ ಕದನದಲಿ ॥೧೮೨॥

ದಂಡೆಯನೊಡದೊಳಹೊಕ್ಕರು ಮುಂಗೈ
ಗೊಂಡು ಬಿಗಿದು ಕೊರಳುಗಳ
ಮಂಡಿವೂರಾಟಿ ಭಾಪುರೆ ಸೀಸಕದಲಿ
ಚಂಡ ಭಟರು ಹೆಣಗಿದರು ॥೧೮೩॥

ಎಲವೊ ದನುಜ ನಿನ್ನ ಬಲುಹು ಹೋಯಿತುಯಿನ್ನು
ಕಲಹಕೆ ತೋಱಾಯುಧವಾ
ಸಿಲುಕಿದೆಯಿನ್ನಾವ ದಿಕ್ಕಿಗೋಡುವೆಯೆಂದು
ಕಲಿವೃಷಭನು ಮೂದಲಿಸೆ ॥೧೭೨॥

ಕರುಣಿಸಿ ಕಾದುಬಿಟ್ಟೆನುವೊಂದು ಬಾರಿಗೆ
ಪಿರಿದು ಗೋವೇಧೆಗಳೆಂದು
ಕರುಳನುಗಿವೆ ನಿನ್ನ ಬೆನ್ನೊಳೆಸುತ ಕೂಡೆ
ತಿರುಹಿಟ್ಟನಸುರ ಗದೆಯಲಿ ॥೧೭೩॥

ಹೇರೊಡಲನು ತೋಱಿ ಸುರರನಂಜಿಸಿ ಗೆದ್ದ
ಭಾರಿಯಗ್ಗಳಿಕೆ ಬೇಡೆನುತಾ
ತೋರಗದೆಯನಿಕ್ಕಡಿಮಾಡಿ ಪೊಯ್ದನು
ಧೀರನಂದೀಶ ಬೊಬ್ಬಿಱಿದು ॥೧೭೪॥

ಮರಳಿ ಹೊಂಗಂಟೆಯ ಸೂಲದೊಳಗೆಯಿಡೆ
ಹೊರಳಿ ಗಿರಿಗಳುಬ್ಬೇಳೆ
ಗಿರಿಗ[೧][ಳು ಅ][೧]ದರ ಗಾಳಿಗೆ ಹಾರಿದವಾಗ
ದುರುಳ ರಕ್ಕಸ ನಡೆತರಲು ॥೧೭೫॥

ಮಾಱಾಂತು ವಜ್ರದ ಹಲಗೆಯೊಳಗೆ ನೆಱೆ
ಹಾಱಲೊದಿಯೆ ನಂದಿಕೇಶ
ಜಾಱಿದ ಸೂಲ ನೆಲದಿ ಕೀಲಿಸಿ ಮೊನೆ
ದೋಱಿತು ಪಾತಾಳದಲಿ ॥೧೭೬॥

ಎಲವೊ ರಕ್ಕಸ ನಿನ್ನ ಬಲುಹು ಹೋಯಿತುಯಿನ್ನು
ಕಲಹಕೆ ತೋರಾಯುಧವ
ತಲೆಯ ಹೊಯಿವೆ ನಿನ್ನ ಕಾವನ ಕರೆಯೆಂದು
ಕಲಿವೃಷಭನು ಮೂದಲಿಸೆ ॥೧೭೭॥

೧-೧ ಳ(ಮೂ)

ಒಂದು ಸೀಳನು ತ್ರಿಪುರದ ಹೊಱಗಿಟ್ಟು ಮ
ತ್ತೊಂದು ಸೀಳನು ಕಾಲ್ವಿಡಿದು
ಇಂದುಧರನ ಪಾಳೆಯಕಿಡೆ ದಿವಿಜರ
ಮುಂದುರುಳಿತು ಧಿಮ್ಮೆಂದು ॥೧೯೦॥

ಹೆಡೆಗೊಡಹಿದನಹಿ ದಿಗ್ಗಜ ತಲೆಯೆದೆ
ಯೊಡದು ಕುಕ್ಕಿಱಿಸಿ ಕಮಠನು
ಕಡಲೇಳು ಕದಡಿತು ಸೀಸುಮಾರನು ಬಿದ್ದ
ಕಡು ರಭಸದಬ್ಬರಕೆ ॥೧೯೧॥

ನಂದಿಕೇಶ್ವರನ ಬೊಬ್ಬಾಟವಲ್ಲವೆಯೆಂದು
ಇಂದುಧರನು ತಲೆದೂಗೆ
ಸಂದಣಿಸಿದ ದೇವದುಂದುಭಿ ಮೊಳಗೆ ಹೋ
ಯೆಂದು ಕುಣಿದರು ದಿವಿಜರು ॥೧೯೨॥

ಬಿದ್ದನಿವನು ತ್ರಿಪುರಕೆ ಬಲುಗೈಯರಿ
ನ್ನಿದ್ದರಸುಗಳ ಸೌಭಾಗ್ಯ
ಉದ್ದುರುಳಿದ ಹಗೆಯುರುಳಲೆನುತ ಕ
ಪರ್ದಿಯ ಪೊಗಳಿತಮರರು ॥೧೯೩॥

ಮೋಹದ ಮೈದುನನಾಹವದೊಳು ಬೀಳೆ
ಕಾಪುರವೇಱಿ ದೊರೆಗಳು
ಬೇಹದ ಭಟರಿಗೆ ವೀಳೆಯಗೊಡಲಂದು
ಆಹವಕವರೊದಗಿದರು ॥೧೯೪॥

ದಳವ ಮೆಚ್ಚಿಸಿ ಕೊಲುತಿರುವನಾವನುಯೆಂದು
ಹುಲಿಯ ಬಿರುದಿನ ಟಿಕ್ಕೆಯದ
ದಳಕತಿ ನಾಯಕ ಜಂಭನೆಂಬಸುರನು
ಹಳಚಿದನವ ನಂದಿಯೊಡನೆ ॥೧೯೫॥

ಹರನ ಮಱೆಯ ಹೊಗು ವೀರಭದ್ರನ ಕರೆ
ಸರಿಸದೊಳಗೆ ಬಲುಗಾಯ
ಧುರದೊಳು ತಪ್ಪದೆ ದೂತ ನಂದಿಯ ಹೇ
ರುರವ ತಿವಿದನುರವಣಿಸಿ ॥೧೮೪॥

ಘಳಿಲನೊದದು ತಪ್ಪುತ ಗಾಯವ ನಂಧಿ
ಖಳನ ನೆತ್ತಿಯನೆಱಗಿದರೆ
ಅಳುಕದೆ ದಂಡೆಯನೊಡ್ಡಿ ಕಳದು ಕೂಡೆ
ಖಳನು ಓಡಿದ ಕೈಯನೆರಡ ॥೧೮೫॥

ಹೊಕ್ಕು ಬಿಗಿದನು ಮಂದರಗಿರಿಯ ಫಣಿ
ತೆಕ್ಕೆಯೊಳವಚುವಂದದಲಿ
ಸಿಕ್ಕಿದ ನಂದಿಕೇಶನನೊತ್ತಿ ಮೋದಿದ
ರಕ್ಕಸ ತನ್ನ ಬಾಯೊಳಗೆ ॥೧೮೬॥

ಅಕ್ಕಟ ನಂದಿಕೇಶ್ವರನು ತುತ್ತಾದನು
ಧಕ್ಕಟದನುಜಗೆಂದೆನುತ
ಮಿಕ್ಕಿನ ಭೂತಗಣವು ಹೋಹೋಯೆನ
ಲುಕ್ಕಿತು ಕೋಪ ವೃಷಭಗೆ ॥೧೮೭॥

ಆ ಸಮಯದಿ ಹೆಚ್ಚಿ ಬೆಳದ ನಂದೀಶನಾ
ಕಾಶವಿಂಬಿಲ್ಲವೆಂಬಂತೆ
ಸಾಸಿರ ಹೋಳಾಗಿ ಕೆಡದನಸುರ ನಂದಿ
ಕೇಶನ ರೋಮ ಸೋಂಕಿದರೆ ॥೧೮೮॥

ಮೆಟ್ಟಿ ನಾಲಗೆಯನು ಕೆಳಗಣ ದಾಡೆಯ
ಕಟ್ಟಾಳು ಕಾಲೊಳಗೊದೆಯೆ
ತೊಟ್ಟನೆರಡು ಹೋಳಾದನಸುರ ಹೆ
ಬ್ಬೆಟ್ಟವಿಬ್ಬಗಿಯಾದಂತೆ ॥೧೮೯॥

ಹರಿಯಬಲ್ಲರೆ ಹದ್ದನಟ್ಟುವರೆನೆ ಬಡ
ಸುರರನಂಜಿಸಿದತಿ ಗರ್ವ
ಹರಗಿರಿಜೇಶನ ಭಟನೊಳು ಮೆಱವುದೆ
ಧುರದಿನಿಂ ಭುಜಬಲ ಸಾಹಸ ॥೨೦೨॥

ಕೊಂದನಿಬ್ಬರು ಸೇನಾಧಿನಾಯಕರನು
ಒಂದು ನಿಮಿಷ ಮಾತ್ರದಲಿ
ನಂದಿಕೇಶನ ಭಂಗಬಡಿಸುವೆವೆನುತಲಿ
ಬಂದುದಸುರ ನಾಯಕರು ॥೨೦೩॥

ತಱಿ ಕೋಱಿ ಸುಱಿ ರಕುತವನು ಕರುಳ ತೆಗೆ
ಜಱಿದುಱಿ ಹಿಡಿಹಿಡಿಯೆನುತ
ಸಱಿಗ ರಕ್ಕಸರೆಂಟುಕೋಟಿ ಪಾಶವ ಹಾಕಿ
ತಱುಬಿದರಾ ವೃಷಭನನು ॥೨೦೪॥

ಕರಿಘಟೆ ಹದಿನೆಂಟುಕೋಟಿ ನೂಕಿತು ಬಲು
ತುರಗವಿಪ್ಪತ್ತೊಂದು ಕ್ಷೋಣಿ
ಉರವಣಿಸಿದುದೆಂಬತ್ತು ಸಾವಿರ ರಥ
ಮೊರೆವ ವಾದ್ಯದ ರಭಸದಲಿ ॥೨೦೫॥

ಕಱಿದರು ಕಲ್ಪಮೇಘದ ಹೊರಳಿಗಳಂತೆ
ಬಿಱು ಸರಳಿನ ಸುರಿವಳೆಯ
ತುಱುಗಿ ತಿವಿದರು ಕಕ್ಕಡೆಯಿೞಟಿ ಸಬಳದಿ
ತಱಿದರು ಕಿತ್ತ ಕತ್ತಿಯಲಿ ॥೨೦೬॥

ಅಂಬಿನಂಬುಧಿಯೊಳು ಮುಳುಗಿದನೋ ದೇವ
ರಂಭೆಯ ತೋಳಲೊಪ್ಪಿದನೊ
ಎಂಬೊಲು ನಂದಿಕೇಶನು ಕಾಣಬಾರನು
ಡಂಬರವಾಯ್ತುವರೆಸುಗೆ ॥೨೦೭॥

ತೊಲಗೊ ವೃಷಭ ನೀನು ಮುದಿಯೆತ್ತು ಜಗಜಟ್ಟಿ
ಕಲಿಭಟರಿಗೆ ಇದಿರಲ್ಲಾ
ಅಳುಕದಿರಂಬಿನ ಸವಿಯ ನೋಡೆನುತಲಿ
ಅಲಗಿನಂಬುಧಿಯನು ಸುರಿದಾ ॥೧೯೬॥

ತಱಿದವನಂಬನು ಕದನವಿಜಯನೆಂದು
ಉಱುವ ಬಂಟನೆ ನೋಡೆನುತ
ಜಱಿದೊಳಹೊಕ್ಕು ಕೂರಂಬ ಕೊಯ್ದಸುರನ
ಹಱಿಗುಟ್ಟಿದನು ನಂದೀಶ ॥೧೯೭॥

ಇತ್ತ ನೋಡೆನುತ ತವಕದಿಂದಲಿ ನಡು
ನೆತ್ತಿಯನೆಱಗಿದ ನಂದಿ
ನೆತ್ತರೊಗುವ ಗಾಯದಿಂದ ಜಂಭನು ಕಣ್ಣು
ಗತ್ತ[ಲ]ಗವಿದಸವಳಿದ ॥೧೯೮॥

ಅಕ್ಕಟ ಜಂಭನು ಸಿಕ್ಕಿದನೆಂದುಱೆ
ಕಕ್ಕಸ ಮನದ ಮುಸುಂಡ
ಎಕ್ಕಟಿ ಗಾಯವನೆಡದಲಿ ತಿವಿದನು
ಮುಕ್ಕಣ್ಣನ ವಾಹನವ ॥೧೯೯॥

ಮಣಿವುದೆ ಮದಗಜ ನೊಣನೂಱಲು ಮಿಗೆ
ಬಣಗು ರಕ್ಕಸನವುಕಿದರೆ
ತೃಣವೆಂದು ಬಗೆಯ ನಂದೀಶನಾ ಗಾಯವ
ನಣದು ತಪ್ಪಿದ ಹಲಗೆಯಲಿ ॥೨೦೦॥

ಹೊಳಕೆಯ ಭಟರಿವರಳುಕರು ಸಾವಿಗೆ
ದಳಕೆ ಬಲ್ಲಿದರಿವರೆಂದು
ತಲೆಗಳ ಪಿಡಿದೊಬ್ಬೊಬ್ಬರ ತಟ್ಟಿಸಿ
ಘಳಿಲನೆ ಕೊಂದನಿಬ್ಬರನು ॥೨೦೧॥

ತಾರಕಾಕ್ಷನ ಬಳಿ ರಥವೆಂಟು ಕೋಟಿಯು
ವೀರವಿದ್ಯುನ್ಮಾಲಿಯೊಡನೆ
ಸೇರಿದ ದೊರೆಗಳಿಪ್ಪತ್ತೆಂಟು ಕೋಟಿಯ
ಧೀರವೃಷಭ ಸವರಿದನು ॥೨೧೪॥

ಕರುಳು ಹರಿದು ನೆಣನೊಕ್ಕು ಕಾಳಿಜ ಸೂಸಿ
ಸುರಿದು ತಲೆಯ ಮಿದುಳುಗಳು
ನೊರೆಮಸಗಿದ ಬಿಸಿ ರಕುತದ ಹೊನಲಿನೊ
ಳುರುಳಿತು ರಕ್ಕಸ ಪಡೆಯು ॥೨೧೫॥

ಶರಭಗಳೆಡೆಯ ಭೇರುಂಡ ವಡಬನು ಸ
ಮರದೊಡೆ ಕಲಿಮೃಗರಾಜ
ಕರಿಗಳೆಡೆಯೊಳೆಸವಂತೊಪ್ಪಿದನು ಸಂ
ಗರದೆಡೆಯಲಿ ಬಸವೇಶಾ ॥೨೧೬॥

ಮುಂಡದ ಮಯ ಮೊಳೆಯ ಮಯ ಕೆದಜೆದ
ಖಂಡದ ಮಯ ಕಾಳಿಜದ
ಜೊಂಡಿನ ಮಯ ಕರುಳಿನ ಮಯ ನೆಣಮಯ
ಗುಂಡಿಗೆಮಯ ರಾಜಿಸಿತು ॥೨೧೭॥

ಸುಳಿದಾಡುವ ಖಗವೆದ್ದಾಡುವ ಮುಂಡ
ವೆಳದಾಡುವ ಕರುಳುಗಳ
ಸೆಳದಾಡುವ ಮರುಳೊಲದಾಡುವ ನೆಣ
ಗಳ ಭೂತಗಳೆಸದಿಹವು ॥೨೧೮॥

ಇಳಿದು ಗಜವ ಜೋದರೋಡಿತು ರಥಿಕರು
ಕಳಚಿ ಪತ್ತಳಿಕೆ ಬಿಲ್ಲುಗಳ
ಉಳುಹಿಕೋ ಸಲಹೆನುತಲಿ ಬಿದ್ದರು ಪಾದ
ನಳಿನಕೆ ನಂದಿಕೇಶ್ವರನ ॥೨೧೯॥

[illegible]
ನಿಲ್ಲದೆ ತರುಮರನೇಜಿ ಜಲವ ಹೊಕ್ಕ
ರೆಲ್ಲರ ಕಾಯ್ದನಾ ವೃಷಭಾ ॥೨೨೦॥

ಮದದಂತಿಗಳ ಮಱಿಗೋಡಿತು ಕಾಲಾಳು
ಕುದುರೆ ರಥವನಂಡುಗೊಳಲು
ಬೆದಱಿ ರಥಿಕರು ತೊರೆಯ ಮೇಲೆ ಬಿದ್ದರು
ಕದನ ಧೀರನ ಬಿದ್ದ ಹಲಿಗೆ ॥೨೨೧॥

ತೊನೆಯೆಲೆಗಡಿದು ತೋಳ್ಮುಱಿದು ಗುಂಡಿಗೆ ಬಿದ್ದು
ನಡುನೆತ್ತಿಯೊಡದು ಪಲ್ಲುದುರಿ
ಅಡಿ ನರ ಹಱಿದು ಗೋಣ್ಮುಱಿದು ಸುರಿವ ರಕ್ತ
ಕೆಡಮುದು ರಾಕ್ಷಸ ಪಡೆಯು ॥೨೨೨॥

ಮುಂಡಗಳೆದ್ದು ಕುಣಿಯೆ ಅಳುತಿರ್ದವು
ತುಂಡಿಸಿ ಬಿದ್ದ ತಲೆಗಳು
ಬಂದು ಭೂತಗಳೆಲ್ಲ ಉಂಡು ದಣಿದು ಕೂಡೆ
ಕೊಂಡಾಡಿದವು ವೃಷಭನಾ ॥೨೨೩॥

ತುಂಡಿಸಿ ಬಿದ್ದಾನೆಯ ತಲೆಯನು ಹೊತ್ತು
ಕೊಂಡು ಹೆಮ್ಮರುಳೊಂದು ಕುಣಿಯೆ
ಕಂಡುವೊಂದಿಸಿದವು ಬೆನಕನೆನುತ ರಣ
ಮಂಡಲದೊಳು ಮರುಳುಗಳು ॥೨೨೪॥

ಹಬ್ಬವಾಯಿತು ನರಿ ಮುದಿಗೂಗಿ ಕಾಗೆಗೆ
ಹೆಚ್ಚೆದ್ದು ಮರುಳು ಬಳಗಕೆ
ಕೊಬ್ಬಿದ ಕಂಡವ ತಿಂದು ಡಜ್ರನೆ ತೇಗು
[illegible] ॥೨೨೫॥

ಮುಱಿದುದತ್ತಲಿ ದಿನಪನ ಮಣಿರಥ ಬೇಗ
ಶರಧಿಗೆ ಗಗನವ ಬಿಟ್ಟು
ಮರಳಿತುಭಯ ಕಾಲಾಳು ಪಾಳೆಯಕೆಂದು
ಮೊರೆವ ಸನ್ನೆಯ ಟುಮುಕಿನಲಿ ॥೨೨೬॥

ಚಂದ್ರಶೇಖರ ಭುಜಗೇಂದ್ರ ಭೂಷಣ ವಿಷ
ಕಂದರನಿಂದ್ರವೊಂದಿತನೆ
ನಂದಿಸಿಂಧನ ಮಹಿಮಾಬ್ಧಿ ವರ್ಣನೆಗಳ
ಸಂಧಿ ಮುಗಿದುದು ನಾಲ್ಕನೆಯ ॥೨೨೭॥

ಅಂತು ಸಂಧಿ ೪ಕ್ಕಂ ¹ಪದ ೮೪೧ ಕ್ಕಂ¹ ಮಂಗಳ ಮಹಾಶ್ರೀ.

೧-೧ ಪದ ೮೪೪ ಕ್ಕಂ(ಮೂ)

ಸಂಧಿ : ಐದು

[೧]*ವೃತ್ತ :

ಅತ್ತಲಳಿದ ನಿಶಾಟಸಂಕುಳದ ಮೇಲೆಯಮೃತವಂ ತಳಿದೆಬ್ಬಿಸಲ್ ಕರಂ
ಅಬ್ಜಾನನ ನೇತ್ರನಬ್ಜಸುತರೀಕ್ಷಿಸಿ ಈಶ್ವರನಾಜ್ಞೆಯಿಂದಂ ಮು
ಪ್ಪೊಳಲೊಳುಪಾಯದಿಂದ ಸುಧೆಯಯೀಂಟೆ ವಿಕಾರದ
ಬೌದ್ಧವೇಷದಿಂ ಖಳರ ಕುಲಾಂಗನೆಯರ ಪತಿಭಕ್ತಿಯ ತಪ್ಪಿಸಲಾಯ್ತು
ನಿಶ್ಚಯಂ(?)

ಪದ :

ಆವನ ಮೊಗದಲಿ ರವಿ ಶಶಿ ಸಿಖಿ ಕಣ್ಣು
ಆವನುಸುರೊಳು ವೇದಗಳು
ಆವನ ನೇಮದಿ ತ್ರಿಭುವನ[೨] ಜನಿಸಿರ್ಪ
ದೇವನನಾ ಬಲಗೊಂಬೆ ॥೧॥

ಹೆಜ಼ೆನೊಸಲನು ಕರೆಗೊರಳಭವನು ಮೂರು
ಪುರವ ಗೆಲಿದು ತೋರಿದುದ
ಮರೆಯದ ದಿನಚರಿ ಮೆರವ ಭಕ್ತರುಗಳಿ
ಗೆರಕವಾಗಿಹ ಗಿರಿಜೇಶಾ ॥೨॥

ದೆಸೆಗೆ ಕಂಪಿಡುವ ಜವಾದಿಯೊ ಸಕಲ
ಶಿಶುಗಳ ಮೃದು ನುಡಿಯಂತೆ
ಬಿಸರುಹದಲರಿನ ಬಿರಿಮುಗುಳೋಯೆನೆ
ಎಸದುದು ಲಿಂಗನ ಕೃತಿಯು ॥೩॥

---

೧ + ಶ್ರೀ ಗುರುವೆ ಗತಿ (ಮೂ)

೧+ವೃ (ಮೂ)

ಬಂದು ಹಜಾರದೊಳಿರುಳಿನೋಲಗವಿಕ್ಕಿ
ಅಂದಿನ ದಿನ ದುಗುಡದಲಿ
ಮುಂದೆ ಪಂಜಿನ ಬೆಳಗುಗಳಲ್ಲಿ ತಾರಕ
ನಂದನರಿರ್ದರುಸುರದೆ ॥೪॥

ತಲೆ ಕುಗ್ಗಿ ಬಲು ಮನ್ನೆಯರುಂಗುಷ್ಠದಿ
ನೆಲನ ಬರವುತ ಚಿಂತೆಯಲಿ
ಗೆಲವಾದುದು ಸುರನಿಕರವೆನುತ ವಳ
ವಳಗೆ ಬೆಂದರು ಸುಯಿಸುಯಿದು ॥೫॥

ಸುರರ ಸುಮ್ಮಾನವ ತಮ್ಮಪಜಯವನು
ಹರನ ಭಟನ ಬಲುಮೆಯನು
ಮರಳಿ ನೆನದು ಉರಿಗೊಡ್ಡಿದರಗಿನಂತೆ
ಕರಗಿತು ದನುಜರ ಧೈರ್ಯ ॥೬॥

ಮಾಗಿಯ ಕೋಗಿಲೆಗಳೊ ತೆರೆಯಡಗಿದ
ಸಾಗರವೋ ಸಿಡಿಲಜಿತ
ಮೇಘವೋಯೆಂಬಂತೆ ದನುಜರೋಲಗದೊಳು
ಮೂಗರಂದದಿ ರಾಜಿಸಿತು ॥೭॥

ದೊರೆಗಳ ದುಗುಡವ ಕಂಡು ಪ್ರಧಾನರು
ಬರಲಮ್ಮದೆ ಸಮ್ಮುಖಕೆ
ಮರಳಿ ಹಜಾರದ ಕಂಬವ ಮಱೆಗೊಂಡು
ಇರುಳು ಪಂಜುಗಳನೆ ತೆಗಸಿ ॥೮॥

ನುಡಿಯಡಗಿದ ದೊರೆಗಳ ದುಗುಡವ ಕಂಡು
ಒಡನೆದ್ದ ಮೇಘ ನಿಕಾಯ
ಖಡುಗವ ಜಡಿದು ತಾ ಸಭೆಯೊಳು ನಿಲಲಾಗ
ಘಡ ಜೀಯಯೆಂದುದು ಕ್ಷೋಣಿ ॥೯॥

ಬಿಡು ದುಗುಡವ ಶಿಶುಮಾರನಳಿದರೆ ಒ
ಕ್ಕುಡುತೆಯ ನೀರ ಬಳಕೆಗೆ
ಕಡಲಜವ್ರುದೆ ಜೀಯ ದೊರೆಗಳ ದೇವ ನೀ
ಕೊಡು ಬೇಗ ಬೆಸಸನೆಂದೆನಲು ||೧೦||

ಹೊಗುವೆ ಸಮರ ಪಾಳೆಯವನೀಕ್ಷಣದಲಿ
ಮಿಗೆ ದೇವಗಣವನೆಲ್ಲವನು
ಬಗಿದು ಪಶುಮುಖಿಯ ಕಟ್ಟಿ ತಹೆನೆಂದು
ಮಿಗೆ ಮೇಘನೀಲ ಘರ್ಜಿಸಿದ ||೧೧||

ಅಹುದು ಮಂತ್ರಾಸ್ತ್ರ ಕಗ್ಗೊಲೆಯಾಳಿ ನೋಯಿಸ
ಬಹುದು ವಿರೋಧಿ ಬಲವನು
ಒಹಿಲದಿ ಗೆಲ್ಲೆಂದು ಇರುಳಿನ ಕದನಕೆ
ಬಹಳ ಬಂಟರ ಕಳುಹಿದನು ||೧೨||

ಜಾಳುಗಳಲ್ಲದಜ್ಜಾಳುಗಳಿದ್ದರೆ
ಕೋಳುಗೊಂಬೆವು ಸುರರುಗಳ
ಆಳೊಡಗಿತು ದೊರೆಗಳ ನೇಮದಿ ಜೀಹಿ
ನಾಳುಗಳೊಡನೆ ಕಗ್ಗೊಲೆಯ ||೧೩||

ಕಗ್ಗೊಲೆಗೆಂದೆಂಟು ಕ್ಷೋಣಿ ರಕ್ಕಸರುಗ
ಳೊಗ್ಗಿನೊಳಗೆ ಮಾತನಾಡಿ
ಸ್ವರ್ಗದವರ ಪಾಳೆಯವನು ಕಡಿಯಲು
ಅಗ್ಗದ ದನುಜರೊದಗಿತು ||೧೪||

ಹರಿಗೆ ಹಲಗೆ ಕೂರಿಟ್ಟಿ ಸಬಳ ಬಿಲ್ಲು
ಸುರಗಿ ಪಟಲು ಮಯಿಜೋಡು
ಮರಳಿ ತಳಿವ ಬೆಳುಬೂದಿಯ ಸೊಕ್ಕಿನ
ದುರುಳ ರಕ್ಕಸರೊದಗಿದರು ||೧೫||

ಕತ್ತಲೆ ಗರ್ಭ ಬಲಿದು ನವ ತಿಮಿರವ
ಪೆತ್ತುದೊ ದಿಗುದಂತಿಗಳ
ಮೊತ್ತವೊಯೆನೆ ಕಪ್ಪಿನ ಮೈಯ ದೈತ್ಯರು
ಮುತ್ತಿದರಮರ ಪಾಳೆಯವ ॥೧೬॥

ಇಱುವೆ ನುಸುಳಬಾರದು ಪಾಳೆಯದೊಳು
ತೆಱಹಿಲ್ಲ ಪಂಜಿನ ಬೆಳಗು
ಹಱೆಯುಪಹರಿಗಳ ರಭಸವ ಕಂಡುಱೋ
ಸಱೆಗ ರಕ್ಕಸನಿಂತೆಂದಾ ॥೧೭॥

ಮರುಳು ಬಳಗ ದೇವತೆಗಳ ತಂಡಕೆ
ಇರುಳು [ತಾ] ಪಗಲಾಗಿಹುದು
ಗಿರಿಜೆಯರಸನ ಪಾಳೆಯವೆಂದು ತಿರುಗಿತು
ಸುರರುಯಿದ್ದೆಡೆಗೆ ದಾನವರು ॥೧೮॥

ತಂಗಾಳಿಯ ತಂಪಾದರು ತಮತಮ
ಗಂಗವ ಮಱೆಸಿ ದಾನವರು
ಭಂಗಿಸುವೆವು ದಿವಿಜರೆಂದು ಪಾಳೆಯ
ಕಂಗಯಿಸಿದರುಬ್ಬಿನಲಿ ॥೧೯॥

ಇರುಳು ಹಗಲು ಪಾಳೆಯದೊಳು ಬಳಲಿದ
ಸುರರು ಮಲಗಿ ಗುಱುಕಿಡುತ
ಕೊಱದು ಮಱದು ಕನಸನು ಕಾಬವರನು
ಮರಳಿ ನೋಡಿದರು ರಕ್ಕಸರು ॥೨೦॥

ಬಾಗಿಲ ಮುಱಿದೊಳಹೊಕ್ಕು ಪಾಳೆಯದೊಳ
ಗಾಗಮರರುಗಳ ನೋಡಿ
ಮೂಗಿನುಸುರನಾರೈದು ಪಿಡಿಯಲು ಕೈ
[೧][ದೂ][೧]ಗಿಸಿದರು ದಾನವರು ॥೨೧॥

೧-೧ ದ್ಯೋ (ಮೂ)

ನರಿಯೊದಜೆತು ಕೋಟನ ಬಲನಾಯತಿ
ದಿರಿಲಿ ಸೀತರು ಖಡ್ಗಗಳು
ಕರದಿಂದಲುರುಳಿದವವಸಕುನವು ದೈ
ತ್ಯರ ಪಡೆಯೊಳಗೆ ತೋಜಿದುದು ||೨೨||

ಬಲ್ಲವರವಸಕುನವ ಕಂಡೆಮಗಿಂದು
ಹೊಲ್ಲೆವೆನಲು ದೊರೆಯಜೆದು
ಎಲ್ಲರ ಜಜೆದು ಲೇಸೆಂದೆಯಿತಂದನು
ಮೆಲ್ಲನೆ ದನುಜ ಕದನಕೆ ||೨೩||

ಮುಜಿದು ಮಲಗಿದಮರರ ಹಿಡಿದೆತ್ತಿದ
ಹಜೆಯದಿರಲು ಕರವಿಡಿದು
ಹಿರಿಚಿ ಒಬ್ಬರನಿಬ್ಬರು ಹೊತ್ತು ಒಯ್ಯನೆ
ನೆಜೆ ಲಾಗಿಸಿದರಂಬರಕೆ ||೨೪||

ಗಿಡುಗಗೆ ಸಿಕ್ಕಿದ ಕಿಱುವಕ್ಕಿಯಂದದಿ
ಸಿಡಿಮಿಡಿಗುಟ್ಟುವ ಸುರರ
ನುಡಿಯುವಂದದಿ ಬಾಯೊಳಿಂ ಚೆಂಡನು ಬಲಿ
ದಡರಿದರವರು ಗಗನಕೆ ||೨೫||

ಕೆಲರನು ಮುಂದಲೆವಿಡಿದೆಳೆಯಲು ನಾ
ವೆಲೆ ನಿಮ್ಮವರುಗಳೆಂದೆನುತ
ಉಲಿವರು ತಾರಕಸುತರಾಣೆಯ ಹೊಸ
ಕೊಲೆಯೊಳೊಡಲ ಕಳವಳದಿ ||೨೬||

ಕೆಲರೆಚ್ಚತ್ತರು ಕೆಲರೇನೆಂದಜೆಯರು
ಕೆಲಬರಿರದೆ ಓಡಿದರು
ಕೆಲರು ಹಮ್ಮೈಸಿ ಬಿದ್ದರು ಪಾಳೆಯದೊಳು
ಬಲುಗ್ರಹ ಹೊಡದಂದದಲಿ ||೨೭||

ಕಡಿದಾಡಿತು ಕತ್ತಲೆಯೊಳು ಕಾಣದೆ
ಗುಡಿಗಳ ಬಿಟ್ಟು ತಮ್ಮೊಳಗೆ
ಒಡೆಯನ ಕಾಣದ ಬಲದಂತೆ ಕಂಗೆಟ್ಟು
ಕಡೆಗೋಡಿತು ತಮತಮಗೆ ॥೨೮॥

ಸುಡಿಯದೆ ಹಾಸಿಕೆಯೊಳು ಮಲಗಿದ ಕೆಲ
ರಡಗಿರಲೆಡಹಿ ಕಂಡವರ
ಉಸು ಕಣ್ಣ ಮುಚ್ಚಲು ಎಡಹಿ ಕಾಣರೆಯೆಂ
ಮೊಡನೆಳದರು ದಾನವರು ॥೨೯॥

ತಳವಾಜರು ಪೊಕ್ಕಡಗಿತು ಗೇರೆಯು
ತಳವೇಲಿಗಳ ಬಗಬಗದು
ತಲೆಯು ಕೆದಜಿಕೊಂಡೋಡಿತು ದೊರೆಗಳು
ವಳಗುಡಿಗಳನೆಲ್ಲ ಬಿಟ್ಟು ॥೩೦॥

ಬಿಟ್ಟರು ಲಾಯದ ಕುದುರೆವೊಂಟೆಯಗಳ
ಕಟ್ಟಿದ ಗಜಗಳನೆಳದು
ಪಟ್ಟಗಗಳ ಹಿಡಿದರು ಬೊಕ್ಕಸಗಳ
ಕಟ್ಟಿ ಪೊತ್ತು ತಮ್ಮ ಪುರಕೆ ॥೩೧॥

ಅಳಕಾಪುರದ ರಾವುತ ಜನವೆಲ್ಲವು
ಅಳಕಿ ಮನದಿ ಹಮ್ಮೈಸಿ
ತಲೆಗಳನೆತ್ತಲಮ್ಮದೆಯಲ್ಲಿ ಪುಲ್ಲೊಳು
ಮಲಗಿ ಮಲ್ಲಸೆಯಡಗಿದರು ॥೩೨॥

ಕರಿಗಳೆನುತ ಭಾರಿ ಕಂಭವನಡರಿಯೆ
ಇರುಳೆ ಬೆದಜಿ ಮಾವುತರು
ತುರಗವ ಕಾಣದೆ ಗೋವರ ಹೆಗಲಿಗೆ
ಭರದಿಂದೇಜಿದರು ರಾವುತರು ॥೩೩॥

ಒಬ್ಬರೊಬ್ಬರ ಮೇಲೆ ಒಬ್ಬರೊಬ್ಬರು ಬಿದ್ದು
ತಬ್ಬಿ[೧][ಬ್ಬು][೧]ಗೊಂಡು ತಮ್ಮೊಳಗೆ
ಅಬ್ಬರಿಸುವ ಬೊಬ್ಬೆಯ ರಭಸವು ಮಿಗೆ
ಹಬ್ಬಿದುದೆಂಟು ದಿಕ್ಕಿನಲಿ ॥೩೪॥

ಕೇಳಿದನಾ ಮೊಜೆ[೨]ಯ[ನು] ನಂದಿಕೇಶ್ವರ
ಕೋಳು ಹೋಯಿತು ಸುರಕಟಕ
ಭಾಳಲೋಚನನರಿತ[೩][ಡೆ][೩] ಲೇಸ[೪][ಲ್ಲೆಂ][೪]ದು
ಪಾಳೆಯವನು ಪೊಕ್ಕನೊಡನೆ ॥೩೫॥

ಅಲ್ಲಿ ಪಾಳೆಯದೊಳಗಭಯಹಸ್ತವನೆತ್ತಿ
ಎಲ್ಲರಿಗೆಂದ ನಂದೀಶಾ
ಕಳ್ಳೇರಿನ ರಕ್ಕಸರ ಕೊಲ್ಲುವೆನು ನಾ
ನಿಲ್ಲಿ ಕತ್ತಲೆ ಕಾಣೆನೆಂದಾ ॥೩೬॥

ಒಡಲೊಳಗಣ ಜ್ಯೋತಿರ್ಲಿಂಗವ ನಂದೀಶ
ಕುಡಿನಾಲಗೆಯೊಳು ತೋಱೆ
ಕೊಡಹಿತಾ ಹಿಮದ ಕತ್ತಲೆ ಹರದುದು ಕೂಡೆ
ಒಡನೊಡನೇ ಬೆಳಗಾಯ್ತು ॥೩೭॥

ಅರರೆ ನಂದಿಯ ಪ್ರಾಣಲಿಂಗದ ಬೆಳಕದು
ಇರುಳ ಪಗಲ ಮಾಡಿದುದು
ಅರಿಗಳೋಡುತಲದೆ ಹಿಂದಬಿಡದೆ ಬೇಗ
ಜಱಿದಮರರು ಹಿಡಿಯೆನುತಾ ॥೩೮॥

ಕೆಲರೋಡುತಲದೆ ಹಿಂದ ಬಿಡದೆ ಹು
ಯ್ಯಲನು ಹಿಡೆಂಬುತ ಸುರರು
ಉಲಿವ ಭಾಷೆಯ ರಭಸದಲಿ ನಂದೀಶ್ವರ
ಮಲತು ಲೆಂಗಿಸಿದನಂಬರಕೆ ॥೩೯॥

೧–೧ ಬ್ಬಿ(ಮೂ) ೨+ಯ(ಮೂ) ೩–೩ ಡ(ಮೂ) ೪–೪ ಲೆಂ(ಮೂ)

ಮೇಘಾನಿಲನೆಂಬಗ್ಗದ ದನುಜನ
ಹೋಗದಿರೆನುತೊಡವೆರಸಿ
ಲಾಗಿಸಿ ಮುಂದಲೆವಿಡಿಯಲು ತಲೆಕೆಳ
ಗಾಗಿ ಬಿದ್ದನು ಧರೆಯೊಳಗೆ ॥೪೦॥

ದೇವತೆಗಳ ಬಿಟ್ಟೋಡಿದರಸುರರ
ಗಾವಳಿ ಹರದಮರರಿಗೆ
ಸಾವಿರ ಮಾಡಿ ದೈತ್ಯರುಗಳ ಓಡಿದನು
ಭಾವಜವೈರಿಯ ಭಟನು ॥೪೧॥

ಅದೆ ಬಸವೇಶನ ಪದದ ಕೆಂಧೂಳದೆ
ಅದೆ ಗೂಳಿಯ ಕೆಲದಾಟ
ಅದೆ ನಂದಿಕೇಶನ ಖಡ್ಗದಬ್ಬರವೆನೆ
[1][ಅದೆ ಕಂಗೆ][1]ಟ್ಟರು ದಾನವರು ॥೪೨॥

ಸುರರಾಜನು ಮೊದಲಾದಮರರುಗಳು
ಚರಣಕೆ ಮಕುಟವ ಚಾಚಿ
ಹರನ ವಾಹನವನು ಪೊಗಳುತಲಿರಲಾಗ
ಇರುಳಡಗಿ ಪಗಲಾಯ್ತು ॥೪೩॥

ತಲೆದೋಚಿತು ಮೂಡಣ ದೆಸೆಯೊಳು ರವಿ
ಗೆಲಬೇಕು ಈ ವೃಷಭನನು
ಬಲವಂತ ರಕ್ಕಸ ನಾಯಕನಿಕರ ಹು
ಯ್ಯಲಿಗನುವಾದರೊಗ್ಗಿನಲಿ ॥೪೪॥

ಧಂ ಧಾ ಧಮಧಮಯೆಂಬ ಭೇರಿಯ ರವ
ದಿಂಧಲಿ ಚಂಡವು ಬಿಜೆಯೆ
ಬಂದರು ದನುಜರು ಸಮರಕೆನುತಲಾಗ
ಅಂದಿಗಮರರುಸುರಿದರು ॥೪೫॥

೧-೧ ಯಿಡೆಕೆಂಗ(ಮೂ)

ಕಾಳೆಯ ದನಿಗೆ ಹಮ್ಮೈಸುವ ಸುರರಾಜ
ಜಾಳ ಹುಯ್ಯಲ ಪೋಗಡಿಂದು
ಕಾಳಗದೊಳು ನಿಮ್ಮನು ಅಂಜಿಪ ದೈ
ತ್ಯಾಳಿಗಳ ನೆಱೆ ಸೀಳಿ ॥೪೬॥

ಕಾಣೆನೆನ್ನಯ ತೋಳ ಬಾಳಿಗಿನ್ನಿದಿರಾಹ
ತ್ರಾಣವುಳ್ಳರನೆಂದ ವೃಷಭಾ
ಗೋಣ ನೆಗಹಿ ನೋಡುತಾಕಾಶದಲಿ ಕಂಡ
ಜಾಣ ತಾರಕನ ಮಕ್ಕಳನು ॥೪೭॥

ಪೆಣದಿನಿಹಿಗಳು ಕಾಳುಡಿಹಿ ಸೊಕ್ಕಿನ ಮೈಯ್ಯ
ಬಣಗುಗಳಿವರ ಮೈನೆಳಲು
ತ್ರಿಣಯನೊಡ್ಡಿನ ಮೇಲೆ ಸೋಂಕಬಹುದೆಯೆಂದು
ಕುಣಿದುದು ವೃಷಭ ಕೋಪದಲಿ ॥೪೮॥

ಬಿಗಿದುಟ್ಟ ಮೊಸೆಯ ಮುಂಜೆಜಗಿನುಡಿಗೆ ಹೊಗ
ರೊಗುವ ಕಿಗ್ಗಟ್ಟಿನ ಸುರಗಿ
ಉಗಿದಾಯುಧವ ಪಿಡಿದ ಹಲಗೆಯ ನಂದಿ
ಗಗನಪಥವ ನೋಡಿದನು ॥೪೯॥

ಧರಣಿಯನೊದದು ಅಂಬರಕೆ ನೆಗೆಯೆ ನಂ[೧]ದಿ
ಶ್[೨]ರಧಿಗಳೇಳ್ತುಳುಕಿದವು
ಕರುಳನು ಕಾಜಿದರುರುಗ ಕಮಟನುಜೆ
ತರಣಿ ಸಸಿಗಳುದುರಿದವು ॥೫೦॥

ಲಾಗಿಸಿ ನೆಗೆದನಂಬರಕೆ ಧ್ರೂಲೋಕವ
ತಾಗಿತು ವೃಷಭನ ಮಕುಟಾ
ಬಾಗಿ ಸಿರವನಸುರರನಲ್ಲಿ ಕಾಣದೆ
ಮೇಘದ ಹೊರೆಗಿಳಿತಂದಾ ॥೫೧॥

೧–೧ ದೀಕ್ಷ(ಮೂ)

ಅಂಬರದೊಳಗಿಹ ಶಿವದ್ರೋಹಿಗಳ ಕಂಡು
ತುಂಬಿದ ಕಡುಕೋಪದಲಿ
ಬೆಂಬಳಿವಿಡಿದು ಬೊಬ್ಬಿಡಿದು ಲಾಗಿಸಿದನು
ಮೀಂಬುಲಿಗನ ಪಕ್ಷಿಯಂತೆ ॥೫೨॥

ಅಸುರರನೆಲ್ಲರ ಕೊಲಲು ಶಿವನ ಭಾಷೆ
ಹುಸಿಯಹುದದಕಂಜುವೆನು
ಮುಸುಕಿದ ಛತ್ರವನೊದದು ಅವರನು ಭಂ
ಗಿಸುವೆನೆನುತ ಲಾಗಿಸಿದಾ ॥೫೩॥

ಎತ್ತಿದ ಛತ್ರ ತೊಂಬತ್ತಾಱು ಕ್ಷೋಣಿಯು
ಮೊತ್ತದ ಮಕುಟವರ್ಧನರು
ಕತ್ತರಿಸಿದ ಖಡ್ಗದಲೊಂದು ಗಾಯವ
ಮೃತ್ಯುಂಜಯನ ವಾಹನನು ॥೫೪॥

ಕಳಿದರಳ್ಗಳ ನನೆ ಬಿಱುಗಾಳಿ ಬೀಸಿದ
ರಿಳೆಗುರುಳುವ ತೆಱನಂತೆ
ತಳಿತ ಸತ್ತಿಗೆಗಳೊಗ್ಗುಡಿಸಿ ಬಿದ್ದವು ಕೂಡೆ
ಕಲಿವೃಷಭನ ಖಡ್ಗಹತಿಗೆ ॥೫೫॥

ಬಿರಿದಿನ [1][ಹ][1]ಜ್ಜೆಯ ನೆಗಳ ಟೆಕ್ಕೆಯ ತರ
ತರದಲೆತ್ತಿದ ಸತ್ತಿಗೆಯ
ಉರುಳುಗಡಿದ ನಂದಿಕೇಶ್ವರನನು ಕಂಡು
ದೊರೆಗಳೆದ್ದರು ಕಾಳಗಕೆ ॥೫೬॥

ಕಿಡಿಯನುಗುಳಿದ ಪಕ್ಷಿಗಳು ಹೆಮ್ಮೊಗಿನೊ
ಳೊಡದು ಕಾರ್ಬೊಗೆಯೊಡಿದುದು
ಕುಡಿಮೀಸೆ ಕುಣಿದುದು ವದನ ಕೆಂಪೇಱಲು
ಮೃಡನ ವೈರಿಗಳು ಮೂವರಿಗೆ ॥೫೭॥

೧–೧ ನೆ(ಮೊ)

ಕೊಯಿಕೊಯಿ ಮೆಟ್ಟಿ ತಲೆಯನಿಕ್ಕಡಿ ಮಾಡಿ
ಹೊಯಿ ಹೊಯಿ ನಡುಬೆನ್ನನೆನುತಾ
ಬಯಿ ಬಯಿದಾಗ ಮೂದಲಿಸುತ ನಂದಿಯ
ಹೊಯಿದರು ಕಿತ್ತ ಕತ್ತಿಯಲಿ ||೫೮||

ಮರಳಿ ಮೋಪರಿಸಿ ಚಂದ್ರಾಯುಧವನು ತೂಗಿ
ಕೆರಳಿ ಹೊಯಿದರು ದಾನವರು
ಉರುಳಿದವಾಯುಧ ಪದಿನೆಂಟು ತುಂಡಾಗಿ
ವರವೃಷಭನ ರೋಮ ಸೋಂಕಿ ||೫೯||

ಪೊಯಿದನು ವಿದ್ಯುನ್ಮಾಲಿ ಜಱಿದು ಚಂ
ದ್ರಾಯುಧದೊಳಗಿಚ್ಚೆಯಲಿ
ಬಯಿದೊಡೆ ಪಳಚಿದ ತಾರಕ ರಣದೊಳು
ಅಯಿಮೊಗದನ ಸುಭಟನ ||೬೦||

ಉದಯದ ಮುಗಿಲು ಮತ್ತೆದ್ದಂತೆ ತೋರಮ್ಮೈ
ಯ್ಯದಟನ ಕಮಲಲೋಚನನು
ಒದಱಿದ ಸಿಡಿಲ ಶಿಕ್ಷಾ ಗುರುಪಿನವೊಲು
ಕದುಬಿ ತಿವಿದನು ಬಾಣದಲಿ ||೬೧||

ಕೊಯ್ದಿಡು ಕೈಕಾಲ್ತಲೆಯ ತವಕದಲಿ
ಹೊಯ್ದೊಡ್ಡ ನಡುವನೆಂದೆನುತ
ಕಯ್ದಿನ ಮಳೆಯ ಗಱೆವುತ ನಂದೀಶನ
ಎಯ್ದಿ ದಾನವರು ಮುತ್ತಿದರು ||೬೨||

ತೇಲಿತು ಬಯಲನು ಹೊಯ್ದಲು ಸಲೆ ಕರ
ವಾಳು ತನುವ ಸೋಂಕದಿರಲು
ಶೂಲಧರನ ವಾಹನನ ಬಲುಮೆಗಸು
ರಾಳುಗಳುಱೆ ಬೆದಱಿದರು ||೬೩||

ಎಲವೊ ರಕ್ಕಸಗುನ್ನಿಗಳಿರೆ ನಿಮ್ಮಯ ದಿಗು
ಬಲೆಯ ಕೊಡುವೆನೀಶ್ವರನ
ಬಲುಭಾಷೆ ತಪ್ಪುವದೆಂದುಳುಹಿದೆನೆಂದು
ಕಲಿ ವೃಷಭೇಶನುಱುಬಿದ ॥೬೪॥

ದೊರೆಗಳು ಮೂವರೆದೆಯ ಮೇಲೆ ತಿವಿದನು
ವರ ವಜ್ರಶಕ್ತಿಯೊಳೊದಗಿ
ಸುರಿದುದು ರಕ್ತ ಜಾಜಿನ ಗಿರಿಯಂದದಿ
ಉರುಳಿ ಬಿದ್ದರು ದಾನವರು ॥೬೫॥

ಒದದು ಮೂವರ ಮಕುಟವ ಕೀಳೆ ನವರತ್ನ
ಕೆದಜಿತವದಿರ ಮಸ್ತಕದಿ
ಮಿದುಳೊಡೆಸೂಸಿದಂತಾಯಿತು ರಣದೊಳ
ಗದುಭುತವದನೇನೆಂಬೆ ॥೬೬॥

ದೊದ್ದೆಗರೆಲ್ಲರನೊಱಲಿಸಿ ದೊರೆಯೊಡ
ನಿದ್ದ ಬಲವ ಚಲ್ಲಬಡಿದು
ಒದ್ದನುರದ ಸಾರಥಿಗಳ ಜೀವವ
ಕದ್ದನಂತಕನಂದದಲಿ ॥೬೭॥

ಮದನಹರನ ಭಟನಂದಿಕೇಶನ ಕೂಡೆ
ಒದಗಲಱಿಯದೆ ಕಾಳಗಕೆ
ಬೆದರಿ ತಾರಕನ ಮಕ್ಕಳು ಗಾಯವಡದೋಡಿ
ತದು ತಮ್ಮಯ ಬಲಸಹಿತ ॥೬೮॥

ಹೊಕ್ಕವು ಭೂತಗಣವು ತಲೆವರಿಗೆಯ
ನಿಕ್ಕಿ ಹೆಬ್ಬಾಗಿಲಿಗುಱುಬಿ
ಲೆಕ್ಕಿಸದಾ ಹುಲಿಮುಖದೊಳು ಭಾರಿಯ
ರಕ್ಕಸರನು ಕೆಡಹಿದವು ॥೬೯॥

ಒಬ್ಬರೊಬ್ಬರ ಮೆಟ್ಟಿ ಸತ್ತುದಸುರಕುಲ
ಹೆಬ್ಬಾಗಿಲೊಳಗೆ ಸಂದಣಿಸಿ
ಅಬ್ಬರಿಸಲು ಭೂತಗಣ ತ್ರಿಪುರದೊಳಿರ್ದ
ಗರ್ಭದ ಶಿಶುವು ತಲ್ಲಣಿಸೆ ॥೭೦॥

ಲಾಳವಿಂಡಿಗೆಗಳ ಹಾಕಿ ಬಾಗಿಲ ಬಲಿ
ದಾಳುವೇಱಿಯನಿರದೇಱಿ
ಕಾಳ ರಕ್ಕಸರು ಕೋಟೆಯ ತೆನೆ ಮಱೆಗೊಂಡು
ತೂಳಿದರಂಬಿನ ಮಳೆಯಾ ॥೭೧॥

ಸೊಪ್ಪಿನ ಹೊಱೆಗಳಲಗಳ ಪೂಳುತ ನಡೆ
ಚಪ್ಪರಗಳನಿಕ್ಕಿ ಮರುಳು
ಮುಪ್ಪುರವನು ಸುತ್ತುವರಿದು ಕೋಟೆಯನೇಱು
ತಿಪ್ಪುದ ಕಂಡರಸುರರು ॥೭೨॥

ಫಡಫಡ ಮುದುಡಿ ನಡೆ ಚಪ್ಪರಗಳನು
ಕೆಡಹು ಭೂತಗಳನೆಂದೆನುತ
ದಡಿಗದಾನವರು ಕೋಟೆಯ ತೆನೆ ಮಱೆಗೊಂಡು
ದೊಡದೊಡ್ಡ ಗಿರಿಯ ಹಾಕಿದರು ॥೭೩॥

ಇಟ್ಟ ಬೆಟ್ಟವ ಹಾರುತಟ್ಟಿ ಮರುಳುತಂಡ
ಮೆಟ್ಟಿಕೊಂಡಾ ಬೆಟ್ಟಗಳ
ಅಟ್ಟಳೆ ಮಕರ ಬಿಬ್ಬಿಗಳೇಱಿ ದೈತ್ಯರು
ಬಿಟ್ಟರು ಬಱಿಸಿಡಿಲುಗಳ ॥೭೪॥

ಎಚ್ಚರು ತಲೆದೋಱಲೀಸದೆ ಕೆಲಬರು
ನಿಚ್ಚಣಿಕೆಯನಿಕ್ಕಿ ಹತ್ತಿ
ಕೊಚ್ಚಿದವಟ್ಟಳೆ ಮಕರ ಬಿಬ್ಬಿಗಳನು
ಕಿಚ್ಚುಗಣ್ಣನ ಪರಿವಾರ ॥೭೫॥

ಮುಂದಲೆ ಮುಂದಲೆಗಳ ಸುತ್ತಿ ತೆನೆಗಳ
ಸಂದಿಸಂದಿಗಳಂ ತಿವಿದು
ಮುಂದಕೆ ನೆಗದು ದೈತ್ಯರ ತಲೆಯನು ಹೊಯ್ದು
ಓಂದಕಿಟ್ಟವು ಮರುಳುಗಳು ॥೭೬॥

ಮತ್ತೆ ಮರುಳುತಂಡ ತಲೆವರಿಗೆಯನಿಕ್ಕಿ
ಹತ್ತಿ ಹೊಂಗೋಟೆಯ ಮೇಲೆ
ಕತ್ತಿ ಕತ್ತಿಗಳಲಿಜೆದು ರಕ್ಕಸರನು
ಕೊತ್ತಳದಿಂದೋಡಿಸಿದವು ॥೭೭॥

ಅಳಿದುದಯಿವತ್ತೆಂಟು ಕೋಟಿ ದೊರೆಗಳು ಕೊ
ತ್ತಳವೆಲ್ಲ ಹೆಣಮಯವಾಗೆ
ಉಳಿದ ಬಣಗನಾರೆಣಿಪರು ತ್ರಿಪುರದ
ಕೊಲೆಯಸುರರ ಕರ್ಮವಾಯ್ತು ॥೭೮॥

ಕೋಳುಹೋಯಿತು ಕೋಟೆಯೆಂದು ನೋಟಕ ಜನ
ತಾಳದೆ ಹುಯ್ಯಲಬ್ಬರವ
ಆಳುವೇರಿಯನಿಳಿದೋಡಿ ಮನೆಯ ಹೊಕ್ಕು
ತಾಳ ಬಲಿದುಕೊಂಡರವರು ॥೭೯॥

ಓಡಿ ಮನೆಯ ಹೊಕ್ಕ ಹೇಡಿ ದಾನವರ ಹೊ
ಯ್ದೀಡಾಡು ತಲೆಯನೆಂದೆನುತಾ
ಜೋಡಿಸಿತರುವತ್ತಾಱು ಸಾವಿರ ಕೋಱ
ದಾಡೆಯ ವೀರ ರಕ್ಕಸರು ॥೮೦॥

ದೊರೆದೊರೆಗಳು ಜೋಡ ತೊಟ್ಟು ಮೂದಲಿಸುತ
ಹರಿಗೆ ಕತ್ತಿಗಳನು ಪಿಡಿದು
ಮರುಳು ತಂಡವ ತರಹರಿಸಲೀಸದೆ ಹೊಯ್ದು
ಓರಿಯಗಳಿಗೆ ನೂಕಿದರು ॥೮೧॥

ಇಟ್ಟಿ ಸಬಳದಸಿ ಕವಣೆಗಲ್ಲುಗಳೊಳ
ಗಿಟ್ಟು ಜಜಿದು ಬೆಂಬಿಡದೆ
ಅಟ್ಟುತ್ತ ತಲೆವಿಲ್ಲುಗೊಂಡೆಚ್ಚು ಕೆಲಬರು
ಪಟ್ಟೆಯಗಳನೆತ್ತಿ ಹೊಯ್ದು ||೮೨||

ಇಕ್ಕಿದ ಲಾವಣಿಗೆಯ ಮೇಲೆ ಹೊಯಿದೊಳ
ಹೊಕ್ಕು ಕೋಟೆಯನೇಜಿದವರ
ರಕ್ಕಸರಿಳಿಯಗೆಡಹಿದರಗಳಿಗಾಗ
ಕಕ್ಕಡೆಯಲಿ ತಿಪಿತಿಪಿದು ||೮೩||

ಕಾದ ಮಳಲು ಕಾದಂಬಲಿ ಕಾದೆಣ್ಣೆ
ಕಾದ ಬೂದಿಯ ಮೇಲೆ ಚೆಲ್ಲಿ
ಕೋದೆತ್ತಿ ಪುಲ್ಲದೊಂದೆಯ ತೆತ್ತಿಸಿ ಹಾಕಿ
ಸೀದರು ಮರುಳು ತಂಡಗಳ ||೮೪||

ಕಯಿಬೆಂದು ಮುಖಬೆಂದು ತಲೆಬೆಂದು ಬದಿಬೆಂದು
ಮಯಿಬೆಂದು ಕಣಕಾಲು ಬೆಂದು
ಪಯಿದವು ಕಂಡ ಕಡೆಯಲಿ ಮರುಳು ತಂಡ
ಅಯಿಮೊಗದನ ಹೊರೆಗಾಗಿ ||೮೫||

ಪೆಟಲ ಗುಂಡಿನ ಗಾಯ ಸಬಳ ಈಟಿಯ ಗಾಯ
ತಟುಲುಗಿದಂಬಿನ ಗಾಯ
ಕಟಹಾರದ ಗಾಯದಲಿ ಗಿರಿಜೇಶನ
ಭಟರುರುಳಿದರಗಳೊಳಗೆ ||೮೬||

ಮೊಣಕಾಲು ಮುಜಿದು ತಲೆಯ ಚಿಪ್ಪು ನೆಜಿ ಹಾಜಿ
ಹಣೆಗಣ್ಣೊಡದು ಪಲ್ಲುದುರಿ
ನೆಣಹಾಯ್ದ ಬದಿಯೆಲುಗಳು ನುಗ್ಗಾಗಿ
ಜಿಣುಗಿತು ಮರುಳ ತಂಡಗಳು ||೮೭||

ನೆಲಗುಂದು ಡಗ್ಗೆ ಬದ್ದರಿಕೆ ನಿಚ್ಚಣಿಕೆ
ನೆಳಕೊಂಡು ಗಾಯದಿ ನೊಂದು
ತೊಲಗಿದವಂಬು ಗುಂಡಿಲ್ಲದ ತಾವಿಗೆ
ಕಲಿಭೂತಗಣವೊಂದೆಸೆಯ ॥೮೮॥

ಕೆಲಬರು ಕೈಜೋಳಿಗೆ ಹರಿಗೆಯ ಮೇಲೆ
ಕೆಲಬರು ತಲೆಹೊಱೆಗಳಲಿ
ಒಲವುತ ಭೂತಗಣವು ತಿರುಗಿತು ಬೇಗ
ಸಲೆ ಶೂಲಧರನ ಪಾಳೆಯಕೆ ॥೮೯॥

ಒಱೆದ ತಂಬುಲದಱುವೆಯ ಕಟ್ಟಿ ಗಾಯವೆಂ
ದೊಱಗುತ ಮಱದು ಹಮ್ಮೈಸಿ
ಪೊಱೆಸಿಕೊಂಡ್ಯೈತಪ್ಪ ಟಕ್ಕ ಮರುಳ ಕಂಡು
ಕಱೆಕಂಠ ಗಹಗಹಿಸಿದನು ॥೯೦॥

ಹೂಡಿ ಜಗವ ತನ್ನ ಲೀಲೆಗೋಸ್ಕರವಾಗಿ
ಆಡಿಪ ಸೂತ್ರದೊಡೆಯನು
ನೋಡಿ ನಗುತ ಚಂದ್ರಮೌಳಿ ಮುಪ್ಪುರಗಳ
ರೂಢಿಗಿದರ್ತಿಗಾಳಗವು ॥೯೧॥

ಹರದರುಷನ ಮಾತ್ರದಲಿ ಗಾಯವು ಮಾಣೆ
ಹರುಷದಿ ಮೈಮುಱಿದೆದ್ದು
ಮರುಳುನಿಕರ ಭೂತಗಣವು ಬೊಬ್ಬಿಱಿವುತ
ಪುರಮೂಱು ಮುತ್ತಿತು ಮರಳಿ ॥೯೨॥

ನಾಗಭೂಷಣನ ನೆನೆಯಲು ಮರುಳು ತಂಡ
ತಾಗಿದ ಗಾಯ ಮಾಣುವವು
ಆಗಮೃತವ ತಳಿದಸುರರೆಬ್ಬಿಸುವರು
ಬೇಗದಿ ತಮ್ಮ ಬಲವನು ॥೯೩॥

ಡೆಂಕಣಿ ಮಕರ ಬಿಬ್ಬಿಗಳನೊದವೆನೆಂದು
ಶಂಕರನಾಳು ಲಾಗಿಸಲು
ಬಿಂಕದಿ ತಿರ್ರನೆ ತಿರುಗುವ ಮುಪ್ಪುರ
ಭೋಂಕನೆ ಮಾಯವಾಗಿರಲು ॥೯೪॥

ಅರಿಗಳ ಪುರವ ಕಾಣದೆ ಸಿಡಿಮಿಡಿಗೊಂಡು
ಹರನ ಬಂಟರು ಕೋಪದಲಿ
ಕರವ ಕಡಿದುಕೊಂಡು ಎಂಟುದಿಕ್ಕುಗಳನು
ಇರದೆ ನಿಟ್ಟಿಸಿ ನೋಡಿದರು ॥೯೫॥

ಗಳಿಗೆ ಸಂಖ್ಯೆಗೆ ಕೂಡಿಯಗಲುವ ಮುಪ್ಪುರ
ನಳಿನಸಂಭವನಿತ್ತ ವರದ
ಬಲುಹಿಲಿ ಶಿವನೊಬ್ಬನ ಕಣ್ಣಿಗಲ್ಲದಿ
ಸ್ಖಳಿದರು ಕಾಣಲಸಾಧ್ಯ ॥೯೬॥

ಇಂತು ಕಾದಿತು ದಿವ್ಯ ಸಾವಿರ ವರುಷವು
ಕಂತುಹರನ ಬಲದೊಡನೆ
ಪಂತವನೇನ ಪೇಳುವೆನು ಮೂಜಗದಿ ಜಾ
ದಂತ ತಾರಕನಾತ್ಮಜರ ॥೯೭॥

ಅಸುರರೊಂದಚ್ಚರಿಯ ಮಾಡುವುದನೇನ
ಉಸುರಲಳವೆ ತ್ರಿಪುರದಲಿ
ಎಸೆವ ಮಯನ ಮಂತ್ರದಿಂದ ಸತ್ತವರನೆ
ಬ್ಬಿಸುವರಮೃತವನೆ ತಳಿದು ॥೯೮॥

ಅಮೃತವು ಸೋಂಕಲಾಕ್ಷಣದಿ ಮೈಮುರಿದೆದ್ದು
ತಮತಮಗೆಲ್ಲ ಬೊಬ್ಬಿಡಲು
ಕಮಲನಾಭನು ಕಂಡನಸುರರ ಮಾಯವ
ಪ್ರಮಥಾಧಿಪಗೆ ಬಿನ್ನೈಸೆ ॥೯೯॥

ಹರಿಯು ರಾಕ್ಷಸರ ಕುಟಿಲವ ಬಿನ್ನೈಸೆ
ಪರಮ ಶಿವನು ಕೇಳಿ ನಗುತ
ಕರಸಿ ಹೇಳಿದ ಬ್ರಹ್ಮಗೆ ತ್ರಿಪುರದೊಳಿರ್ದ
ವರ ಸುಧೆಯನು ತಹುದೆಂದು ॥೧೦೦॥

ಮುರವೈರಿ ನೀ ಹೋಗಿ ತಾರಕ ಪುತ್ರರ
ವರ ಶಿವಭಕ್ತಿಯ ಬಿಡಿಸು
ಪುರದೊಳಗಣ ಪತಿವ್ರತೆಯರ ಕೆಡಿಸೆಂದು
ಗಿರಿಜೆಯರಸ ಬೆಸಸಿದನು ॥೧೦೧॥

ಜೀಯ ಪಸಾದವೆನುತ ಹರಿಬ್ರಹ್ಮರು
ಒಯ್ಯನೆ ಗಗನಕೆ ನೆಗದು
ಮುಯ್ಯಾಂತು ಮಾಯವೇಷವ ತಾಳಿ ರಾತ್ರಿಯೋ
ಳೊಯ್ಯನೆ ಹೊಕ್ಕರು ಪುರವಾ ॥೧೦೨॥

ಕೇರಿ ಕೇರಿಯ ಶೃಂಗಾರದ ಸೊಬಗನು
ತಾರಕಸುತರ ಒಲುಮೆಯ
ಊರೊಳಗಣ ಪತಿವ್ರತೆಯರ ಕಂಡಸು
ರಾರಿ ಬ್ರಹ್ಮನು ಪೊಗಳಿದರು ॥೧೦೩॥

ತನ್ನ ಪುರುಷನಲ್ಲದೆಯನ್ಯ ಪುರುಷರ
ಮುನ್ನಜೆಯರು ಕನಸಿನಲಿ
ಸನ್ನುತದಿಂ ಪುಣ್ಯದೊಬ್ಬುಳಿಯಂದದಿ
ಚೆನ್ನೆಯರೆಸದಿಹರಲ್ಲಿ ॥೧೦೪॥

ಗಂಡನುಂಡುಳಿದ ಶೇಷವನುಂಡು ತಮ್ಮಯ
ಗಂಡನೆ ದೈವವೆಂದರಿದು
ಗಂಡರಾಜ್ಞೆಯ ಮೀರದೆಸೇವೆಯಮಾಡಿ
ಕೊಂಡಿಪ್ಪ ಮುಗ್ಧೆಯರಿಹರು ॥೧೦೫॥

ಮಳಲಕೊಡನು ಮಂಜಿನುದಕದುಂಬಿಯೆ ವಿಷ
ಗಳನ ಸಿಂಬೆಯ ಮಾಡಿ ನಡವ
ಬಲುಗುಣಿ[೧] ಪತಿವ್ರತೆಯರುಗಳ ಸಿ[೨][ರಮಣಿ][೨]
ಗಳಿರ್ದರು ತ್ರಿಪುರದಲ್ಲಿ ॥೧೦೬॥

ಈ ಪತಿವ್ರತೆಯರ ಕೆಡಿಸಿದಲ್ಲದೆ ಮ[ತ್ತೆ]
ತ್ರಿಪುರ ಹಾಳಾಗದೆಂದು
ಶ್ರೀಪತಿ [೩][ಬೌದ್ಧಾವತಾರವ][೩] ತಾಳಿದ
ರೂಪನದಾರು ಬಣ್ಣಿಪರು ॥೧೦೭॥

ಕಾಮನ ತಂದೆಯ ರೂಪಿಗೆ ತ್ರಿಪುರದ
ಕಾಮಿನಿಯರು ಮನಸೋತು
ಪ್ರೇಮ ಬಲಿದು ಪತಿವ್ರತೆತನವಳಿದುಱಿ
ಕಾಮಿಸಿದರು ಬೌದ್ಧನಿಗೆ ॥೧೦೮॥

ಗಂಡನ ಮನವ ವಂಚಿಸಿ [೪][ಜಾರ][೪] ಸ್ತ್ರೀಯರು
ಮಿಂಡನ[೫][ಬ][೫]ಳಿಗೈದುವಂತೆ
ಪುಂಡರೀಕಾಕ್ಷನ ಬೆನ್ನ ಬಿಡದೆ ಬರೆ
ಬಂಡುಮಾಡಿದನವರುಗಳ ॥೧೦೯॥

ಮನೆಗೆಲಸವ ಬಿಟ್ಟು ಹೆತ್ತ ಮಕ್ಕಳ ಬಿಟ್ಟು
ಜನದ[೬][ಪವಾದ][೬]ವ ಮಱಿದು
ಘನಪತಿವ್ರತೆಯೆಂಬ ನೇಮವಳಿದು ಬೌ
ದ್ಧನ ಮಾಯಕೆ ಸಿಲುಕಿದರು ॥೧೧೦॥

ತಂದು ಕೊಡುವರು ಕರ್ಪುರವೀಳೆಯ ಸದು
ಗಂಧ ಜವಾದಿ ಕಸ್ತುರಿಯ
ಇಂದಿ[೭][ನ ಇ][೭]ರುಳಿಗೆ ನಮ್ಮ[ನೆ]ಗೆಂದು ಮು
ಕ್ಕುಂದಗೆ ಸನ್ನೆ ಮಾಡುವರು ॥೧೧೧॥

೧+ಜೆರು(ಮೂ) ೨–೨ ರೋಗಮ(ಮೂ) ೩–೩ ಬವುದ್ದವ(ಮೂ) ೪–೪ ಜಲ(ಮೂ)
೫–೫ ಬಾ(ಮೂ) ೬–೬ವರದ(ಮೂ) ೭–೭ನಿ(ಮೂ)

ನಿನ್ನೆ ಹಗಲು[೧] ನಿನ್ನ ಕಂಡದು ಮೊದಲಾಗಿ
ಅನ್ನವೆ ಸೊಗಸದೆಂದೆನುತ
ಚೆನ್ನಿಗನಿಂದಿನ್ನು ಕಣ್ಣೊಳು ಸುತ್ತಿ [೨][ಕೊಳಲು][೨]
ಇನ್ನೆಂತು ಜೀವಿಪೆವೆನುತ ॥೧೧೨॥

ಹುಸಿ ನಿನ್ನ ಮಾತ ನೋಡಿದೆ ನಾ ಬಂದು
ಸಸಿಮಾವಿನ ಬನದೊಳಗೆ
ಅಸಿಯಳೆ ಕರವನು ಬಿಡುಯೆಂದೆನುತಲಿ
ಅಸುರಾಂತಕ ಮುಖದಿರುಪೆ ॥೧೧೩॥

ನೋಡಿ ಸೋಲಿಸಿದನು ಕೆಲಬರ ಸವಿಮಾತ
ನಾಡಿ ಸೋಲಿಸಿ ಕೆಲಕೆಲರ
ಕೂಡಿ ಮುಗುಳ್ನಗೆಯಿಂದ ಕೆಲರ ಮರು
ಳ್ಮಾಡಿದನಸುರಾಂತಕನು ॥೧೧೪॥

ಕಪಟವೇಷದಿ ಕೃಷ್ಣ ಬೌದ್ಧವ ಬೋ[ಧಿ]ಸಿ
ತ್ರಿಪುರದ ರಕ್ಕಸರುಗಳ
ಸುಪಥದ ಶಿವಭಕ್ತಿಗಳ ಮತ್ತೆ ಬಿಡಿಸಿದ
ಉಪಮಿಸಲಾ ಬವುದ್ಧನನು ॥೧೧೫॥

ಇತ್ತ ಬ್ರಹ್ಮನು ಕಾಮಧೇನುವ ರೂಪಾಗಿ
ಬಿತ್ತರದಮೃತದ ಕೊಣನ
ಮತ್ತೆ ಹೊಕ್ಕೊಡನೆ ಸೇದಿದನಾ ಸುಧೆಯನು
ಬತ್ತಿತು ಬಾವಿ ಧೂಳೇಳೆ ॥೧೧೬॥

ಹರಿವಿರಂಚಿಗಳಾಗ ತ್ರಿಪುರವ ಹೊಱವಂಟು
ಪರಮೇಶ್ವರನೆಡೆಗೈದಿ
ಕರವ ಮುಗಿದು ತಾವು ನೆಗಳಿದ ಕಾರ್ಯವ
ನಿರದೆ ಬಿನ್ನಹವ ಮಾಡಿದರು ॥೧೧೭॥

೧+ ಕಂಡದು(ಮೂ) ೨-೨ಕೊಳಲಲು(ಮೂ)

ಅರ್ಧೇಂದುಮೌಳಿ ಚಿತ್ತೈಸು ತ್ರಿಪುರದೊಳ
ಗಿರ್ದ ಸ್ತ್ರೀಯರು ಧರ್ಮವಳಿದು
ಬಿದ್ದರು ಕಾಮದಿ ಶಿವಭಕ್ತಿಯಡಿಯಾಗಿ
ನ್ನಿದ್ದುರುಟರ ಕೊಲಲೆಣಿಸು ॥೧೧೮॥

ತೆಗೆತೆಗೆ ಹಣೆಗಣ್ಣ ನಗರ ಮೂರನು ಸುಟ್ಟು
ಜಗವ ನೀ ಪಾಲಿಸೆಂದೆನಲು
ನಗುತಲಭವ ದಿವಿಜರ ಬಿನ್ನಹಕೆ ಮೆಚ್ಚಿ
ಗಗನಪುರವ ನೋಡಿದನು ॥೧೧೯॥

ಸಾವಿರ ವರುಷ ಮುಪ್ಪುರವ ನೋಡಿದಡದು
ದೇವರ ಪರಮಾಲಿಗಳಿಗೆ
ಭಾವಿಸೆ ಹುಸಿ ದಿಟವೆಂಬುವನಜೀದೀ ವೇ
ದಾವಳಿ ಬಲ್ಲರಾರದನು ॥೧೨೦॥

ಸುರರ ಸಾವಿರ ವರುಷವು ಪರಿಯಂತರ
ಪುರಮೂಜು ಕೂಡುವಂದವನು
ಹರಮೊಗವೆತ್ತಿ ನೋಡಲು ಕಣ್ಣ ನೀರೊಕ್ಕ
ವರ ರುದ್ರಾಕ್ಷಿ ಪುಟ್ಟಿದುದು ॥೧೨೧॥

ಬಲ್ಲಿದ ಬಿಲ್ಲು ಚಿಗಿತು ವೃಕ್ಷವಾಗಲು
ನಿಲ್ಲದೆ ಹರನ ಕೈಯೊಳಗೆ
ಕಲ್ಲ ಮಗಳು ಕಂಡು ಚೋದ್ಯಮಾಡುತಲಿರೆ
ಬಿಲ್ಲ ಪತ್ರೆಯು ಪುಟ್ಟಿದುದು ॥೧೨೨॥

ಕೂಡಿದುವಾ ಸಮಯದಿ ತ್ರಿಪುರದ ಕೀಲ
ನೋಡಿ ಕಂಡನು ಕಾಮಾರಿ
ಕೂಡೆ ಬೃಹಸ್ಪತಿ ಬಿನ್ನೈಸಿದ ಚಂದ್ರ
ಚೂಡಗೆ ಸುಮೂಹೂರ್ತವನು ॥೧೨೩॥

ಬಿಲ್ಲ ತುಡುಕಿ ಶಿವ ನಗುತ ಜೇವಡೆಯಲು
ತಲ್ಲಣಿಸಿತು ಮೂಱು ಜಗವು
ಹಲ್ಲಣಿಸಿದ ಕುದುರೆಯ ಬ್ರಹ್ಮ ಕುಣಿಸಿದ
ನಿಲ್ಲದೆ ವೇದ ವಾಜಿಯನು ॥೧೨೪॥

ಬಲದಲಿ ಬ್ರಹ್ಮಾದಿಗಳು ಕೋಟಿ ಎಡದಲಿ
ನಳಿನಾಕ್ಷರು ಕೋಟಿ ಮುಂದೆ
ಉಲಿವುತಿಂದ್ರರು ಕೋಟಿ ಜಯಯೆಂದೆಱಗಿತು
ನಲಿದು ಶಿವನ ಬಳಸಿನಲಿ ॥೧೨೫॥

ಕೂಡಿದ ಮುಪ್ಪುರಗಳ ಕಂಡು ಕಾಮಾರಿ
ಮೂಡಿಗೆಯಿಂದಂಬಸುಗಿಯೆ
ಬಾಡಿತು ಹದಿನಾಲ್ಕು ಲೋಕವು ಸರಳಿನ
ಜೋಡುಗಿಡಿಯ ಹೊನಲಿನಲಿ ॥೧೨೬॥

ತೊಳಗಿತು ಶತಕೋಟಿ ಮಿಂಚಿನೊಬ್ಬುಳಿಯಂತೆ
ಬಳಲುಗಿಡಿಯ ಹೊರಳಿಯಲಿ
ಎಲೆದೇವ ಕೊಡುಕೊಡು ಬೆಸನನೆನುತ ಬಾಣ
ಉಲಿದುದು ಶಿವನ ಹಸ್ತದಲಿ ॥೧೨೭॥

ಕಿಬುಬೊಬು ಕಿಬೊಯೆಂದು ಬಾಣ ಬೊಬ್ಬಿಱಿಯಲು
ವಿಬುಧರು ಜಯಜಯಯೆನಲು
ಕಬಳಿಸಿದುದು ಬ್ರಹ್ಮಾಂಡ ಮಂಡಲವಾಗ
ನಭದೊಳು ಬೆದಱೆ ರಕ್ಕಸರು ॥೧೨೮॥

ತಿಂಗಳ ಕಳೆಗೆ ಬೆಳ್ದಾವರೆ ಮುಗಿವಂತೆ
ಪಿಂಗದೆತ್ತಿದ ಕರಗಳಲಿ
ಮುಂಗುಡಿಯಲಿ ಸಚರಾಚರರುಘೆಯೆನೆ
ಗಂಗಾಧರ ನಸುನಗುತ ॥೧೨೯॥

ಮಂಡಿಯನಿಕ್ಕಿದಹವು ನಸುಬಾಗಿ ಕೋ
ದಂಡದಿ ಸರಳನು ಹೂಡಿ
ಖಂಡೇಂದುಧರ ಬೊಬ್ಬಿಟಿದೆಸೆಯುರಿ ಹೊಗೆ
ಕೊಂಡು ಮುಸುಕಿತಂಬರವ ॥೧೩೦॥

ವೇಡಯಿಸಿತು ಪಾಸುಪತಬಾಣ ದಳ್ಳುರಿ
ಕೂಡೆ ಮುಪ್ಪುರದ ಸೀಮೆಯನು
ಓಡಿಸಿ ಬೆನ್ನಟ್ಟಿ ಸುಡತೊಡಗಿತು ನಾಡ
ಕೇಡುಗ ದನುಜರನೆಲ್ಲಾ ॥೧೩೧॥

ಕೋಪದಲುರಿದೆದ್ದು ಹಣೆಗಣ್ಣ ತೆಗೆದನು
ಕಾಪಾಲಿ ಮತ್ತೆ ಬೊಬ್ಬಿಟಿದು
ವ್ಯಾಪರಿಸಿದುದುರಿ ಚತುರ್ದಶ ಲೋಕವ
ತಾಪತ್ರವೆಸಗಿತೇನೆಂಬೆ ॥೧೩೨॥

ಘುಡುಘುಡು ಛಿಳಿ ಛಿಳಿ ಛಿಟಿಛಿಟಿಲೆಂದುದು
ಮೃಡನುರಿಗಣ್ಣಿನ ಕೋಪ
ಸುಡತೊಡಗಿದುದು ಬ್ರಹ್ಮಾಂಡ ಮಂಡಲವನು
ಕಿಡಿಗಳ ಪರಹಿಯೊಗ್ಗಿನಲಿ ॥೧೩೩॥

ಅದೆ ಹೊತ್ತುತದೆ ಹೊಗವುತಲದೆ ದಳ್ಳುರಿ
ಅದೆ ಸುಡುತದೆ ತ್ರಿಪುರವನು
ಅದೆ ಕೆಂಡದ ಮಳೆ ಮುಗಿಲು ಕಱವುತದೆ
ಅದೆಯೆಂದಮರರುಲಿದರು ॥೧೩೪॥

ದಳದಳನುದುರಲು ತಾರಕಿ ಗಿರಿ ಸಂ
ಕುಳ ಚಿಟಿ ಚಿಟಿಲೆಂದು ಸಿಡಿಯೆ
ಘಳಿಲನೆಸದುದು ಮುಗಿಲು ಕವುರಿಡೆ ಮು
ಪ್ಪೊಳಲ ಸುಟ್ಟನು ಗಿರಿಜೇಶ ॥೧೩೫॥

ಬಿರಿದುದು ಭೂಮಿಯು ಜಡಿದವು ಕುಲಗಿರಿ
ಉರಿದವು ಕರಿಗಳೆಂಟುಗಳು
ಕೊರಗಿದವಬುಜ ಬ್ರಹ್ಮಾಂಡ ಮಂಡಲವೆಲ್ಲ
ಶರಧಿಗಳೇಳು ಬತ್ತಿದವು ||೧೩೬||

ಬೆಂದವಾ ಪುರಮೂಱು ಸರಳಿನುಬ್ಬಟೆಯೊಳು
ಮುಂದುದುರುವ ಕಿಡಿಗಳಲಿ
ಇಂದುಧರನ ಕಿಚ್ಚುಗಣ್ಣಿಗಾಹುತಿಯಿಲ್ಲ
ವೆಂದುಱುಹಿತು ತ್ರಿಭುವನವ ||೧೩೭||

ಅಱೆ[೧][ಯಟ್ಟಿ][೧] ಮೂಜಗವನು ಬಾಣ ಸುಡುತಿರೆ
ನೆಱೆ ಸುರರುರಗ ಮನುಜರು
ಮೊಱೆಯೋಗಿ ಶಿವಘೋಯೆನುತೊಱಲುವ ರಭಸದಿ
ಮಱೆಯ ರಕ್ಕಸರಾ ಶಿವನ ||೧೩೮||

ಹರನ ಸರಳು ನೊಸಲುರಿ ಬಲುಗೊಂಡುದು
ದೊರೆಗಳ ಮುಟ್ಟದೆ ಬಳಸಿ
ವರ ರುದ್ರಾಕ್ಷಿ ವಿಭೂತಿ ಪಂಚಾಕ್ಷರಿ
ಸ್ಮರಿಪರ ಬಲುಮೆಯಿನ್ನೆಂತೊ ||೧೩೯||

ಅರರೇ ಭಲರೇ ರೇವುರೆ ದಲ್ಲಣರೆ ಭಾ
ಪುರೆ ಮಝು ಭಾಪು ಭಾಪೆನುತ
ದಿರುರೆ ದೇವು ಚಾಂಗುರೆಯೆಂದು ಸಚರಾ
ಚರರು ಪೊಗಳಿದರಭವನ ||೧೪೦||

ಆವ ಚಾಳಕವೊ ಆವೆಸುಗೆಯೊ ಬಿಡುಮುಡಿ
ಆವ ಸಘಾಟದ ಬಲುಮೆ
ದೇವನೆ ನಿಮಗಲ್ಲದುಳಿದವರ್ಗಿಲ್ಲೆಂದು
ಆ ವಿಬುಧರು ಪೊಗಳಿದರು ||೧೪೧||

೧–೧ ಯೇಟ(ಮೂ)

ಅತ್ತಲೊಲಿದು ತಾರಕ ತನುಜರು ಜಪಿ
ಸುತ್ತಿರೆ ಪಂಚಾಕ್ಷರಿಗಳ
ಚಿತ್ತಜವೈರಿಯ ಚರಣದೊಳಗಡಗೆ ಜ
ಗತ್ತಿಗೊದಗಿತಾಶ್ಚರ್ಯ ॥೧೪೨॥

ಸುರರ ನೋಯಿಸಿದ ಕಥನದಿಂದ ದೈತ್ಯರು
ಸರಳಿನುಬ್ಬಟೆಯೊಳು ನೊಂದು
ಹರ[ನ] ನಿರೀಕ್ಷಣೆ ಮಾತ್ರದೊಳವರಿಗೆ
ವರರುದ್ರ ಪದವಿ ತಾನಾಯ್ತು ॥೧೪೩॥

ಮಿಕ್ಕಿನ ರಕ್ಕಸರೆಲ್ಲರಿಗೊಲಿದಿತ್ತ
ಅಕ್ಕಜಗೊಳತುಳ ಪದವಿಯ
ಮುಕ್ಕಣ್ಣನ ಜಿಡದೀಕ್ಷಿಸಿದವರಿಗೆ
ಒಕ್ಕಲಿಕ್ಕವು ಪಾತಕವು ॥೧೪೪॥

ಜೀವನವಿತ್ತನು ಕಾದಿ ಮಡಿದ ದೈ
ತ್ಯಾವಳಿಗತಿ ಕರುಣದಲಿ
ದೇವತೆಗಳು ಕೊಂಡಾಡುತಿರ್ದರು ಕಂ
ಡಾವ ಕೃಪಾಳುವ ಶಿವನ ॥೧೪೫॥

ತನ್ನ ಪೌರುಷವನು ಕೊಂಡಾಡಬೇಕೆಂದು
ಪನ್ನಗಧರನರ್ತಿಯಲಿ
ಸನ್ನುತ ಭಟನಿಕರವನು ಸೃಷ್ಟಿಸಿದನು
ಉನ್ನತ ಲೀಲೆಯೊಳೊಲಿದು ॥೧೪೬॥

ಇಂದುಧರನ ಹೂಂಕರಣೆಯೊಳುದಿಸಿದ
ಅಂದು ಮೊದಲು ಭಟನಿವಹ
ಮಂದಾಕಿನೀಧರನನು ಕೊಂಡಾಡಿತು
ಮುಂದೆಡಬಲದಿ ಕೈಯೆತ್ತಿ ॥೧೪೭॥

ಶಿವನಂಬಿನ ಕಿಡಿ ತಾಗಿದಡಸುರರ
ನಿವಹಕಾದುದು ರುದ್ರ ಪದವಿ
ತವೆ ಪಣೆಗಣ್ಣುರಿ ಬೊಬ್ಬಿಡುತಲಿ ತ್ರಿ
ಭುವನವನದು ಸುಡುತಿರಲು ॥೧೪೮॥

ಶರಣದೇಹಿಕ ತ್ರಾಹಿ ಜನ್ಮವಿದೂರ ತ್ರಾಹಿ
ಕರುಣಾರ್ಣವ ತ್ರಾಹಿ ತ್ರಾಹಿ
ಗಿರಿಜೆಯರಸ ತ್ರಾಹಿ ಮರಣರಹಿತ ತ್ರಾಹಿ
ಹರರಕ್ಷಿಸೆಂದರು ಸುರರು ॥೧೪೯॥

ಭಾಳಲೋಚನನೆ ಚಿತ್ತೈಸು ಮುಪ್ಪುರವಿಂದು
ಹಾಳಾಯಿತಂಬಿನುರಿಯಲಿ
ಮೂಲೋಕವೆಲ್ಲವು ಉರಿದು ಕೆಡುತಲದೆ
ಪಾಲಿಸು ಪಣೆಗಣ್ಣ ಮುಚ್ಚು ॥೧೫೦॥

ಬಿರಿದಿನ ದೇವತೆಗಳ ಬಿನ್ನಹಕೆ ಮೆಚ್ಚಿ
ಕರುಣಾರ್ಣವ ನಸುನಗುತಾ
ಹರ ತನ್ನ ನಿಟಿಲಾಕ್ಷಿ ಮುಚ್ಚೆ ತ್ರಿಜಗದೊಳು
ಉರಿ ತಗ್ಗಿ ತಲ್ಲೀಯದಲ್ಲಿ ॥೧೫೧॥

ಬದುಕಿದೆ ವಿಷ ಪ್ರಳಯದೀಶ ನಾವೆಂದು
ತ್ರಿದಶ ನಾಯಕರುಮ್ಮಯದಿ
ವದವಿ ತಮ್ಮಯ ತಲೆಯನು ತಡಹುತ ಬಂದು
ಮದನವೈರಿಗೆ ಎರಗಿದರು ॥೧೫೨॥

ದೇವರ ದೇವನೆ ಶರಣ ರಕ್ಷಾಮಣಿ
ಪಾವನಮೂರ್ತಿಯಜಾತ
ಪೂವಿಲ್ಲ ಸಂಗವಿದಾರಣನೆನುತಲಿ
ತೀವಿ ಪೊಗಳಿತು ವಾದಿಗಳು ॥೧೫೩॥

ಅರಮನೆ ಬಾಗಿಲ ಮುಂದೆ ನಂದಿಯನಿಳಿ
ದುರುತರ ಕಾರುಣ್ಯದಲಿ
ಹರಿಪರ ಮೆಟ್ಟಿ ಪುರಾತರು ಮೊದಲಾದ
ಸುರರು ಸಹಿತ ಬಂದ ಶಿವನು ॥೧೬೧॥

ಮುಪ್ಪುರಗಳ ಸುಟ್ಟು ಸುರರೆಡರುಗಳನು
ತಪ್ಪಿಸಿ ಮುಕ್ಕಣ್ಣನೊಲಿದು
ಒಪ್ಪುವ ರಜತಗಿರಿಗೆ ಬರೆ ಭವನದೊ
ಳೊಪ್ಪಿತು ಜಯಯೆಂಬ ರಭಸ ॥೧೬೨॥

ಚಂಡೇಶ ಪುತ್ರರು ಕೊಂಡಾಡುತಿರೆ ಕೋ
ದಂಡ ಸಂಭವ ಜಯಯೆನಲು
ಪುಂಡರೀಕಾಕ್ಷನು ಕೈಲಾಗಗೊಡಲು ಉ
ದ್ದಂಡ ಶಿವನು ಮಂಡಿಸಿದನು ॥೧೬೩॥

ತೊಳಗುವ ಭಸಿತ ರುದ್ರಾಕ್ಷಿ ಕುಂಡಲಗಳ
ಪೊಳೆವ ಕೆಂಜೆಡೆ ಸುಲಿಪಲ್ಲು
ಪುಲಿಚರ್ಮದುಡಿಗೆಯ ಚಂಡೇಶ ಪುತ್ರರು
ನಲಿದು ಶಿವನ ಪೊಗಳಿದರು ॥೧೬೪॥

ತ್ರಿಪುರಾಂತಕ ತ್ರಿಪುರಾರಿ ತ್ರಿಪುರನಾಶ
ತ್ರಿಪುರಮರ್ದನ ಭಾಪುರೆನುತ
ತ್ರಿಪುರ ಸಂಹಾರನೀಶ್ವರನ ಪೊಗಳುತಿರೆ
ಉಪಮಿಸಲಜಿಯೆ ಭಟರನು ॥೧೬೫॥

ತುಂಬಿದ ಸುರಮುನಿ ನಿಕರದ ಮಧ್ಯದೊ
ಳಂಬಕತ್ರಯನ ಕಾಣುತಲಿ
ಅಂಬಿಕೆಯಾರತಿಯೆತ್ತಿ ಜಯತು ತ್ರಾಹಿ
ಯೆಂಬುತ ಪಾದಕೆಱಗಿ ॥೧೬೬॥

ದಿರುರೆ ಕಾಲಾಂತಕ ಮಝುರೆ ವಾಣೀಶನ
ಶಿರಕರ ಚಾಂಗು ಭಲರೆ
ವರ ಹೇಮಾದ್ರಿ ಕೋದಂಡ ದಣುರೆಯೆಂದು
ಹರನ ಪೊಗಳಿತು ವಾದಿಗಳು ॥೧೫೫॥

ಮೆಲ್ಲನೆ ರಥವನಿಳಿದು ಶಿವನೇರಲು
ಹಲ್ಲಣಿಸಿದ ನಂದಿಯನು
ಫುಲ್ಲಶರಾರಿ ಮಡದಲೊತ್ತೆ ನೆಗದುದು
ಮೆಲ್ಲನೆ ಗಗನದ ಹೊಱಿಗೆ ॥೧೫೬॥

ತಿರುಗಿತು ಸರಸಿಜ ಪಡೆ ನದಿ ನಕ್ಷತ್ರ
ಉರಗ ಸುರರು ನರರುಗಳು
ಗರುಡ ಗಂಧರ್ವ ಕಿನ್ನರರು ಕಿಂಪುರುಷರು
ಹರನೆಡಬಲದಲುಗ್ಗಡಿಸೆ ॥೧೫೭॥

ತಿರುಗಿದ ಕೈಲಾಸ ಪಟ್ಟಣಕಭವನು
ಪುರಮೂಱ ಸಂಹಾರ ಮಾಡಿ
ವರದೇವ ದುಂದುಭಿಯನು ಪೊಯಿಸುತ ಗಂಗಾ
ಧರ ಬಂದ ನಂದಿಯನೇಱ ॥೧೫೮॥

ಈ ಬಂದನೆ ಶೃತಿನಿವಹ ಶಿರೋಮಣಿ
ಈ ಬಂದನೆ ಚಂದ್ರಮೌಳಿ
ಈ ಬಂದನೆ ಜಗದೊಡೆ[ಯ]ನೆನುತ ಭುಜ
ಗಾಭರಣನ ಪೊಗಳಿದರು ॥೧೫೯॥

ಉಪ್ಪರ ಗುಡಿ ತೋರಣ ದಿವ್ಯ ಮಾಣಿಕ
ದರ್ಪಣದೋರಣಗಟ್ಟಿ
ಒಪ್ಪುವ ರಜತ ತೋರಣವೊಪ್ಪಿ ತ್ರಿಜಗ
ದಪ್ಪ ಬಂದನು ಅರಮನೆಗೆ ॥೧೬೦॥

ಮೂಜಗನ್ಮಾತೆ ಗಿರಿಜೆಯಾರತಿಯೆತ್ತೆ
ರಾಜಮೌಳಿಯನಿದಿರ್ಗೊಳಲು
ರಾಜದನಿಯೊಪ್ಪಿದ ರವಿ ಶತಕೋಟಿ
ತೇಜದಿ ಪ್ರಮಥ ನಾಯಕನು ॥೧೬೭॥

ಬೆಳ್ಳಿಯ ಬೆಟ್ಟವ ಮೆಲ್ಲನಡರಿ ಪ್ರಾಣ
ದೊಲ್ಲಭೆ ಗಿರಿಜೆಯು ಸಹಿತ
ಸಲ್ಲೀಲೆಯಿಂದೊಪ್ಪಿ ಜಗವ ಪಾಲಿಸುತಿರ್ಪ
ಪುಲ್ಲಸರಸವೈರಿ ಶಿವನು ॥೧೬೮॥

ಹರನೊಪ್ಪಿದ ಶುಭಕರನೊಪ್ಪಿದ ಶಶಿ
ಧರನೊಪ್ಪಿದ ಪಾರ್ವತಿಯ
ವರನೊಪ್ಪಿದ ಸುಸ್ಥಿರನೊಪ್ಪಿದನೀ
ಶ್ವರನೊಪ್ಪಿದನು ಶೃಂಗರದಿ ॥೧೬೯॥

ದೇವನೊಪ್ಪಿದ ಕರುಣಾಪನೊಪ್ಪಿದನೆಮ್ಮ
ಜೀವನೊಪ್ಪಿದ ನಂಬಿದವರ
ಓವಿ ಸಲಹುವನೊಪ್ಪಿದನೆಮ್ಮ ನಂಜುಂಡ
ದೇವನೊಪ್ಪಿದನರ್ತಿಯಲಿ ॥೧೭೦॥

ಈಶನೊಪ್ಪಿದನಘನಾಶನೊಪ್ಪಿದ ಭವ
ಪಾಶಹರನೊಪ್ಪಿದನು
ಶಾಶ್ವತಮೀವ ಸರ್ವೇಶನೊಪ್ಪಿದನೆಮ್ಮ
ವಾಸನರ್ಚಿತನೊಪ್ಪಿದನು ॥೧೭೧॥

ಮುಪ್ಪುರಹರ ಸರ್ಪಕುಂಡಲನೊಪ್ಪಿದ
ಕರ್ಪೂರಗೌರನೊಪ್ಪಿದನು
ತಪ್ಪದೆ ವರವೀವ ಸರ್ವೇಶನೊಪ್ಪಿದ
ಅಪ್ರತಿಮನು ಒಪ್ಪಿದನು ॥೧೭೨॥

ಇದು ವೇದ ಸಿದ್ಧಾಂತದ ಕಥೆ ಕರ್ಮವ
ನೊದವ ಪುಣ್ಯದ ನೆಲೆವೀಡು
ಮುದದೊಳೊಲಿದು ಕೇಳ್ವರಿಗೆಲ್ಲ ಗಣ ಸಂ
ಪದವನೀವನು ಶಿವನೊಲಿದು ॥೧೭೩॥

ಹರಕವಿ ಚರಣಕಮಲ ಮಧುಕರನುಜು
ತರ ಶಬ್ದಾದಿ ಗಂಭೀರ
ಗರುವ ತಿಮ್ಮಣ್ಣ ಮಂತ್ರಿಯಸುತ ಲಿಂಗಯ್ಯ
ನೊರದನೀ ತ್ರಿಪುರದಹನವ ॥೧೭೪॥

ಬಿರಿದು ಸಾಳುವನೆಡವಂಕನಧಿಕ ಪೊಳ
ಲರಸು ಹಂಪೆಯ ನಾಯಕನ
ವರಭುಜ ತಿಮ್ಮಣ್ಣ ಮಂತ್ರಿಯಾತ್ಮಜನು ಲಿಂ
ಗರಸನೊರದನೀ ಕೃತಿಯ ॥೧೭೫॥

ರಸದಾಳಿಯ ಮಾವಿನ ತನಿವಣ್ಣಿನ
ಒಸರುವ ಪೊಸ ಜೇಂಗೊಡನ
ಪೊಸ ಸವಿಯಂತಿರೆ ತ್ರಿಪುರದಹನ ಕಥೆ
ಉಸುರಿದ ಶಿವಕವಿ ಲಿಂಗ ॥೧೭೬॥

ಪಂಚಮುಖನೆ ತ್ರ್ಯೈಪಂಚಂಬಕ ವರ
ಪಂಚಶರನನುರುಪಿದನೆ
ಪಂಚೇಂದ್ರಿಯ ದೂರನ ಮಹಾಕಥೆಯಿದು
ಪಂಚಮ ಸಂಧಿ ಸಮಾಪ್ತ ॥೧೭೭॥

ಈ ಶಿವಕಥೆಯನು ಕೇಳಿದವರ ಪಾಪ
ನಾಶವಹುದು ನಿಮಿಷದಲಿ
ಲೇಸ ಕೊಡುವ ಕೈಲಾಸ ಪದವ ಗಿರಿ
ಜೇಶನೊಲಿದು ಕರುಣದಲಿ ॥೧೭೮॥

ಚಂದ್ರಶೇಖರ ಭುಜಗೇಂದ್ರ ಭೂಷಣ ವಿಷ
ಕಂದರನಿಂದ್ರವಂದಿತನೆ
ನಂದಿಸಿಂಧನ ಮಹಿಮಾಬ್ಧಿ ವರ್ಣನೆಗಳ
ಸಂಧಿ ಮುಗಿದುದ್ಯೈದನೆಯ ॥೧೭೯॥

ಅಂತು ಸಂಧಿ ೫ಕ್ಕಂ [1][ಪದ ೧೦೨೦ಕ್ಕಂ][1] ವೃತ್ತ ೬ಕ್ಕಂ, ಕಂದ ೨ಕ್ಕಂ

ಮಂಗಳ ಮಹಾಶ್ರೀ.

●

೧–೧ ಪದ ೧೦೦೯ ಕ್ಕಂ(ಮೂ)

ಗದುಗಿನ ಗುಡಿಶೆಟ್ಟಿ ವಿರಚಿತ

ಮನ್ಮಥಮುಕುರ

ಸಂಧಿ : ಒಂದು

[೧]ಶ್ರೀ ಗಿರಿಜಾನನಪದ್ಮ ದಿವಾಕರ
ಭಾಗೀರಥೀ ಮನೋರಾಜಾ
ಸೋಗೆನವಿಲನೇರಿದನಯ್ಯನೇ ಕೃಪೆ
ಯಾಗಯ್ಯ ಮತಿಗೆ ಮಂಗಳವ ॥೧॥

ನಿಡಿದಾದ ರತ್ನದ ಕುಡಿಗಳೊ ಸುವರ್ಣ್ಣಳ
ಯುಡಿಗಳೊ ಪವಳ ಮುಂಬರಿವ
ಕುಡಿಗಳೊ ಮದನನ ತಡೆಗಳೊ ಭಾಳಾಕ್ಷಿ
ಕಿಡಿಯಪ್ಪ ಜೆಡೆಗೊಂದಿಪೆನು ॥೨॥

ನಿ[೨][ಡು][೨] ಜಡೆ ಮಡಲೆಡೆ ನಡುಗಡಲಿನ ತಡಿ
ಯುಡುಗಡಲೊಡೆಯನಂಗವನು
ಅಡಸುಗುಳ್ಳನ ತೊಡಿಗೆಯ ತೊಡಮಯ್ಯಾಂತ
ಕಿಡಿಗಣ್ಣ ಮೃಡನಿಗೆ ಶರಣು ॥೩॥

ಮೆಟ್ಟಿದ ದನುಜನುಂಗುಷ್ಠದಿ ಪೊಳವಕ್ಷಿ
ದಟ್ಟಿ ವ್ಯಾಘ್ರಾಜಿನ ಫಣಿಯಾ
ಕಟ್ಟಿದ ಕಂಕಣ ಕರಪಾತ್ರೆ ಶಿವ ನಿಮ್ಮ
ಕಟ್ಟಳೆ ಬಣ್ಣಿಪರಾರು ॥೪॥

ಗೋಪತಿ ಗೋಧರ ಗೋವಾಂಘ್ರಿ ಗೋಕರ್ಣ
ಗೋವೈರಾಂಜನ ಮಧ್ಯ
ಗೋಮಯ್ಯಗೊಲಿದು ಗೋವಿತ್ತನೆ ಗೋವಿಶ್ವ
ಗೋರಾಜರಾಜಗೆ ಶರಣು ॥೫॥

---

೧. + ಶ್ರೀಗುರುವೆ ಗತಿ. ಶ್ರೀ ವೀರಭದ್ರಾಯ ನಮಃ, ಮನ್ಮಥ ಮುಕುರ ಬರುವುದಕ್ಕೆ ಶುಭಮಸ್ತು ನಿರ್ವಿಘ್ನಮಸ್ತು (ಮು)

೨–೨. ಡಿ (ಮೂ)

ಹರಿಯರಡ ಹರವಾಗಿಪ ಹರಿಕರ್ಣ
ಹರಿಯೇರಿ ಹರಿಯಿಂದ ಧುರದಿ
ಹರಿಯಡಿ ಮಾರ್ಗವಳಲತ್ರಿ ದಹಿಸಿದ
ಹರಿಧರಗಾನು ಒಂದಿಪೆನು ॥೬॥

ಶಿವೆವರ ಶಿವೆಧರ ಶಿವೆಕರ ಶಿವೆಕರ್ಣ
ಶಿವೆಯೇರಿ ನಡವನ ಪಿತಗೆ
ಶಿವೆಯಾ[ಣ್ಮ]ನ ಶಿರಕರಮಂ ಸಿಂಗರ
ಶಿವಗೊಂದಿಪೆ ನಲವಿನಲಿ ॥೭॥

ಶೃಂಗಾರ ಹಾಸ್ಯ ಕರುಣ ವೀರ ರೌದ್ರತೆ
ಅಂಗ ಭಯಾದ್ಭುತ ಶಾಂತ
ಹಿಂಗ ಬೀಭತ್ಸೊಂಬತ್ತು ರಸವನಾಂತ
ನಂಘ್ರಿಗೆ ನಾ ನಮಿಸುವೆನು ॥೮॥

ಜನನಿಗಿಂದ[೧][ಲೆ][೧] ಮುಂದೆ ಜನಿಸಿ ಬಾಲಕನಾಗಿ
ಮನಗೆಲವಿನ ಮುದ್ದನೀವ
ಅನುವಿಲಿಯವರರ್ಥಿಯ ಸಲೆ ಸಲಿಸಿದ
ನನು ನೆನವೆನು ಕೃತಿಯೊಳಗೆ ॥೯॥

ಪತಿಯಿರೆ ಪರಪುರುಷರಿಗೊಧುವಾಗಿಪ
ಸತಿ ಜಾರೆಯಲ್ಲದ ಜನಕೆ
ಹಿತವೆನಿಸುವಳಾಳ್ದನಿಗರೆಮ್ಮೈಯ್ಯಿತ್ತನ
ನುತಿಸುವೆನೀ ಕೃತಿಯೊಳಗೆ ॥೧೦॥

ಗಂಡನಳಿಯೆ ಬಾಳುವೆಗೆಡದಲಿ ಸರಿ
ಮಿಂಡಿ ಮುತ್ತೈದೆಯೆನಿಸುವಳೆ
ದಂಡಿಯಾಗಿಯೆ ಶಿರವಾಂತು ನಿಂದನ ಹಾರ
ಗೊಂಡ ಸಿಂಗರಿಗಗೊಂದಿಪೆನು ॥೧೧॥

ಪಾರ್ವತಿ ಶಂಕರೀಶ್ವರಿ ಸರ್ವೇಶ್ವರಿ
ಯುರ್ವಿಜಾನನೆ ಗಿರಿಜಾತೆ

೧–೧ ತಿ(ಮೂ)

ಗೀರ್ವಾಣರಾಯವೊಂದಿತೆ ಪಾದ ಪಂಕಜೆ
ಸೋರ್ಮುಡಿ ಸೊಬಗೆಗೆ ನಮಿಪೆ ॥೧೨॥

ಮುತ್ತುದಲೆಗ ಮೂಗ್ಯೆಯಿಂದ ಪಿಡಿದುಂಬ
ಹತ್ತಿಲಿಯಾಹಾರದವನಾ
ಸುತ್ತಿದೊಡಲ ಶೃಂಗರ ದಾಡೆಗ ನಿನ್ನಾ
ಅರ್ತಿಯಿಂದಲಿ ಬಲಗೊಂಬೆ ॥೧೩॥

ಮುರಿಗೊಂಬು ಮುರಿದ ಸೊಂಡಿಲ ಹೇರಂಬನೆ
ಗಿರಿಜೆಯ ವರಸುತ ಬೆನವಾ
ಹರನ ಹಿರಿಯ ಮಗ ಲಂಬೋದರ ನಿನ್ನ
ಸ್ಮರಿಸುವೆನೀ ಕೃತಿಯೊಳಗೆ ॥೧೪॥

ನೆತ್ತಿಯಾರದೆ ತತ್ತಿಗುರುಕನ ಬೆನ್ನೇರಿ
ಸುತ್ತುವ ನಯನವೀರೇಳು
ಪೃಥ್ವಿಯಲೆರಡಡಿಯೂರಿ ನಡವ ಮೇಲೆ
ತತ್ತುಗಾಲೆರಡಗೆ ಶರಣು ॥೧೫॥

ಹತ್ತೇಳು ತಲೆ ಕೆಂಪು ಮತ್ತಾಱು ತಲೆ ಕಪ್ಪು
ಹೆತ್ತವರೊಡಲ ಸುಡುವನು
ಹೊತ್ತು ಮೆರವ ನಿತ್ಯಾನಂದ ಸುಖಿಯನು
ಅರ್ತಿಯಿಂದಲಿ ಬಲಗೊಂಬೆ ॥೧೬॥

ಕಿಡಿಗಣ್ಣು ನಿಡಿದಾಡೆ ಪಿಡಿದ ಹಲಗೆ ಶೂಲ
ತೊಡರು ಹಾಪೆಗಳುಲಿವುತಲಿ
ಜಡಿವ ಖಂಡೆಯ ಫಡಫಡಯೆಂಬ ವೀರಗೆ
ನಡುಗದೆಯಿದಿರಹರಾರು ॥೧೭॥

ದಕ್ಷ ಮಖಾಗ್ನಿಗೆ ಭಕ್ಷಣೆಯಿತ್ತುರೆ
ಯಾಕ್ಷಣದಲಿ ನೊಸಲೆಡೆಯಾ
ಅಕ್ಷರಲಿಪಿಯ ತೊಡದ ನರಸಿಂಹನ
ಶಿಕ್ಷಕ ಭದ್ರಗೆ ಶರಣು ॥೧೮॥

ಈಶನ ಕವಿ ಕಾಳಿದಾಸನ ಹರಿಶ ಭೀ
ಮೇಶ ಪಾಲ್ಕುರಿಕಾರಾಧ್ಯಜೆಗೆ
ಲೇಸೆನಿಸಿದ ಭೀಮ ಮಲುಹಣ ನಂಬಿಗೆ
ನಾ ಸೇವಿಪೆನರ್ತಿಯಲಿ ॥೧೯॥

ಅರ್ಥಾಂಲಕಾರಭಿಧಾನ ಸಂಧಿ ಸಮಾಸ
ಪ್ರತ್ಯ ಪೃಕೃತಿ ಲಿಂಗತ್ರಯವಾ
ವಿಸ್ತರಿಸುವ ಛಂದ ರಸಭಾವ ಶಬ್ದವ
ಮತ್ತಿವನೇನೆಂದರಿಯೆ ॥೨೦॥

ಮನ್ಮಥಮುಕುರವೆನಿಪ ನಾಮವೀ ಕೃತಿ
ಸನ್ಮಾರ್ಗ ಶರಣರಾಲಿಪುದು
ಚಿನ್ಮಯನೊಲಿದೀವನಿಷ್ಟಾರ್ಥ ಪದಗಳ
ತನ್ಮನ ದಣಿವಂದದಲಿ ॥೨೧॥

ಗಾಣಿಯು ಗಮಕನಾದರೆ ಬರವನು ನೆರೆ
ಜಾಣನಾದರೆ ಈ ಕೃತಿಯಾ
ಊಣೆಯವಿನಿತಿಲ್ಲ ಛಂದಲಂಕಾರದಿ
ಕಾಣಿಸಿ ಪದವಿಟ್ಟು ನೋಡೆ ॥೨೨॥

ವಿಸ್ತರಿಸುವೆ ನವರಸಭಾವಭರಿತದಿ
ಚಿತ್ರದ ಕರುವಿನಂದದಲಿ
ವಸ್ತುವೆಣ್ಣಿನಮುಖಮುಕುರವೆಂಬೊಲು ಜಾಣ
ರಾಸ್ಥಾನ ಸೊಗಸುವಂದದಲಿ ॥೨೩॥

ಸಿರಿಯ ಸೊಬಗು ವಾಣಿಯ ಮತಿಯಾಮೃತ
ಕರ ಶೈತ್ಯವು ಮನ್ಮಥನ
ನೆರೆ ಲಾವಣ್ಯವೊಯೆಂಬೊಲು ಕೃತಿಯನು
ಒರೆವೆನು ಶರಣರಾಲಿಪುದು ॥೨೪॥

ಒದಗು ಸೂಸುವ ರಸಪದವಿಟ್ಟು ಛಂದದಿ
ಯಿದನ ಜುಹಿದನಾರೆನಲು

ಮದನಾರಿಯು ತ್ರಿಯಂಬಕನ ಕಾರುಣ್ಯದಿ
ಗದಿಗಿನ ಗುಂಡಿಶೆಟ್ಟಿಯರು ॥೨೫॥

ಈಶನಲ್ಲದ ಪೊಗಳದ ನೇಮ ನರ ಭವಿ
ಪಾಶಂಡಿದೈವವಿದೂರ
ಪೋಷಣ ನಿಮಿತ್ಯ ಕೈಯಾಂತುವೊಂದಿಪ
ದೂಷಕನೆಂದೆಂಬ ಶೀಲ ॥೨೬॥

ಬಡತನ ಬಂಧನ ಅಡರು ಆಪತ್ತಿಗೆ
ದೃಢಗೆಡದಲಿ ಸತ್ಯಗೆಡದೆ
ಹಿಡಿದ ಛಲವ ಬಿಡದಲಿ ನಡವುತಲಿರೆ
ಮೃಡರಡಿಗೆ ಒಂದಿಸುವೆ ॥೨೭॥

ಈ ಕೃತಿಯನು ಅಡಿಯಿಡುವರೆ ಪ್ರಥಮ ರ
ತ್ನಾಕೃತಿ ಭೂಶೈಲ ಪುರದಾ
ಆಕರ ವನ ಶಶಿಯರ್ಕರ ನೃಪರೇಳ್ಗೆ
ಯಾ ಕಲ್ಯಾಣದುಚ್ಚಿಹವಾ ॥೨೮॥

ಇಂತಿವರೊಳಗಾದವು ಚರ ಜಲಕೇಳಿ
ದಂತುಗತಿಯು ರಿತುಕಾಲ
ಮಂತ್ರಿ ವಿರಹ ಮಧುರಸ ಪುತ್ರ ಕಾವ್ಯ
ಕಾಂತವ ಪದಿನೆಂಟನಿಡುವೆ ॥೨೯॥

ಕೃತಿಯ ಗತಿಯ ಪರಿಕ್ಷಿಸಲೆಸದುದು ರತ್ನ
ಕೃತಿ ಸಿಂಧು ಅತಿಹರುಷದಲಿ
ಕ್ಷಿತಿನಾಯಕಿಯ ಭಂಗ ಹತವಾಗದೊಲು ನದಿ
ಪತಿ ಮೆರದನು ಬಳಸಿನಲಿ ॥೩೦॥

ಹರಗೆ ತಾರಾದ್ರಿ ಹರಿಗೆ ಸಿರಿ ವಾರಣ
ಸುರಪತಿಗಿತ್ತಮರರಿಗೆ
ನೊರೆವಾಲು ಚಂದ್ರ ಮೌಕ್ತಿಕವನೆ ಪೆತ್ತು
ದೊಱೆಯೆಸೆದನು ನದಿರಾಜಾ ॥೩೧॥

ಆ ನದಿಗೊಳಗಾದ ಭೂನಾರಿ ಮಸ್ತಕ
ಮಾಣಿ ಮಣಿಯಂದದಲಿ
ಜ್ಞಾನಕೆ ದುರ್ಲಭ ಯತಿವೇದಗತಿ ಸ್ತುತಿ
ಏನ ಹೇಳುವೆ ಹೇಮಾದ್ರಿ ॥೩೨॥

ಆ ಮೇರುವ ದಕ್ಷಿಣದೇಶ ಭಾಗದಿ
ಭೂಮಿಗೆ ಅತಿಶಯವೆಂಬ
ಸೀಮೆಯೊಪ್ಪಿಹುದು ಮಹಾರಾಷ್ಟ್ರ ದೇಶವು
ಕಾಮಜನ ನಿಯೋಗದೆಡೆಯ ॥೩೩॥

ದಿಕ್ಕು ದಿಕ್ಕಿಗೆ ಶತಯೋಜನವೆಸದುದು
ಮುಕ್ಕಣ್ಣನೊಡ್ಡೋಲ ಪುರಕೆ
ಹೊಕ್ಕು ಹೊರಗುಡದಿಹ ಕಣ್ಣಿನಂದದಿ
ತೆಕ್ಕೆಗೊಂಡಾಳ್ವರಲ್ಲಿಹರು ॥೩೪॥

ರತಿಯ ಚೆಲ್ವವ ಜರವೊಲು ಪತಿವ್ರತೆಯರು
ನುತಕಾಮನೆಣೆಯ ಚೆನ್ನಿಗರು
ಮತಿ ರೂಪು ಲಾವಣ್ಯವತಿಭಯಭಕ್ತಿಯು
ನ್ನತ ಮಾರ್ಗರು ಹೀನರಿಲ್ಲಾ ॥೩೫॥

ಎಲ್ಲರು ಶಿವಭಕ್ತರು ಸತ್ಯ ಶರಣರು
ನಲ್ಲ ಪುರುಷ ನಲ್ಲೆವೆಣ್ಣು
ಚೆಲ್ವೆಯರುಂ ಪತಿಭಕ್ತಿ ಭಾವದ ಮನ
ವಲ್ಲದ ಪರರ ನಿಟ್ಟಿಸರು ॥೩೬॥

ಸರಸಿಜರಿಪು ವದನಾಂಗ ಕುಸುಮಗಂ
ಪರಸಿಯರಾ ಪುರುಪರೊಳು
ಬೆರಸಿಯರ್ತಿಯನೀವರಲ್ಲದ ಬಣಗೆಯ
ರಜಿಸಿದರಿಲ್ಲ ದೇಶದೊಳು ॥೩೭॥

ಆಗಮದಾಗರ ಸಾಗರ ಭಕ್ತಿಯ
ಭೋಗಿಗಳಿಗೆ ನೆಲೆವೀಡು
ತ್ಯಾಗಿಗಳೊಗದೆಡೆ ರಾಗರಸದಿ ಹೀನ
ಮೂಗರಾ ದೇಶದೊಳಿಲ್ಲಾ ॥೩೮॥

ಹುಸಿ ಹೊಗದಟಮುಟವಡಿಯಿಡದು ಕರ್ಮ
ಮಿಸುಕಲಮ್ಮವು ಭಕ್ತಿವೀಡು
ಭಸಿತ ರುದ್ರಾಕ್ಷಿಯೊಳೆಸವರಲ್ಲದೆ ಭವಿ
ಪಿಸುಣರಾ ದೇಶದೊಳಿಲ್ಲಾ ॥೩೯॥

ಹೊಂದಾವರೆ ಗೊಣ ಸಿಂಧುವೇಣಿಯ ಕೆರೆ
ಛಂದದ ಕಾಲುವೆ ಪರಿವ
ಮುಂದೆಸವಾಗರ ಸಿಂಗರದೋಟಗ
ಳಿಂದುಳಿದಾ ನೆಲನಿಲ್ಲಾ ॥೪೦॥

ಇಂತೆಸದಿಹ ಮಹರಾಷ್ಟ್ರ ದೇಶದೊಳುಡು
ಕಾಂತನಂದದಲೊಪ್ಪಿ ಮೆರವಾ
ಕಾಂತರಂಗೈಸುವ ರಾಯರೆದೆಯ ಶೂಲ
ಎಂತು ಬಣ್ಣಿಪೆನಾ ನಗರಾ ॥೪೧॥

ಅಮರಾವತಿಯಳಕಾಪುರ ಸಮಶೌರ್ಯ
ಯಮಪುರದಯ್ಯಗ ದಾನವರಾ
ಗಮಕವಾ ನಗರದ ಶೃಂಗಾರ ಮೆರವುದು
ಭುವನಾಕ್ಷಿಯೆಂಬ ಪಟ್ಟಣವು ॥೪೨॥

ಆ ಪಟ್ಟಣವನಾಳ್ವನು ಸೋಮವಂಶದ
ಭೂಪನು ಪುಣ್ಯಾನಂದಾ
ಕಾಪಾಲಧರನ ಶರಣ ಮೆರದಿಹ ಭಕ್ತಿ
ರೂಪನೆನಿಪ ರಾಯನೊಲಿದು ॥೪೩॥

ರಾಯನ ಸರ್ವ ಪ್ರಧಾನಿವೊಪ್ಪಿಹ ಬುದ್ಧಿ
ದಾಯದಲತಿ ಸಾಮವೇದಿ
ಆಯವರಿವ ಜನವರಿವ ಪ್ರೌಢನು
ಪ್ರಾಯವಂತನು ನನ್ನಿಕೀರ್ತಿ ॥೪೪॥

ಭಕ್ತಿರೂಪನು ಮಹರಾಯಗೊರ್ವನು ನನ್ನಿ
ಕೀರ್ತಿಯೆನಿಪನು ಪ್ರಧಾನಿ
ಸತ್ಯರೀರ್ವರು ರಾಜ್ಯವನಾಳುತಿರಲಾದ
ವೃತ್ತಾಂತವೇನ ಬಣ್ಣಿಸುವೆ ॥೪೫॥

ಗಿರಿಜಾವರನಲ್ಲದ ಪರವರಿಯರು
ದೊರೆತನವೆಂಬ ಹಮ್ಮಿಲ್ಲಾ
ಸರಿಸಮ ಭಕ್ತರೊಡನೆ ಗರ್ವವಿಲ್ಲದೆ
ಗುರುಲಿಂಗಜಂಗಮಾರ್ಚಕರು ॥೪೬॥

ಇಂತೆಸೆವನು ಮಹಾರಾಷ್ಟ್ರವನಾಳ್ವ ಭೂ
ಕಾಂತನೊಪ್ಪಿರೆ ಭಕ್ತಿರೂಪಾ
ಸಂತೋಷವೇಳೆಯರಿದು ಪೇಳ್ದಳು ರಾಣಿ
ಸಂತಾನ ನಮಗೀಯ ಶಿವನು ॥೪೭॥

ಕೇಳಿದ ರತ್ನಮಾಲೆಯಾಡಿದ ಮಾತ
ಪೇಳಿದ ಮಗುಳೆಯಿಂತೆಂದು
ಕೋಳುಹೋಯಿತು ಭಕ್ತಿ ಭಕ್ತರಿಗಾಸೆಯೆ
ಭಾಳಾಕ್ಷನರಿಯನೆ ಮರುಳೆ ॥೪೮॥

ಸಂತಾನವ ನಾ ನೋಂತುದಿಲ್ಲವಕಟ
ಚಿಂತೆ ಮೊಳತು ರಾಯ ರಾಣಿ
ಭ್ರಾಂತುಗೊಳುತ ಮಗುಳ್ಪೇಳ್ದಳು ಭೂಮೀ
ಕಾಂತ ಚಿತ್ತೈಸೊಂದು ಮಾತಾ ॥೪೯॥

ಮಕ್ಕಳಿಲ್ಲದರಿಗೆ ಮುಕ್ಕಣ್ಣನಲ್ಲಿಯು
ಪಕ್ಕಿಲ್ಲವೆಂಬ ನಾಣ್ನುಡಿಯ
ಒಕ್ಕಣಿಸುವರು ಹಿರಿಯರಾದದ ಕೇಳಿ
ದಿಕ್ಕೆಂಬುದೆನ್ನದೆ ರಾಯ ॥೫೦॥

ನೋಂತೆನು ಸಿರಿಗೆ ಕೀರ್ತಿಗೆ ಸೌಂದರಕೆ ನಾ
ನೋಂತೆನು ನೀ ಪತಿಯಾಣೆ
ನೋಂತೆನಲ್ಲದೆ ಪುತ್ರಸಂತಾನಕೆ ನಾ
ನೋಂತುದಿಲ್ಲವು ಎನ್ನ ಕಾಂತಾ ॥೫೧॥

ನಳಿನವಿಲ್ಲದ ಕೊಳ ಕಳೆಯಿಲ್ಲದ ಮುಖ
ಬಳೆಯಿಲ್ಲದ ನಳಿತೋಳು
ಎಳೆಯರು ಸುಳಿದಾಡದ ಗೃಹಕಿಂದಲಿ
ಹಳುವವೆ ಕರಲೇಸು ರಾಯಾ ॥೫೨॥

ತೊಡೆಯೇರಿ ತೊದಲ್ನುಡಿಯುತ ಯೌವ್ವನಗಳ
ಪಿಡಿದು ಉಗ್ಗೆಂಬೆಳೆವಲ್ಲ
ಜಡಿದು ನಿರಿಯ ಲಲ್ಲೆಗರವ ಮಕ್ಕಳ ಮುದ್ದು
ಎಡೆಯಲಿ ಬಯಸಿದರುಂಟೆ ॥೫೩॥

ತೋಳಾಡುವ ತಲೆದೂನದು ದಾಯೆಂಬೆಳೆ
ಬಾಲರ ನುಡಿಗೇಳುವರ್ಥಿ
ಬಾಳುವ ಬಾಳಲ್ಲದೆ ಮಿಕ್ಕ ಬಾಳೆಲ್ಲ
ಕೀಳೆಂದಳು ಅಬುಜಾಕ್ಷಿ ॥೫೪॥

ಎನೆ ಕೇಳಿ ರಾಯನಂಗನೆ ರತ್ನಮಾಲೆಯ
ವಿನಯದಿ ಬಿಗಿದು ತಕ್ಕೈಸಿ
ಮನಸಿಜಾರಿಯ ಮನಗಂಡು ಬೇಗದಿ ನಿನ್ನ
ತನುಜರಕ್ಕರ [ವ] ತಿಳಿವೆನು ॥೫೫॥

ಆಗ ಸಚಿವನ ಕರಸಿ ಪೇಳಿದ ರಾಯ
ನಾಗಭೂಷಣನಡಿಗಳಿಗೆ
ಹೋಗಿ ಪಡವ ನಡೆ ಮಕ್ಕಳ ವರವನು
ಸಾಗಿದ ಮಂತ್ರಿಯೊಂದಾಗಿ ॥೫೬॥

ಬಂದರು ಭಕ್ತಿರೂಪನು ನನ್ನಿಕೀರ್ತಿಯು
ನಂದಿವಾಹನನ ನಿಳಯಕೆ
ವಂದನೆ ಮಾಡಿ ಷೋಡಶ ಉಪಚಾರದಿ
ಅಂದರ್ಚಿಸಿ ನುತಿಸಿದರು ॥೫೭॥

ಜಯತು ಜಾಹ್ನವಿಧರ ಜಯತು ಜಗನ್ಮಯ
ಜಯದನುಜಾರಿ ಪೂಜಿತನೆ
ಜಯತಜಶಿರಪಾಣಿ ಭಯಕರ ಶಂಕರ
ಜಯ ಜಯ ಶಿವ ತ್ರಾಹಿ ತ್ರಾಹಿ ॥೫೮॥

ಈಶ ಕೈಲಾಸ ನಿವಾಸ ಮಹೇಶ ಗಿ
ರೀಶ ಸರ್ವೇಶ ಪ್ರಾಣೇಶ
ವಾಸುಗಿಭೂಷ ಭಕ್ತರ ಭವನಾಶ ಎ
ನ್ನಾಸೆಯ ಸಲಿಸುವುದಯ್ಯಾ ॥೫೯॥

ಶಿವ ನಮೋ ಶಂಭು ನಮೋ ಈಶ್ವರ ನಮೋ
ಭವಹರ ನಮೋ ಶೂಲಿ ನಮೋ
ದಿವಿಜರರಸ ಪೂಜಿತಪಾದ ನಮೊಯು
ನ್ನುವ ನುಡಿಗೇಳೆನ್ನಲೊಲಿದು ॥೬೦॥

ಸಿರಿಮುಡಿಯಲ್ಲಿ ಸಿಂಗರಿಸಿದ ಅರಳನು
ತ್ವರಿತದಿ ಕೊಡಲಾಗಿ ಶಿವನು
ಹರುಷದಿ ತೆಗೆದುಕೊಂಡ್ಯೆದಿದರಾ ಮಂತ್ರಿ
ವರ ಸಹ ತನ್ನರಮನೆಗೆ ॥೬೧॥

ಬಂದ ಬರವ ಕಂಡಳು ರತ್ನಮಾಲೆ
ನಿಂದಿರೆ ಹಸೆಯ ತುಂಬಿದಳು
ಸಂದ ವೇಳೆಯ ಶುಭಲಗ್ನ ಮೋರ್ತಗಳಲ್ಲಿ
ಮುಂದೆ ಶೋಭನವ ಪಾಡಿದರು ॥೬೨॥

ಹರಸಿ ಸೇಸೆಯನಿಡಲಂಗನೆಯರು ಕೂಡಿ
ಅರಸದನು ಕಂಡು ನಲಿದೂ
ಹರನ ಶ್ರೀಮಕುಟದಿ ಸರಿದರಳನುವೊಂದ
ವರಸತಿ ಸೋರ್ಮುಡಿಗಿತ್ತ ॥೬೩॥

ಮಂತ್ರಿಯ ಕರದಾಗ ಕೊಟ್ಟನು ನಿನ್ನಯ
ಕಾಂತೆಗೆ ಕೊಡಿದೊಂದರಳಾ
ಅಂತದ ಕೈಕೊಂಡೀಯ್ಯಲಿಕ್ಕಂಗನೆ
ಸಂತೋಷದಿ ಮುಡಿಗಮರೆ ೬೪॥

ಇರುತಿತ್ತಲರಸು ಪ್ರಧಾನಿಯಿೀರ್ವರು ಕೂಡಿ
ಗುರುಲಿಂಗಜಂಗಮಾರ್ಚನೆಯ
ಹರುಷದಿ ಮಾಡುವ ಭಕ್ತಿಯಂಕುರಿಸಾಗ
ಪರಿದುದಾಲತೆ ಪುರಕೇ ॥೬೫॥

ಗಿರಿಜಾವರನ ಓಲಗವ ಮುಸುಕಿರಲಾಗ
ನೆರದ ಗಣರ ನೋಡಿ ಶಿವನು
ಕರದನಾ ಗಂಧರ್ವ ಸತಿಪುರುಷರು ಹೋಗಿ
ಧರೆಯಲ್ಲೀರ್ವರು ಜನಿಸೆಂದಾ ॥೬೬॥

ಎನೆ ಶಿವ ಮರ್ತ್ಯದಿ ಜನಿಸಿ ಬಾಳುವೆನೆಂತು
ತನುವರಿಯವು ಜ್ಞಾನವರತೂ
ಘನದೇವ ನಿಮ್ಮನು ಅಗಲಿ ನಾನಿಪೆನೆಂದು
ಚಿನುಮಯಗೆ ಪೇಳಿದರು ॥೬೭॥

ಪಾಪದಾಗರ ಕೋಪದ ಹುತ್ತು ಹುಸಿಯಡೆ
ತಾಪ ವ್ಯಾಧಿಗಳಿಹ ತಾಣ
ವ್ಯಾಪರಿಕಾಮನಾಡುಂಬೊಲಂತಕವೀಡು
ಏಪರಿ ಜೀವಿಪೆನಯ್ಯಾ ॥೬೮॥

ಮಾಯಪಾಶಕೆ ಸಿಕ್ಕಿ ಮತಿಹೀನತೆಯಾಗಿ
ಕಾಯಪೋಷಣ ನಿಮಿತ್ಯದಲಿ
ಸಾಯಸಕೊಳಗಾಗಿ ನಿನ್ನನೆಂತರಿವೆವು
ಆಯ ತಪ್ಪುವದಮ್ಮೆವಯ್ಯಾ ॥೬೯॥

ಎಂದ ಮಾತನು ಕೇಳಿ ನಂದಿವಾಹನ ನಿಮ್ಮ
ಒಂದಾಗಿ ನಾನಿಪ್ಪೆನಲ್ಲಿ
ಸಂದೇಹವೇಕೆಂದು ನಂಬುಗೆಗೊಡಲವ
ರೊಂದಿಸಿ ಮಗುಳೆ ಬಿನ್ನಯಿಸೆ ॥೭೦॥

ನಂಬುಗೆಗೊಡಲೀಶ್ವರನ ಕೈಲೀರ್ವರು
ಕುಂಬಿನಿಗಿಳಿವೆನೆಂದಾಗ
ಅಂಬಿಕೆಪತಿಯ ನಿರೂಪದಿ ಮಹರಾಷ್ಟ್ರ
ವೆಂಬ ಸೀಮೆಗೆ ತೆರಳಿದರು ॥೭೧॥

ಭುವರ್ಲೋಕ ಮಹರ್ಲೋಕ ಜನರ್ಲೋಕ ತಪರ್ಲೋಕ
ಸುವರ್ಲೋಕವ ಕಳಿದವರು
ಹವಣಿಸಿದ ಸತ್ಯರ್ಲೋಕ ಜಂಬೂದ್ವಿಪ
ದವನಿಯೊಳಗೆ ನಡೆತರುತಾ ॥೭೨॥

ಕಂಡರು ಮಹರಾಷ್ಟ್ರ ಸೀಮೆಯನೊಳಹೊಕ್ಕು
ಖಂಡೇಂದು ಧರವಾಸಕೆಣೆಯೊ
ಮಂಡಲೇಶ್ವರ ಭಕ್ತಿರೂಪನ ತಾಣವ
ಕೊಂಡಾಡಿದರರ್ತಿಯಲಿ ॥೭೩॥

ದಿಟದ ನೆಲೆಯು ಅಟಮಟ ಹೊಗಲಮ್ಮವು
ಸಟೆ ಠಕ್ಕು ಅಡಿಯಿಡದಿಲ್ಲಿ
ಕುಟಿಲಗಳಂಜುವವೀ ದೇಶದೊಳಗೆಲ್ಲ
ನಿಟಿಲಾಕ್ಷನ ಭಕ್ತಿವೀಡು ॥೨೪॥

ಸುರತರು ಸುರಧೇನುಯೆಂಬೋಲು ಪಶು ವೃಕ್ಷ
ಸಿರಿಯಂದದ ಸ್ತ್ರೀಯರೆಲ್ಲಾ
ದೊರೆತನದಲಿ ಕುಬೇರನ ಸರಿಸಮರೆಲ್ಲ
ಪರಿಕಿಸೆ ದಾರಿದ್ರರಿಲ್ಲಾ ॥೭೫॥

ಪುರುಷರಂಗನೆಯರು ರತಿಕಾಮನಂದದಿ
ಸರಸಕಳಾಪ್ರವುಡಿನಲಿ
ಗುರುಶಿಷ್ಯ ಭಾವದಿ ಯೋಗದಿ ಪತಿಭಕ್ತಿ
ಯರಸಿಯರಲ್ಲದರಿಲ್ಲಾ ॥೭೬॥

ಹೆಂಗಳ ಸಿರಮಣಿ ಭೃಂಗಕುಂತಳೆ ಕೋಮ
ಲಾಂಗಿಯರತಿದೇವಿಯರು
ಸಂಗೀತ ವಿದ್ಯೆ ಪ್ರವೀಣೆಯರೆಲ್ಲರು ಪೆ
ಡಂಗಿಯ ದೇಶದೊಳು ॥೭೭॥

ರತಿ ರೋಹಿಣಿಂದ್ರಾಣಿಗತಿ ಚೆಲುವೆಯರು ಭಾ
ರತಿಯಂತೆ ಮತಿ ಪ್ರಕಾಶೆಯರು
ಪತಿಗಳಂಗಜ ಶಶಿಕ ಸುರರಾಜನೊಲು ಕಳೆ
ಚತುರಾಸ್ಯನಂತೆ ವಿದ್ಯದಲಿ ॥೭೮॥

ಇಂತಪ್ಪ ಮಹರಾಷ್ಟ್ರ ಒಪ್ಪುತಿರಲು ಉಡು
ಕಾಂತನಂದದಿ ಕಳೆ ಮೆರವಾ
ಪಂತವುಳ್ಳದು ಅರಿರಾಯರಿಗೆದೆಯಾಂತ
ಕೊಂತವೀ ಭುವನಾಕ್ಷಿ ನಗರಾ ॥೭೯॥

ಈ ಪುರಕೆಮ್ಮ ತಾಣವು ಸರಿಸಮ ಭಕ್ತಿ
ರೂಪಗೆಯೆಣೆಯಹ ರಾಯ
ಆಪನು ದಿವಿಜರರಸು ತಾನಲ್ಲದಿ
ನ್ನೋಪರ ಕಾಣೆ ಧಾತ್ರಿಯೊಳು ॥೮೦॥

ಇಂತಪ್ಪ ಪುರಪತಿ ಸಚಿವರೀರ್ವರ ಸತಿ
ಕಾಂತೆಯರತಿಭಕ್ತಿಯಲಿ
ಸಂತೋಷದಿ ಪುತ್ರರ ಹಂಬಲಿಸುತ
ರಂತಿರ್ದರವರತಿ ದೃಢದಿ ||೮೧||

ಶಿವ ಧ್ಯಾನದಿ ಶಿವಪೂಜೆಯ ಮಾಡಿದ
ಭುವನೇಶ ರಾಣಿ ಮಂತ್ರಿಯರು
ಕುವಲಯನೇತ್ರೆ ಭಕ್ತಾಂಗನೆಯೀರ್ವರು
ತವಕದಿ ಸುಚಿತ್ತರಾಗಿರಲಿ ||೮೨||

ಹರನಿರುಪದಲಿ ಗಂಧರ್ವರೀರ್ವರು ಮಹಾ
ಪರಮಪುರುಷರಾಗಲವರು
ಅರಸಿಯ ಉದರದಿ ಮಡಗಿದರೆಂಬೋಲು
ಶರಿರ ಬಲಿದು ಭಾರ್ಯೆಸೆ ||೮೩||

ಮಾಸಕೊಂದೊಂದು ಪರಿಗಳಾಗಲಿ ಕರ
ಲೇಸಿನ ಬಣ್ಣಬಯಕೆಯಾ
ದೇಶಾಧಿಪತಿ ಮಂತ್ರಿಗಳು ತಂದೀಯೆ ವಿ
ಲಾಸದೀರ್ವರು ಪರುಷದಲಿ ||೮೪||

ಉದರ ಬಲಿಯೆ ವದನವು ಶುಭ್ರಮದೋರೆ
ಮತ್ತಧರ ನಯನ ಕೆಂಪೇರೆ
ಪದಗತಿ ಮಂದನಾದವು ನವಮಾಸವು
ಒದಗಲಿ ಶುಭವೇಳೆಯಲಿ ||೮೫||

ರಾಯನಂಗನೆ ಮಂತ್ರಿಯ ರಾಣಿಯೀರ್ವರ
ಕಾಯಬಲಿದು ಜಠರಗಳು
ನೋಯಲಿ ಪಡದರುಭಯ ಪುತ್ರರನು
ಛಾಯವನೇನ ಬಣ್ಣಿಸುವೆ ||೮೬||

ಮಾಯಸ್ವರೂಪಿಯೇಣಾಯತನೇತ್ರೆಯ
ರಾಯನ ರಾಣಿ ಪಡದಳು
ಕಾಯಜಗೆಣೆ ಸುಕುಮಾರನ ಮಂತ್ರಿಯ
ನಾಯಕಿ ಪಡಪಳರ್ತಿಯಲಿ ||೮೭||

ರಾಯನಾಕ್ಷಣದೊಳು ಜೋಯಿಸರನೆ ಕರ
ದಾಯತವೇಳೆ ಮೂರ್ತದಲಿ
ಮೀಯಲಂಗಕೆ ಅವರಿಗೆಯಿಷ್ಟಲಿಂಗವ
ಕಾಯಕೊಂದಿಸಿದ ಶ್ರೀಗುರುವು ॥೮೮॥

ಮಂತ್ರಿಯು ಗುರುವಿಗೊಂದಿಸಿ ಲಿಂಗಧಾರಣೆ
ಮಂತ್ರ ಷಡಕ್ಷರಿವಿಡಿದು
ಯಂತ್ರವಾಪಕನನಂಗಕೆ ಕಾಪಿಟ್ಟೊಲು
ಅಂತಾಗ ಕುವರಿಗೆ ಧರಿಸಿ ॥೮೯॥

ಭಸಿತವನಿಟ್ಟು ಪ್ರಸಾದವ ಗುರುವಿತ್ತು
ಶಶಿಮುಖಿಯರನೆಲ್ಲ ನೆರಹಿ
ಹಸನಾಗಿ ಜೋಗುಳವಾಡಿ ಪಾಡಿದರು ದ್ವಾ
ದಶ ದಿನದೊಳು ತೊಟ್ಟಿಲಿಕ್ಕಿ ॥೯೦॥

ಕಾಮಿನಿಯಂಗಲಾವಣ್ಯವ ಕಂಡರು
ಹೇಮಲತೆಯುಯಿವಳೆಂದು
ಆ ಮಹಿಪತಿ ಹೆಸರಿಟ್ಟು ಕರದ ತನ್ನ
ಪ್ರೇಮದ ಕುವರಿಯನೊಲಿದು ॥೯೧॥

ಕಂದನ ನೋಡಿ ಸಂತೋಷದಿ ಮಂತ್ರಿಯು
ನಿಂದ ಸತಿಯರೆಲ್ಲರೊಡನೆ
ಚಂದ್ರಕರನೆಂಬ ಹೆಸರು ಕುವರನೆನೆ
ಛಂದದಿ ತೊಟ್ಟಿಲೊಲದರು ॥೯೨॥

ತಳಿರಡಿ ಮಂದಗತಿಯು ಪೋರವಾರಿನ
ಪೊಳವ ಪೊಂಬಾಳೆಯದೊಡೆಯರು
ತೆಳುವಸುರಿನ ಬಡನಡು ಬಟ್ಟಮೊಲೆಯರು
ನಳಿತೋಳ ನೀಡಿ ಪಾಡಿದರು ॥೯೩॥

ಚೆಲ್ಲೆಗಂಗಳ ಪಂಕಜಮುಖ ಸುಲಿಪಲ್ಲ
ವಲ್ಲಭೆಯರು ಸೋರ್ಮುಡಿಯ
ಮಲ್ಲಿಗೆ ದುಂಬೆಗುರುಳೆಯರು ಗಿಳಿವಾತ
ಸೊಲ್ಲಿಸಿದರು ಜೋಗುಳವ ॥೯೪॥

ಮೊತ್ತದ ಸತಿಯರೊಗ್ಗೂಡಿ ಜೋಗುಳವನು
ಬತ್ತೀಸ ರಾಗದಿ ಪಾಡಿ
ಚಿತ್ತಜಾರಿಯ ಕರುಣ ಚಂದ್ರಾಕರ
ಹೆತ್ತವರಿಗೆ ಅರ್ತಿಯೀವಾ ॥೯೫॥

ಬೆಳವುತಿರ್ದರು ಬಿದಿಗೆಯ ಶಶಿಯಂದದಿ
ಕಳೆಯೇರುತ ದಿನದಿನಕೆ
ನಳಿನಮುಖಿಯು ಹೇಮಲತೆ ಚಂದ್ರಾಕರ
ಎಳೆವರೆಯದ ಮುದ್ದ ಸಲಿಸಿ ॥೯೬॥

ಮುಂದ್ಯೆದಾರು ಏಳ್ವರುಷವಾಗಲು ಮಂತ್ರಿ
ಚಂದ್ರಾಕರನನೋದಿಸುವರೆ
ಎಂದಣ್ಣಗಳ ಕರತರಿಸಿ ಶಾರದೆಯನು
ಅಂದು ಪ್ರಥಮ ಪೂಜೆಯನು ॥೯೭॥

ಅದ ಕೇಳಿ ಭಕ್ತಿರೂಪನು ತನ್ನ ಕುವರಿಯ
ಚದುರೆಯನೋದ ಕುಳ್ಳಿರಿಸಿ
ಸದನದೊಳಗೆ ಫಣೀಶನ ಪೂಜೆಮಾಡಿತ್ತು
ಮುದದಣ್ಣಗಳಿಗೆ ತೊಡಿಗೆಯ ॥೯೮॥

ಓದುತಿರಲು ಹೇಮಲತೆ ಚಂದ್ರಾಕರ
ಆದಿಪುರಾಣ ಶಾಸ್ತ್ರಗಳ
ಆದವೆಲ್ಲವನಣ್ಣಗಳಿಗೊಪ್ಪಿಸೆ ಮುಂ
ದಾದುದು ಪ್ರಥಮ ಸಂಧಿಗಳು ॥೯೯॥

ಧರೆಯರಮನೆಯನ ಕರದಲಿ ಕಟ್ಟಿ ಮೇ
ಲ್ಪರಿವ ಗಂಗೆಯ ಹೊತ್ತು ಮೆರವ
ಹರಿಯಜ ಸುರ ರಾಜ ವರಮುನಿಗಳ ಸೇವೆ
ಚರಣನೆ ಸಲಹು ಸಜ್ಜನರ ॥೧೦೦॥

ಅಂತು ಸಂಧಿ ೧ ಕ್ಕಂ ಪದನು ೧೦೦ ಕ್ಕಂ

ಮಂಗಳಮಹಾಶ್ರೀ

●

ಸಂಧಿ ಎರಡು

ಬಣ್ಣಿಸುವೆನು ಮುಂದಣ ವೃತ್ತಾಂತೆಸ
ಳ್ಗಣ್ಣ ಕುವರಿ ಚಂದ್ರಾಕರನು
ಅಣ್ಣಗಳಲ್ಲಿ ಓದುತಲಿರ್ವರು ಗುಹಾ
ರಣ್ಯಕೆ ನಡದ ವಿಸ್ತರವಾ ॥೧॥

ಓದಿದರು ಸಕಲಾಗಮ ಶಾಸ್ತ್ರವ
ಓದಿದರತಿ ಪುರಾಣಗಳಾ
ವೇದಮೊದಲು ಕಾವ್ಯನಾಟಕಷ್ಟಾಂಗವ
ಓದಿದರತಿ ವಿದ್ಯಗಳಾ ॥೨॥

ಗಾನ ಗಾಂಧರ್ವಾಯುರ್ವಿದ್ಯ ಧನುರ್ವಿದ್ಯ
ವೀಣೆ ಗಮಕ ಜ್ಯೋತಿಶ್ಯಾಸ್ತ್ರಾ
ನಾನಾ ಗುಹಭರಿತಿಷ್ಟ ವಸ್ಯವಾ
ಧೇನುವಾಯಣ ಭೂಷಕರ್ಣಾ ॥೩॥

ಪಾಸ ಪ್ರತಿಜ್ಞೆ ವಿವಿಧ ಚಿತ್ರವು
ವಾಸು ಪರೀಕ್ಷಿಂದ್ರಜಾಲಾ
ಪಾಷಣ ಲೋಹ ಮಹೀಂದ್ರಜಾಲಶ್ವ ಗಜ
ಶೀಕ್ಷೆ ಪರೀಕ್ಷೆಯರಿದರು ॥೪॥

ವಾದ ವಾಯಣ ಭೂಷ ಕರ್ಣೆ ಅಮರವಿದ್ಯ
ಚೇದನವರಿ ಗಾರುಡವು
ಚೋದ್ಯ ಕೃತ್ತಿಮರತ್ನ ಪರೀಕ್ಷೊಸ್ತು ಪರೀಕ್ಷೆಗ
ಳಾದ ವಿದ್ಯೆಗಳೆಲ್ಲವರಿದು ॥೫॥

ಹೆಸರೆನಿಸಿದ ನಾನಾ ವಸ್ತು ಪರೀಕ್ಷೆಯು
ಮಿಸುರ ಕನ್ಯಾ ಮಹಾ ಲಿಪಿಯು
ರಸವಿದ್ಯೆ ಯೋಗ ಪ್ರಯೋಗ ಶಿಲ್ಪಿಯು ಶಾಸ್ತ್ರ
ವಸುಧೆಯೊಳಾದವನರಿದು ॥೬॥

ಹೋಮಾಗಮ ವಾಯುಸ್ತಂಭನ ಜಲಸ್ತಂಭ
ಕಾಮಾಗ್ನಿರೋಮಸ್ತಂಭನವು
ಈ ಮಹಾಸ್ತಂಭನ ಇಂಗಿತಕಾರವ
ನೇಮವರಿದರವರಲ್ಲಿ ॥೭॥

ಪರಕಾಯ ಪ್ರವೇಶವು ಪ್ರಕಾಶ ಕ್ಷರಿಕವು
ಪರವಿದ್ಯಭೇದನವೆಂಬ
ಪರಿಪ್ರಸಾದವ ಲಕ್ಷಣಯುಕ್ತಿ ವಿಧದಿಂದ
ಹರುಷವ ಕಥನವನರಿದು ॥೮॥

ಚವುಷಷ್ಟಿವಿದ್ಯಗಳಲಿ ಪರಿಣತರಾಗಿ
ಸಮಸರಿಯಿಲ್ಲವೆಂಬುದನು
ಭುವನೇಶ ಕೇಳಿ ವಾಲಗದೊಳು ಕರಸಿದ
ಕುವರಿಯ ಮಂತ್ರಿಯ ಸುತನಾ ॥೯॥

ಬಂದರೀರ್ವರು ಹೇಮಲತೆಯು ಚಂದ್ರಾಕರ
ನಿಂದರೋಲಗದ ಮಧ್ಯದಲಿ
ಅಂದವಾಗಿಯೆ ದಂಡಿಗೆಯ ಭಡಾಳಿಸಿ
ಮುಂದೆ ಕುಳ್ಳಿರೆ ರಾಯ ಕಂಡ ॥೧೦॥

ಓದಿ ನಿಮ್ಮಯ ವಿದ್ಯ ವಾದವೆಲ್ಲವನೆನೆ
ಮೇದಿನಿಪತಿಯೀರ್ವರಿಗೆ
ಆದರದಿಂದ ಪೇಳಲು ದಂಡಿಗೆಯನು
ನಾದಮಾಡಿದರೇನೆಂಬೆ ॥೧೧॥

ಆಳಾಪ ತೋಂಡಿ ವೇಳಾವೇಳಿ ದೇಶಿ ಭೂ
ಪಾಳಿ ಭೈರವಿ ಮೇಘರಂಜಿ
ಸಾಳಂಗ ಪಾಡಿ ದೇಶ ಕುರಂಜಿಯು
ಮಾಳವ ಗೌಳ ಕಾಂಬೋಡಿ ॥೧೨॥

ಮಧುಮಾಧವಿ ಮಲಹರಿ ಗುಜ್ಜರಿಯಿಂದ
ಒದವಿದ ದೇವಗಾಂಧಾರಿ
ಉದಯದ ಧನ್ಯಾಸಿ ವಸವಂತ ರಾಗ [ವ]
ಚದುರಿಲಾಳಾಪ ಮಾಡಿದರು ॥೧೩॥

ನಾದರಾಮಕ್ರಿಯ ಹರಿಮೇಚ ಬಹುಳಿಯು
ಆದ ವರಾಳಿ ಸಾಳಂಗ
ಭೇದದಿ ಶಂಕರಾಭರಣ ಗುಂಡಕ್ರಿಯ
ನೋದಿ ಪಾಡಿದರೀರ್ವರಲ್ಲಿ ॥೧೪॥

ನಟ ನಾರಾಯಣಿ ಶೋಕವರಾಳಿಯು
ವಿಟರ ಮೂರ್ಛೆಗೆ ಶ್ರೀರಾಗ
ನಟಿಸುವ ದೇವಗುತ್ತಿಯು ಕೇತಾರಗೌಳ
ಪಠಿಸಿದರಾ ಚಾಯಗೌಳ ॥೧೫॥

ಕನ್ನಡಗೌಳ ಕನ್ನಡ ಬಂಗಾಳವು
ಕನ್ನಡಲಳಿತೆಯಾದವನ
ಬಿನ್ನಾಣದಲೀರ್ವರು ಪಾಡಲಿ ಆಸ್ಥಾನ
ತನ್ಮರದೊರಗೆ ಧಾತ್ರಿಯೊಳು ॥೧೬॥

ಮೂರ್ಛೆಯೋಗಿಯೆ ಬೀಳಲು ಕಂಡು ಚಮತ್ಕಾರ
ಯೆಚ್ಚರಿನಾಳಾಪಗಳನು
ಉಚ್ಚರಿಸಲು ನಿದ್ರೆ ತಿಳಿದೊಲು ಆಸ್ಥಾನ
ಅಚ್ಚರಿಯಿಂದೆದ್ದು ನುಡಿಯೆ ॥೧೭॥

ಮೆಲ್ಲನೆಚ್ಚತ್ತು ನುಡಿದ ರಾಯ ಮಂತ್ರಿಯು
ನೆಲ್ಲಿಲ್ಲ ಇವರಿಗಾರೆಣೆಯು
ಬಲ್ಲವರಿಂತಪ್ಪರುಂಟೆ ದೇಶದೊಳೆಂದು
ನಲ್ಲಳಿಗೊರ್ರನ ಕೇಳಿದನು ॥೧೮॥

ಮೀರಿದ ಕಳೆ ಸೊಬಗೇರಿದಂಗವು ನೆರೆ
ತೋರುವ ಎಳೆಯ ಜವ್ವನವು

೧-೧ ಗಳನು(ಮೂ)

ಹೇರುವ ಪೊರವಾರು ದೂರುತಲಿವೆಯಿ
ನ್ನಾರೆಣೆ ಎನ್ನ ಮಗಳಿಗೆ ॥೧೯॥

ತಳಿರಡಿ ಅರಸಂಚೆ ನಡೆ ಹೊಂದೊಡೆ ಮೇ
ಲಳವಟ್ಟ ಜಘನ ನಡುಸಣ್ಣ
ಸುಳಿನಾಭಿ ತೆಳುವಸುರೆಳೆವಾಸೆ ತಳಪುಗ
ಣ್ಣೊಲವ ಸೋರ್ಮುಡಿ ಕಳೆ ಮೆರವ ॥೨೦॥

ಧರೆಯೊಳು ಚಪ್ಪನ್ನ ದೇಶವಾಳುವರಲ್ಲಿ
ಸರಿಯಾದ ವರನು ಕುವರಿಗೆ
ಕರದು ತಾಯೆಂದು ಮಂತ್ರಿಗೆ ಪೇಳಲವರಾಗ
ಸರಿದರೋದುವ ಮಠಕಾಗಿ ॥೨೧॥

ಬಂದಾಗ ಚಂದ್ರಾಕರನೊಳು ಓದುವ
ಮಂದಿರದಲಿ ಹೇಮಲತೆಯು
ಒಂದಾಗಿ ಪೇಳ್ದಳು ಕಡು ದುಃಖದಿ ನಮ್ಮ
ತಂದೆಯೆನಗೆ ನೋಡೆಂದೊರನಾ ॥॥೨೨॥

ಎಣೆಯಗಲಿಯೆ ನಿಕ್ಷಣ ಬಾಳುವೆನೆಂತು
ಗುಣಿಯೆ ಪುರುಷರತ್ನ ಮಣಿಯೆ
ಬಣಗರೊಡನೆ ಬೆರಸೆಂತು ಜೀವಿಪೆಯೆನ
ಗಣಿಯೆ ಹೇಳೆಂದಬುಜಾಕ್ಷಿ ॥೨೩॥

ರಾಜಮರಾಳನ ಮಾಜಿ ಬಕನ ಹಕ್ಕಿ
ಯೋಜೆಗೆಣಿಸಿದ ನಮ್ಮಯ್ಯ
ರಾಜಿಸುತಿಹ ಜೀವರತ್ನವಿರಲು ಬಿಟ್ಟು
ಗಾಜಿನಮಣಿಗೆ ಯೋಚಿಸಿದ ॥೨೪॥

ಕುಸುಮಗಂಪೆಸೆವ ಸಂಪಿಗೆ ಜಾಜಿಯಿರಲಾಗೆ
ಕಸವನು ತುರುಬಿಗಿಕ್ಕುವರೆ
ಭಸಿತ ರುದ್ರಾಕ್ಷೆಯಿಂದೆಸೆವ ಭಕ್ತನ ಕಂಡು
ಪಿಸುಣಗೆ ಮನವೆಳಸುವದೆ ॥೨೫॥

ಏಣಾಯತಾಕ್ಷಿಯು ರಾಣಿವಾಸವ ಜರ
ದೂಣೆಯ ಸಿಂಬೆದೊತ್ತಿರಿಗೆ
ಜಾಣರು ಮನವ^ರಿದರಿದು ಕಂ
ಗಾಣದ ಕುರುಡರಂದದಲಿ ॥೨೬॥

ಫಲವುಳ್ಳ ಚೂತವೃಕ್ಷವ ಬಿಟ್ಟು ನಮ್ಮಯ್ಯ
ಎಲುವದ ಮರಕೆ ನೀರೆಱದು
ಸಲಹುವ ಮರುಳನಂತಾದನಕಟಯೆಂದು
ನಲುಗುಂದಿದಳಬುಜಾಕ್ಷಿ ॥೨೭॥

ಷಡುರಸಾನ್ನಗಳನುಯೆಡೆಯುಂಬ ಸುಖಿ ಗಡ
ಕುಡಿವನೆ ನೀರುಗಾಟೆಯನು
ಒಡಬಡುವದೆಯೆನ್ನಮನವೆಂದು ಆಸತಿ
ಮಿಡಿದಳು ಕಣ್ಣನೀರುಗಳಾ ॥೨೮॥
ಪ್ರೀತಿಯಿಲ್ಲದ ಊಟ ಚೂತವಿಲ್ಲದ ತೋಟ
ಜಾತಶ್ವನಿಲ್ಲದೇರಾಟ
ಓತಿಹ ಸುಗುಣನಾಯಕನಲ್ಲದ ಕೂಟ
ಯಾತಕೆಂದಳು ಕೋಮಲಾಂಗಿ ॥೨೯॥

ಚಂದ್ರಾಕರ ನಿನ್ನನೊಂದು ಘಳಿಗೆ ಬಿಟ್ಟು
ನಿಂದಿರದೆನ್ನಯ ಮನವು
ತಂದೆಯ ಮಾತು ಸೊಗಸದಂತಿರಲಿ ನಿ
ನ್ನೊಂದಾಗಿ ನಾ ಬೆರಸುವೆನು ॥೩೦॥

ಕೇಡ ಮಾಡಿದೆ ರಾಯ ಕಾಯವನುಗಿವನು
ಆಡುವರೀ ಮಾತ ನೀನು
ಬೇಡ ನಮ್ಮೆಲ್ಲರಿಗಳುವೆಂದನೀ ನುಡಿ
ಪಾಡಲ್ಲ ಕುವರಿ ಕೇಳೆಂದ ॥೩೧॥

ಎಂದ ಮಾತನು ಹೇಮಲತೆಯು ಮನದಿ ನೊಂದು
ತಂದಳು ಕಣ್ಣಿಲುದಕವಾ
ಮುಂದುಗೆಟ್ಟೆನು ಚಂದ್ರಾಕರ ನಾ ನಿನ್ನ
ಹೊಂದಿಯಗಲಿಯೆಂತುಳಿವೆ ॥೩೨॥

ರಾಯನ ನುಡಿಗೆ ನಿನ್ನಾಯದ ಮಾತಿಗೆ
ಕಾಯವಪ್ಪುದೆ ಕೇಳ್ತರುಣಿ
ಸಾಯ ಬಯಸಿದೆನಗೆಲೆ ಮರುಳರಿಯನೆ
ಬಾಯ ಬಿಟ್ಟಳು ಲಲಿತಾಂಗಿ ॥೩೩॥

ನನ್ನ ನೀ ಬಿಡುವರೆ ಬೆನ್ನ ಹತ್ತಿದ ಚರ್ಮ
ನಿನ್ನೊಡನೆಯು ಸಾವೆನೆಂದು
ತನ್ನ ಕಾಲ್ದೊಡರಿದಳೆಬ್ಬಿಸಿ ಮೊಗನೋಡಿ
ಅನ್ಯದೇಶಕೆ ಹೋಹೆನೆಂದಾ ॥೩೪॥

ಆದರೆಳ್ಳನಿತಾಸೆಯೆನಗಿಲ್ಲ ನೀನೆಲ್ಲಿ
ಹೋದತ್ತ ಬಹೆನೆಂದು ಕುವರಿ
ಭೇದವ ನೋಡಿದೆ ನಿನ್ನ ಮನವು ನಿಜ
ವಾದುದೆಂದನು ವಿನೋದದಲಿ ॥೩೫॥

ತಂದೆತಾಯನು ಬಿಟ್ಟು ಬಂಧು ಭಾಗ್ಯವ ಬಿಟ್ಟು
೧[ಒ]೧ಂದಾಗಿ ನಾನೆಂತು ಬಹೆನು
ಹಿಂದು ಹುಯ್ಯಲು ಬಂದು ಹಿಡಿಕೊಂಡು ನನ್ನನು
ಕೊಂದರು ಸಾನಮ್ಮೆನೆಂದ ॥೩೬॥

ನೀನಿರು ನಾಹೋಹೆ ಮುಂದೋರ್ವಳ ಕೂಡಿ
ಕಾನನದೊಳಗೊಂದು ಕುರುಹು
ನಾನೊಂದು ಗುಹೆಯೊಳಗಿಹೆನೆಂಟು ದಿವಸಕ್ಕೆ
ಜಾನಿಸಿ ನೀ ಬೇಗ ಬಹುದು ॥೩೭॥

ಆದರೆ ನಡೆಯೆನೆ ಪಾದದೊಳೆರಗಿಯೆ
ಬೋಧಿಸಿದಳು ಚೆನ್ನಿಗನಾ
ಕಾದಲೆ ಕೇಳೆಂಟು ದಿನಕೆ ಬಹೆನುಯೆನೆ
ಹೋದೆನು ನಿನ್ನ ನಾ ನಂಬಿ ॥೩೮॥

ತನ್ನರಮನೆಗೆ ಹೋದಳು ಹೇಮಲತೆಯಾಗ
ತನ್ನ ಸ್ನೇಹಿತೆಯನೋರ್ವಳನು

೧-೧ ನಿನ್ನೊ(ಮೂ)

ಕನ್ನೆಯೀರ್ವರು ಸಹ ರನ್ನ ಮಾಣಿಕ ಮುತ್ತು
ಹೊನ್ನುಗಳನು ಕಟ್ಟಿಕೊಂಡು ॥೩೯॥

ಸಂಜೆಯ ವೇಳೆಯರಿದು ತೆರಳಿದರಾಗ
ಜುಂಜುರು ಮಳೆಯೊಳು ಕುವರಿ
ಕಂಜದಳಾಯತನೇತ್ರೆ ಬರುತಿರ್ದಳು
ಅಂಜದೆ ಆರಣ್ಯದೊಳಗೆ ॥೪೦॥

ಬರುತ ಬರುತ ಕುರುಹಿನ ಗುಹೆಯೊಳು ಹೊಕ್ಕು
ಸರಿಗುಂಡ ಮರೆಮಾಡಿಯೊಳಗೆ
ಅರುಹುದೋರದೆಯಿರಲಾಗಿತ್ತ ಬೆಳುಗೆ ನಾ
ಡೆರೆಯನು ಮಗಳ ಕೇಳಿದನು ॥೪೧॥

ಉದಯದಿ ಬಂದು ಓದುವಳು ಕುವರಿ ತನ್ನ
ಪದಪದ್ಯವಾದವೆಲ್ಲವನು
ಸದನದೊಳಗೆ ನೋಡಿದರು ಆರಿಲ್ಲದ
ಹದನ ಪೇಳಿದರು ರಾಯನಿಗೆ ॥೪೨॥

ಓದುವ ಮಟಕೆ ಬಂದಳೆಯೆಂದು ನೋಡುತ
ಶೋಧಿಸಿ ಮನೆಗಳ ಹೊಕ್ಕು
ಹಾದಿಹಾದಿಗಳಿಗಂಚೆಯ ಕುದುರೆಯನಟ್ಟಿ
ಹೋದಳೆಲ್ಲಿಯು ಹೇಮಲತೆಯು ॥೪೩॥

ಅಂಚೆಯ ಕುದುರೆಕಾರರು ತಿರಿಗಿದರಾಗ
ಮುಂಚಿದೊ ಕಾಣೆವೆಂದೆನಲಿ
ಮಂಚದಿಂದಲಿ ಬಿದ್ದು ಹೊರಳಿದ ರಾಯನು
ಗೊಂಚಂಬುಯೆದೆಯ ಕೊಂಡಂತೆ ॥೪೪॥

ಹೆತ್ತ ತಾಯಿ ಕೇಳಿವೊತ್ತೋದರತ್ತಳು
ತೊತ್ತಿರೊಳಗೆ ಕೇಳೆನಲು
ಮತ್ತೊಬ್ಬಳಿಲ್ಲದಿರ್ದರೆ ಹೋದಳು ನಿಜ
ತತ್ತಾಗಿ ಕುವರಿಯ ಕೂಡೆ ॥೪೫॥

ಚಂದ್ರಾಕರನ ನೋಡಿದರಲ್ಲಿ ಓದುವ
ಮಂದಿರದೊಳಗಿರೆ ಕಂಡು
ಬಂದು ಹೇಳಿದರೆ ಕೇಳಿದ ರಾಯರಾಣಿಯು
ಕಂದಗೆ ದುಃಖ ಮಾಡಿದಳು ॥೪೬॥

ಮುಡಿಯೊಲವಿಗೆ ಕೊರಳ್ಗೊಂಕಿಡಿದೆವ್ವನ
ಜಡಿಯಲು ಬಡನಡು ಬಳುಕಿ
ಪೊಡೆ ಪೊರವಾರ ಭಾರವು ನಡವಳುಯೆಂತೊ
ಪೊಡವಿಪ ಮಗಳ್ಗೆ ಚಿಂತಿಸಿದಾ ॥೪೭॥

ತಳಿರಡಿ ನಡವಳೆಯದೊ ಕಳೆಗುಂದುಗು
ನಳಿನ ಮುಖವು ಅಂಗಲತೆಯು
ಪೊಳವೆಳೆಮಾಣಿಕ ಕಂದಿದ ಪರಿಯಕ್ಕು
ಬಳಲುವಳ್ಳೆಯೆನ್ನ ಮಗಳು ॥೪೮॥

ಮಗಳೆ ಹಾ ಅಯಿಗೋಲ ಮುಗುಳೆ ಹಾ ಮೋಹನ
ಮಿಗಲೆ ಹಾಯೆನ್ನಕ್ಷಿ ಹಗಲೆ
ಜಗದ ಜಾಣುವೆಗೆಲ್ಲ ಸುಗುಣೆ ಹಾ ಹಾಯೆನ್ನ
ನಗಲುವರೆ ಹೇಮಲತೆಯೆ ॥೪೯॥

ಜಾಣೆ ಹಾ ಗಾನಪ್ರವೀಣೆ ಹಾ ಪೆಣ್ಣೆ ಕ
ಟ್ಟಾಣಿ ಹಾ ಮನ್ಮಥದಿ ಹಾ
ದೇಣ ಹಾ ಮೋಹಿಗಳೆದೆಯುಗಿವೊಲುಯಿಹ
ಬಾಣ ಹಾ ಹಾಯೆನ್ನ ಮಗಳೆ ॥೫೦॥

ಎನುತವರಯ್ಯ ನಾ ದುಃಖದಲಿರೆ ಮಂತ್ರಿಯ
ತನುಜನಿತ್ತಲುಯೆಂಟು ದಿನಕೆ
ವನಿತೆಯ ಕುರುಹಿನೆಡೆಗೆ ಗಮನಿಸಿದನು
ಅನುವನದೇನ ಬಣ್ಣಿಸುವೆ ॥೫೧॥

ಆರಣ್ಯದೊಳು ಹೊಕ್ಕು ವಾರಿರುಹಾಕ್ಷಿಯ
ಆರೈದು ಅರಸುತ ಬರಲಿ
ಊರ ಕಡೆಯಯಿತ್ತ ಮಂತ್ರಿಯು ಘನದುಃಖ
ವಾರುಧಿಯೊಳು ಮುಳುಗಿದನು ॥೫೨॥

ಚಂದ್ರಾಕರನಿತ್ತ ಬಂದು ಕಂಡನು ರಾಯ
ನಂದನೆಯನು ಗುಹೆಯೆಡೆಯ
ಬಂದನೆನ್ನಯ ಪ್ರಾಣನಾಯಕ ನಲ್ಲನು
ಬಂದನೆನುತ ಕಾಲ್ಪಿಡಿದು ॥೫೩॥

ಮುಡಿಬಿಟ್ಟು ಕಾಲ್ತೊಳವ ಕೊಡಹಿದಳಾಗ
ಒಡನೆ ಕಂಗಳ ಭಾಳದೆಡೆಯಾ
ಮಡದೆತ್ತಿಕೊಳ್ಳೆ ಚರಣವ ಸಂತೋಷದಿ
ಒಡನೆಯವಳು ನುಡಿಸಿದಳು ॥೫೪॥

ಅಕ್ಕಯಿಲ್ಲಿರಬಾರದು ಪೋಹಾಗಳಿನೇಳೆಂ
ದೊಕ್ಕನೆಯೆನೆ ಚಂದ್ರಾಕರನು
ಮುಕ್ಕಣ್ಣನ ನೆನವುತಲಿ ಅರಣ್ಯವ
ಹೊಕ್ಕು ನಡದರೇನೆಂಬೆ ॥೫೫॥

ಬೇಡರಾಡುಂಬೊಲ ತಸ್ಕರರಿಹ ನೆಲೆ
ನೋಡು ಪುಳಿಂದರಾಗರವು
ಕಾಡ ಬಿದಿರು ಹಕ್ಕೆ ಲುಬ್ಧಕರಿಹ ತಾಣ
ವಾಡವ ಹೊಕ್ಕು ನಡೆದರು ॥೫೬॥

ಕಡವ ವಿಷವು ಸುರರನು ಅಟ್ಟಿ ಬಂದುದೀ
ಅಡಿವಿಡದ ಮೃಗಗಳನು
ತೊಡರಿ ಬೆನ್ನಟ್ಟುವ ಕಾಳಬೇಡರಿರ್ದರು
ಮಡದಿಯರೊಂದಾಗಿ ವನದಿ ॥೫೭॥

ಹಿಡಿದ ಬಿಲ್ಲಿನ ಕೈಯಲಿಡಿದ ಕೂರಂಬಿನ
ಲಡರು ಮೃಗವನೆಸವುತಲಿ
ಒಡನಿಹ ಬೇಡಿತಿಯರು ಅಂಬ ನೀಡಲಿ
ಬೇಡ ಹರುಷದಲಿ ನೋಡಿದರು ॥೫೮॥

ಮುಡಿಗಪ್ಪು ಮುಖದಾರಡಿಗಪ್ಪು ಕಣ್ಣಿನ
ಲಿಡಿದ ಯೌವ್ವನ ಕಪ್ಪು ಪೊಳವ
ತೊಡೆಮಲ್ಲಗಂಬವ ಮಿಂಚಿಟ್ಟ ಜಘನದ
ಜಡಿವ ಕಪ್ಪಿನ ಬೇಡತಿಯರು ॥೫೯॥

ಕುಂಭಕುಚವು ತೋಳು ಸೊಂಡಿಲು ನಡೆ ಮಂದ
ತುಂಬಿದ ಭಾರಿ ಮೈಯ್ಯವಳು
ಶಂಭರಾರಿಯ ಮದಕರಿ[ಯ]ಂದ ಬೇಡತಿ
ಯೆಂಬ ಜವ್ವನೆಯಿರೆ ಕಂಡು ॥೬೦॥

ತುಪ್ಪುಳ ತೊಡದಂತೆ ಒಪ್ಪುವ ಮೀಸೆ ಮಿಂ
ಚಿಪ್ಪ ಕೆಂಗಣ್ಣ ದಾಡೆಗನು
ಇಪ್ಪ ಕಗ್ಗಾಳವೆ ರೂಪದ ತೆರನವ
ಳಪ್ಪಿಗೆಳಸಿ ಮೆಳೆಯೆಡಿಯಾ ॥೬೧॥

ಮುಪ್ಪುರ ದಹನದಿ ಪತಿವ್ರತೆಯೆಲ್ಲಿ
ಯಿಪ್ಪುದ ಕಂಡಂಜಿ ಅಗ್ನಿ
ತಪ್ಪಲಿ ಹೊಗೆ ಮಸಗಿಯೆ ಕಪ್ಪುವಿಡಿದಳೆ
ದೊಪ್ಪದಲಿಹ ಬೇಡತಿಯರು ॥೬೨॥

ಕಡುಗೋಪದಲಿ ಮನ್ಮಥನ ಸುಡಲಿ ಶಿವ
ಮಡದಡ್ಡಲಾಗೆ ನೋವಿನಲಿ
ಹೊಡದುರಿಯಲಿ ಮೈಕಂದಿದ ರತಿಗಡ
ನುಡಿವರೆ ಕಾಡಬೇಡತಿಯೊ ॥೬೩॥

ಇಂತಪ್ಪ ಶಬರ ಶಬರಿಯರ ನೋಡುತ
ಕಂತುಹರನಧ್ಯಾನಗೊಂಡು
ನಿಂತೆಡಬಲದೊಳು ಫಲವೃಕ್ಷವೆಣಿಸುತ
ಅಂತವರಡಿಯಿಟ್ಟರಲ್ಲಿ ॥೬೪॥

ಆಲವು ಗೋಳ್ಯಾಲವು ಅತ್ತಿ ಕಲ್ಲತ್ತಿಯು
ಸಾಲರಳಿಯು ಶಿಲೆಯರಳಿ
ವಾಲೆ ಅಂಕೋಲೆ ನೇರಿಲು ಜಂಬುನೇರಿಲು
ಮೇಲೆಯಾವಿಮ್ಮಾವು ತಳೆಯಾ ॥೬೫॥

ಮತ್ತಿಯು ತೊರೆಮತ್ತಿಯೂ ತೇಗು ತೇಗಿನ
ಮುತ್ತುಕ ಮುಳ್ಳಮುತ್ತಕವು
ಬಿತ್ತಿದ ಹೊನ್ನೆಯ ಮರ ಸುರಹೊನ್ನೆಯ
ಮತ್ತವರವ ನೋಡಿದರು ॥೬೬॥

ಬಿಕ್ಕೆಯು ಬೇಳಲು ನೆಲ್ಲಿ ಕಕ್ಕೆ ಕಾಡತಡಿ
ಯಕ್ಕೆಯರಲು ಬೂರಗಾರೆ
ಕಕ್ಕೆಲೆಯಾಸು ಮುಳ್ಳಾಸು ಗೊರವಿಗೊವ
ಲೊಕ್ಕಿ ತಡಸು ತಗ್ಗಿತಾರೆ ॥೬೭॥

ಹೀಲ ತಬಸಿ ಪೇರಲ ಹುಣಿಸಿ ಬೇವು
ಹಾಲೆಯಂಕೋಲೆ ಹೆಗ್ಗಳವಿ
ಆಲಿಸುತಲಿ ಪಕ್ಷಿಜಾತಿಯ ದನಿಗಳ
ಸೂಲಿಯ ನೆನದು ನಡದರು ॥೬೮॥

ನವಿಲು ಪಾರಿವ ಕೋಕಿಲು ಕೊಂಚೆ ಕೊಳರ್ವಕ್ಕಿ
ಕವಿಜ ಕೊಕ್ಕರ ಲಾವಕ್ಕಿಗಳು
ಹವಣಿಸಿ ಹಾರುವಾಯಸವೈಲಹ ಸುಬನ
ಅವ ನೋಡುತಲೈದಿದರು ॥೬೯॥

ಬೆತ್ತ ಬಿದಿರು ತಳೆಯಗಳೊಳು ಹೊಕ್ಕೇರಿ
ಹತ್ತಿಯಿಳಿದು ಪರ್ವತಗಳಾ
ಮೊತ್ತದ ಕರಿ ಕಾಡ್ಕೋಣನೆಕ್ಕಲಗಂಡು
ಚಿತ್ತನಡದಾಗ ನಡದರು ॥೭೦॥

ಹರಿಣ ಸಾರಂಗ ಭಲ್ಲೂಕ ಮರೆ ಮಾರ್ಜಾಲ
ಹಿರಿಹುಲಿಯು ಕಿರುಬುಲಿಯು
ನೆರದಿಹ ಮೃಗವ ನೋಡುತ ನಡೆತರುತಲಿ
ವರಮುನಿಗಳ ಕಂಡರವರು ॥೭೧॥

ಕೆಂಜೆಡೆಗಳೊ ಪವಳದ ಕುಡಿಯಂದದ
ಹೊಂಜೆಡೆಗಳೊ ರತ್ನಗುಡುಹೊ
ಅಂಜದೆ ಮದನನ ಕಟ್ಟುವ ಪಾಶವೊ
ರಂಜಿಪ ಜಡೆಯ ಮುನಿಗಳೊ ॥೭೨॥

ಉಟ್ಟ ಪುಲಿಯ ಚರ್ಮ ತೊಟ್ಟ ರುದ್ರಾಕ್ಷಿಯು
ಇಟ್ಟ ಭಸಿತ ಜಪಮಾಲೆ
ಮುಟ್ಟಿ ಮಣಿಯನೆಣಿಸುವ ತಪಸಿಗಳ
ಕಟ್ಟಳೆಯನು ಕಂಡರವರು ॥೭೩॥

ಕುಪ್ಪಸ ಕೃಷ್ಣಾಂಜಿನದ ಟ್ಟೊಪ್ಪಿಗೆಯರು
ಒಪ್ಪುವ ಕೈಪು ಗದ್ದುಗೆಯು
ಇಪ್ಪ ಮುನಿಗಳ ಕಂಡರು ಅವರಲ್ಲಿ ಕಂ
ದರ್ಪಶತೃಗಳುಯಿವರೆಂದು ॥೭೪॥

ಭಸಿತಗಳನು ಅನುಮಾಡುತಿಹರು ಕೆಲ
ಹಸನಾಗಿ ನಾರಸೀರೆಯನು
ಹೊಸದು ನೆಯಿದು ಪತ್ರೆ ಪುಷ್ಪಗಳನೆ ತಂದು
ಶಿಷ್ಯರುಗಳು ಸೋದಿಸುತಲಿ ॥೭೫॥

ತರಗೆಲೆಗಳನನು ಮಾಡುವರೊಂದೆಸೆ
ಮರಿಯದೆ ಗಡ್ಡೆಗೆಣಸನು
ತಿರಿತಂದು ಆಗುಮಾಡುವರನೆ ಕಂಡರು
ಕಿರಿಯ ತಪಸಿಗಳಿರವನು ॥೭೬॥

ನಾನಾಪರಿಯ ಸಮಿದೆಯ ಹೊತ್ತುತಹ ಕಪಿ
ನಾನಾವರ್ಣದ ಕಾಯಿವಣ್ಣಾ
ಜ್ಞಾನದ ಮೃಗ ಕರಡಿವಾವುತಂದು ಪಂಚ
ನಾನವರ್ಗೆ ಭಕ್ತಿಯಲಿ ॥೭೭॥

ನೇರವ ಮಾಡಲಿ ಪರ್ಣಸಾಲೆಯ ಮುಂದೆ
ದಾರಿಯ ಸಮನಮಾಡುವವು
ನೀರಚಳೆಯುವಗೊಡುವಾನೆಮರಿಯು ಪಕ್ಷಿ
ಸೇರೊಲೆಪಟುವ ಮಾಡುವವು ॥೭೮॥

ವಸದು ಕರೆವ ಕಾಡೆಮ್ಮೆಯು ಹಾಲನು
ಹೊಸ ತುಪ್ಪಗಳನೀವ ಜೇನು
ಕುಸುಮಗಳನು ಶೋಧಿಸಿ ನೀಡುತಿಹವಲ್ಲಿ
ಹಸನಾಗಿ ಪುರುಷಮೃಗವು ॥೭೯॥

ಕೋಡುಗಲ್ಲಿನ ಮೇಲೆಯಿಹ ತಾಪಸಿಗಳ
ಕೂಡೆ ಪಕ್ಷಿಯು ನೆಳಲ್ಗೊಡುತ
ಪಾಡಾಗಿ ಬೆಂಗೊಟ್ಟು ನಡವ ಹೆಬ್ಬುಲಿಗಳ
ನೋಡಿ ಕಂಡರು ಅವರಲ್ಲಿ ॥೮೦॥

ಕಂಡು ಕೈಮುಗಿದರು ನಿಂದು ವಂದಿಸಿಯೆದ್ದು
ಕೊಂಡಾಡಿದರು ಮನ ನಲಿದು
ತಂಡದ ತಪಸಿಗಳವರ ನುಡಿಸಿದರು
ಮಂಡಿಸೆಂದರು ಕರಣದಲಿ ॥೮೧॥

ಘೋರಾರಣ್ಯವಿದೂರಲ್ಲದಾರಣ್ಯ
ಕಾರಣವೇನು ನೀವಿಲ್ಲಿ
ಕ್ರೂರಮೃಗಗಳೊಳು ಬಂದ ಪ್ರಸ್ತಾವವ
ಆರೈದರಾ ತಪಸಿಗಳು ॥೮೨॥

ರಾಜಕುಮಾರರಲ್ಲದೆ ಬೇರೆನೀವೊಂ
ದೋಜೆಯೆಣಿಕೆ ನಿಮಗಿಲ್ಲ
ಮಾಜಬೇಡೆಮ್ಮೊಳು ಪೇಳೆನೆ ಬಂದ
ಸೋಜಿಗವನು ಹೇಳಿದರು ॥೮೩॥

ಆದಿವಿಡಿದು ಬಂದಾದ ಪ್ರಸ್ತಾವವ
ಸೋದಿಸೊಂದುಳಿಯದಂದದಲಿ
ಭೇದಾನ ಭೇದವೆಲ್ಲವ ಕೇಳಿ ಮಾರ್ನುಡಿ
ಬೋಧೆಯನವರು ಹೇಳಿದರು ॥೮೪॥

ಇಂತು ಬಹರೆ ಮರುಳ್ತನದಲಿ ನೀ ಉಡು
ಕಾಂತಧರನ ಪೂಜೆಗೈದು
ಸಂತೋಷದಲಿ ಪ್ರಸಾದವ ಭುಂಜಿಸ
ಲಂತವರಿರಲಿತ್ತಲಿನನು ॥೮೫॥

ಕಳೆಯೆಲ್ಲವನೊಡಗೂಡಿ ಪಶ್ಚಿಮ ನಾರಿ
ಯೊಳು ರಾತ್ರೆವಿಟನಾಗಿ ಬಂದು
ಕಳಿವೆನೆನುತಲಾಕೆಯ ಗೃಹ ಹೊಗುವೊಲು
ತಳರ್ದನಂಬುದಿಗೆ ಮಿಹೀರಾ ॥೮೬॥

ಆ ಹೆಣ್ಣಿನ ಕೇಶಕರಾಕ್ಷಿಯು ಅರುಣ
ಊಹೆಯಂದದಿ ಮೇಘವೆಸೆಯೆ
ಮೋಹಿಸಿ ಮುಂಗುರುಳ್ಪಿಡಿಯೆ ಕಬರಿ ಕೆದ
ರೀಹಂದದಿ ನಭಗಳನು ॥೮೭॥

ರಸಪಿಲ್ಲಿ ಕುಸುಮಶರವನನುಮಾಡಿಯೆ
ಎಸೆವಂತೆ ನಿರ್ಮೋಹಿಗಳೂ
ವಸುಧೆಯ ತಳವಾರನೆಂಬೊಲು ಮನ್ಮಥ
ನಸಮನಾಜ್ಞೆಯೊಳು ರಾತ್ರೆಯೊಳು ॥೮೮॥

ತಂಗಾಳಿ ಸುಳಿದು ಜಾರಂಗವ ಸೋಂಕುತ
ಸಂಗಕ್ಕೆಚ್ಚರಿಸುವಂದದಲಿ
ಶೃಂಗರಿಸಿದ ಮೇಘಾಂಗನೆ ಕುಸುಮ ತಾ
ರಂಗಳತಿಂಗಳಿನಿಯಗೆ ॥೮೯॥

ಸನ್ನೆಗೈದವು ದೇವತಾ ಭವನದಿ ದೀಪ
ವನ್ನೆಸದವನಿ ತಂಪೇರೆ
ಮುನ್ನೀರ ಮಗನ ಬರವ ಹಾರಿ ಚಕೋರ
ಬಣ್ಣಿಸಿ ಕರದವೇನೆಂಬೆ ॥೯೦॥

ಜೊನ್ನೊಡಲನೆ ಬಾರೊ ನಮ್ಮಯ ಸವಿಯೂಟ
ಕನ್ನೈದಿಲ ನಲ್ಲ ಬಾರೊ
ಸನ್ನಿಗದಿರ ಬೇಗ ಬಾರೊ ಬಾರೆನುತಲಿ
ನಿನ್ನಾಣೆ ಹಸಿದೆ ಬಾಯೆನಲು ॥೯೧॥

ನೆರಳೆಯನೇರಿದ ಸರಳು ಬಾಣನ ಮಾವ
ತೆರಳಿಬಂದಂಬರಕಾಗಿ
ಹುರುಳಾದ ಹುಡಿನಾರು ಕಲೆಗಳನಗಲಕೆ
ಹರಹುತ್ತೈದಿದ ಪಶ್ಚಿಮಕೆ ॥೯೨॥

ಉಡುಗು ನಿನ್ನಯ ಕಳೆಯಡಗು ಕತ್ತಲೆ ಪಗ
ಲೊಡೆಯನೈದಿದನೆಂಬಂತೆ
ಹೊಡವೊಲು ಡಂಗುರವನು ಬೆಳಗಿನಜಾವ
ನುಡಿದವು ತಾಮ್ರಚೂಡಗಳು ॥೯೩॥

ಉಂಬವೇಳೆಯನರಿದವು ಚಕ್ರವಾಕವು
ಹಂಬಲಿಸಿನನ ಕರದವು
ಮುಂಬಗಲನೆ ಕೊಂಡು ಪೂರ್ವಾದ್ರಿಯಡರಲು
ಅಂಬುಜ ನಕ್ಕವೇನೆಂಬೆ ॥೯೪॥

ಭ್ರಮರದ ತಾಯಿ ಕಮಲ ಬಂಡುಣಿ ಸಲಿ
ಕುಮಿದಿನಿ ತಾನೋಡಿ ಕಂಡು
ರಮಣ ನಿನ್ನಯ ಪರಪುರುಷನ ನಮಗೆಯೆಂದು
ಸುಮನವಳಿದು ಮುಖಮುಸುಗಿ ॥೯೫॥

ತಳಿರಬಾಡಿದವೇಣಿವಕ್ಕಿ ನಲಿದವಾಗ
ಬಳಸಿಹ ತಮಹರದೋಡೆ
ಸುಳಿದಾಡುವ ಜನಪಕ್ಷಿತರುಗಳೆಡೆ
ಚಿಲಿಮಿಲಿಯನೆ ಕೇಳಿದರು ॥೯೬॥

ಏಳು ಕುದುರೆಯ ಸಮಾಳು ಕಾಲಿಲ್ಲದೊ
ಗ್ಗಾಲಿಯ ರಥವ ಮೇಳೈಸಿ
ಭೂಲೋಕವ ತಿರುಗುವರೆ ಪ್ರಭಾಕರ
ದಾಳಿಡೆ ಮುನಿಗಳಿಗೆರಗಿ ॥೯೭॥

ಶಿವಪೂಜೆಯ ಮಾಡಿದರು ಮೂವರು ಅಲ್ಲಿ
ತವಕದಿ ಗಮನವಂಗೈಸಿ
ಹವಣಿಸಿ ಮುಂದಳೆಣಿಕೆ ಹಾದಿಹರುಗಳ
ನವರ ಕೇಳಿದರೆ ಹೇಳಿದರು ॥೯೮॥

ಆದರೆ ನೀವಿ ಎಂದು ಪೋದೆಯವೆಂಬುದು
ಹಾದಿಯನವರು ಹೇಳಿದರೆ
ಮಾದುದೆರಡು ಸಂಧಿಯಾದನುವನು ನಾ
ಚೋದ್ಯವೆನಲು ಉಸುರುವೆನು ॥೯೯॥

ವಾರಿಯ ಚರದ ಜಾರಿಯೆ ಫಣಿಯಷ್ಟ
ಹಾರಿಯೆ ತ್ರಿಪುರ ಸಂಹಾರಿ
ನೀರೆಗೆಯೆಡದರೆಯಿತ್ತು ಮೆರವ ಸಿಂ
ಗಾರೀಶ್ವರನಡಿಗೆ ಶರಣಾರ್ಥಿ ॥೧೦೦॥

ಅಂತು ಸಂಧಿ ೨ ಕ್ಕಂ ಪದನು ೨೦೦ ಕ್ಕಂ

ಮಂಗಳ ಮಹಾಶ್ರೀ

●

ಸಂಧಿ : ಮೂರು

ನಲ್ಲಳು ಪುರುಷನೊಳಪ್ಪಿ ಸ್ನೇಹದ ಸವಿ
ಲಲ್ಲೆವಾತಿನ ಸವಿಯಂತೆ
ಬೆಲ್ಲ ಘೃತವು ಚಿನಿಪಾಲೊಡನೆರವೊಲು
ಸೊಲ್ಲಿಸುವೆನು ಅರಿವರಿಗೆ ॥೧॥

ನಿರುಪಿಸಿದರು ಮೂವರ ಕರದಾಗಲೆ
ಪರಮ ಮುನಿಗಳರಿದನುವಾ
ಧರೆಗತಿಶಯ ಕರ್ನಾಟಕ ದೇಶವು
ಮೆರದಿಪದತಿಶಯವೆನಿಸಿ ॥೨॥

ಆ ದೇಶಾಧಿಪತಿಯು ಮಾಧವರಾಯ
ಮೇದಿನಿಯೆಂಟು ದೆಶೆಯೊಳು
ಆದರವನ ಜಸವಾದುದಲ್ಲದೆ ಉ
ದಾದರ ಮಾತಿನಿಸಿಲ್ಲಾ ॥೩॥

ಯುಕ್ತಿವಿದನು ಭಕ್ತಿಪ್ರಿಯನು ಮನದಲಿ
ಸತ್ಯವನಾ ಪರವರಿಯಾ
ಕರ್ತುವೇಣಿಕೆಯೊಳಾಳುವ ಇನಕುಲನೃಪ
ಕೀರ್ತಿವಂತನು ಮೆರದಿಹನು ॥೪॥

ಇಂತಪ್ಪ ದೇಶದ ಪತಿಯೆಸೆದಿಪ್ಪ ಮಹಿ
ಕಾಂತೆಯೆಂದೆಂಬ ಪಟ್ಟಣದಿ
ಸಂತೋಷದಿ ಹೋಗಿ ಅಲ್ಲಿ ರಾಜಿಪುದೆನೆ
ಯಂತಳರಿದರವರಲ್ಲಿ ॥೫॥

ಮುನಿಗಳ ಬೀಳ್ಕೊಂ[೧][ಡುಅ][೧]ನುಪಿಲಿ ನಡದರು
ಘನದೇವನ ಕೃಪೆವಿಡಿದು
ವನಿತೆಯೋರ್ವಳು ಹೇಮಲತೆ ಚಂದ್ರಾಕರ
ವಿನಯದಿ ಗಮನವನಹಿರಿ ॥೬॥

ನಡದರವರು ಅಡಿಯಿಟ್ಟು ಕರ್ನಾಟದ
ಗಡಿಯ ಸೀಮೆಯನೊಳಪೊಕ್ಕು
ತಡೆಯದೆ ಬರೆಮಹಿಕಾಂತಿ ಪಟ್ಟಣದೊತ್ತಿ
ಲಿಡಿದಿಪ ಶೃಂಗಾರ ವನವು ॥೭॥

ಹೊರವಳಯದಿ ಗಜಿಯೊತ್ತು ಮೋಹಿಗಳೆದೆ
ಗೊರೆವ ಕರಗಸದಂದದಲಿ
ತೆರಹಾಗಿದೆ ಕೇತಕಿ ಚಂದ್ರಕರನಿದ
ನರುಹೆಂದಳು ಹೇಮಲತೆಯು ॥೮॥

ಮುನ್ನಜ ಪರಿ ವಾದಿಸಿ ಭಿನ್ನವಾದುರೆ
ಪನ್ನಂಗಧರನಡಿಮೇಲಾ
ವರ್ಣವ ಕಾಣದಿರಲಿ ಸಾಕ್ಷಿ ನುಡಿದುದು
ನನ್ನಿ ಭಂಗದಿ ಹೊರಗಾಯಿತು ॥೯॥

ಕುಸುಮಜಾತಿಗಳ ಛಿದ್ರಿಸುವಾರಡಿಗಳ
ನುಸುಳುಗೊಡದ ಕಾವಲಂತೆ
ಹೊಸ ಪರಿಮಳವನೆಸಗುವ ಸಂಪಿಗೆಯಲ್ಲಿ
ಮುಸುಗಿರಲವರು ನೋಡಿದರು ॥೧೦॥

ಭಿನ್ನವನಳಿದಾವು ತನ್ನೊಡನಿಪವೃಕ್ಷ

ವರ್ಣದ ಪ್ರಕೃತಿ ಪಲ್ಲಟಿಸಿ
ಸನ್ನೆದೋರುತಲಿದೆಇನ್ನಾದರರಿಭವ
ವನ್ನದ ತರುವಬುಜಾಕ್ಷಿ ॥೧೧॥

ತಳಿರು ತಂಪಳಿಯೊರದಳ ಪೂಗೊಂಚಲ
ಬಳಿಯಲಿ ಪಿಕ ಕದ್ರುಂಕುತಲಿ

೧–೧ ಪ(ಮೂ)

ಗಿಳಿಗಳ ಸ್ವರವಪ್ಪಿ ಮೆರವ ಸಾಲವಿ
ನೆಳಲಂ ನೋಡೆಂದಂಜೆಗಮನೆ ॥೧೨॥

ಅಳಿವರ್ಣದ ಪಲಗುಳಿಗೆಯ ಪಿಡಿದೊಲು
ಬಳಲುವ ವಿರಹವಸ್ತಿಗರಾ
ತಿಳಿಯುಪಚರಿಸು ವೈದ್ಯನ ಪರಿಯಂದದಿ
ಸಲೆ ಜಂಬುನೇರಿಲೆಸದವು ॥೧೩॥

ಮುಂಗಡೆಯಲಿ ಚೆಂದೆಂಗೆಸದವು ಮೂರು
ಕಂಗಳ ವಿವರ ನೋಡುವೊಲು
ಗಂಗೆಯವಾಂತು ನಿಂದಿಹವಾವ
ನಂಗನ ವೈರಿಯಂದದಲಿ ॥೧೪॥

ಮಕ್ಕಳ ಸೀಳ್ತಿಂಬರ ಮನುಜರುಯೆಂದು
ತೆಕ್ಕೆಯಲವಚಿ ತಾ ಕೊಡದೆ
ಅಕ್ಕ ನೀ ಹೇಳು ಮುಕ್ಕಣ್ಣಗೆಂಬೊಲುಯಿಹ
ಬಕ್ಕೆವಲಸ ಕಂಡರವರು ॥೧೫॥

ಅಂಬಿಕೆಯೋ ಮೇಣು ರಂಬೆಯೊ ಗಡಯಿವ
ಳೆಂಬರೆ ವನದೇವತೆಯೊ
ಹೊಂಬಣ್ಣ ಮೈಯ್ಯಳ ಕಂಡು ಹಳುವಳೆಂದು
ನಿಂಬೆಲೆ ಮರೆಗೊಂಡುಯಿಹವು ॥೧೬॥

ಕಕ್ಕಸ ಕುಚ ಕುಂಭ ತೋಳು ಸೊಂಡಿಲು ಮದ
ಸೊಕ್ಕಿದಾನೆಯುಯಿದನಮ್ಮಾ
ಒಕ್ಕಲಿಕ್ಕುವದೆಂದು ಕದಳಿಯು ತಲೆವಾಗೆ
ನಕ್ಕಂತೆ ದಾಳಿಂಬಯಿಹವು ॥೧೭॥

ಚೆಲ್ಲೆಗಂಗಳ ಕಾಂತಿಯ ಕೋಮಲಾಂಗದ
ನಲ್ಲಳ ಹೊಂಬಾಳೆದೊಡೆಯೊ
ಮೆಲ್ಲಡಿಗಳ ಕಂಡು ನಮ್ಮ ಸಖೀಯೆಂದು
ಅಲ್ಲಿ ಕದಳಿ ಕೈ ನೀಡಿದವು ॥೧೮॥

ನಿಡಿಗಣ್ಣಿನ ರಸದಾಳಿ ಪರಕೆ ಪಾನ
ಗೊಡುವಂತೆ ತುಂಬಿಕೊಂಡಿರಲಿ
ಅಡಿಯಿಡುತಲಿ ಕಂಡರಿವರ ವನದಲಿ
ಯಿಡಿದಿಹ ಮದನನ ಧನುವಾ ॥೧೯॥

ಮಲ್ಲಿಗಸೋಕೆ ಮಾಂದಳಿರುತ್ಪಲ ಪದ್ಮ
ವಲ್ಲಿಹವೈದು ಬಾಣಗಳು
ನಲ್ಲಳು ಹೇಮಲತೆಯು ಚಂದ್ರಾಕರ
ಮೆಲ್ಲನೆ ನೋಡುತ್ತೈತರಲಿ ॥೨೦॥

ಎಡೆಯಿಲ್ಲದ ಸಸಿಯಡಕೆಯಾ ವನದೊಳು
ಗುಡಿಗಟ್ಟಿದಂತೆ ನಿಂದಿನಲಿ
ಬಿಡವುಕಿಯೆ ಸುತ್ತಿಯಡರಿದಯೆಲೆವಳ್ಳಿ
ಕುಡಿ ನೆಗದವು ಸಖನೆಂದು ॥೨೧॥

ಈಳೆ ಕಿತ್ತಳೆ ಹಲಸು ಬಕ್ಕೆವಲಸೆಲ್ಲ
ಬಾಳೆ ಸುಗಂಧವಾಳೆಗಳು
ಹೇಳುವೆನಿನ್ನೇನ ತೆಂಗು ಚೆಂದೆಂಗಲ್ಲಿ
ಸಾಲುಮಾವಿಮ್ಮಾವು ತಳೆಯೆ ॥೨೨॥

ಕೆಂಡಸಂಪಗೆ ನಾಗಸಂಪಗೆ ಜಾಜಿಯು
ದುಂಡಮಲ್ಲಿಗೆಯು ಮಲ್ಲಿಗೆಯು
ತಂಡದ ನೆಲೆಗಣಗಿಲೆ ಚೆಂಗಣಗಿಲೆ
ಕಂಡರವರು ಕುಸುಮಗಳಾ ॥೨೩॥

ಈಳೆ ಕಿತ್ತಳೆ ಮಾದಲ ಹೇಳೆ ನೆಲ್ಲಿ
ಸಾಲದೊಡ್ಡಿಳಿ ರಾಯ ಬೋರೆ
ತಾಳಿದ ಫಲ ಜೋತೊರಗೆ ಪಕ್ಷಿಗಳಲ್ಲಿ
ನೀಳೆಸೆಯವ ನೋಡಿದರು ॥೨೪॥

ಕೊಂಚೆ ಕೊಳರ್ವಕ್ಕಿಯಂಚೆ ನವಿಲು ಗಿಳಿ
ಯಿಂಚಗೊಡುವ ಪಿಕಾಳಿ
ಮುಂಚಲ್ಯೆದುವ ಪಾರಿವಾಳಗಳ ನೋಡಿದ
ರ್ಪಂಚಸರಯಿಡಿದಿಹಳಾ ॥೨೫॥

ಬಳಸಿದ ರಿತುಕಾಲ ಜಳವ ಕಳವೆನೆಂದು
ಕೊಳನ ತೀರಕೆಯೆಯಿತರಲಿ
ಸುಳಿಗಾಳಿ ಸುಫಲ ತಳಿರು ತಂಪನೆ ನೋಡಿ
ಬಳಲಲಿಕುಳಿತು ಮೂವರಲಿ ॥೨೬॥

ನಳಿನಪರ್ಣದಿ ಜಲದುಂಬಿ ಪೊಟ್ಟಣಗಟ್ಟಿ
ಕೊಳನ ತೀರದ ಕುಸುಮಗಳಾ
ಅಳಿಗಳವ್ಯೆರಿ ಸಂಪಗೆ ಜಾಜಿ ಮಲ್ಲಿಗೆ
ದಳವನು ತಿರಿತಂದರವರು ॥೨೭॥

ಸುರಿಗಿ ಸೇವಂತಿಗೆ ಕರವೀರ ಮೊಲ್ಲೆಯು
ಯಿರವಂತಿಗೆ ಪಾದರಿಯು
ಸುರಹೊನ್ನೆ ರತ್ನಪಡ್ಡಳಿ ಚೆಂಗಣಗಿಲ
ಅರಳಿಲಿ ಹರಪೂಜೆಗೈಯಿದು ॥೨೮॥

ಬಳಲಿಕೆ ಕಳದರು ನೆಳಲ ತಂಪಿನೊಳಲ್ಲಿ
ತಳಿರುವಾಸಿನಮೇಲೊರಗಿ
ಸುಳಿಗಾಳಿ ಸೂಸಲಂಗವನೋಡುತಲವ
ರ್ಕಳಿದರಿತ್ತಾ ವನದೊಳಗೆ ॥೨೯॥

ಕೋಗಿಲೆಗಳ ತೆರಹಾದ ವಸಂತದ
ಬೇಗೆಯದಟು ನಿಂದು ನಲಿವಾ
ಸೋಗೆನವಿಲು ನಟಣಿಸಿ ಕುಣಿದವು ಅಲ್ಲಿ
ಮೇಘವ ಹಾರೈಸುವಂತೆ ॥೩೦॥

ಮಾರುತನಾಡುಂಬೊಲನೊ ಇದು ರತಿಯ ಶೃಂ
ಗಾರದ ಸೊಬಗಿನವೀಡೊ
ಮಾರನ ತಾಣ ವನಧಿವಿಹಾರಿಸುತ
ನಾರಿ ದೇವರ್ಕಳಾಗರವೊ ॥೩೧॥

ಇಂತೆಸದಿಪ ವನವನು ಕಳಿದರು ಮಹಿ
ಕಾಂತೆಯೆಂದೆಂಬ ಪಟ್ಟಣವು
ಮುಂತೆ ಕಂಡಾಹಾಯೆಂದು ಹೊಗಳ್ದಿದು
ದಂತಿಪತಿಯ ಪುರಕೆಣೆಯು ॥೩೨॥

ಗಗನದಟ್ಟಳೆ ಸಗ್ಗಿಗರ ಬೀಡಾರದಿ
ನೆಗದ ಪಾಲಿಕೆ ಖೇಚರವು
ಹೊಗಗುಡದಟ್ಟುವಂದದಿ ನೆಗದಿರಲಾ
ನಗರಕಿನ್ನಾವುದೆಣೆಯೆಂದಾ ॥೩೩॥

ಮುಗಿಲ ಬಗಿದು ಅಡಸುವ ಮಾರಿಯ ಹಲ್ಲು
ದೆಗೆದು ತಿಂಬಂತೆ ತೆನೆಗಳು
ಜಗವನೋಡುವಲು ಬಳಸಿ ಕಟ್ಟಿದಾಳ್ವೇರಿ
ಮಿಗೆಯಿಟ್ಟಣಿಸಿದ ಕೊತ್ತಳವು ॥೩೪॥

ಸುತ್ತಲಗಳು ಭೂಮಿ ಹೊತ್ತಿಹ ಕೂರ್ಮನ
ನೆತ್ತಿಯ ನೋಡುವಂದದಲಿ
ಬತ್ತೀಸ ಸಾಲೊಡ್ಡುಗಲ್ಲೊಳೆಗಲ್ಲುಗ
ಳೆತ್ತನೋಡಲಿ ಬಳಸಿನಲಿ ॥೩೫॥

ಹೊತ್ತುಗಲ್ಲೆತ್ತುಗಲ್ಲುಗಳು ತೆನೆಯಮೇಲೆ
ಸುತ್ತಲಿರಿವದಸಿಬಸಿದು
ಹತ್ತಿರೆ ಸೇರಿದರಿಡುವ ಕವಣೆಗಲ್ಲು
ಮತ್ತವರವರು ನೋಡಿದರು ॥೩೬॥

ನೆಗದೊಟ್ಟಿ ಸಿಡಿವ ಡೆಂಕಣಿ ಭಾರಿಗಲ್ಲಿಂದ
ಮುಗಿಲುವಡದು ಬೀಳುವಂತೆ
ನಗವದಿರಿ ಬಗಿಯಾದಂದದಲಿಹ
ಮಿಗೆ ದೊಡ್ಡ ಪಿಟಲ ನೋಡಿದರು ॥೩೭॥

ಚೋರಗಂಡಿಂಬುಗಂಡಿಗಳು ಹೊಕ್ಕಿರುಗಂಡಿ
ಸೇರಿಬರಲು ನುಸುಳ್ಗಂಡಿ
ಆರೈದವ ನೋಡುತ ಕಂಡರು ಮುಂದೆ
ಊರ ಹೆಬ್ಬಾಗಿಲನವರು ॥೩೮॥

ಉಪ್ಪರಿಗೆಯು ನೆಲೆಯ ಹೊಂಗಳಸವು
ಒಪ್ಪುವ ಉಭಯ ಮುಚ್ಚಳವಾ
ಇಪ್ಪ ಬಾಗಿಲಯಡಬಲದಿ ಭೈರವ ದುರ್ಗಿ
ತಪ್ಪಿಸುತಲಿ ಪುರಭಯವಾ ॥೩೯॥

ಮುಖದಂಕದಾರೆಯು ಪಿರಿಯಗುಸೆಯೊ
ಎರಡುಕಡೆಯ ಜಗುಲಿಗಳು
ಸರದ ಕಟ್ಟಾಳು ಕಾದಿರೆ ಕಂಡರು ಅಲ್ಲಿ
ದೊರೆದೊರೆಗಳು ಕುಳಿತಿಹರು ॥೪೦॥

ಕಾಸುವ ಮಳಲು ಕೊಪ್ಪರಿಗೆಯಲೆಣ್ಣೆಯು
ಬೀಸಿ ಹೊಯಿವ ಮರುಳ್ಳೈಯ್ಯ
ಹೇಸದೆ ಕೊಲುವಂಬಿನ ಹೊರೆಗಾಲಿಯ
ನಾಸಾರಣೆಯ ನೋಡಿದರು ॥೪೧॥

ಇಂತಿವ ನೋಡುತಾಶ್ಚರಿಗೊಂಡರು ಅವ
ರ್ಮುಂತೆ ಕಾಹಿನ ಪಟು ಭಟರು
ಕೊಂತ ಪರಿಗೆ ಕಕ್ಕಡ ಚಾಪ ಸುರಗಿಯ
ನೆಂತು ಪಿಡಿದ ಬಾಗಿಲವರು ॥೪೨॥

ಮುಸುಲಿ ಮುಸುಂಡ ಮುದ್ಗರ ಪಿಂಡಿವಾಳವು
ಅಸಮದ ವಜ್ರಮುಟ್ಟಿಗಳು
ದಸುನಿ ಶ್ರೀಮುಷ್ಟಿಸ ಬಳ ಸೆಲ್ಲ ಭಲ್ಲೆಯ
ಮಸದಂಕ ಮಾಸಾಳಲ್ಲಲ್ಲಿ ॥೪೩॥

ಮಾರಿಮುಖವು ಈಟಿ ಬಟ್ಟಿರಿ ಜವದಾಡೆ
ಹಾರದ ಪಟ್ಟೆ ಕಕ್ಕಡೆಯು
ಚೋರಗತ್ತಿಯು ಕೊಂಕುಳಗತ್ತಿ ಕರದ ಕ
ಠಾರಿಯ ಭಟರು ನಿಂತಿಹರು ॥೪೪॥

ಸೆಳೆಗತ್ತಿ ಪರಸುಗೊಡಲಿ ಭೈರವಮತ
ಹೊಳವ ಖಂಡೆಯ ಕರೆಚೂರಿ
ಹುಲಿಯುಗುರ್ಗತ್ತಿ ಗದೆಯು ಕಡಿತಲೆಯರು
ಹಲವಾಯುಧವ ಪಿಡಿದವರು ॥೪೫॥

ಕಬ್ಬುನಗೋಲ್ಗಳುಯಿಬ್ಬಾಯಗತ್ತಿಯು
ಅಬ್ಬರಿಸೆರಗುವ ಲವುಡೆ
ಒಬ್ಬುಳಿಗೊಂಡು ಪಿಡಿದರ ನೋಡುತ ಅಲ್ಲಿ
ಹೆಬ್ಬಾಗಿಲೊಳಹೊಕ್ಕರವರು ॥೪೬॥

ಕಂಡರು ಮೂಲಸ್ಥಾನದ ಗುಡಿಯನು
ಖಂಡಪರಶು ನಮೋಯೆನುತಾ
ಕೊಂಡಾಡುತ ಲಿಂಗಮೂರ್ತಿಯಡಿಯ ಮನ
ಗೊಂಡು ನಡದರರ್ತಿಯಲಿ ॥೪೭॥

ವ್ಯಾಸನತೋಳು ನೆಗದವು ಲೋಕದೊಳುಳ್ಳ
ದೋಷ ದುರಿತ ಕರ್ಮಿಗಳಾ
ಹೇಸಿಕೆ ತೊಲಗಿಸಿ ಸುಖವೀವೆನೆಂದು ಕೈ
ವೀಸುವಂದದಿ ಶಿಖರದಲಿ ॥೪೮॥

ಮರ್ತ್ಯದೊಳಿಹ ಜಡದೇಹಿಗಳೈತನ್ನಿ
ಮೃತ್ಯುಂಜಯನಂಘ್ರಿಯೆಡೆಗೆ
ಯಿತ್ತಪನಿಷ್ಟಾರ್ಥವ ನಿಮಗೆಂಬೊಲು
ಕೀರ್ತಿಮುಖಗಳೊಪ್ಪುತಿಹವು ॥೪೯॥

ಬಲಗೊಂಡು ಬಂದು ಕಂಡರು ಲಿಂಗಮೂರ್ತಿಯ
ಲಲನೆಯಿರ್ವರು ಚಂದ್ರಾಕರನು
ಕುಲದೇವನೆ ಮನೆದೇವನೆ ನನ್ನಿಷ್ಟ
ಒಲಿದೀವನೆಂದೆರಗಿದರು ॥೫೦॥

ದೇವನೆ ಜಗತ್ರಯ ಕಾವನೆ ಸಾಯುಜ್ಯ
ವೀವನೆ ಭಕ್ತಿಭಾವಕರಾ
ಜೀವನೆಸವಾಳಿಜನಕೆ ಮನೋಹರ
ಪಾವನ ತ್ರಾಹೆಂದು ನಮಿಸಿ ॥೫೧॥

ಪುಲ್ಲಶರಾರಿಯ ಭವನವ ಪೊರವಂಟ
ರಲ್ಲಿಂದ ಶೃಂಗಾರವಾಗಿ
ಚೆಲ್ಲೆಗಂಗಳ ಹೇಮಲತೆ ಚಂದ್ರಾಕರ ಭೂ
ವಲ್ಲಭನೆಡೆಗೈತರಲಿ ॥೫೨॥

ದಂಡಿಗೆವಿಡಿದು ವಿಳಾಸಿನಿ ಸಹಿತಲಿ
ಮಂಡಲೇಶ್ವರನ ವಾಲಗಕೆ
ಲೆಂಡಗಮನ ಅಡಿಯಿಡೆ ಪುರಜನ ನೋಡಿ
ಕಂಡರಿವರು ಭಾವವನು ॥೫೩॥

ಎಲ್ಲಿಯ ಪುರುಷಯೆಲ್ಲಿಯ ಸತಿಯಿವಳೆಂದು
ಮೆಲ್ಲಡಿಯಿಂಗಿತವರಿದು
ನಲ್ಲರಿವರು ದೇವಾಂಗನೆಯರು ಮರ್ತ್ಯ
ರಲ್ಲವೆಂದರು ತಮ್ಮೊಳಗೆ ॥೫೪॥

ಕೋಮಲೆಯನು ನೋಡಿ ಕಾಮುಕತನದಲಿ
ತಾಮಸವಡರಿ ಕೆಲಬರು
ರೋಮಾಂಚನ ಪುಳಕದಿ ಅಂಗ ಮರದರು
ಹೇಮಲತೆಯು ಕಂಡು ನಗುತಾ ॥೫೫॥

ಕಂಗಳೆರಡು ಜವಳ್ಗೊಲಿಗೆ ಪುರ್ಬೆಂಬ
ಹೊಂಗಿನ ಬಿಲ್ಲಿಗಮರಿಸಿ
ಲೆಂಗಿಸಿ ವಿಟಮೃಗವನುಯೆಚ್ಚು ಕೆಡವೊಲು
ಝುಂಗಿಟ್ಟು ನಡದರೇನೆಂಬೆ ॥೫೬॥

ಕಾಮನ ಪಂಚಬಾಣವು ಅಂಗವಡದಂತೆ
ಸೋಮಸೂರ್ಯರವೀದಿಯೊಳಗೆ
ಹೇಮಲತೆಯು ಚಂದ್ರಾಕರ ನಡದರು
ಆ ಮಹಾರಾಯನೋಲಗಕೆ ॥೫೭॥

ಮೆಲ್ಲನೆ ಬರುತ ಕಂಡರು ಮಣಿಮಾಡದ
ಜಲ್ಲಿಜವಳಿಯ ಮಳಿಗೆಯು
ಅಲ್ಲಿಹ ಸೆಟ್ಟಿಗಳನು ನೋಡಿ ತಲೆದೂಗಿ
ನಿಲ್ಲದೆ ಮುಂದಕೆ ಬರುತ ॥೫೮॥

ಸಾಲುಪ್ಪರಿಗೆಯಂಗಡಿಯಾಗ್ರದಲಿಹ
ಮೇಲುಭದ್ರಾದ ಹೊಂಗಳಸದಾ
ತಾಳಿಹ ಮದನಕೈಗಳು ಪಚ್ಚೆಪವಳದ
ಕೀಲಣೆಗಳ ನೋಡಿದರು ॥೫೯॥

ಪಳುಕಿನ ಪಾದಶಿಲೆಯು ಭದ್ರಮಂಟಪ
ಎಳೆಮಾಣಿಕದ ಕಂಬ ತೊಲೆಯು
ಹೊಳವ ವಜ್ರ ವೈಡೂರ್ಯದ ಪಲನಿರ್ದ
ಮಳಿಗೆಯನವರು ನೋಡಿದರು ॥೬೦॥

ಬೆಳುಮುತ್ತಿನಂಗಡಿ ಪುಳೆಯ ಪಸರವಲ್ಲಿ
ತಳಿಗೆ ಬಟ್ಟಲು ಕಂಚುಪಸರಾ
ಬಳಿಯಲಿ ಪರಿಮಳದಂಗಡಿಯನು ಕಂಡು
ತಳರಿದರಲ್ಲಿಂದಲವರು ॥೬೧॥

ಪರಿಪರಿ ಪುಷ್ಪದಂಗಡಿಗಳ ನೋಡುತ್ತಾ
ದೊರೆದೊರೆಗಳಕೊನಬುಗಳಾ
ಯಿರೆ ಅಡಿಯಿಟ್ಟು ಬರುತ ನೋಡಿ ಕಂಡರು
ಹರಿಣಾಕ್ಷಿಯರ ಕೇರಿಯನು ॥೬೨॥

ಇತ್ತ ನೋಡಿದ ಚಂದ್ರಾಕರ ಮಣಿಮಾಡದ
ಮೊತ್ತದ ಸಾಲುಸಾಲುಗಳಾ
ಹತ್ತಿರೆ ಬಂದು ಕಂಡರು ಚೋದ್ಯಚೋದ್ಯವ
ದತ್ತಜನಿಹ ನೆಲೆವೀಡಾ ॥೬೩॥

ಮದನನಾಡುಂಬೊಲ ಚದುರಿನ ಪಸರವು
ವದವಿದಂಗನೆಯರ ನೆರವಿ
ಇದೆನೋಡು ಚಂದ್ರಾಕರಯೆನುತಲ್ಲಿಂದ
ಪದವಿಟ್ಟು ಕಂಡರು ಮುಂದೆ ॥೬೪॥

ರತಿ ಮನ್ಮಥ ವೀಡು ವೃತಶೀಲರತಿ ಕೇಡು
ಸತಿವಿಟರಿಗೆ ತೆಕ್ಕೆಗೂಡು
ಯತಿಗಳಿರದೆ ಓಡು ಮತಿಹೀನರಿಗೆ ಜೋಡು
ಪತದೆಡೆಯನು ನಿಂದು ನೋಡಾ ॥೬೫॥

ಇಂತಿವ ನೋಡುತಲೈತರೆ ಕಂಡರು
ದಂತಿಗಮನೆಯರೊಗ್ಗುಡಿಯಾ
ಕಂತುಕಳೆಯನ ನಿಟ್ಟಿಸುತಲಿ ನಿಂದೆಲ್ಲ
ಭ್ರಾಂತುಗೊಂಡರು ಸತಿನಿವಹಾ ॥೬೬॥

ಕಕ್ಕಸಕುಚಕುಂಭ ತೋಳುಸೊಂಡಿಲು ಮದ
ಸೊಕ್ಕಿದಾನೆಯು ಮನ್ಮಥನಾ

ತೆಕ್ಕೆಗೂಡಿದ ವಿಟರನುಯಿರಿ ವೊಲು ನಿಂದ
ರಿಕ್ಕೆಲದಲಿ ಸತಿನಿವಹಾ ॥೬೭॥

ಕಂಗಳ ಬಾಣ ಪುರ್ಬಿಲ್ಲಳಕಗಳೆಂಬ
ಭೃಂಗವೆದೆಯ ಜೇವಡೆದು
ಅಂಗಜನೆಸುಗೆಯ ಕೆಡಿಸಿದಂದದಲಿಹ
ತುಂಗಕುಚೆಯರು ನೋಡಿದರು ॥೬೮॥

ಉಂಗುರ ಪಾಯವಟ್ಟವು ಪಂಚಸರಗಳು
ಬಂಗಾರಜಡಿವಂದುಗೆಯೂ
ಸಿಂಗರಿಸಿಯೆ ಜಣತ್ಕಾರಡಿ ಮೆಲ್ಲಡಿ
ಯಂಗನೆಯರು ಕಂಡರವರಾ ॥೬೯॥

ಅಲ್ಲವೆಯಿಂತಿರಲಿಲ್ಲವೆ ಪುರುಷರು
ಚೆಲ್ಲೆಗಂಗಳ ತನ್ನ ಚೆಲುವು
ಯೆಲ್ಲಿಯ ತಾಯಿ ಹೆತ್ತಳಾ ಶಿವ ಹಾಯೆಂದು
ನಲ್ಲಗೆ ಮನಸಿಟ್ಟರವರು ॥೭೦॥

ನೋಡನೆ ನಿಂದು ಮಾತಾಡನೆಯೆನ್ನೊಡ
ಗೂಡನೆ ಅಂಗಲೇಪವನು
ತೀಡುವೆನತಿಹರುಷದೊಳೆಂದೋರ್ವಳು
ಆಡಿದೊ ಸತಿಯರೊಂದಾಗಿ ೭೧॥

ನಲ್ಲರ ಸಿರೋಮಣಿಯೆಲ್ಲಿಗೆ ಹೋಗದೆ
ನಿಲ್ಲಬಾರದೆ ಕಾಮಕಲೆಯ
ಎಲ್ಲವ ತೋರುವೆ ಪ್ರಹುಡಿಯ ನೀ ನೆರೆ
ಬಲ್ಲನಾದರೆ ಮಂಚವೇರು ॥೭೨॥

ಎಂದರುತ್ತರುಗಳನಿಂದು ಹೇಳಿದರಲ್ಲಿ
ಬಂಧದ ಸವಿಸವಿಗಲೆಯಾ
ಸಂದವರಲ್ಲದ ಬರಿ ಮಾಟಕೂಟದ
ಹೊಂದಿಕೆ ನಿಮಗುಂಟೆಯೆಂದಾ ॥೭೩॥

ಚಿವುಷಷ್ಠಿ ಬಂಧದ ವಿವರವ ತೋರುವೆ
ನಿವಹದೊಳಗೆಯೆನ್ನ ಕೂಡಾ
ಜವಳಿಯೊರಿಕೆಯಲಿ ನಿಂದೆಯಾದರೆ ನೀನು
ಸವಿಸವಿಗಳನೆಂದಳೊರ್ವೆ ॥೭೪॥

ಬಲ್ಲ ಪರಿಯ ಕಾಣಬಾರದೆ ನಿಮ್ಮಿಂದ
ಬಲ್ಲವರಾರು ಧಾತ್ರಿಯಲಿ
ನಿಲ್ಲದೆ ಮುಂದಕೆನ್ನಡೆಗೊಳಲೊರ್ವಳು
ನಲ್ಲನ ಸೆರಗ ಹಿಡಿದಳು ॥೭೫॥

ತಾಂಬೂಲವ ಹಿಡಿ ಶಂಭರಾರಿಯರತಿ
ಚುಂಬಿಸುವಂತೆ ಸ್ತನಗಳಾ
ಂಬಾಳೆದೊಡೆ ಕುಂಭಕುಚ ಕಂಬು ಮೊದಲಾದ
ವೆಂಬವರೊಳು ತೋರುವೆನು ॥೭೬॥

ಅಹುದಹುದಿನ್ನು ಬಲ್ಲವರುಂಟೆ ಸುರತದ

ಸಹಸಿಗಳಾರು ನಿನ್ನಿಂದಾ
ಮೋಹದಿಂದ ಮೇಲ್ವಾಯಿದಳಿಗೆ ಉತ್ತರವೀಯೆ
ಕಾಹುರದಿಂದೊರ್ವೆ ತಡದೂ ॥೭೭॥

ಉಪರತಿ ಬಂದಡಿಗೆಲುವೆನು ನಿನ್ನಯ
ಕುಪಿತವ ಬಿಡು ಕಣನೇರು
ಸಪುರವ ಮಾಳ್ವೆನಿನ್ನೇಳೆಂದಳು ಆಗ
ನಿಪುಳನೊಡನೆಯೋರ್ವ ಚಪಳೆ ॥೭೮॥

ಆದರೆ ನಿಮ್ಮಿಂದ ಬಲ್ಲವರಾರಿನ್ನು
ಮೇದಿನಿಯೊಳಗೆಣೆಯಿಲ್ಲಾ
ಕಾದಲೇಕೇಳು ಪ್ರವುಡಿಯ ಸಾಗರವೆಂದು
ಹಾಡಿದೆಗದ ಚಂದ್ರಾಕರನು ॥೭೯॥

ಭೃಂಗಕುಂತಳೆ ಗಣಿಕಾಂಗನೆಯೋರ್ವಳು
ಶೃಂಗರಿಸಿಯೆ ಸದನದಲಿ
ಅಂಗಸನ್ನಿಭನ ಕಾಣುತ ಕಣ್ಣಿಟ್ಟಳು
ಸಂಗಕೆಳಸಿ ಮನದೊಳಗೆ ॥೮೦॥

ನೀರನೆ ಬಾರೆನ್ನ ಮೀರಿದೆವ್ವನ ಸೂರೆ
ಕಾರನೆ ಬಾ ಪೊರವಾರ
ಹೇರಿನ ವ್ಯವಹಾರಿಯೆ ಬಾರೋ ಬಾರೆಂದು
ನಾರಿ ಬಣ್ಣಿಸಿ ಕರದಳು ॥೮೧॥

ವದನವ ಪಿಡಿದೆನ್ನ ಅಧರವ ಚುಂಬಿಸಿ
ಎದೆಗೊಣ ಹೃದಯಕಮಲವಾ
ಕದಡಿ ಕಿತ್ತೆತ್ತುವ ಮದಸೊಕ್ಕಿದಾನೆಂದು
ಚದುರನ ಬಣ್ಣಿಸಲೋರ್ವೆ ॥೮೨॥

ಕಂಗಳಲಳುವ ಸನ್ನೆಯ ಸೂಚಿಸಿ ತನ್ನ
ತುಂಗ ಕುಚವನರೆದೆರದು
ಭೃಂಗಕುಂತಳೆ ಕೋಮಲಾಂಗಿ ಕರದಳಾಗ
ಸಂಗಸನ್ನಿಭ ಹರುಷದಲಿ ॥೮೩॥

ಹೊಂಬಾಳೆದೊಡೆ ಮಲ್ಲಗಂಭಗಳೆರಡರೊ
ಳ್ಕುಂಭಕುಚದಯೆತ್ತುಗುಂಡಾ
ಯಿಂಬರಿದೆದೆಗರುದಿಯ ಹೊಕ್ಕುಹೋರೆನ
ವೆಂಬಳವಳು ತನ್ನೊಡನೆ ॥೮೪॥

ಆದರೆ ನಿಲ್ಲುನಾ ಮೇದಿನಿಪತಿಗಂಡು
ಆದರದಿಂಬಹೆ ನೀನೂ
ಹಾದಿಯಬಿಡುಯೆಂದು ನಡೆಗೊಳ ಲೋರ್ವೆಯು
ಬೋಧಿಸಿದಳು ಚೆನ್ನಿಗನಾ ॥೮೫॥

ಮುಂಗುರುಳನೆ ಪಿಡಿದು ಮುಂಡಾಡೆನ್ನ ನೀ
ರಂಗುದುಟಿಯ ಸವಿಸವಿದು
ತುಂಗಕುಚದ ಮೇಲೊರಗಿಕ್ಕುದುಕುಣಿ
ದಂಗಡಿ ಹರವರಿಯಾಡು ॥೮೬॥

ಮುಡಿ ಲಂಬಿಸಿ ತೊಡೆಯಲಗುತ ತೋಳ್ತೆಕ್ಕೆ
ಬಿಡದವುಕಿಯೆ ಕುಂಭಕುಚವಾ
ಪಿಡಿದಾಲಿಂಗಿಸಿ ತೊಡೆ ಝುಣರುಯೆನಲ್ತಡೆ
ಯನು ಬಿಡಿಸಿಯೊಡಗೂಡಾ ॥೮೭॥

ಎಂದರೆ ಬಂದಪ ನಾನೀಗ ಪಥದಲಿ
ನಿಂದಿರಬೇಡಡ್ಡ ತೊಲಗು
ಮುಂದಕೆ ನಡದು ಬರಲಿ ಸ್ತ್ರೀಯರರೆ ಕಂಡು
ಚಂದ್ರವದನೆಗೆ ಪೇಳಿದನು ॥೮೮॥

ಬರುಬರುತ ಕಂಡರು ಮತ್ತೆ ಚೋದ್ಯವ
ಕರುವಾಡದುಪ್ಪರಿಗೆಗಳಾ
ಹರಿಣಾಕ್ಷಿಯರ ಕೇರಿಯು ಕೇರಿ ಸಾಲಿನಾ
ಮಿರವ ಕಂಡುವಿಸ್ಮಯಬಡುತಾ ॥೮೯॥

ಸಸಿಜೊನ್ನವಸರುವಂತೆಸವರನ್ನಗನ್ನಡಿ
ನಸುನಗುವಾಸ್ಯ ಕೋಮಲವಾ
ಕುಸುಮಗಂಧಿಯರು ನಿಂದಿರೆ ಚಂದ್ರವೀಧಿಯಾ
ದೆಸೆಯತ್ತ ಬಂದರೊಗ್ಗಿನಲಿ ॥೯೦॥

ಸೋಮಶಿಲೆಯು ಪಾಸರೆ ಪಾವಟಿಗೆಯ
ಹೇಮದ ಮಂಟಪಗಟ್ಟು
ಕೋಮಲೆಯರು ಹತ್ತಿಳಿದು ಮಂಡಿಸುವರೆ
ಆ ಮಹಾಪಚ್ಚೆಯ ಜಗುಲಿ ॥೯೧॥

ಎಂಟುದೆಸೆಯ ಲೋವೆಯು ಚಿತ್ರಗೆಲಸವು
ಮಂಟಪ ಭದ್ರಮಂಟಪವು
ಉಂಟಾದ ಚಿರಣಗೆಲಸವುದನ ಕೈ
ಕಂಟಿನ ತೊಲೆಕಂಬಗಳು ॥೯೨॥

ಉಪ್ಪರಿಗೆಯ ಮೇಲಿಪ್ಪ ಹೊಂಗಳಸವು
ಒಪ್ಪುವ ನೆಲೆನೆಲೆಗಳಲಿ
ಕರ್ಪುರಗಂಧಿಯರಿಹರು ವಿಲಾಸದಿ
ಬಪ್ಪವರನು ನೋಡುತಲಿ ॥೯೩॥

ಅನಿತರೊಳಗೆ ಅಂಬುಜದಳನೇತ್ರೆಯು
ನನೆಗೋಲವತಾರವನು

ಜನಪತಿಯೊ [೧][ಡನೋ][೧]ಲಗಕೈತರುತಿಹ
ಅನುವ ಕಂಡರು ಸತಿನಿವಹ ॥೯೪॥

ಕಂಡು ಹಾಯೆನುತಲಿ[ಇ]ಳಿದರುಪ್ಪರಿಗೆಯ
ಮಂಡಲದೊಳಗೆ ಇಂತಪ್ಪಾ
ಗಂಡಾಳುಗಳ ಶಿರೋಮಣಿಯೆನುತಲಿ ಸತಿ
ತಂಡ ನೆರದು ನಡೆತರಲಿ ॥೯೫॥

ಕುಡಿತೆಗಂಗಳ ಬೆಳಗಿನ ಸೊಡರ್ವರಿವಾಣ
ವಿಡಿದಯೆವ್ವನ ಕಳಸಗಳು
ಉಡಿಗೆ ಗುಡಿಯು ರನ್ನಗನ್ನಡಿ ಮುಖದರು
ಮಡದಿಯಡಿದಿರ್ಯೆದಿದರೂ ॥೯೬॥

ಭಕ್ತಿವಂತನೆ ವಿರಕ್ತಿವಂತನೆ ಸು
ಚಿತ್ತವಂತನೆ ನೀನೆಂದು
ಅರ್ತಿಯ ಸಲಿಸುವ ಶೀಲವಂತನೆಯೆಂದು
ಮುತ್ತಿತು ಆಸತಿ ನಿವಹಾ ॥೯೭॥

ಅಡಿಯಿಡಗುಡದಲಿ ಹಿಡಿಯಲು ಧೀರನ
ಪೊಡವಿಪತಿಯ ಬಳಿಗೈದಿ
ಒಡನೆಬಾಹೆನುಯೆಂದು ಬಿಡಿಸಿಕೊಳಲುಮೋರ್ವೆ
ತಡದು ಸೊಬಗೆಯಿಂತೆಂದು ॥೯೮॥

ಈಶಭಕ್ತರಿಗೆಂದು ಮೀಸಲುವಿಡಿದೆನು
ಸೂಸದಂತಿರೆ ಕಾಮರಸವಾ
ಬೀಸರುಗೊಡದೆ ಚುಂಬಿಸುವರೆ ಬಾರೋ ನೀ
ಹಾಸುಮಂಚವನೇರೆಂದು ॥೯೯॥

ಬಂದಪೆನೀ ರಾಜಮಂದಿರಕೈದೀಗ
ನಿಂದಿರಬೇಡಡ್ಡ ತೊಲಗು
ಸಂದಳಿಸಿದಳಿಗುತ್ತರವೀಯೊ ಮತ್ತೋರ್ವೆ
ಒಂದು ಮಾತನು ಆಡಿದಳು ॥೧೦೦॥

೧–೧ ಡೋ(ಮೂ)

ಹೇರಿದ ಪೊಜಿವಾರು ದೂರ ತಲಿವೆಯೆನ್ನ
ಮೀರಿದವೀಚದ್ವಯವು
ಮಾರಿದೆ ಶಿವಶರಣರಿಗಿನ್ನಿದ
ಕಾರೊಡೆಯರು ಹೇಳಯ್ಯ ॥೧೦೧॥

ಎನಲು ಕೇಳಿದ ಚಂದ್ರಾಕರನಿಂತೆಂದ
ಜನಪತಿಯೋಲಗಕೆಯಿದಿ
ಇನಿತು ಗಳಿಗೆಯಲಿ ತಿರುಗುವೆನೆನುತಲಿ
ಮನಸಿಜ ರೂಪನು ನಡದಾ ॥೧೦೨॥

ಸಾಧಿಸಿದೆನು ಚವುಷಷ್ಠಿ ಬಂಧಗಳನು
ಆದ ಚುಂಬನದ ಸ್ಥಾನಗಳಾ
ಸಾಧನೆಯಬ್ಬೆಸವ ತೋರುವೆನೆತ್ತ
ಹೋದಪೆ ನೀನೆಂದಳವಳ ॥೧೦೩॥

ಅಂಗಭವಿಗಳಿಗೀಯ್ಯದ ನೇಮವೆನ್ನಯ
ಲಿಂಗಭಕ್ತರಿಗೆ ಮಾರಿದರೆ
ಲೆಂಗಿಸಿ ನೋಡುತಲಿವೆ ಕೊಬ್ಬಿ ಮೀರಿದ
ತುಂಗಕುಚಕೆಯಿನ್ನೆಂತೊ ॥೧೦೪॥

ಈಯದಿರ್ದರೆ ಮಾಣಲಿಯೆಯನಗುಡತೊಡ
ಕಾಯದಿ ಶಿವಲಿಂಗಭರಿತಾ
ಆಯತಉಳ್ಳನಾದರೆ ಸಾಕುಯೆಂದು ಕಂ
ಜಾಯತನೆ ತ್ರೋರ್ವೆ ತಡದೊ ॥೧೦೫॥

ಮದನನು ಮದಸೊಕ್ಕಿತವೆವಿಲ್ಲುಗೊಂಡವ
ನಿದಿರಿನ ಗುರಿಯಾದೆವಯ್ಯ
ಎದೆಯುಗಿದವು ಕುಣಿಕುಣಿವುತಲಿವೆಯೀ
ಹದನಕಿನ್ನೆಂತೆಂದಳವಳು ॥೧೦೬॥

ಹೊಂಬಾಳೆದೊಡೆ ತೋಳು ಪಾರುತಲಿವೆ ಮನ
ಹಂಬಲಿಸುತಲಿದೆಯಧರಾ
ತುಂಬಿ ತುಳುಕುತಿದೆ ರಸವಿಲ್ಲನೆಮ್ಮೆದೆ
ಗಂಬಹೂಡಲಿ ತಪ್ಪಲೆಂದು ॥೧೦೭॥

ಮೃಡಭಕ್ತರಲ್ಲದೆ ನುಡಿಯವೆನ್ನಯ ಜಿಹ್ವೆ
ಒಡಗೂಡದಂಗ ಅನ್ಯರನು
ಕುಡುತೆಗಂಗಳು ನೋಡವು ಭವಿಗಳ ನೇಮ
ಒಡೆಯರಾರೆಂದು ಕೇಳಿದಳು ॥೧೦೮॥

ಹರಪೂಜಕರು ವಿಭೂತಿ ರುದ್ರಾಕ್ಷೆಯ
ಧರಿಸಬಲ್ಲವರು ನೀವೆನ್ನಾ
ಕರಕಮಲದಿ ಸ್ತನಲಿಂಗವ ಪಿಡಿದು ಕ
ಸ್ತುರಿಗಂಧ ಪೂಜೆಗೈಯನಲಿ ॥೧೦೯॥

ಆದರೆ ಹಾದಿಯ ಬಿಡುಬೇಗ ಬಹೆನೀ
ಮೇದಿನಿಪತಿಯರ ಮನೆಗೆ
ಹೋ ದಪೆನೆನೆ ಪಾದಕೆರಗಿ ಲಲ್ಲೆಯೊಳಾಗ
ಭೋದಿಸಿದಳು ಚೆನ್ನಿಗನಾ ॥೧೧೦॥

ಹೊಂಬಾಳೆದೊಡೆ ಮಲ್ಲಗಂಬಗಳಿವೆ ಜಘ
ನೆಂಬೆತ್ತುಗುಂಡು ತೆಕ್ಕೆಯಲಿ
ತುಂಬಿದಂಗವೆ ಗೋಣಂತರವೆದೆಗರು
ಡಿಂಬಿದೆಹೋರೆಂದಳವಳು ॥೧೧೧॥

ರಾಜಮಂದಿರಕ್ಕೈದಿಯೆ ಬೇಗ ಬಹೆನೆಂದು
ರಾಜಮರಾಳಗಮನೆಗೆ
ರಾಜಕುವರಿ ಹೇಮಲತೆಗೆ ತೋರಿದನಲ್ಲಿ
ರಾಜೀವಮುಖಿಯರಿದುದನು ॥೧೧೨॥

ಉಟ್ಟರು ವರ್ಣವರ್ಣದ ಕಟ್ಟುಬಣ್ಣವ
ತೊಟ್ಟರು ರತ್ನಾಭರಣವಾ
ದಿಟ್ಟಿಸಿಯಡಬಲನನು ನೋಡುತ ಸ್ಮರ
ಪಟ್ಟದಾನೆಗಳಂದದಲಿ ॥೧೧೩॥

ಗಂಧಗಾವಿಯು ಕೆಂಡಗಾವಿ ಸಂಪಗೆಗಾವಿ
ಚಂದ್ರಗಾವಿಯನುಟ್ಟರವರು

ಮಂದಿರದ್ವಾರದ ಮುಂದೆ ಶೃಂಗರವಾಗಿ
ನಿಂದಿರಲವರು ನೋಡಿದರು ॥೧೧೪॥

ಹಾರ ಹೀರಾವಳಿ ಕಿರಣಗೆಲಸದ
ವಾರಣಸರ ಪಂಚಸರದಾ
ಸೇರುವೆ ಪೆಂಡೆಯಗಳನಿಟ್ಟು ಝಣರೆಂಬ
ನಾರಿಯರನು ಕಂಡರವರು ॥೧೧೫॥

ಹತ್ತಿರೊಬ್ಬನು ಬೇರೊತ್ತೆಗೊಡುವನೊಬ್ಬ
ಚಿತ್ತೊಬ್ಬನೊಳಿದಿರಿಕ್ಕಿ
ಹಿತ್ತಿಲಿಲೊಬ್ಬನ ಹೊರಡಿಸಿ ಕೈವೀಸಿ
ಮತ್ತೊಬ್ಬಗೆಳಸುವರಹರು ॥೧೧೬॥

ರಾಜಹಂಸೆಯು ಗಮನೋಜೆಸಪುರದರೆ
ಸೋಜಿಗವಂಗ ಕೋಮಲೆಯು
ಮಾಜದೀವಳು ಪದ್ಮಿನಿಜಾತ ಸ್ತ್ರೀಯೆಂದು
ರಾಜೀವಮುಖಿಗೆ ಹೇಳಿದನು ॥೧೧೭॥

ಕುಟಿಲಕುಂತಳೆ ಕೊನೆಮುಡಿ ಕೊಬ್ಬಿದ ಕುಚ
ನಟಣೆ ನವಿಲಗಮನದಳು
ಸಟೆದೂಷಣನ ಸನ್ನೆಗೆಳಸುವ ಶಂಖಿನಿ
ನಿಟಿಲದ ಚುಕ್ಕಿಬೊಟ್ಟಿನಳು ॥೧೧೮॥

ತುರಗಗಮನೆ ಮೆಲ್ಸುರತಕಾತುರೆ ಬೆಕ್ಕು
ವರಿದಾಡಿದಂತೆಯಂಗದಲಿ
ಹರಿದು ಚರಿಸುವ ಚಿತ್ತಿನಿ ಇವಳೆಂದಾಗ
ನೆರವಿಯೊಳಗೆ ತೋರಿದನು ॥೧೧೯॥

ಕಜೆಗಮನದಳಂಗಸೊರೆ ಜಟರದ ಮೇಲೆ
ತರತರ ತ್ರಿವಳಿದಿರ್ಗೆಲವಾ
ಉರದೆಡದೆರಪಿನ ಜರಿದ ಕೊಂಕುಳನಾರ್ವ
ಳಿರೆ ಹಸ್ತಿನಿಯಿವಳೆಂದಾ ॥೧೨೦॥

ವಿಟಗೆ ಚಿತ್ತಿನಿ ಹಸ್ತಿನಿಗೆ ಪೀಠವರ್ಧನ
ಸಟೆದಸಕಗೆ ಶಂಖಿನವಳು
ನಟಣೆಯ ಪದ್ಮಿನಿಗೆಯು ನಾಗರಿಕನು
ಪಟುಲಂಚೆಗಮನೆ ಕೇಳೆಂದಾ ॥೧೨೧॥

ಚತುರ್ದಂತದ ಸ್ತ್ರೀಯರೆದೆಗೋಣ ಕಲಕುವ
ಚತುರ್ಜಾತದ ವಿಟರುಗಳಾ
ಚತುರತೆಯನು ನೋಡುತ ನಡೆತಂದರು
ಚತುರಾನನವಂದ್ಯನತರು ॥೧೨೨॥

ಇಂತಿವ ನೋಡುತಲೈತರೆ ಕಂಡರು
ಮುಂತೆ ಭೂನಾಥನೋಲಗವಾ
ತಿಂಥಿಣಿಸುತಲಿಹ ಠಾವಿಗೆಯೆಯಿದಲು
ಅಂತಾದ ಮೂರು ಸಂಧಿಗಳು ॥೧೨೩॥

ಕಡೆಯಲುದ್ಭವಿಸಿದ ಸುಡುತ ಬರಲಿ ಕೊರ
ಳೆಡೆಯಲಿ ತೊಡದು ನಿರ್ಜರರಾ
ಪಡೆಯನುಳುಹಿ ಅಭಯವನಿತ್ತು ಕೃಪೆಯೀವ
ಮೃಡ ಸಲಹಯ್ಯ ಸಜ್ಜನರಾ ॥೧೨೪॥

ಅಂತು ಸಂಧಿ ೩ ಕಂ ಪದನು ೩೨೪ ಕಂ

ಮಂಗಳಮಹಾಶ್ರೀ

●

ಸಂಧಿ : ನಾಲ್ಕು

ಮುಂದೆ ಭೂನಾಥನೋಲಗಕೆ ನಡದರಾಗ
ಮಂದಿಯ ಸಂದಳಿಗೂಡಿ
ಚಂದ್ರಾಕರನು ಹೇಮಲತೆಯು ವಿಳಾಸಿನಿ
ಒಂದಾಗಿ ದಂಡಿಗೆವಿಡಿದು ॥೧॥

ಬರಲಾಸಮಯದೊಳಗೆ ಪಶ್ಚಿಮಕೆ ತಾ
ವರೆಯಸಖನುಯೆಯ್ದಿದನು
ದೊರೆದೊರೆಗಳು ಸಂದಣಿಸಲಾಸ್ಥಾನವು
ನೆರದುದು ಸರದಿಯಂದದಲಿ ॥೨॥

ಬಗೆಬಗೆ ಒಡ್ಡೋಲಗದ ಸಾಲುಗಳಲ್ಲಿ
ಮಿಗೆ ಮನ್ನೆಯರೆಡರೆಡಬಲದಿ
ಹಗಲನೇಳಿಸುವಂತೆ ಪಂಜುದೀಪಗಳಿಂದ
ನೆಗೆದವನಂತವೇನೆಂಬೆ ॥೩॥

ಚವುಷಷ್ಟಿವಿದ್ಯಪ್ರವೀಣರು ಮೊದಲಾದ
ಕವಿ ಗಮಕಿಗಳು ವಾದಿಗಳು
ನವರಸಭರಿತ ಗಾಣಿಗಳು ಗಾಂಧರ್ವರು
ರವಿಕುಲನೋಲಗದೊಳಗೆ ॥೪॥

ಜ್ಯೋತಿಶಾಸ್ತ್ರದ ಪುರೋಹಿತರು ಜೋಯಿಸರಲ್ಲಿ
ನೀತಿಯರಿವ ಮಂತ್ರಿಗಳು
ಖ್ಯಾತಿವಡದ ಸ್ಥಾನಪತಿಗಳಲ್ಲಿರ್ದರು
ಭೂತಳಪತಿಯ ವಾಲಗದಿ ॥೫॥

ಕರಿ ತುರಗದ ಲಕ್ಷಣಿಕರು ಗಾರುಡ
ಮರವಿದ್ಯ ಕಾವ್ಯ ನಾಟಕರು
ಗುರುಗಳು ಗರುಡಿಯಾಚಾರ್ಯ ಚಿತ್ರಿಕರಲ್ಲಿ
ಪರಕಾಯ ಪ್ರವೇಶಿಗಳು ॥೬॥

ಊಳಿಗದವರು ವಿಳಾಸಿನಿಯರು ನಿಂದ
ವೀಳೆಯ ಹಡಪದರಲ್ಲಿ
ಕಾಳಂಜಿಗೆಯ ಕಠಾರಿಯ ಪಿಡಿದರು
ಸೊಳೆಯರಿರ್ದರೋಲಗದಿ ॥೭॥

ಏಣಲೋಚನೆಯರಿರ್ದರು ತಂತಿವಾದ್ಯದ
ವೇಣಿಯವರು ಬಗೆಬಗೆಯಾ
ಜಾಣಿಂದ ನುಡಿಸುತಿಹರನು ಕಂಡರಲ್ಲಿ
ಕ್ಷೋಣಿಪನೋಲಗದೊಳಗೆ ॥೮॥

ತಳಿತೋಲಗದಿಯಳಿಂದಿರು ಕುವರರು
ಬಳಸಿನಿಂದೂಳಿಗದವರು
ಕೆಳದಿಯರ್ಕನಕದಂಡದ ಚವಲವ ಪಿಡಿ
ದೊಲದು ಚಿಮ್ಮುವರೆಂಟುದೆಸೆಗೆ ॥೯॥

ರತ್ನಮಾಣಿಕವು ತೆತ್ತಿಸಿದ ಪೀಠದಮೇಲೆ
ಪೃಥ್ವೀಶ ಮಂಡಿಸಿರಲ್ಕೆ
ಒತ್ತಿಲಿ ವೇದಪಾಠಕರು ಜೋಯಿಸರಲ್ಲಿ
ನಿತ್ಯತಿಥಿಯನರುಹುತಲಿ ॥೧೦॥

ಬಗೆಬಗೆ ಪಂತಿಯೋಲಗದ ಮಧ್ಯದಿ ಕೈ
ಮುಗಿದರು ರಾಯನಿದಿರಿನಲಿ
ಹೆಗಲದಂಡಿಗೆಯ ವಿಳಾಸಿನಿ ಮೂವರು
ಜಗದೊಡೆಯನ ನೋಡಿದರು ॥೧೧॥

ಆವ ದೇಶದ ಸತಿಪುರುಷರೋ ಹಾ ಹಾ
ಯಿದಾವದೇಶದ ಚೆನ್ನಿಗರೊ
ಕೋವಿದರಂತಿಪ್ಪರುಂಟೆಂದರವರಿಹ
ಭಾವವ ರಾಗದಿ ನೋಡಿದನು ॥೧೨॥

ರತಿಯೊ ಇವಳು ಮನ್ಮಥನೊ ಇವನು ಮೇಣು
ನುತ ಚಂದ್ರಮನೊ ರೋಹಿಣಿಯೊ
ಕ್ಷಿತಿಯೊಳುಯಿವರಿಗೆ ಪ್ರತಿಯುಂಟೆಯೆಂದಲ್ಲಿ
ಪೃಥುವೀಶ ಶಿರವ ತೂಗಿದನು ॥೧೩॥

ದೇಶವಾವುದು ನಿಮಗೆನೆ ಪೇಳ್ದರು ಪರ
ದೇಶಿಗಳಾವಿದ್ಯಧಿಕರು
ಲೇಸುಳ್ಳ ಠಾವಿಲೊಂದಿಹೆವೆಂದು ನಿನ್ನ ಕೀ
ರ್ತಾಸೆಗಿಲ್ಲಿಗೆಯೆಯಿದಿದೆವು ॥೧೪॥

ಎಂದು ದಂಡಿಗೆಯ ಭಡಾಳಿಸಿ ರಾಯನ
ಮುಂದೆ ಕುಳಿತು ನಾದಮಾಡಿ
ಸಂದ ಬತ್ತೀ ಸ ರಾಗದಿ ಪಾಡಲೆಂದರು
ಗಂಧರ್ವರಿವರ್ನರರಲ್ಲಾ ॥೧೫॥

ಎನಲು ಮಂತ್ರಿಯು ಮಾಂಡಲಿಕರು ತಲೆದೂಗೆ
ಜನಪತಿ ಮೆಚ್ಚಿದನು ಮಿಗೆ
ಘನವಿದ್ಯಸಾಮರ್ಥ್ಯರಿವರೆಂದುದಾಸ್ಥಾನ
ದನುವಿಲಿ ಪುರೆಯೆನಿಸಿದರು ॥೧೬॥

ಪಡಿ ಬಿಡಾರಗಳನು ಮಾಡಿಸಿದನು ಮಿಗೆ
ಉಡುಗೊರೆಗಳ ಕೊಟ್ಟು ರಾಯ
ತೊಡಿಗೆ ಬಂಗಾರಗಳನಿತ್ತು ತನ್ನಯ
ಯಿಡುವ ಪದಕ ಮೊದಲಾಗಿ ॥೧೭॥

ಸೃಷ್ಟಿಪಾಲಕನು ಉಡುಗೊರೆ ಬಂಗಾರವ
ಕೊಟ್ಟು ಸಂತುಷ್ಟಿ ಬಡಿಸಿದ
ಬಿಟ್ಟುಬಿಡಾರಕೆ ಬರಲೆರದಾನೆ ಜಾವ
ಕಟ್ಟಳೆ ಸನ್ನೆಗೈಯ್ದಿದವು ॥೧೮॥

ರಾಯನೋಲಗವು ಹರದು ಪಾರಿಸುತಲಿ
ಆಯತವಾಗೆ ಮಂತ್ರಿಗಳು
ಬೀಯಗಮುದ್ರೆಯಾಯಿತು ಅಲ್ಲಿರ್ದೆಲ್ಲ
ನಾಯಕ ಮಕ್ಕಳು ಹರದು ॥೧೯॥

ಇರುತಿರ್ದರಿತ್ತ ಸುಖದಿ ಹೇಮಲತೆ ಚಂದ್ರಾ
ಕರನು ವಿಳಾಸಿನಿ ಸಹಿತಾ
ಹರಪೂಜೆಯ ಮಾಡಿ ಆರೋಗಿಸಿ ಪವಡಿಸ
ಲ್ತರಣಿ ಪೂರ್ವಕೆಯೆಯಿತರಲಿ ॥೨೦॥

ಎದ್ದರು ಓಂ ನಮಃಶಿವಾಯೆನುತಲಿ ಅವ
ನಿದ್ರೆ ತಿಳಿದು ರತಿರಾಜಾ
ಮರ್ದನನ ಅರ್ಚಿಸಿ ದಿವರಾತ್ರೆಯ
ನುದ್ಧರಿಸಲಿವಿಡಿದೆನ್ನಾ ॥೨೧॥

ಇರುತಿರಲೊಂದು ದಿವಸ ರಾಯನೋಲಗ
ಹರದು ಬಿಡಾರಕ್ಕೈದುವಲ್ಲಿ
ಸರಿದು ಬಿದ್ದುದು ಬೀದಿಯೊಳು ಪದಕವೆಂದು
ಕೊರಳುದಟ್ಟಿಯ ನೋಡಿ ಕಾಣೆ ॥೨೨॥

ಈಗಲಿದ್ದುದು ಓಲಗದೊಳು ನಾವಿತ್ತ
ಲಾಗಿ ಬರಲು ಬಿದ್ದುದೆಂದು
ಬೇಗಹೋಗದಿರೆ ಹೋಗುವದೆಂದು ಬೀದಿಗೆ
ಆಗ ಬರಲಿ ಬೇಡವೆಂದು ॥೨೩॥

ಸರನೆ ಬಹೆನುಯೆಂದು ಹರಿತರಲಾಗಿಯೂ
ಸೆರಗ ಹಿಡಿದು ರಾತ್ರೆಬೇಡಾ
ಮರುಳೆ ಬಿಡೆನುತ ಮುರುಚಿ ಕತ್ತಲೆಯೊಳು
ಉರವಣಿಸಿಯೆ ಬರೆ ಮುಂದೆ ॥೨೪॥

ದೂರದಿ ರತ್ನಗಭಸ್ತಿಯ ಕಂಡನು
ಹಾರದಗ್ರಣಿಯಿದೆಂದರಿದು
ಸಾರಿತು ಪದಕ ಮಯೂಖಾಂಶುವ ಕಾಳಾ
ಪೇ ರುರಗನುಯಿರಲರಿಯಾ ॥೨೫॥

ಕಿರಣದ ಬೆಳಕಿಗೆ ಕರವನಿಡಲುಯಿರ್ದ
ಉರಗನು ಹದರಹಿಡಿದುದೂ
ಹರಹರಯೆನುತಲಿ ಛಟಿಗೊರಗಿದ ಚಂದ್ರಾ
ಕರನು ಚೌಬೀದಿ ಮಧ್ಯದಲಿ ॥೨೬॥

ಪಟ್ಟಣದತಿಕಾಹಿನಕಾಳರಾತ್ರಿಯು
ನಟ್ಟಿರುಳುವೆ ತಿರುಗುತಲಿ
ಬಟ್ಟೆಯೊಳಗೆ ಷೋಡಶಕಳೆಯದ ಚಂದ್ರ
ಬಟ್ಟಿನಂದದಲಿರೆ ಕಂಡು ॥೨೭॥

ಹದಿನಾರು ಕಳೆಯದ ವದಗು ಸೂಸುತಲಿರೆ
ಮದನನೊ ಮೇಣ್ಸುರಪತಿಯೊ
ಪದಕವಿರಲಿ ಕೆಲದೊಳು ಕಂಡು ಕಾಳಿಯು
ವದನವನಿಟ್ಟು ಸೂಚಿಸಿದೊ ॥೨೮॥

ರಾಜಕುವರನಿವ ಸೋಜಿಗವೇನಿಲ್ಲಿ
ವಾಜಿಯೇರಾಟದಿಂದಿಳಿದು
ಮಾಜಿದುಸುರು ಅಲ್ಲ ಅಂಗದಾದರೊಫಣಿ
ರಾಜನ ದಂತಂಕರಿದೊ ॥೨೯॥

ಚಂದ್ರ ನಭದೊಳಗರಸಿ ಕಾಣದೆ ರಾಹು
ಬಂದುದೊ ಭೂತಳಕಿಳಿದು
ಅಂದವ ಕಂಡು ಶಶಾಂಕನೀತನೆ ತಾ
ನೆಂದು ಪಿಡಿದುದೊ ಹಾ ಶಿವನೆ ॥೩೦॥

ಎಂದು ಹುಟ್ಟುವನೆಂದು ಬೆಳೆವನೊ ಶಿವಶಿವ

ನಂದಿವಾಹನನೀ ಕುವರನಾ
ತಿಂದ ಹಾವನೆ ತನ್ನ ವೈರಿಯೆ ತಿನ್ನಲಿ
ಯೆಂದು ತೊಳಲಿ ಅಪ್ಪಿ ಅಳುತಾ ॥೩೧॥

ಗರುಡ ತಿನ್ನಲಿ ನಿನ್ನ ಬರಸಿಡಿಲೆರಗಲಿ
ಹಿರಿದು ಮಯೂರ ತುಂಡಿಸಲಿ
ಇರುಹೆಯ ಬಾಯಿಗೀಡಾಗು ಹುತ್ತಿನೊಳಿಹ
ಮರಗಳ ಕಾಣದೆ ಹೋಗು ॥೩೨॥

ಎನುತಲಾ ಕುವರನ ಹೊತ್ತುಕೊಂಡಳು ಕಾಳಿ
ಘನದೇವನೆಡೆಗೆ ಬೆನ್ನಿನಲಿ

ಮನಸಿಜಾರಿಯ ಅಡಿಗೊಂದಿಸಿಯಿಳುಹಿದೊ
ಚಿನುಮಯ ಪ್ರಾಣಗ್ಯೆಯೆಂದು ॥೩೩॥

ಸ್ತುತಿಸಿದಳಾ ಮೂಲಸ್ಥಾನದ ಲಿಂಗವ
ಮತಿಯುತೆಯ ಕಾಳರಾತ್ರಿ
ಹತವಾದ ಕುವರನ ಪ್ರಾಣ ದಾನವ ಕಾಯೆಂ
ದತಿಸಯದಿಂ ಪೊಗಳಿದಳು ॥೩೪॥

ತರಳೆಯ ನುಡಿಗೇಳಿ ನೊರೆವಾಲ ಕುಡಿದನೆ
ಪರವೆಯ ಕುಚದೊಳಗಿರ್ದು
ಕರದರೋಯೆಂದೀಶ ಪರಮಗುರುವೆ ಶಂ
ಕರ ನವೇ ನಮಯೆಂದು ಸ್ತುತಿಸಿ ॥೩೫॥

ಪ್ರಣಮಸ್ವರೂಪನ ಫಣಿರು ಅಗಣಿತರ
ಎಣಿಕೆಗೆ ನಿಲುಕದಭವನ
ಪಣಿಯಸಾಸಿರ ಜಿಹ್ವೆ ಗುಣಿತಕೆ ದುರ್ಲಭ
ತ್ರಿಣಯನ ನುತಿಸಿದಳವಳು ॥೩೬॥

ಪನ್ನಗಧರ ಕಾಳಿ ಭಿನ್ನವನು ಕೇಳಿ
ಎನ್ನವನಿವನೆಂದು ಬೇಗಾ
ತನ್ನ ಕರುಣದಿಂದ ನಿಜವ ತೋರಿದ ಶಿವ
ಮುನ್ನಿನ ಪ್ರಕೃತಿಯನಳಿದು ॥೩೭॥

ಪಂಚವದನ ಫಣಿಕುಂಡಲ ದಶಭುಜ
ಚಿಂಚುವ ಗರಳಗಳದಲಿ
ಸಂಚಿತದಲಿ ಶೂಲದ ಹೆಣ ಸಿರಮಾಲೆ ವಿ
ರಂಚಿ ಕಂಧರನೆಸದಿರ್ದ ॥೩೮॥

ತೊಡೆಯ ಭವಾನಿ ಜಡೆಯಗಂಗೆ ಅಡಿಗಣ್ಣು
ಯಡಬಲದಲಿ ಗುಹ ಗಣಪ
ಉಡುಪತಿಧರ ಕೃಪೆಯಾಗೆ ಚಂದ್ರಾಕರ
ತಡಹಿಕೊಳುತಯೆದ್ದು ಕುಳಿತಾ ॥೩೯॥

ಮರದೊರಗಿರ್ದು ಕುಳಿತನಂತಾಗಲೆ
ಪೆರೆದಲೆಯನ ಕಂಡು ನಲಿದು
ಕುರುಹಿನ ನಯನಪಾದಕೆ ವಂದನೆಮಾಡಿ
ಹರಗೆ ಕಾಳಿಯುಯಿಂತೆಂದು ॥೪೦॥

ಈತನೆನಗೆ ಪತಿಯಾಗಲೆನುತ ಕಾಳಿ
ಪ್ರೀತಿಯೊಳವಳು ಬಿನ್ನಯಿಸಿ
ಭೂತೇಶನೀತೆರದಲಿಯಿರಲಾಗದು
ಓತುದೆನಗೆ ಬಯಲಹುದ ॥೪೧॥

ಅಂತದನರಿದಾಗ ಮಂತ್ರದ ದಾರ ಶಿವ
ಯಂತ್ರವಾಹಕ ಕೊಡಲವಳು
ತಂತ್ರದಿ ಕೊರಳಿಗೆ ಕಟ್ಟಲಿ ಗಿಳಿಯಾಗೆ
ಮುಂತಿಂದು ಹೀಗೆನೆ ಪೇಳ್ದಾ ॥೪೨॥

ಬಿಡಲದ ಪುರುಷಾಕಾರದಿ ನಿನ್ನಯ
ಒಡನೆ ಸುಖದಲಿರುತಿಹನು
ತೊಡರಿಸಲಾ ದಾರವ [ನು] ಗಿಳಿಯಹನು
ಮಡದಿ ಕೇಳೆಂದನೀಶ್ವರನು ॥೪೩॥

ಇತ್ತಲವ ಸುಖದಲಿರುತಿರಲಾಗಿ
ಕತ್ತಲೆ ಹರದು ಬೆಳಕಿನಾ
ಹೊತ್ತಿಲಿ ಹೇಮಲತೆಯು ಕರ ದುಃಖದಿ
ಮತ್ತೆಯಾರೆರ್ದಳೇನೆಂಬೆ ॥೪೪॥

ನಟ್ಟಿರುಳುವೆ ಹೋದ ಕೆಟ್ಟೆನು ಶಿವಯಿರ್ದ
ಯಿಷ್ಟೊತ್ತು ನಿಂದಿರಲರಿದೂ
ಬಟ್ಟೆಯೊಳರಸಿ ಕಾಣದೆ ಹೇಮಲತೆ ಬಾಯ
ಬಿಟ್ಟಳು ಹಾಹಾಯೆನುತ ॥೪೫॥

ಕಾಣಿರೆ ಹಾಯೆನ್ನ ಪ್ರಾಣವಲ್ಲಭನನು
ಬಾಣವೈದನಸನ್ನಿಭನಾ
ಜಾಣನೆ ಚಂದ್ರಾಕರ ಬಾಯೆಂದಳು
ಓಣಿಯೊಳಗೆ ಚಾಲಿವರಿದೂ ॥೪೬॥

ದುಃಖ ಮಾಡಿದಳು ವಿಳಾಸಿನಿ ಸಹಿತಲಿ
ಮುಕ್ಕಣ್ಣಗೆ ಹಲಬುತಲಿ
ಅಕ್ಕಟಇಂದಿನಲಿ ಹಕ್ಕೆಯಗಲಿದೆಂದು
ದೊಕ್ಕಳು ಕಣ್ಣನೀರುಗಳಾ ॥೪೭॥

ಚೆಂದ ಪದಕಕಾಗಿ ಕೊಂದರೊ ಶಿವಯೆನ್ನ
ಹೊಂದಿರ್ದ ಪ್ರಾಣನಾಯಕನಾ
ಯೆಂದು ಪ್ರಳಾಪಿಸುತಲಿ ಮೂರ್ಛೆಯೋದಳು
ಚಂದ್ರಾಕರ ಹಾಯೆನುತಾ ॥೪೮॥

ಪರದೇಶಿಯಾಗಿ ಬಂದೆನು ಪರದೇಶಕೆ
ಸಿರಿಯ ಮರದೆನು ನಿನ್ನಿಂದಾ
ಯಿರಲಿಂತಾಯಿತೆನುತ ಹಾಯೆಂದಾಗ
ಹರಗೆ ಗೋಳಿಟ್ಟಳಾತರುಣಿ ॥೪೯॥

ನುಡಿಯಬಾರದೆ ಚಂದ್ರಾಕರಯೆನ್ನೊಳು
ತಡದೇಕೆ ಕರೆ ಕರವಿಡಿದು
ಒಡಲುಬೇವುತಲಿದೆನ್ನಯದೆಂದಾಗ
ಮುಡಿಬಿಟ್ಟು ಹುಡಿಯೊಳು ಹೊರಳಿ ॥೫೦॥

ಹರಹಿದಳಂಗವ ಧರೆಯ ಮೇಲಾಗಲಿ
ಕುರುಳಗೆದರಿ ಹುಡಿಯೊಳಗೆ
ಸೆರಗು ಹಾರಿಯೆ ಗುರುಕುಚ ತೆರಹಗಲಿ
ಮರದಾಳು ರೋಮರೆಚ್ಚರನೂ ॥೫೧॥

ರನ್ನ ಮಾಣಿಕ ನೀಲ ನವಮಣಿ ಹರಿದೊಕ್ಕು
ಹೊನ್ನಬಳೆಯು ಕೀಲ ಕಡಗ
ಚಿನ್ನದ ಬೆರಳಮುದ್ರಿಕೆ ಹಾರ ಸಡಿಲಲಿ
ಕನ್ನೆಯಲರಿಯೊ ದುಃಖದಲಿ ॥೫೨॥

ಉಟ್ಟ ದುಕೂಲದ ಪಟ್ಟೆನಾಣ್ಯದ ಸೀರೆ
ಮೆಟ್ಟಿ ಜರಿದು ನಿರಿಸಡಿಲಿ
ಪಟ್ಟಪರಿಗಳಾಗಿ ಹರಿದರರಿಯೊ ಕಣ್ಣು
ಗೆಟ್ಟಳು ಮುಂದುಗಾಣದಲಿ ॥೫೩॥

ಮುಡಿಗೆದರಿತು ಮುಖಬಾಡಿ ತೊಡಿಗೆ ಸಡಿ
ಲಿಡಿದ ಯೌವ್ವನ ಸೆರಗಳಿದೂ
ನಡುಬಳುಕುತ ಹೊಂಬಾಳೆದೊಡೆಯು ಕಂದಿ
ಮಡದಿ ದುಃಖದಿ ಮರುಗಿದಳು ॥೫೪॥

ಚೆಲ್ಲೆಗಂಗಳು ಕೆಂಪಡರಿಯೊಗುವ ಜಲ
ಮೆಲ್ಲಡಿಗಮನಡೆಂಡಣಿಸೆ
ಕಲ್ಲುಮರನ ಹಾಯಿದೊಗುವ ಶ್ರೋಣಿತ ನಾರಿ
ನಲ್ಲನಗಲ್ದು ಮರುಗುತಾ ॥೫೫॥

ತಂದೆತಾಯನು ಬಿಟ್ಟು ಬಂಧುಬಳಗವನು
ಬಂದೆವು ಪರದೇಶಿಯಾಗಿ
ಕೊಂದುದು ವಿಧಿಚಂದ್ರಾಕರನಗಲ್ದೆನ್ನ
ಬೆಂದುದೊಡಲು ಮುಖದೋರೊ ॥೫೬॥

ಇರಲಿಂತು ಇತ್ತಲೊಂದಿವಸವು ಕಾಳಿಯು
ಮರದಳು ಗಿಣಿಯ ಪಂಜರವಾ
ತೆರದುಹೋಗಲಿ ಮಾಧವರಾಯನ ಮಗ
ಳ್ಕರುವಾಡಕ್ಕೈತಂದುದಾಗ ॥೫೭॥

ಇದು ರಾಯನರಮನೆಯುಪ್ಪರಿಗೆಯು
ಇದು ವಾಲಗದ ಚಾವಡಿಯು
ಇದು ಕುವರಿಯ ಮಣಿಮಾಡಗಳೆಂದ
ಹದಕೆಯಾದುದು ನಾಲ್ಕುಸಂಧಿ ॥೫೮॥

ಮೂರ್ಲೋಕವಂದ್ಯನೆವೊರ್ಲುವಾಗಮಶಾಸ್ತ್ರ
ಹೊರ್ಲಾಗಿ ಮೈಯಿಗಾಣಿಸದ
ನಿರ್ಲಲಿತಾಂಗ ನಿರ್ಲೇಪನೇ ಷಡುತರ್ಕ
ದುರ್ಲಭ ನಿತ್ಯಾನಂದಾ ॥೫೯॥

ಅಂತು ಸಂಧಿ ೪ ಕ್ಕಂ ಪದನು ೩೮೩ ಕ್ಕಂ
ಮಂಗಳಮಹಾಶ್ರೀ

ಸಂಧಿ : ಐದು

ಪೇಳುವೆನೀ ಸಂಧಿಯ ಕಥೆಯನು ಕೇಳಿ
ಭಾಳಲೋಚನ ಭಕ್ತಿವಿದರೂ
ಕಾಳಿಯಾಳಿಕೆಯ ಗಿಳಿಯು ಕಂಡುದು ಬಂದು
ಲೋಲಲೋಚನೆಯರಿರವನು ॥೧॥

ಒಂದೊಂದು ಮಾಸಕೆ ತೂಗಿಸುವನು ರಾಯ
ನಂದನೆಯನು ಪುರುಷರೊಳು
ಹೊಂದಿದ ಹೆಚ್ಚುಕುಂದನು ಕಾಬುದ ಕರಿ
ವಂದವ ಅರಸು ಕಾಬುದಕೆ ॥೨॥

ಮಾಧವರಾಯನ ಮಗಳೀಕೆ ಸಿರಿಧಜೆ
ಆದರವಳ ಅಂಗಲತೆಯೂ
ಪಾದದಿ ಕೇಶದಾಯತ ನೋಡಿ ತಾ ಗಿಣಿ
ಮೇದಿನಿಗಧಿನಾಯಕಿವಳು ॥೩॥

ಸೋರ್ಮುಡಿ ನವಿಲ ನಾಚಿಸುತಿದೆ ನಿಡಿಪುರ್ಬು
ಕಾರ್ಮುಕಕೆಣೆಯೆ ಮನ್ಮಥನಾ
ನಿರ್ಮಳ ಹೇಮಲತೆ ಕಳಸದಾಯತ ಕುಚ
ಪೆರ್ಮೆಯ ಜಘನ ಕುಸ್ಮಂಫ್ರಿ ॥೪॥

ಊಳಿಗದರು ಕುಂಚ ಹಡಪ ಕಾಳಂಜಿಯು
ಪೀಳೆಯದರು ಬಿಜ್ಜಣದಾ
ಆಳಿಯರು ವೀಣೆಯ ತಂತಿವಾದ್ಯವ
ತಾಳಿದರಾಮಂಚ ಕೆಲದಿ ॥೫॥

ಆರಡಿಗುರುಳ ಚಕೋರನಯನ ಮುಖ
ವಾರಿಜಪೊರವಾರು ಮೆರವಾ
ದೂರುವ ಬಡನಡು ಹೊಂಬಾಳೆದೊಡೆಯಂಚೆ
ಸೇರುವೆ ನಡೆಯ ನೋಡಿದುದು ॥೬॥

ಅಂಚೆಗೆ ನಡೆ ಪಾರಿವಗಳ ಕೋಗಿಲ
ನಿಂಚರ ನವಿಲಿಗೆ ನಟನೆ
ಪಂಚವಣ್ಣಿಗೆಯ ಗಿಳಿಗೆ ಓದಕಲಿಸುವ
ಸಂಚಲಾಕ್ಷಿಯರ ನೋಡಿದುದು ॥೭॥

ಪೊಳವ ನಕ್ಷತ್ರಗಣ್ಣೆಳೆ ಹುಲ್ಲೆಗಣ್ಣೆವೆ
ತಳಮುಗಣ್ಣಿನ ತಾವರೆಯು
ದಳದಾಯತಗಣ್ಣುತ್ಪಲಗಣ್ಣು ನಿಡಿಗಣ್ಣ
ಚೆಲುವೆಯರ್ನಗೆಗಣ್ಣಿನವರು ॥೮॥

ಬಟ್ಟಮೊಲೆಯು ಭರಣ್ಮೊಲೆ ಪರಳಮೊಲೆಯರು
ಯಿಟ್ಟಣೆಸಿದ ಕೌಲಾಯಾ
ಹುಟ್ಟುವ ಮೊಗ್ಗೆಮೊಲೆಯರಿರ್ದರು ಸ್ಮರ
ಪಟ್ಟದಾನೆಗಳಂದದಲಿ ॥೯॥

ಜಣರೆಂಬ ಕಾಲಂದುಗೆ ಪೆಂಡೆಯಗಳಿ
ಟ್ಟಣಿಸಿದ ಕುಚಮಧ್ಯದೆಡೆಗೆ
ಮಣಿ ಪಂಚಸರ ಪದಕವನಿಟ್ಟು ನಿಂದರ
ಗಿಣಿನೋಡಿ ಕಂಡಿ ಕಾಳಿಯರಾ ॥೧೦॥

ಪಟ್ಟೆ ಚಿನ್ನಾಂಬರ ನಾಣ್ಯ ದುಕೂಲವು
ಕಟ್ಟುಬಣ್ಣವು ಚಂದ್ರಗಾವಿ
ಉಟ್ಟು ಮೆರವ ಗಂಧಗಾವಿ ಸಂಪಿಗೆಗಾವಿ
ಉಟ್ಟಿಹವೆಣ್ಣಿಹುದಲ್ಲಿ ॥೧೧॥

ಉಪ್ಪರಿಗೆಗಳೊಳಗಿಪ್ಪರ ಕಂಡುದು
ಪುಷ್ಪಬಾಣನ ಚೂಣಿಯೊಳಾ
ಕರ್ಪುರಗಂಧಿ ವಿಳಾಸಿನಿಯರು ಗಿಳಿ
ಯೊಪ್ಪವ ನೋಡಿದರವರು ॥೧೨॥

ಪಚ್ಚೆವರ್ಣದ ಗರಿಯಚ್ಚಕನ್ನಡಿಗನು
ಕೆಚ್ಚನೆ ಕಣ್ಣು ಕೆಮ್ಮೂಗು
ಅಚ್ಚೋದ್ಯ ಪಕ್ಕಿಯ ನೋಡಕ್ಕ ನೆನೆ ಮನ
ಹೆಚ್ಚುತ ಬಂದು ನೋಡಿದಳು ॥೧೩॥

ಅರಗಿಣಿ ಭಾಗರಿವಣ್ಣದ ಪಕ್ಕಿಯ
ಉರವೇರಿ ಬೆಳೆಬಾವಿ ಹಂಗಾ
ಕರಕಮಲದೊಳು ಪಿಡಿದು ಪಣ್ಣಲಗಳ
ಸಿರಿದರೆ ಕರದಳರ್ತಿಯಲಿ ॥೧೪॥

ಹರಿಣಾಕ್ಷಿಯನು ಕಂಡುಪ್ಪರಿಗಿಂದ ಮೆಲ್ಲನೆ
ಸರಿದಿಳಿದುದು ನೆಲೆನೆಲೆಗೆ
ಉರ ಕುಚದೆಡೆಗೆ ಲೆಂಗಿಪೆನೆಂದು ಹವಣಿಸು
ತರಿಸಿ ನೋಡಿತು ತನ್ನನುವಾ ॥೧೫॥

ಏಣಾಕ್ಷಿ ಕರೆಯಲಿ ಜ್ಞಾನದಿನೋಡ್ಯೆ
ಬಾಣನ ರಥವಾಜಿ ಬೇಗಾ
ಹೂಣಿಸಿ ಮುಂಗೈಗಾಗ ಲೆಂಗಿಸಲಾಗಿ
ಕ್ಷೋಣಿಪನಣುಗೆ ತರ್ಕೈಸಿ ॥೧೬॥

ವದನಕೊಂದಿಸಿ ಕೆಂಪಧರವ ಚುಂಬಿಸಿ
ಉದರುರಕೆ ಒತ್ತಿಕೊಳುತಾ
ಎದೆಯೊಳಪ್ಪುತ ಮೃದುವಾಸುಮಂಚದಿ ಹೊಂ
ಗದಳಿದೊಡೆಯೊಳು ಕುಳ್ಳಿರಿಸಿ ॥೧೭॥

ದರಹಸಿತದ ಮುಖದರವಿಲಾ ಕುವರಿಯ
ಉರವೇಜಿಸಿ ಅರಗಿಳಿಯ
ಗರಿಯನೇವರಿಸುತಲಿರುತಾಗ ಕಂಡಳು
ಕೊರಳಮಂತ್ರದ ದಾರವನು ॥೧೮॥

ಕರ್ಪುರಗಂಧ್ಯರಗಿಣಿಯ ಕೊರಳಲಿ ಕ
ಟ್ಟಿಪ್ಪ ದಾರವ ಬಿಡಲೊಡನೆ
ದರ್ಪಕಸಮನಹ ಪುರುಷನಾಗಿರೆ ಕಂಡು
ಅಪ್ಪಿದಳಾ ಚಂದ್ರವದನೆ ॥೧೯॥

ಕಾಯವಂಚಕತನುವದೃಷಕರ ಪರ
ಕಾಯಪ್ರವೇಶದೇಳಿಗೆಯೊ
ದಾಯವಿದೇನು ನೀನಿಲ್ಲಿಗೆಯಿದಿ ಬಂದು
ಪಾಯವ ಹೇಳೆಂದಳವಳು ॥೨೦॥

ಶಿವನಕೃತ್ತಿಮವೈಸ್ಯಕಂ ಬೇಡಿ ತವಕದಿ
ಹವಸುವರೆ ಅಳವಲ್ಲಾ
ರವಿಯ ಮಾರ್ಗದಿ ಗಿಳಿರೂಪಿಲಿ ಕರುವಾಡ
ನಿವಹಕೈದಿದಹವಗೇನೂ ॥೨೧॥

ಸಚಿವರನೋ ಗಿಣಿರೂಪಿನಿಂದಲಿ ಬಂದೆ
ಖಚರಖೇಚರರೊಳಾರೆಂದು
ಅಚ್ಯುತನ ಮಗನೊ ನೀಪೇಳೆಂದುಸಿರಿದರೆ
ನಿಶ್ಚಯವ ಬೆಸಗೊಳ್ಳೆ ಪೇಳ್ದಾ ॥೨೨॥

ಹಿಂದಾದ ವೃತ್ತಾಂತನೆಲ್ಲವ ಪೇಳ್ದನು
ಒಂದುಳಿಯದೆ ಬಗೆಬಗೆಯಾ
ಚಂದ್ರಧರನ ಕೃತ್ತಿಮದಲಾದೆನು ಗಿಣಿ
ಚಂದ್ರಾಕರ ನಾನೆಂದಾ ॥೨೩॥

ಕಾಳಿಯಾಳಿಕೆಯಲಿರುತಿದ್ದು ನಾನಿನ್ನ
ಮೇಲುಪ್ಪರಿಗೆಗೆಯಿತಂದೆ
ಶೂಲಿಯ ತಂತ್ರದ ದಾರ ಕೊರಳದೆನ್ನ
ಲೋಲಲೊಚನೆ ಕೇಳೆಂದಾ ॥೨೪॥

ಆದರೆ ಹಿಂದಾದ ಚೋದ್ಯವೆಲ್ಲವ ಕೇಳಿ
ಹಾದಿ ಯಾವುದು ಮುಂದೆ ನಿನಗೆ
ಮೇದಿನಿಪತಿಯ ಕುವರಿಗೆ ಪೇಳಿದನನು
ವಾದ ಠಾವಿಲಿಯಿಹೆನೆಂದಾ ॥೨೫॥

ಸುಖದಲಿ ನಮ್ಮೊಳು ನೀನಿರು ಅತ್ತಿತ್ತು
ವಿಕಳತೆಯಲಿ ಹೋಗಬೇಡ
ಸಖಿಯರನೆಲ್ಲರ ಕರದು ಪೇಳಿದಳಾಗ
ಪ್ರಕಟವ ಮಾಡದಿರೆಂದು ॥೨೬॥

ಪಿತ ಕೇಳಲಿ ಮಾತೆಗುಸುರಲಿಯೆನ್ನಯ
ಮತಕೆಡುವದು ಮುಂದೆ ನಿಮ್ಮ
ಹತಮಾಡಿಸುವನಲ್ಲದೆ ಬಿಡಯೆನ್ನಯ
ಪೃತುವೀಶನೇನ ಮಾಡುವನು ॥೨೭॥

ಕೆಳದಿ ಕೇಳೆಂದು ವಿಳಾಸಿನಿಯೋರ್ವಳು
ಕಳವೇತಕೆ ನಿನಗೆಂದು
ಇಳೆಯೊಡೆಯನರಿಕೆಯ ಮಾಡದಿರ್ದರೆ
ಸುಲಿಸುವ ನಮ್ಮ ತೊಗಲನು ॥೨೮॥

ಮಾತೆ ಕೇಳಿದರೆ ಕೇಳಲಿ ಈ ಸ್ಥಿತಿಯನು
ತಾತ ಕೇಳಿದರೆ ನಾಚಿಕೆಯೂ
ಓತಿಹವನು ಬಿಡಿಸುವೆನೊ ಅರಿದರೆ ನೀ
ವಾತಗರುಹಬೇಡೆಂದೂ ॥೨೯॥

ಊಳಿಗದಳು ಹೋಗಿ ಪೇಳಿದಳೊಡತಿಗೆ
ಬಾಲಕಿ ಪುರುಷಸಂಗದಲಿ
ಲೋಲಳಾದಳ ಯೆನೆ ಕೇಳಿದ ಮಾತ ಭೂ
ಪಾಲಗೆ ಮುಟ್ಟಿತೆಂತಹುದು ॥೩೦॥

ಬಂದಳು ಮೇಲುಪ್ಪರಿಗೆಗೆ ರಾಯನ ರಾಣಿ
ಒಂದಾಗಿ ವಿಳಾಸಿನಿಯರೊಳು
ನಂದನೆ ಪುರುಷಸಂಗಕೆಯೆಳಸಿದೆ ನಿಮ್ಮ
ತಂದೆ ಕೇಳಿದರೆಂತಹುದೂ ॥೩೧॥

ಲಜ್ಜೆಯೊಳಾ ಕುವರಿಯು ಸುಮ್ಮನೆಯಿರೆ
ಕಜ್ಜವಲ್ಲಿಯೂಳಿಗದಾ
ಅಜ್ಜುಗವನು ತೊತ್ತಿದರು ಮಾಡಿದರಿ
ಹಜ್ಜೆಯ ಮಗಳೇನ ಬಲ್ಲೆ ॥೩೨॥

ಎನೆ ಪ್ರಕೃತಿಯುತ್ತರಗಳನಿತ್ತು ಹಿಂದಳ
ಅನುವನೆಲ್ಲವ ಹೇಳಿಯವರೂ
ಮನವ ತಿಳುಹೆ ರಾಯನರಾಣಿ ಮಗುಳೆಂದು
ಜನಪತಿಗರುಪದಿರೆಂದು ॥೩೩॥

ಎನುತ ಕಂಡಳು ಚಂದ್ರಾಕರನನುಯೆನ್ನ
ತನುಜೆಗೆ ತಕ್ಕೊರನೆಂದು
ಮನಸಿಜಸಮರೂಪನಹುದೆಂದು ತನ್ನರ
ಮನೆಗೈತಂದಳಾ ತರುಣಿ ॥೩೪॥

ಮಗಳಿಗೆ ತಾಯರಿಯದ ಹಾದರವುಂಟೆ
ಜಗದೊಳುಯೆಂಬ ನಾಣ್ನುಡಿಯ
ಬಗೆಯಿದು ದಿಟವೆನುತಲಿ ಅಳಿಯರೆಲ್ಲ
ನಗುತಲಿರ್ದರು ತಮ್ಮೊಳಗೆ ॥೩೫॥

ಇತ್ತಲವರು ಸಿರಿಧರೆ ಚಂದ್ರಾಕರನು
ಚಿತ್ರದ ಕರುವಾಡದೊಳಗೆ
ತತ್ತಗಲದ ಕಾಮರತಿಯೊಗದಂತಿಹ
ಅರ್ತಿಯನೇನ ಬಣ್ಣಿಸುವೆ ॥೩೬॥

ನೋಡುವ ಕೇಕರಾಕ್ಷಿಯು ಲಜ್ಜೆ ತಮಗೊಡ
ಗೂಡುವ ತವಕ ಮನದೊಳು
ಆಡುವ ಮಾತನೆನುತ ಜಿಹ್ವೆ ಮಿಡುಕುವ
ಪಾಡನರಿದುದರಗಿಣಿಯೂ ॥೩೭॥

ಸಕ್ಕಜಗನ್ನಡಿಗನುಯೆಂಬರೆಗಿಣಿ
ಒಕ್ಕಣಿಸಿತು ವಿನಿವಾತು
ತಕ್ಕವನೀ ಗೆನ್ನ ಭಾವನ ಹಸ್ತಕೆ
ಕಕ್ಕಸಕುಚವೀಯೇ ತರುಣಿ ॥೩೮॥

ತಳಪುಗಣ್ಣಿಲಿ ನೋಡೆ ನಳಿತೋಳನೀಡೆಪ್ಪು
ತಿಳಿಜೊನ್ನವೊಸರುವಂತುಸುರೆ
ಎಳೆಯಜವ್ವನಿಗ ನಿನ್ನೆಣೆ ಕಾಮರಸವನು
ತುಳುಕಾಡೆ ಸೆಳೆಮಂಚಗಣದಿ ॥೩೯॥

ಅಕ್ಕನೇತಕೆ ಸುಮ್ಮನಿಹೆ ಭಾವನೊಳು ನೀ
ಹೊಕ್ಕು ಸರಸವನಾಡದಲಿ
ತೆಕ್ಕೆಗೂಡಾಗೆ ಕಣನೇರಿ ಕೈಯ ಮರವರೆಂ
ದೊಕ್ಕಣಿಸಿತ್ತಾ ಗಿಣಿಯೂ ॥೪೦॥

ಅರೆಗಿಣಿ ನುಡಿದ ಮಾತಿಗೆ ಆಗಲೀರ್ವರು
ದರಹಸಿತದ ಮುಖರಾಗಿ
ಕರವನೀಡಲಿ ವೀಳೆಯವನು ಕೊಡಲಾಗಿ
ತರಳೆಯು ಕೈಕೊಂಡಳಾಗ ॥೪೧॥

ಅಡಕೆಯಲಾಗದಿ ಪುಡಿಗರ್ಪೂರವ ಕೂಡಿ
ಪಿಡಿದು ಬೆಳ್ಳೆಲೆಗಳನವರು
ಮಡಿದುನೀಡುತ ರತಿಗಲಹಕೆ ಒಳಹೊಕ್ಕು
ತುಡುಕಿದರೇ [ನ] ಬಣ್ಣಿಸುವೆ ॥೪೨॥

ಸರಿಸನಯನ ಮುಂಗುರುಳ ಪಿಡಿದು ಕುಚ
ಕರದಿ ಪಿಡಿದು ತೋಳುತೊಡೆಯಾ
ನಿರಿದು ಕೂರುಗುರಿನಿಂದಲಿ ಬೆರಸುವತವ
ಕರರೆ ಸುರತದ ಮಾಸಾಳು ॥೪೩॥

ಹಿಡಿತೆಂಬಡಿತೆಯುಪ್ಪರಸಂಚು ತಳಸಂಚು
ಬಿಡದಂಗುಲ ಗಳರವದ
ತಡೆಯದೆ ಸುರತಗಾಳಗಕೆ ಹೊಣಕೆಯೊಳು
ಬಿಡಿಸಿಕೊಂಡರು ಮಂಚಗಣದಿ ॥೪೪॥

ಸೊಲ್ಲಿಸುತಲಿ ಲಲ್ಲೆವಾತು ದೈನ್ಯಗಳಿಂದ
ಗಲ್ಲವಿಡಿದು ಚುಂಬನದಾ
ಮೆಲ್ಲನೆ ದಂತಹತಿಯು ನಖವೊಯಿಲಿನ
ಗೆಲ್ಲ ಸೋಲವನರಿದರಿದೂ ॥೪೫॥

ಅರವತ್ತುನಾಲ್ಕು ಬಂಧಗಳು ಚುಂಬನಗಳ
ಮರೆಯದೆ ಸ್ಥಾನಸ್ಥಾನದಲಿ
ಹರಿಮುರಿಯೊಗಗೂಡದೆ ಕಾಮಕಲೆಗಳ
ನರಿದು ಕಾಡಿದರಭ್ಯಾಸಿಗಳು ॥೪೬॥

ಮುಡಿಯೊಲದುದು ಮುಂಗುರುಳು ಲಂಬಿಸುತಲಿ
ಎಡೆಯಾಡುತಲಿ ಹೊನ್ನೊತಿಗಳು
ತೊಡೆಯಲುಗುತ ಕುಂಭಕುಚ ಕುಣಿದವು ಮೇ
ಲ್ತೊಡಗಿ ಝಣರು ಜಣರೆನುತ ॥೪೭॥

ಮನ್ಮಥಗರುಡಿಯಾಳುಗಳು ಕಾಡಿದರಲ್ಲಿ
ತನ್ಮನದಣಿವಂದದಲಿ
ಉನ್ನತ ಬೆಸುಗೆ ಸಡಿಲಿ ಹೊರೆಸಾರ್ದರು
ಸನ್ಮತದಲಿ ಅಂಗ ಬಳಲಿ ॥೪೮॥

ಕೆದರಿದ ಮುಡಿ ಕೆಂಪಡರ್ದ ಕಂಗಳು ಕ
ಚ್ಚಧರದಿವೊಗುವ ಬೆಮರ್ವನಿಯಾ
ಬೆದರುನೋಟಳಿದುಡಿಗೆ ಕಂಕುಳಿ ತಾರೆ
ಚೆದುರೆ ನಡದು ಮುಖದೊಳೆಯಾ ॥೪೯॥

ತಂಬುಲವನು ತೂಪಿರಿವುತ ನಳಿತೋಳ
ಕುಂಭಕುಚದನಖವೊಯಿಲಾ
ತುಂಬೆಗುರುಳು ನೇವರಿಸಿ ನೋಡುತಲಾಗ
ಅಂಬುಜಮುಖಿಯಂಘ್ರಿದೊಳೆದು ॥೫೦॥

ಪರಿಮಳ ಗಂಧವ ಅಂಗಲೇಪನಮಾಡಿ
ತುರುಬಿದರ್ಕುಸುಮಗಂಪುಗಳಾ
ಸಿರಿದುರೆ ಚಂದ್ರಾಕರ ಸುಖವಿರಲಿತ್ತ
ನರನಾಥ ದಿನವ ಯೋಚಿಸಿದಾ ॥೫೧॥

ಇಂದಿಗೆ ತಿಂಗಳಾಯಿತು ಕುವರಿಯ ಕರ
ತಂದು ತೂಗಿಸಲಿ ಬೇಕೆನುತಾ
ನಂದನೆಯೆಡೆಗೆಯೋರ್ವಳ ಕಳುಹಲಿ ರಾಯ
ಬಂದು ಹೇಳಲಿ ಅಕ್ಕಟೆನುತಾ ॥೫೨॥

ಮಂಚದಿಂದಲಿ ಬಿದ್ದಳು ಸಿರಿಧರೆಯಾಗ
ಗೊಂಚಂಬುಯೆದೆಯಕೊಂಡಂತೆ
ವಂಚಿಸಿರ್ವರು ಹೋಹೆನೆಂದಿರ್ದೆನೆಮ್ಮಯ್ಯ
ಮುಂಚೆನ್ನ ಕರೆಯಲಟ್ಟಿದನು ॥೫೩॥

ತೂಗಿಸುವನುಯೆಮ್ಮಯ್ಯ ಮಾಸಕೆಯೆನ್ನ
ಹೇಗೆಮಾಡುವೆನಿನಗೆಂದು
ಭೋಗವು ಬುಗ್ಗಿಯ ಕೂಡಿತೆನ್ನುವದೆಂದು
ಆಗ ಮಿಡಿಧು ಕಣ್ಣನೀರು ॥೫೪॥

ಇತ್ತಲೆನ್ನನು ತೂಗಿಸೆ ಭಾರವಾಗಲಿ
ಹತ್ತಿ ನೋಡುವರಿಲ್ಲಿ ನಿನ್ನ
ಚಿತ್ತಜರೂಪನ ಮರಸುವೆನೆನುತಲಿ
ಮತ್ತೆ ನೋಡಿದಳಾ ದಾರವನು ॥೫೫॥

ಗಿಳಿಯಹ ದಾರವೆಲ್ಲಿಹುದೆಂದು ತನ್ನಯ
ಕೆಳದಿಯರೆಲ್ಲರ ಕೇಳೆ
ತಳುವದೆ ನೋಡಿ ಕಾಣದಲಾಗಲೆಲ್ಲಿಯು
ಅಳವಳಿದಳು ನಳಿನಾಕ್ಷಿ ॥೫೬॥

ಚೆನ್ನಿಗನನು ನಾನಿನ್ನೆಂತು ಮರಸುವೆ
ನನ್ನ ತೊತ್ತಿರು ಕೆಡಿಸಿದರು
ಪನ್ನಗಧರನ ತಂತ್ರದ ದಾರ ಹೋಯಿತೆಂದು
ಕನ್ನೆ ಬೆರಳನೋಡಮುರುಚೆ ॥೫೭॥

ಕರದನಾ ಚಂದ್ರಾಕರ ಸಿರಿಧರೆಯನು
ಸರನೆ ನೀ ಹೋಗು ಹೋಗದಿರೆ
ಹರಿತಹ ನಿಮ್ಮಯ್ಯನಿಲ್ಲಿಗೆನಲು ಕೇಳಿ
ಹರಿಣಾಕ್ಷಿ ಮನಮರುಗಿದಳು ॥೫೮॥

ಆದರೆ ಹೇಗೆ ಮಾಡುವೆನೆನೆ ನಾನಿತ್ತ
ಹಾದಿಯ ಬಲ್ಲೆ ನೀ ಹೋಗು
ಭೇದಿಸಿ ಬಂದರೆ ಸರಿವೆನೆನಲಿ ಕೇಳಿ
ಪಾದವ ಕಟ್ಟಿಕೊಂಡತ್ತು ॥೫೯॥

ಕೆಟ್ಟೆನಕಟಯೆನ್ನ ಬಿಟ್ಟಪೆಯೆಂದಾಗ
ಹೊಟ್ಟೆಯ ಹೊಸದುಕೊಳುತಲಿ
ಕಟ್ಟಳೆಮೀರಿ ತೂಕದಿ ಹೆಚ್ಚುದೋರಲಿ
ಸೃಷ್ಟೀಶಗರಿಕೆಮಾಡುವೆನು ॥೬೦॥

ಅಳಿಕಿಹೋಗದೊಲು ನಂಬಿಗೆಗೊಂಡು ಅಲ್ಲಿಂದ
ಕಳುಹಿಸಿಕೊಂಡು ನಡದಳು
ಇಳೆಯೊಡೆಯನು ಮಗಳ ತೂಗಿಸಲಾಗಿ
ಒಲವಾಗಲೊಳಗೆ ನೋಡೆಂದ ॥೬೧॥

ತಂದೆಗೆ ಹೇಳಿದೆನೆಂಬವಸರದೊಳು
ಬಂದರು ಚರರು ಬೇಗದಲಿ
ಕೊಂದಪರೆಂದು ಚಂದ್ರಾಕರ ನಂಬಿಯೆ
ಮಂದಿರವಿಳಿದು ಓಡಿದನು ॥೬೨॥

ಓಡಿದವನುಯಿವನಾರೊಯೆಂದೆನುತಲಿ
ಕೂಡೆ ಚರರು ಅಟ್ಟಿ ತರಲು
ಹೇಡಿತನದಿ ಸಿಕ್ಕದೆ ಓಡಿಹೊಕ್ಕನಾ
ಗಾಡಪಟ್ಟಣಶೆಟ್ಟಿ ಮನೆಯಾ ॥೬೩॥

ಹಿಂದಟ್ಟಿ ತಂದ ಚರರ ಕಂಡನಾಶೆಟ್ಟಿ
ಮುಂದೋಡಿ ಬಂದದ ನೋಡಿ
ಚಂದವರಿದು ಕಳೆಯುಳ್ಳ ಕುವರ ನಮ್ಮ
ನಂದನೆಗೆಯು ತಕ್ಕ ವರನು ॥೬೪॥

ಆದರಿವನ ಮಾಜುವೆನೆನುತಲಿ ಶೆಟ್ಟಿ
ಮೇದಿನಿಪತಿಯವರೊಡನೆ
ಹಾದಿಯೆ ನಿಮಗಿಲ್ಲಿ ಬಂದ ಪ್ರಸ್ತಗಳೆನ
ಲೋದಿದರವರು ವಿಸ್ತರಿಸಿ ॥೬೫॥

ನೆಲನಾಳ್ದನವರಾದಕಾಣ ಬಂದೀಗ
ಬಲುಹಿಲಿ ಹೊಕ್ಕಿರೆಮ್ಮನೆಯಾ
ಕಲಹವೇತಕೆ ನಿಮ್ಮೊಳು ಬಂದಾತನ
ಹೊಲಬ ಬಲ್ಲರೆ ನೋಡಿಕೊಳ್ಳಿ ॥೬೬॥

ಅಳಿಯನೀತನು ಮಗಳೀಕೆಯು ನಾವಿಬ್ಬ
ರುಳಿದವರ ನೋಡಿ ನೀವು
ಹಳುವವ ಹೊಕ್ಕಂತರಸಿ ಕಾಣದೆ ಹೋಗಿ
ಇಳೆಯೊಡೆಯಗೆ ಹೇಳಿದರು ॥೬೭॥

ಓಡಿದನುಪ್ಪರಿಗೆಯೊಳಿಂದಲೋರ್ವನು
ಕೂಡಡಿಗೊಂಡು ಹೋಗಲಿಕೆ
ನೋಡನೋಡಲಿಕೆ ಪಟ್ಟಣದೊಳು ತಪ್ಪಿದೆಂ
ದಾಡಿದರೊಡೆಯನಕೊಡೆ ॥೬೮॥

ಸಂದ ಚಪ್ಪನ್ನ ದೇಶದ ರಾಯರೊಳ್ನೆರೆ
ಕುಂದನೆ ನಗೆ ತಂದೆ ಮಗಳೆ
ನಂದನೆ ಪುರುಷ ಸಂಗಕೆವಳಗಹ
ರೆಂದ ವನೀಶ ಕಳೆಗುಂದಿ ॥೧೯॥

ಹಗಲೆಯಿರುಳೆ ಪುಟ್ಟಿದ ಮನುಷ್ಯರ ನೀನು
ಬಗೆಯೆನೆಂದರೆ ನಂಬಿದೆನು
ನಗೆಗೇಡ ಮಾಡಿದೆಯಿನಚಂದ್ರಾರಿಪ್ಪನ್ನ
ಜಗದೊಳಗೆನಲಯ್ಯಗೆಂದು ॥೨೦॥

ಮಾಣಿಕದಂಗವಡದು ಕಾಜಿರೆ ಕಂ
ಡಾಣಿಕಾರದ ಕಳಚುವನು
ಕ್ಷೋಣಿಯೊಳಗೆ ಹುಟ್ಟಿದ ಜೀವ ನರರೆನ್ನ
ಪ್ರಾಣನಾಯಕರೆ ಕೇಳಯ್ಯ ॥೨೧॥

ಗಾಸಿಮಾಡಟ್ಟಿಸಿದೆನ್ನ ಪುರುಷನ ನಿ
ರಾಸೆಯಾಯಿತುಯೆನಗಕಟಾ
ಲೇಸುಹೋಯಿತು ಕೊಟ್ಟಭಾಷೆಯಳಿದು ಜೀವ
ದಾಸೆಯಿನ್ನೆಕೆಂದು ಕುವರಿ ॥೨೨॥

ಎನಲು ಪ್ರಾಣವ ತೊರವಿನಿಕೇತಕೆ ಮಗ
ಳನುಬಂದಂತೆ ನೀನಿಹುದು
ವಿನಿಯನನಟ್ಟಿ ವಿಲಾಸದಿತ್ತುದುಯೆಂದು
ಮನಸಿಜಾಯತಗೆ ಚಿಂತಿಸಿದೊ ॥೨೩॥

ಇತ್ತಲಾಕುವರಿ ಚಂದ್ರಾಕರನೆನ್ನಯ
ತತ್ತಗಲಿದನಕಟೆನುತಾ
ಚಿತ್ತ ಹಂಬಲಿಸಿ ಚಿಂತಿಸುತಿರಲಾಕೆಯು
ಅರ್ತಿಯಲಿವನಿತ್ತಲಿರ್ದ ॥೨೪॥

ಅಟ್ಟಿತಂದದು ಕರಲೇಸು ಪೂರ್ವದಿ ಬ್ರಹ್ಮ
ಕಟ್ಟಿದ ಲಿಖಿತ ಬಿಡುವುದೆ
ಶೆಟ್ಟಿಯೆಲ್ಲರೊಳು ತಮ್ಮಕ್ಕನ ಮಗನೆಂದು
ಕೊಟ್ಟನಾತಗೆ ತನ್ನ ಮಗಳಾ ॥೨೫॥

ಅರಿಕೆಯಾಗಲಿಯೆಂದು ಕರದೆಲ್ಲರ ಮಗ
ಳೆರೆಯನೀತನು ಅಹುದೆಂದು
ಕುರುಹುಮಾಡಿಯೆ ಕೊಡಲಾಗ ಚಂದ್ರಾಕರ
ಸರಿಮಿಂಡಿಯೊಳು ಸುಖವಿರ್ದ ॥೭೬॥

ಅಳಿಯನ ನೋಡಿ ಮಗಳ ನೋಡಿದ ಸೆಟ್ಟಿ
ಕಳೆಯುಳ್ಳ ಪುರುಷರಿಂತುಂಟೆ
ನಳಿನಾಕ್ಷಿ ಬಳಿಯಗಲದೆ ಸುಖವಿರಲಿತ್ತ
ಅಳಲುತಿರ್ದರು ಮೂವರತ್ತಾ ॥೭೭॥

ಹೇಮಲತೆಯು ಕಾಳಿಯು ಮಹಿಪನಸುತೆ
ಪ್ರೇಮದಿ ಬಯಸಿ ಹಂಬಲಿಸಿ
ಕಾಮರೂಪನು ಚಂದಾ ಕರನಗಲಿದನೆಂದು
ಕೋಮಲಾಂಗಿಯರು ದುಃಖದಲಿ ॥೭೮॥

ಅಳಿದನೋ ಗಡ ಮೇಣು ಉಳಿದಿರೆ ಸತಿಯರು
ಹಲುಬಗುಡದೆ ಮಡುಗುವರು
ಕಳೆಯುಳ್ಳನ ಕಂಡು ತಾಳುವ ಹೆಣ್ಣೆಂತೊ
ಸುಳಿಯಬಾರದೆ ಕಣ್ಣೊಡದವು ॥೭೯॥

ಅಡಗಿದೇತಕೆಯೆಮ್ಮೊಡಲೊಳು ಕಿಚ್ಚನು
ಯಿಡಿದು ನೀ ಮುಖಕದೋರದಲಿ
ನುಡಿಯ ಮರಸಿಕೊಂಡಿಹರೆ ಚೆನ್ನಿಗನೆಂದು
ಮುಡಿಗೆದರಳುತ ಹಂಬಲಿಸಿ ॥೮೦॥

ಅಕ್ಕಟ ನಮ್ಮ ಮನೋಹರನಲ್ಲನು
ತೆಕ್ಕೆಯಗಲಿ ಹೋದನಯ್ಯಾ
ಮುಕ್ಕಣ್ಣಗೆ ಮೂವರು ಹಲಬುತಲಲ್ಲಿ
ವೊಕ್ಕರು ಕಣ್ಣನೀರುಗಳಾ ॥೮೧॥

ಇರಲೊಂದೆರಡು ಮಾಸವು ಹೋಗಲಿ ಚಂದ್ರಾ
ಕರನು ಅಂಗಡಿಯೊಳು ಕುಳಿತು
ಹರದಿಕೆಯನು ಮಾಡುತಿರೆ ಹೇಮಲತೆಯ
ಸಂಗಡದಳು ಕಂಡಳೇನೆಂಬೆ ॥೮೨॥

ಹರಿದು ಬಂದಾಗ ಹೇಳಿದಳು ತನ್ನೊಡತಿಗೆ
ಅರಸಿ ಕೇಳೊಂದು ಚೋದ್ಯವನು
ಹರದಿಕೆಯೊಳು ಪ್ರವೀಣತನಾಗಿ ಚಂದ್ರಾ
ಕರನೈದಾನೆ ಅಂಗಡಿಯೊಳು ||೮೩||

ಕರೆಯವೆ ಕರೆಯ ಕಂಡೆಯ ಕಂಡೆ ನಿರುತವೆ
ನಿರುತ ಬರಲೆ ಬಾರೆನಲು
ಭರವಸವೆ ಭರವಸ ನಡೆನಡೆಯೆಂದು
ಹರಿತಂದಳು ಹರಿಣಾಕ್ಷಿ ||೮೪||

ಅಂಗನೆ ಅಂಗಡಿಯಲಿ ಕುಳಿತಿರ್ದನ
ಕಂಗಳು ಕಟ್ಟಿದಿರಿನಲಿ
ಹಿಂಗದೆ ನೋಡಿ ಕಂಡಳು ಹೇಮಲತೆಯ
ನಂಗನ ರೂಪನ ಕುರುಹಾ ||೮೫||

ಪಂಗುಳಗೆಯು ಪಾದ ಕಂಗುರುಡಗೆ ಕಣ್ಣು
ಹಿಂಗಿದ ಪ್ರಾಣ ಮರಳಿಯೆ
ಅಂಗವ ಬಲಿದಂತಾಗೆ ಕುವರಿ ಪಾ
ದಂಗಳ ಪಿಡಿದು ನುಡಿದಳು ||೮೬||

ತಂದೆ ತಾಯಿಗಳ ಮರದೆ ನಿನ್ನ ಬೆನ್ನಿಲಿ
ಬಂದೆನು ಪರದೇಶಿಯಾಗಿ
ಕುಂದುಕೊರತೆಯ ಕಂಡೆಯವೊಂದುದಿನಲೊಂದ
ನೆಂದು ಕಣ್ಣಾಶ್ರುಯೊಕ್ಕಾಡೆ ||೮೭||

ಸುರತವ ತಕ್ಕೆಸರಿಸವಾಗೆನೆ ನಿನ್ನ
ಸರಸಕೆ ಹೆರೆ ಸಾರಿದೆನೆ
ಕರಕಮಲಕೆ ಗುರುಕುಚವೀಯದಾದೆನೆ
ಸ್ಮರರೂಪನೆನ್ನನಗಲುವರೆ ||೮೮||

ಒದಗಿಬಂದ ಕೂಟಕೆ ಅಂಗವೀಯ್ಯದಾದೆನೆ
ಅಧರಚುಂಬನಕೆ ಮುಖಗೊಡದಾ

ಎದೆ ತೋಳು ತೊಡೆ ಹರವರಿಯೊಡಲಳುಕಿನಾ
ಮದನನಾಟ್ಯಕೆಯಿಂಬುಗೊಡೆನೆ ॥೮೯॥

ಪ್ರವೀಣತೆಯಂಗಹೀನತೆ ಹೆಡು ಸೋಂಕಿತೊ
ಸವಿ ಸಲೆ ಲವಲವಿಕೆಗಳಾ
ವಿವರದಪ್ಪಿತಾ ಸುರತಾನಂದ ಸುಗ್ಗಿಯ
ತವಕಗುಂದಿದ ನೆವನುಂಟೆ ॥೯೦॥

ಎಲ್ಲವನೆನ್ನೊಳಗರಸುವರೆಂಬಿ ನೀ
ನಲ್ಲದ ಪರಗತಿಯುಂಟೆ
ಸೊಲ್ಲನರಿದು ಲಲ್ಲೆಗರೆಯೆ ಪೇಳ್ದನು ನಿಜ
ನಲ್ಲಳೆ ಕೇಳಾ ಹದನಾ ॥೯೧॥

ಓದಿ ಹೇಳಿದ ಹಿಂದಾದ ಹದನನೆಲ್ಲ
ಮೇದಿನಿಪತಿಯ ಕುವರಿಗೆ
ಚೋದ್ಯವ ಕಂಡು ವಿಸ್ಮಯಗೊಂಡು ವಾಣಿ
ಜೋದ್ಯೋಗವಬಿಟ್ಟು ಬಾ ಹೋಹಾ ॥೯೨॥

ಎನೆ ಕೇಳಿದೋ ಹರದರ ಮಗಳಾಗಲಿ
ವನಿತೆ ನೀನಾರೆನ್ನ ಪುರುಷ
ನಿನಗೇನು ಕಾರಣ ಹೋಗು ಕರೆಯಲೇಕೆಂ
ದೆನುತ ಕುವರಿಯ ಜರದಳು ॥೯೩॥

ಅಪರವೆ ಕರ್ತೃ ಪೂರ್ವವೆ ಶತ್ರುವಾದುದೀ
ವಿಪರೀತ ಕಾಲಮಹಿಮೆಯೊ
ತ್ರಿಪುರಾರಿ ಬಲ್ಲ ಶಂಭುವೆ ಮಹದೇವೆಂದು
ಚಪಳತನವೆ ಬೇಡೆನ್ನವನಾ ॥೯೪॥

ಆರು ನೀಹೋಗೆಂದು ಹೋರುತ ನಲ್ಲನ
ದಾರಿಗೆಯಳತರಲವರು
ಮಾರಿಯಾಯಿತುಯೆನ್ನ ಸೆರಗ ಬಿಡಿರೆಯೆನೆ
ಊರೆಲ್ಲ ನೆರಯಿತೇನೆಂಬೆ ॥೯೫॥

ಗಾಳುಯೇಳೆನೆಂದು ಕಾಳರಾತ್ರಿಯು ಬಂದು
ಕೇಳಿದಳಿದರ ತರ್ಕವನು
ಆಳುವನಿವನೆನ್ನನೆಂದು ಕುರುಹ ಕಂಡು
ತೂಳಿದಳವರಮೇಲಿವನಾ ॥೯೬॥

ಸೆರಗಹಿಡಿದುಯೆನ್ನೆರೆಯನಿವನುಯೆಂದು
ಉರಗಮುಟ್ಟಿಯೆ ಮರದೊರಗಿ
ಇರೆ ಪ್ರಾಣವ ಪಡದೆನು ಮರದೆಯ ನಿನ್ನ
ಕರಿಕಂಠನರಿಕೆಯನೆಂದು ॥೯೭॥

ಎನುತ ಕುವರನವ ಮೂವರು ಪಿಡಿದಿರಲಿತ್ತ
ಜನಪತಿ ಸುತೆಯುಪ್ಪರಿಗೆಯಾ
ಕೊನೆಮಾಡದಾಗ್ರದಿ ಕಂಡು ಹರಿದು ಬಂದು
ಇಯಿನಿಯನೆನ್ನವನಿವನೆಂದು ॥೯೮॥

ತವಕದಲವರ ತೆವರಿಕೊಳಲೆಲ್ಲರು
ಭುವನೇಶನ ಸುತೆಯೆಂದು
ಕುವಲಯನೇತ್ರೆಯ ಕುರುಹ ಕಂಡ ಮನ
ಜವಗುಂದಿ ನಿಂದು ನೋಡಿದರು ॥೯೯॥

ಪೊಡವಿಪಸುತೆ ಬಂದು ಹಿಡಿದೆಳೆಯಲುಯಿತ್ತ
ಜಡಿದರು ಮೂವರೊಂದಾಗಿ
ಮಡದಿಯರೊಂದೊಂದು ಕಡೆಗೆ ನಾಲ್ವರು ಕೂಡಿ
ಕೊಡುವ ಸಾಲಿಗನ ಪರಿಯಲಿ ॥೧೦೦॥

ಇತ್ತಲವರುಎಳದಾಡುವದನೆ ಕಂಡು
ಸುತ್ತ ನೆರದ ಸತಿನಿವಹಾ
ಹೊತ್ತಕೊಡನ ಬೀಳಲರಿಯರು ಕೊಂಕುಳ
ಲೆತ್ತಿಹ ಕೂಸ ಮರದರು ॥೧೦೧॥

ಮುಡಿ ಜರಿದವ ಇಟ್ಟೆಡೆಕು ಚತೆರಹಾಗಿ
ಉಡಿಗೆಸಡಿಲೆ ಮೈಮರದು
ಪಿಡಿದ ಬೆಳ್ಳಲೆ ಬಾಯೊಳಿಡಿದಡೆಕೆಯ ಬಾಗಿ
ಒಡಗೂಡದ ಸತಿನಿವಹಾ ॥೧೦೨॥

ಮನೆಗೆಲಸವ ಮರದರು ಸತಿಯರೆಲ್ಲ
ತನುವ ಮರದು ನಿಟ್ಟಿಸಿದರು
ಇನಿಯನೆಂತನದಾಪ್ಪವ ಬಸುರಲಿ
ಜನಿಸಿದನೊ ಶಿವಯೆನುತಾ ॥೧೦೩॥

ಇರಲಿತ್ತ ಚಂದ್ರಾಕರನ ಬಿಡದೆ ನಾ
ಡೆರೆಯನ ಮಗಳೆಳತರಲಿ
ಧರಣಿಪ ಕೇಳಿ ಕರಸಿದನೆಂಬಲ್ಲಿಗೆ
ನಿರುತಲೈದು ಸಂಧಿಗಳು ॥೧೦೪॥

ಸಸಿಬಿಸಿನೇಸರಿಂದೆಸವ ತ್ರಿವಿಧನಯ್ಯ
ನಸುರಾನೆದೊಗಲ ಸಿಂಗರಿಗ
ಪಶುಪತಿಪಾದನಯನ ನಿನ್ನ ಮಹಾತ್ಮೆಯ
ನೆಸಗುವರಿನ್ನಾರಿಗಳವು ॥೧೦೫॥

ಅಂತು ಸಂಧಿ ೫ ಕ್ಕಂ ಪದನು ೪೮೮ ಕಂ
ಮಂಗಳಮಹಾಶ್ರೀ

●

ಸಂಧಿ : ಆರು

ಮುಂದಣ ಸಂಧಿಯ ಕಥೆಯೆನೆ ನಾಲ್ವರು
ನಂದಿವಾಹನನೆಡೆಗೆಯಿದಿ
ಒಂದೊಂದು ಪರಿಯಲರ್ಚಿಸೆ ಹೇಮಲತೆಗಿತ್ತ
ಚಂದ್ರಾಕರನ ಚಂದ್ರಧರನು ॥೧॥

ಭಾಳಲೋಚನನ ಭಕ್ತಾಳಿಯ ಕೃತಿ ರಸ
ದಾಳಿಯ ಸವಿವರೆ ಕರ್ಣ
ನಾಲಗೆ ಹುಟ್ಟಿರೆ ಲೇಸಹುದೆಂಬೊಲು
ಪೇಳುವೆ ಶರಣರಾಲಿಪುದು ॥೨॥

ಬಂದರು ಚಂದ್ರಾಕರ ಸಹಿತಲಿ ರಾಯ
ನಂದನೆ ರಾಜಮಂದಿರಕೆ
ಒಂದಾಗಿ ನಾಲ್ವರು ಸೆರಗಪಿಡಿಯಲಿದೇ
ನೆಂದು ಭೂವರ ಬೆಸಗೊಂಡಾ ॥೩॥

ಈತನೆನಗೆ ಪತಿಯೆನುತಲಿ ನಾಲ್ವರು
ದಾತುದಾತರಿತು ಹೇಳಲಿಕೆ
ಭೂತಳಪತಿ ಕೇಳಿ ಕಿವಿಯ ಕರದಿ ಮುಚ್ಚಿ
ಯಾತನೊಲದ ತನ್ನ ಶಿರವಾ ॥೪॥

ಇಂತಪ್ಪ ಪುರುಷನ ಕಂಡ ಸತಿಯರಿಗೆ
ಭ್ರಾಂತುಹೊದ್ದುವದಿದೇನರಿದು
ಕಂತುವ ಕೊಂದು ಕಳೆಯನೆಲ್ಲವ ತೆಗದೀ
ತಂತಗಿತ್ತನೊ ಶಿವಯೆಂದು ॥೫॥

ಮಾಧವರಾಯನ ಮಗಳು ಹೇಳಿದಳಾಗ

ಆದಿನ ಹೋದಾತನೀತಾ
ಭೇದಿಸಿ ಓಡಿತಂದೆನೆನಲು ಮೂವರುತ್ತ
ಮಾದಿಯ ವರ್ಮವನರುಹಿದರು ॥೬॥

ಚೆಲ್ಲೆಗಂಗಳಚೆನ್ನೆಯರಾಡಿದಮಾತ
ನೆಲ್ಲವ ಕೇಳಾಗ ರಾಯಾ
ನಲ್ಲಳಿಗೆಂತಹುದೋ ನಾ ಪೇಳೆ ನೀ
ವೆಲ್ಲಿಯಾದರೆ ನ್ಯಾಯಮಾಡಿ ॥೭॥

ಧರ್ಮಾಧರ್ಮವನರಿವರು ಕೇಳ್ದರು ನೀ
ವರ್ಮಾವರ್ಮವ ಪೇಳಲಿಕೆ
ಸೋರ್ಮುಡಿ ಸೊಬಗಿನಂಗನೆಯರು ನಾಲ್ವರು
ಪೆರ್ಮೆಯಲವರೆಯಿತರಲಿ ॥೮॥

ಪಟ್ಟಣದೊಳಗೀಗ ಪಟ್ಟಿಕೊಂಡರಸನ
ಕೊಟ್ಟ ಸಾಲಿಗನಂತಿವರು
ಪಟ್ಟಣಶೆಟ್ಟಿಯೆಡೆಗೆಯೆಯಿತಂದರು
ಬಟ್ಟಗಂಗಳ ಭಾವಕಿಯರು ॥೯॥

ಕಂಡರು ನಾಲ್ವರೊಳಗೆಯಿಹಳೋರ್ವಳ
ಮಂಡಲೇಶನ ಮಗಳೆಂದು
ತುಂಡಧರನಯೆಡೆಗೊಯಿದಲ್ಲದೆನ್ಯಾಯ
ಕಂಡಿಸದಿಲ್ಲಾರಿಗೆನಲು ॥೧೦॥

ಆದರೆ ನಡೆಯೆಂದು ಹೋದರು ನಾಲ್ವರು
ಪಾದನಯನನ ನಿಳಯಕೆ
ಪೂಜಿಸಿದರು ಷೋಡಶ ಉಪಚಾರದಿ
ಮೂದೇವರದೇವನನು ॥೧೧॥

ಸ್ಮರಿಸಿದರಾಗಲಿ ಹರನ ಶ್ರೀಮೂರ್ತಿಯ
ಪುರುಷ ನಾಲ್ವರೊಳಾರಿಗೆಂದು
ಸಿರಿಮುಡಿಯರಳನೀವುದುಯೆನಲೀಶ್ವರ
ಕರುಣಿಸದಿರೆ ಹೇಮಲತೆಯು ॥೧೨॥

ದಂಡಿಗೆಯನು ಭಡಾಳಿಸಿ ನಾದ ಮಾಡಿದೊ
ಖಂಡೇಂದುಧರನ ಮಾಯೆನುತಾ
ಕೊಂಡಾಡಿದಳು ಪಾಡಿದಳಾ ಶಿವನನು
ಗಂಡನ ಮೇಲಣಕ್ಕರಲಿ ॥೧೩॥

ಶಂಭುಶಂಕರ ಸದಾಶಿವ ಸರ್ವೇಶ್ವರ
ಅಂಬಿಕಾಪತಿ ಮಹದೇವ
ಕಂಬುಗರಳ ಕರೋಟಿಮಾಲಾಧರ ತ್ರಿ
ಯಂಬಕ ತ್ರಾಹಿತ್ರಾಹೆಂದೊ ॥೧೪॥

ತ್ರಾಹಿ ತ್ರಿಶೂಲಿ ಧೂರ್ಜಟಿ ಕರುಣಾರ್ಣವ
ತ್ರಾಹಿ ಕಪರ್ದಿ ಕಾಮಾರಿ
ತ್ರಾಹಿ ಮಹದೇವ ಸ್ಥಾಣು ಸದಾಶಿವ
ತ್ರಾಹಿಯೆನುತ ಸ್ತುತಿಸುತಾ ॥೧೫॥

ಇರಲಿ ಸರ್ವೇಶ್ವರ ಹರಿಣಾಕ್ಷಿಗೆ ಮಚ್ಚಿ
ಕರುಣ ಕೃಪೆಯೊಳೀಶ್ವರನು
ಸಿರಿಮುಡಿಯಲಿ ತುಂಬಿದರಳನುರುಳಿಸಿದ
ಪರಮಭಕ್ತಿಗೆ ಶಿವನೊಲಿದು ॥೧೬॥

ಚಂದ್ರಧರನು ಹೇಮಲತೆಗಿತ್ತನಿಂಡೆಯ
ಚಂದ್ರಾಕರನು ಪತಿಯೆಂದು
ಅಂದಾಡುತಿರೆ ರಾಯ ಕೇಳಿಯಿಲ್ಲಿಗೆ ನಡೆ
ತಂದು ಕಂಡರುಯಿವರನುವಾ ॥೧೭॥

ಶಿವನಾರ್ಚಕರಿದ ಶಿವನ ಕರುಣರಿದ
ಶಿವಶೀಲರು ನೀವಹುದೆ
ಭವರಹಿತರು ಭಾಗ್ಯವಂತರೆನುತಲಾಗ
ಭುವನೇಶನವರ ಹೊಗಳಿದಾ ॥೧೮॥

ಧರಣೀಶನೊಳು ಹೇಮಲತೆಯಿಂತೆಂದಳು
ಸಿರಿಧರೆಯಾ ಕಾಳರಾತ್ರಿ
ಹರದರ ಮಗಳು ನಾಗೂಡಿ ನಾಲ್ವರು ಚಂದ್ರಾ
ಕರಗೆ ಸತಿಯರಹುದೆನಲಿ ॥೧೯॥

ಹರಿಣಾಕ್ಷಿಯರ ನಾಲ್ವರ ಕುಳ್ಳಿರಿಸಿದ
ಗಿರಜಾವರನ ಸಮ್ಮುಖದಿ
ಹರಸೇಸೆಯನಿಟ್ಟನು ಭೂವರ ಚಂದ್ರಾ
ಕರಗೆ ಸರಿಯರಿವರೆಂದು ॥೨೦॥

ನನ್ನಮಕ್ಕಳು ನಾಲ್ವರು ಅಹುದೀತನು
ನನ್ನಳಿಯನುಯೆಂದು ಶಿವನ
ನನ್ನಿಯಿದೆನುತ ಪ್ರಸಾದವ ಮುಡಿಗಿತ್ತು
ತನ್ನರಮನೆಗವರೊಡನೆ ॥೨೧॥

ಬಂದು ಮಂತ್ರಿಯ ಕರಸಿದ ಮಾಧವರಾಯ
ಚಂದ್ರಾಕರಗೆ ನಂದನೆಯು
ಅಂದೆಲ್ಲರರಿವಂದದಿ ಕೊಟ್ಟು ಪಟ್ಟವ
ನೊಂದಿಸಿದರು ಸುಹುಮೂರ್ತದಲಿ ॥೨೨॥

ಪಟ್ಟಾಭಿಷೇಕವ ಮಾಡಿದರು ಚಂದ್ರಾಕರ
ಸೃಷ್ಟಿಯೊಡೆಯನೀತನೆಂದು
ಕಟ್ಟರಸಹುದೆನುತ ಮಾಧವರಾಯ
ನಿಟ್ಟನು ಕಾಣಿಕೆಯನೊಲಿದು ॥೨೩॥

ಕಂಡರು ಮಂತ್ರಿಮಾನ್ಯರು ಸಿಂಹಾಸನ

ಮಂಡಿಸಿಹ ರಾಯನನು
ದಂಡಪ್ರಣಾಮ ಮಾಡಿಯೆ ಕಾಣಿಕೆಯಿತ್ತು
ಮಂಡಲೇಶನುಯೀತನೆನುತಾ ॥೨೪॥

ಬೊಕ್ಕಸ ಭಂಡಾರಗಳ ನೋಡಿದನಾಗ
ಹೊಕ್ಕರಮನೆಯೊಳಿರ್ದುದನು
ಲೆಕ್ಕವನೆಲ್ಲಾಗ ಅರಿದಾಳುತಿರ್ದನು
ಮುಕ್ಕಣ್ಣನ ಕರುಣದಲಿ ॥೨೫॥

ರಥ ಹಯ ಗಜ ಸೇನೆ ಚತುರಂಗ ಬಲವನು
ಕ್ಷಿತಿಪಾಲನು ವಿಚಾರಿಸುತ

ಅತಿಶಯದಿಂದಲಾಳುತಲೊಂದು ದಿವಸವು
ನುತಿಸಿದ ತನ್ನ ಪೂರ್ವವನು ॥೨೬॥

ಬಂದೆವು ಬಹಳ ದಿನವು ನಾವು ನಮ್ಮಯ
ತಂದೆಯ ಸೀಮೆಯೆಂತಹುದೊ
ಅಂದು ಹೇಳಲಿ ಹೇಮಲತೆ ಚಂದ್ರಾಕರ
ಮಂದಿ ಮಾರ್ಬಲವ ಕೂಡಿದನು ॥೨೭॥

ಮಂತ್ರಿಯ ಕರದು ಹೇಳಿದನು ನಿನ್ನಯ ತಳ
ತಂತ್ರ ಸಹಿತ ಹೊರಡಿಸು
ಮುಂತೆ ಬಿಡಾರವ ಮಾಡುವದೆನೆ ಕೇಳ್ದ
ನೆಂತು ಗಮನವೆಂದನಾಗ ॥೨೮॥

ಆವ ರಾಯನು ಮಲತನು ನಮಗಿದಿರಹ
ದಾವ ರಾಯನು ನಮಗೆಣೆಯು
ನೀವು ಸುಮ್ಮನೆ ಸುಖವಿಹುದೆಂದು ಮಂತ್ರಿಯು
ನಾವದ ನಿರ್ಣಯಿಸುವೆವು ॥೨೯॥

ಎನಲಿ ಪೇಳಿದ ಮಹಾರಾಷ್ಟ್ರ ದೇಶದ ರಾಯ
ಘನತರ ಸತ್ವವುಳ್ಳವನು
ತನಗೆ ಮಲತ ರಾಯರನೆಲ್ಲ ಮುರಿದಾತ
ನನುವನೋಡುವೆ ನಾನೆಂದಾ ॥೩೦॥

ಆದ ರಥವು ಗಜ ತುರಗ ಸೇನೆಗಳನು
ಭೇದಿಸೊಂದುಳಿಯದಂದದಲಿ
ಮೇದಿನಿ ಬೆಸಲಾದಂತೆ ನೆರೆಯಲಲ್ಲಿ
ಹೋದನುವನು ಬಣ್ಣಿಸುವೆ ॥೩೧॥

ಆನೆ ಪವುಜು ಸಂದಣಿಸಿ ತಾನಂತವು
ಏನ ಹೇಳುವೆರಂಚು ಹಮ್ಮಿ
ಸೇನಾಧಿಪತಿಯಡ್ಡವಾಯ್ದು ನಿಂದನು ಮುಂದೆ
ಭಾನುಕುಲ ಕಟ್ಟಿದಿರಿಲಿ ॥೩೨॥

ಹಕ್ಕರಿಕೆಯ ಕುದುರೆಯ ಪವುಜೊಡ್ಡಿತು
ಲೆಕ್ಕವಿಲ್ಲದ ಪಾಯಿದಳವು
ರಕ್ಕಸಭಟರು ನಿಂದರು ರಾಯನಿದಿರಿನಲಿ
ಒಕ್ಕಣಿಸಾವ ಕಾರಿಯವ ॥೩೩॥

ಬಿರಿದಿನ ಪಟುಭಟರರರೆ ನೆರದಲ್ಲಿ
ದೊರೆಯ ವೀಳೆಯವ ಬೇಡುತಲಿ
ಗರುಡನೆರಗುವ ಹನುಮ ಹೊಯಿದಟ್ಟುವ
ಕರಿಯ ಮೆಟ್ಟಿ ಸೀಳುವರೆಂಬಾ ॥೩೪॥

ಮಲವ ಗೂಳಿಯ ಮದಸೊಕ್ಕಿದೆಕ್ಕಲಗಳು
ತಲೆಗೆ ನೆಗೆವ ಹೆಬ್ಬುಲಿಯು
ಬಲುಸಿಂಹ ಶಾರ್ದೂಲ ಗಂಡಭೇಱುಂಡೆಂದು
ಹೊಣಕೆಯ ಭಟರು ನಿಂದಿಹರು ॥೩೫॥

ಮದಸೊಕ್ಕಿ ಹರುದಾಡಿ ಹೊಯಿದುಬ್ಬಿ ಮಲವ ಕಾ
ಲ್ಕೆದರುವ ಕೋಣಕೆಂಗವಿಸಿ
ಯಿದಿರಾಂತರನೆದೆಗೆರವ ಭಲ್ಲುಕನೆಂದು
ಕದನಕರ್ಕಸಭಟರುಲಿಯೆ ॥೩೬॥

ಬೆಳ್ಳಿಯ ಗುಬ್ಬಿ ಚಿನ್ನದ ಗುಬ್ಬಿ ಹರಿಗೆಯ
ಒಳ್ಳೆಯ ಬಚ್ಚರಣೆಗಳಾ
ಝಲ್ಲಿಯ ಲಾಲಸರಿಗೆ ಬಿರಿದುಳ್ಳರು
ಬಲ್ಲಿದ ಮಾಸಾಳ್ಗಳಿಹರು ॥೩೭॥

ಉಲಿವ ಜಾಗಟೆ ಮುಂದೆ ನೆಲನನಗದು ತೂರು
ತೊಲವುತ ಮಲತು ನಿಲ್ಲುತಲಿ
ಬಲುಭುಜಗಳ ಪೂಜಿಸಿಕೊಳುತಲಿ ಬಂ
ತುಳುವಹರಿಗೆಯರೊಂದೆಸೆಯಾ ॥೩೮॥

ಅಡ್ಡ ಬೊಳೆಯು ದಸಿಚವುದಾವರ ಮಿಟ್ಟೆಯು
ದೊಡ್ಡಂಬು ಕಣಗಿಲವಂಟ
ಲೊಡ್ಡಿಸಿಯೆಸೆವೇಬಿಲ್ಲಾಳು ನಿಂದಳು ಪಳಿ
ಯೊಡ್ಡಿದ ಹರಿಗೆಯ ಹಿಂದೆ ॥೩೯॥

ಮುಗಿಲ ಮೋಡವು ನಡವಂತಾನೆ ನಡದವು
ನಡವ ಕುದುರೆ ಬಗೆಬಗೆಯ
ಜಗವೀದುದೊ ದೆಸೆಹೆಚ್ಚಿದು ಕಾಶವು
ಬಗಿದುದೊಲು ಸೇನೆ ನಡೆಯೆ ॥೪೦॥

ಹಮ್ಮಿತಾನೆಯ ಮಸ್ತಕದಿ ಸಿಂಹಾಸನ
ನೆಮ್ಮಿ ಕುಳಿತ ರಾಯನೊಲಿದು
ಚಿಮ್ಮುವ ಚಾಮರ ಢಾಳಿಸುತಲಿ ದೆಸೆದೆಸೆ
ಘಮ್ಮನರಸು ಹೊರವಂಟಾ ॥೪೧॥

ಕರೆವ ಕಾಳೆಯು ಬಿರಿದೆತ್ತಿ ವದರುತಲಲ್ಲಿ
ಗಿರಿಗಳದಿರುವಂತೆ ಭೇರಿ
ಕರವೆತ್ತುಗಡಿಸುವ ಕೈತವ ಭಟರಿಂದಾ
ಅರಸು ಪವುಜ ನಡೆಗೊಳಲಿ ॥೪೨॥

ನೆಗದಕೋಡುಗಳಲ್ಲಿ ಮುಗಿಲುಗಾಣಿಸದಂತೆ
ಬಗೆಬಗೆಯಲಿ ಪತಾಕೆಗಳು
ನೆಗಳುನೆಜ್ಜ್ಯಗಳೆತ್ತಿ ಹೊಗಳುತ ಭಟರಲ್ಲಿ
ಜಗದೊಡೆಯನು ನಡೆಗೊಳಲಿ ॥೪೩॥

ತಂಬಟಡವುಡೆ ಜಾಗಟೆ ಡೊಳ್ಳು ಮುರಿತಾಪ
ಚೆಂಬಕೆಗಹಳೆ ಹೆಗ್ಗಾಳೆ
ಕೊಂಬು ರಬಾಬುವೊಡ್ಡಿಯ ಹರೆ ಗಿಡಿಬಿಡಿ\
ಕುಂಭಿನಿಪತಿಯ ಮುಂಗಡೆಯಾ ॥೪೪॥

ಕಟ್ಟಿಗೆಯರುಗ್ಘಡಿಸುತವರೆಡಬಲ
ಭಟ್ಟರು ಕೈವಾರಿಗಳು
ಜೆಟ್ಟಿಗಳುಂಬಳ ಸಿರಿ ಚಿನ್ನ ಬೆಳ್ಳಿಯ
ದಿಟ್ಟರ ಹಿಡಿದ ಕೈಗುಡಿಗೆ ॥೪೫॥

ಸನ್ನೆ ಭೇರಿಯನಾಡಿಸಿ ದಳ ನಡದುದು
ಕರ್ನಾಟಕ ದೇಶಾಧಿಪತಿಯು
ಉನ್ನಿಸೈದಿದ ಮಹರಾಷ್ಟ್ರ ಸೀಮೆಯ
ಗಡಿಸನ್ನಿಧಿಯಲಿ ಬಂದು ನಿಂದು ॥೪೬॥

ಹೇಳದೆ ಬಂದನೆಂಬರು ಮಹರಾಷ್ಟ್ರವ
ನಾಳುವ ರಾಯನಿದ್ದೆಡೆಗೆ
ವಾಲೆಭಟರನಟ್ಟಿದ ನಿನ್ನ ದುರ್ಗವ
ಮೇಳೈಸುವದು ನೀನೆನುತಾ ॥೪೭॥

ಅಟ್ಟಿದ ಭಟರು ಆಕ್ಷಣ ಭುವನಾಕ್ಷಿಯ
ಪಟ್ಟಣದರಸಿನ ಮುಂದೆ
ಕಟ್ಟೋಲಗದೊಳು ನಿಂದವರೋಲೆಯಾ
ಕೊಟ್ಟರು ಚರರುಯೇನೆಂಬೆ ॥೪೮॥

ಓದಿದರೋಲೆಯ ಕರ್ನಾಟ ಭೂ
ಪಾಲ ನೊಕ್ಕಣೆಯಿದೇನೆಂದು
ಮಾಲನು ಕೊಟ್ಟು ಸುಖದಲಿರು ಮಲ ತರೆ
ಗೂಳೆಯಗಟ್ಟಿ ನೀನೋಡು ॥೪೯॥

ಮಲತು ಕಾದುವರೆ ನಿನ್ನಳವಲ್ಲ ಮಾಧವ
ನಳಿಯ ರಾಯನುಯಿವ ಬಹಳಾ
ದಳದಿ ಸಂಪನ್ನನೆನುತ ಭಕ್ತಿರೂಪನು
ತಳುವದೆ ಬರಹೇಳೆಂದಾ ॥೫೦॥

ಬೇಡ ನೀನರಿಯ ನೀನಾಡು ಮಾತೆಲ್ಲ
ಪಾಡೆ ನೀ ಬುದ್ಧಿಯನರಿಯೆ
ಬೇಡಿದ ಕಪ್ಪವ ಕೊಟ್ಟು ಕಳುಹೆನಿನ್ನಾಡು
ಕೆಡದುಯೆಂದರವರು ॥೫೧॥

ನುಡಿದನು ಭಕ್ತಿರೂಪನು ಕೋಪದಿಯೆನ್ನ
ಗಡಿಯಸೀಮೆಯ ಕಂಡರಹುದು
ತಡಬೇಡ ಬೇಗ ಬಾಹುದು ಎಂದು ಬಂದರಿ
ಗುಡುಗೊರೆಗಳ ಕೊಟ್ಟು ಕಳುಹೆ ॥೫೨॥

ಬಂದು ಹೇಳಿದರು ಚರರು ರಾಯರದೇವಾ
ನೆಂದವೃತ್ತಾಂತವನೆಲ್ಲ
ಸಂಧಾನದ ಮಾತನು ಹೇಳಿದರೇ
ನೆಂದದ ಕೇಳಿದಟ್ಟಿದನು ॥೫೩॥

ದಂಡ ನಡೆಯ ಹೇಳೆನೆ ತೆರಳಿತು ಭೂ
ಮಂಡಲವದಿರುವಂದದಲಿ
ದಂಡಿಗೆದಂಡಿಗೆಯರು ಹಳಚುತ ಮಾನ್ಯ
ಮಂಡಲೀಕರು ಗಡಿಯೊಗಲಿ ॥೫೪॥

ಪಲ್ಲಕ್ಕಿಸಾಲು ಸತ್ತಿಗೆಯರು ತೆರಹಿಲ್ಲ
ಜಲ್ಲಿಯ ಕುದುರೆ ಸಂದಣಿಯು
ಗೆಲ್ಲ ಸೋಲದ ಹೊಣಕೆಯ ಪಂಥದ
ಭಟರ್ನಿಂದೋಡಿ ನಡಯಿತೊಗ್ಗಿನಲಿ ॥೫೫॥

ಇತ್ತಲಾ ದುರ್ಗ ಸಂವರಣಿ ಸಂವರಿಸಿದ
ಭಕ್ತಿರೂಪನು ಮಹರಾಯಾ
ಕೊತ್ತಳ ಕೋಟೆಯ ಬಲಿದು ಡೆಂಕಣಿಗಳ
ತತ್ತ ಕಾಳಗಕನುಮಾಡಿ ॥೫೬॥

ಬತ್ತೀಸಾಯುಧಗಳು ಅಂಬಿನ ಹೊರೆ
ಕೊತ್ತಳದೊಳಗೆ ಮೆರದವು
ಎತ್ತ ನೋಡಲಿ ಪೇಟ ಕಲ್ಕವಣೆಗಲ್ಲುಗಳಲ್ಲಿ
ಸುತ್ತಲಿ ಮಳಲ ಕೊಪ್ಪರಿಗೆ ॥೫೭॥

ಕಾಸುವೆಣ್ಣೆಯು ಸಗಣದಡುಕಟ್ಟಿನ
ಬೀಸುವಗ್ಗವುದಸಿ ಬಸಿದು
ಹೇಸದೆ ಇರಿದು ನೂಕುವೀಟಿ ಸಬಳವು
ಆ ಸೌರಣೆಯ ಮಾಡಿಸಿದ ॥೫೮॥

ಅಗಚಿದನಚ್ಚಾಳು ಕುದುರೆ ಮನ್ನೆಯರನು
ಹಗಲುಗಾಳಗಕಿದಿರಾಂತು
ಹೊಗವರಿಯಾಗಿ ಹೊಕ್ಕಿರಿಸೂಳಿರಿತವ
ಬಗೆಮಾಡಿದರರಸುಗಳ ॥೫೯॥

ಕಗ್ಗೊಲೆಯ ಬೀಳಲೆನುತಲಿಂಗಡಿಸಿದ
ಹೆಗ್ಗಡಿ ದಂಡನಾಯಕನ
ನುಗ್ಗುಮಾಡಿಯೇ ಕಡಿವೆವು ರಾಯ ನೋಡೆಂದು
ರಗ್ಗಳೆಯರು ತಮತಮಗೆ ॥೬೦॥

ಇದಿರಾಗಿ ಹೋಗಿ ತಾಗುವದೆಂದು ಕಳುವಿದ
ಮದಸೊಕ್ಕಿದಾನೆ ಮಂತ್ರಿಯರ
ಸದಳ ತೆರಳಿತೊದರುವ ಕಾಳೆ ಬಿರಿದೆತ್ತಿ
ಅದನೇನನು ಬಣ್ಣಿಸುವೆ ॥೬೧॥

ಫೌಜಮಾಡಿತು ಬಗೆ ಬಗೆಯಾನೆ ಕುದುರೆಯು
ಅವಗಡಿಸಿತು ಇದಿರಾಗಿ
ಹವಕುರವಣಿಸಿ ಬಹವು ಪರರಾಯನ
ಭವಭಂಗಬಡಿಸುವೆನೆನುತ ॥೬೨

ಗಡಿಯ ಹೊಗುವ ಜೂಣಿಯ ತಡೆಗಡಿದರು
ಹಿಡಿದರು ಕಾಲಾಳುಗಳ
ಬಿಡಿಸಿಕೊಂಡಿತು ಉರುಬಿತು ರಾಯರಾವುತ
ರೊಡೆಯನ ಮೂದಲಿಸುತಲಿ ॥೬೩॥

ಒಡೆಗಲಿಸುಭಯದಳವು ಹಳಚಿದರಾಗ
ಪಡಪಡ ಕೆಡೆಯೆಂಬ ಕಹಳೆ
ಹೊಡವ ತುಡುಮುಗ್ಗಿಡಿಬಿಡಿ ತಮ್ಮಟಗಳು
ಎಡೆಯಿಲ್ಲದೆ ಹುಯ್ಯಲಿಡುತ ॥೬೪॥

ವೀರರುಗಳು ಚಾರಿವರಿದು ಭೋಯೆನುತಲಿ
ಸೇರಿ ಮುಂದಲೆಗಳ ಪಿಡಿದು
ಆರಿಡುತಲಿ ಇರಿದಾಡಿದರೇನೆಂಬೆ
ಧಾರುಣಿಯೊಳು ಹೊಸತಾಯ್ತು ॥೬೫॥

ನೆತ್ತರುವಡಗಲಸಲು ನಡು ತೊಡೆ ತುಂಡು
ಕತ್ತರಿಸಿಯೆ ಬಹುಭುಜದ
ಅರ್ತಿಯಲಿರುವಂದದಿ ಕಡಿದಾಡಿತು
ಮತ್ತದನೇನ ಬಣ್ಣಿಸುವೆ ॥೬೬॥

ಹಕ್ಕರಿಕೆಯ ಹೊಕ್ಕಿರಿದರೆ ಕುದುರೆಯು
ಮುಕ್ಕುರುಗೊಂಡು ಬೀಳುವೊಲು
ತೆಕ್ಕೆಯೋರಿಕೆಯತೋರಿದರು ರಾವುತ ರಣ
ರಕ್ಕಸರಂತೊಕ್ಕಿಲಿಕ್ಕಿ ॥೬೭॥

ಖಂಡೆಯಗಳ ಜಾಳೆಯ ತೆಗೆದರಿಯಲಿ
ತುಂಡುದುಡುಮು ದಿಮ್ಮೆನುತ
ಖಂಡಿಸಿ ಬೀಳೆ ರಾವುತರ ಹೊಲಿಗೆವಾಗಿ
ಮಂಡಿಗಾಲನು ಹೂಡಿದವು ॥೬೮॥

ಗುಡಿಗೆಲವುಡಿಗದೆಗಳ ಹೊಯ್ಲಿಗೆ ಬಿದ್ದು

ಕುದುರೆಯು ಕುಕ್ಕುರಿಸಿದವು
ಒದದುಕೊಳುತ ಮೂಗುಬಾಯೊಳು ನೆತ್ತರು
ಬದಬದನೊಕ್ಕಾಡಿದವು ॥೬೯॥

ತೊಡೆ ತೋಳು ನಡು ತುಂಡಿಸಿ ಬಿದ್ದವು ರಣ
ಗಡಿಗ ರಾವುತರ ಹೊಯ್ಲಿಂಗೆ
ಹಿಡಿಗುದುರೆಯು ಹಿಡಿದರ ದೊರೆದೊರೆಗಳು
ಮಡಿದರನಂತರೇನೆಂಬೆ ॥೭೦॥

ತುಂಡುಮಾಯವು ನಡುತೊಡೆಗಳು ರಣದೊಳು
ಖಂಡಮಾಯವು ಕೊಬ್ಬಿ ಬೆಳೆದ
ದೊಂಡೆಗರುಳ ಮಾಯ ಕೊಬ್ಬಿದ ಚಲ್ಲಾಡಿ ಭೂ
ಮಂಡಲ ರಕ್ತವರತುದು ॥೭೧॥

ಮುರಿದರು ದೊರೆದೊರೆಗಳು ಮನ್ನೆಯರೆಲ್ಲ
ಸರಿದರು ದೆಸೆಗಳ ನೋಡಿ
ಬರವುಡಿಗಿಯೆಪದಸರಿಸಡ ಇಲಿತು ಮದ
ಕರಿಯೊಡ್ಡಬಂದು ನೆಮ್ಮಿದರು ॥೭೨॥

ಕಂಡನಾನೆಯ ದಳಪತಿವೆಲರದುದ ಮುಂ
ಕೊಂಡೊತ್ತಿ ನಡಸಿದ ಫೌಜ
ಸೊಂಡಿಲ ಜರಗು ಸೂಲಂಗಿರಂಚನು ಹಮ್ಮಿ
ಮಂಡಲವದುರೆ ನಡದುದು ॥೭೩॥

ಮುಗಿಲು ಮೋಡವು ನಡೆಗೊಂಡಂತೆ ನಡದುದು
ಬಗೆಬಗೆ ಭೇರಿ ನಾದಿಸುತ

ನೆಗೆದನೆಜೆಯವೆತ್ತಿದವು ಪತಾಕೆಯು
ನೆಗದವನಂತನೇನೆಂಬೆ ॥೭೪॥

ಉರುಬಿದಾನೆಯ ಫೌಜನು ಕಂಡನು ಧಳ
ದೆರೆಯನು ಕೈಕೊಂಡು ನಡೆಯೆ
ಇರಿದಾಡಿದವು ಮದಸೊಕ್ಕಿದು ಭಯ ಕರಿ
ಗಿರಿಗಿರಿ ಹಳಚುವಂದದಲಿ ॥೭೫॥

ರಾಯ ಮೂದಲಿಸಲಿ ಒಮ್ಮೆ ಕವಿದುದು
ಪಾಯದಳವು ಆನೆ ಕುದುರೆ
ಗಾಯವಡದು ಭಟರುಗಳು ಹಿಮ್ಮೆಟ್ಟಿತು
ನಾಯಕ ಮಕ್ಕಳೆಲ್ಲಳುಕಿ ॥೭೬॥

ಅಡ್ಡಲಾಗುತ ತಡತಡದುಕೊಳುತಲಿ ಬಂ
ದೊಡ್ಡರಸಿಯೆ ಹೋಗಗೊಡದ
ದೊಡ್ಡದೊಡ್ಡಿಯರು ಕೊಂಡಾಡುತ ಗುಡ್ಡವ
ಅಡ್ಡದಿನಾಂತುಕೊಂಬಂತೆ ॥೭೭॥

ಬಿರುದಿನ ಹರಿಗೆಕಾರರು ಕೊಡಿಕೊಡಿಯ
ಲುರವಣಿಸಿಯೆ ಚಾರಿವರಿದು
ಇರಿದು ಕಡಿದು ಬಾಗಿಸಿ ಹೊಯಿಲೊಡ್ಡುತ
ಗರುಡನಂದದಲೆರಗುತಲಿ ॥೭೮॥

ಹೆಬ್ಬುಲಿಯಂತೆ ಲೆಂಗಿಸಿ ಚಿನ್ನ ಬೆಳ್ಳಿಯ
ಗುಬ್ಬಿಯ ಹರಿಗೆಯ ಭಟರು
ಹುಬ್ಬಿ ಹೊಯ್ದು ಹರಡಿ ಕೊಚ್ಚುವ ಕೋಣ
ಗಬ್ಬಿಯಕ್ಕಲನೆಂದು ಮಲದು ॥೭೯॥

ಮಲವರು ಗೂಳಿಯಂದದಿ ಮದಗಜಗಳ
ತಲೆಗಡಿವರು ಹತ್ತಿ ಇಳಿದು
ನೆಲನಾಳ್ದನ ಮೂದಲಿಸುತ ನೋಡೆಂದು
ಬಲಗೊಲೆಗಳ ಕೊಂದು ಕೊಲುತ ॥೮೦॥

ಹವಣುರುವರಿಸಿ ಉರುಬಿ ನೂಕಿ ಬಂದುದು
ಭುವನಾಕ್ಷಿ ಅಷ್ಟದಿಕ್ಕಿನಲಿ
ಕವಿದು ಕಾದುತಲುಡು ಮುತ್ತಿಗೆ ಹಾಕಿದ
ಕವಿಕುಲರಾಯನೇನೆಂಬೆ ॥೮೧॥

ಅಷ್ಟದಿಕ್ಕಿನಲಿಯಾಲಿಡುತ್ತಿರಲೆಲ್ಲ
ಪಟ್ಟದುಭಯ ದಳವನು
ದಿಟ್ಟರು ಕಗ್ಗೊಲೆಯ ಬಿದ್ದು ಕಡಿಯೆಂಬ
ಕಟ್ಟಳೆಗಾಯು ಸಂಧಿಗಳು ॥೮೨॥

ಸೊಡರ್ಗುಡಿವೆಳಗಿನ ಮೈಗಣ್ಣನೇ ನಿಡು
ಜಡೆನಡುನೆತ್ತಿಗಡಲಿನ
ತಡಿಯುಡುರಾಜ ರಾಜೀವಸಖನ ತಾಳ್ದ
ಅಡಿಗಣ್ಣ ಸಲಹು ಸಜ್ಜನರ ॥೮೩॥

ಅಂತುಸಂಧಿ ೬ ಕ್ಕಂ ಪದನು ೬೭೧ ಕ್ಕ
ಮಂಗಳಮಹಾಶ್ರೀ

ಸಂಧಿ : ಏಳು

ಮುಂದಣ ಸಂಧಿಯ ಕಥೆಯೆಂತೆನೆ ಪೇಳ್ದ
ಚಂದ್ರಾಕರನು ಹೇಮಲತೆಯು
ತಂದೆ ತಾಯನು ಕಂಡು ಶಿವಪುರಕ್ಕೈದಿದ
ಅಂದವನೊಲಿದಾಲಿಪುದು ॥೧॥

ಕಗ್ಗೊಲೆಯ ಕಡಿದಿರಿದಾಳು ಕುದುರೆಯು
ನುಗ್ಗುಮಾಡಿಯೆ ಹಗಲಿರುಳು
ಮಗ್ಗಿಸುತಿರೆ ಮನ್ನೆಮನ್ನೆಯರಿಗೆ ಹಂಚಿ
ಲಗ್ಗೆಗೆ ಬಿಡಿಸಿದ ರಾಯಾ ॥೨॥

ಅಡರಿದರಷ್ಟದಿಕ್ಕಿಲಿ ಬಂಟುರುಬಿತು
ಒಡೆಯನ ಬೆರಳಸನ್ನೆಯಲಿ
ಕೆಡೆಕೆಡೆಯೆನುತ ಹತ್ತಿದರು ಮುಂದಲೆಗಳ
ಹಿಡಿದಿರಿದಾಡಿದರಲ್ಲಿ ॥೩॥

ಕೊತ್ತಳಗಳನ್ನೆಲ್ಲ ಕೆಡಹಿ ಕೋಟೆಗಳನು
ಹತ್ತಿ ಲೆಂಗಿಸುವರನಿರಿದು
ಹೊತ್ತುಗಲ್ಲೆತ್ತುಗಲ್ಲುಗಳನು ಹಾಕಲಿ
ನೆತ್ತರು ಮಿದುಳೊಕ್ಕಾಡಿದವು ॥೪॥

ಕಾಸಿಹೊಯಿವ ಮಳಲ್ಬಿಸುಗೊಂಡಿಯ ಹಗ್ಗ
ಸೂಸುವ ಕದಡು ಕಾದೆಣ್ಣೆ
ಹೇಸದೆಯಿರಿದು ಕೆಡಹಿ ನೂಕಿನೂಕಲು
ಘಾಸಿಯಾಯಿತು ಪಾಯದಳವು ॥೫॥

ನೆಲನಾಳ್ದನು ಕೈಕೊಂಡು ನಡದನಾಗ
ತಲೆವರಿಗೆಯ ಹೊತ್ತು ಭಟರು
ಬಳಸಿಲಿ ಡಗ್ಗೆ ಬದ್ದರಿಕೆ ಚಪ್ಪರಗೋಂಟೆ
ಹಳಚಿ ನಡದುದನೇನೆಂಬೆ ॥೬॥

ಕೋಟೆಗೆ ಉರುಲು ಮಿಣಿಯ ಹಾಕಿಹತ್ತೇರಿ
ದಾಟಿ ನಿಚ್ಚಣಿಕಿಂದ ನೆಗದು
ದೂಟಿಸಿ ಪಂದಿ ಹಟ್ಟುಗಳಿಂದಲಿರಿದೆತ್ತಿ
ಮೀಟಿನ ಭಟರ ಕಾಳಗವು ॥೭॥

ಕಿತ್ತಕಠಾರವ ಹೊತ್ತು ಅಡರಿ ಕೋಟೆ
ಹತ್ತಿ ಅಲ್ಲಿಟ್ಟು ಪಂಥದಲಿ
ಕೊತ್ತಳಕೊತ್ತಳಗಳ ಕೆಡಹಲಿ ಆಗ
ನೆತ್ತರುವಡಗಲಸಿದವು ॥೮॥

ಪೆಟಲು ಡೆಂಕಿಣಿಗಳದಟು ನಿಲಗುಡದಲಿ
ನಿಟಿಲವಡದು ತಲೆಹರಿದು
ಭಟರು ಅಳಕುವಂತೆ ಕೊಂದುಕೂಗುವರಾ
ರ್ಭಟೆಯ ನಾನದೇನ ಹೇಳುವೆನು ॥೯॥

ಹೆಬ್ಬಾಗಿಲ ಮುರಿವರು ಬೀಯ್ಯಗಗಡಿ
ದಬ್ಬರಿಸೆಂಟು ದೆಸೆಯೊಳು
ಬೊಬ್ಬಿರಿದುಬ್ಬಿಬಲುಬ್ಬಸವಾಗೆ ರಾಯನು
ಹೆಬ್ಬುಲಿಹೊರಟ ಕಾಳಗಕೆ ॥೧೦॥

ರಾಯನುಗ್ರವನರಿದನು ಮಂತ್ರಿಯು ವಳ
ಲಾಯದ ಕುದುರೆಯತರಿಸಿ
ಆಯತಮಾಡಿ ರಾಹುತ ರಾಯಮನ್ನೆಯ
ನಾಯಕ ಮಕ್ಕಳಿಗಿತ್ತಾ ॥೧೧॥

ಮಲೆಯಾಳ ಮನ್ನೆಯ ಗಂಗೆನಾಯಕ ಬಂದ
ದಳದುಳಿರುಳ ಸಿಂಗವನು
ಅಳವುಳ್ಳ ತಿಗುಳನಲ್ಲಾಳನೈದಿದನು
ತಳುವೇಕೆಯೆನುತ ಪಂಥದಲಿ ॥೧೨॥

ಬಲುಭುಜ ವಿಕ್ರಮ ಬಂದುನಿಂದನು ಮುಂದೆ
ತೆಲುಗಮನ್ನೆಯ ಜನ್ನೆನಾಯ್ಕ
ನೆಲಗುಡ್ಡ ತೊಲಗದ ಕಂಬಶಂಭವನೆಂಬ
ಬಲುಬಲದದಟಿನೊಡ್ಡಿಯರು ॥೧೩॥

ದೋಖಂಡೆಯನೆಜೆಯಗಳುಗುರನಿಂದ
ಜೋಕೆಯ ತುರುಕ ರಾಹುತರು
ಭೀಕರದಿಂಮದಸೊಕ್ಕಿಲಾ ಹರಿಗಳ
ಲಾ ಖಾನ ಮಲ್ಲುಕನಿಂದ ॥೧೪॥

ಏರಿಯಶ್ವದಳವ ಕೂಡಿಕೊಂಡಾಗ
ದಾರಿಗೊಡದ ರಾಯನಿದಿರಾ
ಸೇರುವೆಯಲಿ ಕೊಂಕುಳಿಗ ಹೆಬ್ಬುಲಿಗನು
ಭಾರಿಯ ಭುಜದದಟಿನಲಿ ॥೧೫॥

ಗುಜ್ಜರದೇಶ ಮಹರಾಷ್ಟ್ರ ಸೀಮೆಯರಲ್ಲಿ
ಮಜ್ಜರೆ ಅರಿರಾಯನಿದಿರಾ
ಗೆಜ್ಜೆಯ ಹರಿಗೆಯ ತುಳುವಮನ್ನೆಯರಿಂದ
ಹೆಜ್ಜಿಡಗುಡದ ಮುಂದಣಿಗೆ ॥೧೬॥

ಮುಟ್ಟುಸಂಜೋಗದ ಕುದುರೆಗಳನುವಾಗೆ
ಬೆಟ್ಟದಂದದಿಐಂಚು ಹಮ್ಮಿ
ದಟ್ಟಿಸಿ ನಡವಾನೆಯಡಬಲದಲಿ ಮನ್ನ
ಪಟ್ಟದರಸು ಹೊರವಂಟಾ ॥೧೭॥

ಇಳಿಯಗುಟ್ಟಿದ ಕೋಟೆಗಡರಿದರನು ಹೊರ
ವಳಯದ ದಳವ ನೋಡಿದನು
ಬಳಸಿದೆ ಬಹಳವೆನುತ ರಾಯ ರಥವೇರಿ
ಯಳವ ನೋಡಿದ ತೇಜಿಗಳಾ ॥೧೮॥

ಕುಣಿಸಿ ನಡಸಿದ ಸಾರಥಿ ವಾರುವಗಳು
ಜಣರೆಂದುಲಿವ ಕಾಲಕಡೆಯ
ರಣಕಿದಿರಾದನ ಪರರಾಯ ಕಂಡನು
ಹೆಣಕೆಯರಸುಗಳ ಕರದ ॥೧೯॥

ಹೊಡಸಿದ ಸನ್ನೆಯ ಭೇರಿ ತಂಬಟಗಳ
ನಡಸಿದ ರಥ ತುರಗವನು
ಫಡಫಡ ತೊಲಗೆಂಬ ಕಹಳೆಯೊದಱಲು ಬಿಲು
ದುಡುಕಿದ ರಾಯ ಕಾಳಗಕೆ ॥೨೦॥

ಪರರಾಯನ ಬರವನು ಕಂಡನು ಮಂತ್ರಿ
ದೊರೆದೊಱೆಗಳು ಕೈಕೊಂಡು
ತುರಗವನುಬ್ಬಿವಾಗ್ಯವ ಸಡಿಲಡರಿತು
ವರಕವಾಳರು ಬಡಿವುತಲಿ ॥೨೧॥

ಆನೆಗಾನೆಯು ಕುದುರೆಗೆ ಕುದುರೆಯು ಬಲು
ಸೇನೆ ಸೇನೆಗೆ ರಥ ರಥವು
ಏನಹೇಳುವೆ ಕೈಕೊಂಡಿತುಭಯದಳ
ಭಾನುಕುಲದರ ಸನ್ನೆಯಲಿ ॥೨೨॥

ಕಡಿದರು ಖಂಡೆಯಗಳಲಿ ತುಂಡುಗಳಲಿ
ಹಿಡಿಭಲ್ಲೆಯಗಳಿಂದಿರಿದು
ನಡುತೊಡೆಯ ಮುರಿಹೊಯಿದು ಲಾಗಿಸಿ ಗದೆ
ವಿಡಿದಬ್ಬರಿಸಿ ರಾಹುತರು ॥೨೩॥

ಇಟ್ಟೆ ಬಟ್ಟೆ ವಜ್ರಮುಷ್ಟಿ ಮುಸುಂಡಿಯು
ಪಟ್ಟೆ ಕಕ್ಕಡೆ ಮಾರಿಮುಖವು
ಬೆಟ್ಟೆಯಲು ಉಡೆ ಕಬ್ಬುನಗೋಲುಗಳಿಂದ
ದಿಟ್ಟರಾಹುತರೆರಗಿದರು ॥೨೪॥

ರಥವ ಮೇಳೈಸಿ ಸಾರಥಿ ವಾಜಿಮುಟ್ಟಲಿ
ಅತಿವೇಗಭೂಮಿ ಖೇಚರಕೆ
ಪಥನೆರೆಯದೆವಾಹಿ ಬೇಗಲೈದಿದರತಿ
ರಥರ ಮೂದಲಿಸುತ ರಾಯಾ ॥೨೫॥

ಬಿಲ್ಲರ್ಘೋವಡೆಯಲಿ ತಲ್ಲಣಿಸಿದರತಿ
ಬಲ್ಲಿದರಿನಿಸು ಬಲವು
ಎಲ್ಲೆಣ್ದೆಸೆ ಬೆಚ್ಚೆ ಮುನ್ನೀರು ತುಳುಕಲಿ
ಕಲ್ಲಗಿಜಿಗಳು ದುರಿದವು ॥೨೬॥

ತಿರುವಿಗಂಬನೆ ತೊಡಿಸಿಯೆ ಬಿಡಲಾಗಸ
ತರಣಿಯ ಮುಸುಕಿ ಮೇಘದಲಿ
ಹರಿದು ಸರಳು ಬ್ರಹ್ಮಾಂಡವ ತುಡುಕಲಿ
ಪುರದರಾಯನು ಬೆದರಿದನು ॥೨೭॥

ಸತ್ತರೆಸಾವೆನೆನುತ ಭಕ್ತಿರೂಪನು
ಮತ್ತೆ ರಥವನು ಮೇಳೈಸಿ
ಹತ್ತಿನಡಸಿ ಸಚಿವನು ಕಂಡು ಭೂಪಾಲ
ಚಿತ್ತೈಸೆನ್ನ ಬಿನ್ನಪವಾ ॥೨೮॥

ಪಂಥವು ಬೇಡರಿರಾಯನೊಡನೆ ತಳ
ತಂತ್ರಮಾರ್ಬಲವಳವಲ್ಲಾ
ಸಂತವ ಮಾಡಿಕೊಂಬುದು ಕರಲೇಸೆಂದು
ಮಂತ್ರಿಯು ನಿಂದು ಬಿನ್ನೈಸಿ ॥೨೯॥

ಗುಡಿಗಟ್ಟಿ ಕಾಬೆನೆನುತ ಮಂತ್ರೀಶನು
ನಡದನು ಪರರಾಯನೆಡೆಗೆ
ಉಡುಗೊರೆಯನೆ ಕೊಂಡುಬರೆ ಹೇಮಲತೆ ಕೇಳಿ
ನುಡಿಸಿದೊ ಚಂದ್ರಾಕರನಾ ॥೩೦॥

ನಿಮ್ಮಯ್ಯನು ಬಂದಪನು ಚಂದ್ರಾಕರ
ಹಮ್ಮಿಲ್ಲಿರದೆಯಿದಿರೇಳು
ಧರ್ಮದ ಹಾದಿ ಪಾಪಗಳಿಗಂಜುವದೆನೆ
ಗಮ್ಮನಿರ್ವರು ನಡೆಗೊಳಲಿ ॥೩೧॥

ಕಾಣಿಕೆಯಿತ್ತು ಮೈದೋರಿ ಕಂಡನು ಮಂತ್ರಿ
ಬಾಣವೈದನ ಕಳೆ ಹೊಳವಾ
ಏಣಾಕ್ಷಿ ಹೇಮಲತೆಯು ಅಹುದೋಹಾ
ಪ್ರಾಣ ಬಂದೆಂತಾಯಿತಾಗ ॥೩೨॥

ಚೆನ್ನಿಗನೆ ಹಾ ಚೆಲುವ ಶಿರೋಮಣಿ
ಮುನ್ನೀರ ಗುಣ ನೆರೆ ಭಕ್ತಿ
ನಿನ್ನಯನಾರವೆನುತ ಮಂತ್ರಿಯಪ್ಪಿದ
ತನ್ನ ಮಗನ ಹರುಷದಲಿ ॥೩೩॥

ಅಪ್ಪಿದನಾ ಸಂತೋಷದಲಿ ಪಿತನು ಕಂ
ದರ್ಪನ ಸಮನೆನ್ನನಗಲಿ
ಇಪ್ಪರೆ ಹೇಗೆಯೆನ್ನೊಡಲೊಳು ಕೆಂಡವ
ಕುಪ್ಪೆಯಿಕ್ಕಿದೆಯೆಂದು ಮರುಗಿ ॥೩೪॥

ಭಕ್ತಿರೂಪನುಯೆಯ್ತಂದನಾಗಲಿ ತನ್ನ
ಹೆತ್ತ ಮಗಳ ವಾರ್ತೆಗೇಳಿ
ಸತ್ತಜೀವವು ಮಗುಳೊಗದಂತಾಯಿತು
ಅರ್ತಿಯನೇನ ಬಣ್ಣಿಸುವೆ ॥೩೫॥

ಮಗಳ ತರ್ಕೈಸಿಕೊಂಡತ್ತು ಭೂಪನುಯೆ
ನ್ನಗಲುವರೆ ಹೇಮಲತೆಯೆ
ನಗೆಗುಂದಿಸಿದೆಯಕಟ ನಿನ್ನ ಕಾಣದೆ
ಹೊಗೆಗೊಂಡಮುಖವಾದುದೆನ್ನ ॥೩೬॥

ಪ್ರಾಣವಿಲ್ಲದ ಕಾಯ ರಾಣಿಯಿಲ್ಲದ ಭೋಗ
ಕ್ಷೋಣಿಗೆ ಭಾನುಯಿಲ್ಲದಲಿ
ಏಣಲೋಚನೆ ಹೇಮಲತೆ ಚಂದ್ರಾಕರ
ಜಾಣನಿಲ್ಲದ ರಾಜ್ಯವಹುದೆ ॥೩೭॥

ಎಂದು ಹೊಗಳುತೆ ಸರ್ವರೆಲ್ಲರು ರಾಯ
ಚಂದ್ರಾಕರನ ತರ್ಕೈಸಿ
ನಂದನೆಯನು ಅಪ್ಪಿ ಮುಂಡಾಡಿ ರಾಯನು
ಹಿಂದಾದ ಹದನ ಕೇಳಿದನು ॥೩೮॥

ಹೇಳಿದರವರೀರ್ವರು ತಾವು ರಾಜ್ಯವ
ನಾಳಿದಬಗೆಯ ವಿಸ್ತರಿಸಿ
ಕೇಳಿದ ತಂದೆತಾಯಿಗಳು ಸಂತೋಷವ
ತಾಳಿಯೆ ತಮ್ಮೊಳಗಿರ್ದಾ ॥೩೯॥

ಮನ್ನೆಯರಿಗೆ ಪಡಿಬಿಡಾರಗಳ ಮಾಡಿಸಿ
ತನ್ನಪಟ್ಟಣದೊಳಗಿರಿಸಿ
ಉನ್ನತದುತ್ಸಾಹದೊಳಿರುತಿರ್ದರ
ನನ್ನಿವಂತರುಗಳೇನೆಂಬೆ ॥೪೦॥

ಪೃಥ್ವೀಶ ಕರದ ಚಂದ್ರಾಕರನನು ಆಗ
ಪುತ್ರಿಯನಾ ಮನಸಂದು
ಅರ್ತಿಮದುವೆಯಿಂದಿರಿಯೆಂದು ಸೇಸೆಯ
ತೆತ್ತ ಸುಮೂರ್ತ ಮಂಗಲವಾ ॥೪೧॥

ಪಟ್ಟಾಭಿಷೇಕ ಹೊಂಗದ್ದುಗೆಯನೆಯಿತ್ತು
ಕೊಟ್ಟನು ಪೀಳಿಗೆ ಮುಡಿಯಾ
ಸೃಷ್ಟಿಯೆಲ್ಲಕೆ ಕಟ್ಟೊಡೆಯನು ನೀನೆಂದು
ಯಿಟ್ಟನು ಕಾಣಿಕೆಯೊಲಿದು ॥೪೨॥

ದೊರೆದೊರೆಗಳು ಕಾಣಿಕೆಯನಿಕ್ಕಿದರಾಗ
ಎರಡು ದೇಶಕೆ ರಾಯನೆಂದು
ಅರಸುಮಕ್ಕಳನೆಲ್ಲರ ಕಳುಹಲಿಕಾಗ
ಹರದುದು ತಮತಮಗಾಗ ॥೪೩॥

ಉಭಯದೇಶಾಧಿಪತಿಯು ಚಂದ್ರಾಕರ
ಶುಭದಲಿ ರಾಜ್ಯವಾಳಲಿಕೆ
ಅಭಯವ ಕೊಟ್ಟು ಕಳುಹಿದ ಗಾಂಧರ್ವರ
ಸಭೆಗೆ ತಹೆನು ಶಿವನೆಂದು ॥೪೪॥

ಚಂದ್ರಾಕರ ಹೇಮಲತೆ ನಿದ್ರೈಯಲಿ

ಅಂದಿನಿರುಳು ಸ್ವಪ್ನದಲಿ
ನಂದಿವಾಹನನು ನಿರೂಪಿಸಲಿ ಯೋಚಿಸಿದರು
ಹಿಂದಣ ವೃತ್ತಾಂತವನು ॥೪೫॥

ಜಾತಿಸ್ಮರತ್ವವ ಯೋಚಿಸಿ ಜ್ಞಾನದಿ
ಭೂತಳಪತಿ ಚಂದ್ರಾಕರನು
ಭೂತೇಶನಲ್ಲಿಗೈದುವೆನೆಂದು ಮನಗೊಂಡು
ಪ್ರೀತಿಯಿಂದೊರದನಾ ಸತಿಗೆ ॥೪೬॥

ಹೇಮಲತೆಯೆ ಕೇಳು ಸೋಮಧರನ ಸಭೆ
ಗಾಮನಹರಿವುದೆಂದೆನುತಾ
ಕೋಮಲೆ ಗಾಂಧರ್ವರೊಳು ಸುಖವಿಹೆನೆಂದು
ಭೂಮಿಯೊಳೇನುಂಟು ನಮಗೆ ॥೪೭॥

ಎನುತ ಹಂಬಲಿಸಿಯೆ ತೆರಳಿದರಾಗಲೆ
ವನಿತೆಯರು ಮೂವರು ಸಹಿತಾ
ತನಗೆ ಸಖಿಯು ಹೇಮಲತೆ ವಿಳಾಸಿನಿಗೂಡಿ
ಮನಸಿಜಾರಿಯುಯಿದ್ದನಿಳೆಗೆ ॥೪೮॥

ಭೂಕಾಂತಿಯಿಂದಲೆಯಿದು ಬರುತಲಿ ಮುಂದೆ
ಲೋಕಲೋಕವ ಕಳಿವುತಲಿ
ಏಕೋದೇವನಿಷ್ಟಕರೈತಂದರು
ಆ ಕೈಲಾಸ ಸನ್ನಿಧಿಗೆ ॥೪೯॥

ನಂದೀಶ್ವರನ ಬಾಗಿಲ ಹೊಕ್ಕು ನಡದರು
ಮುಂದಿನ್ನು ರುದ್ರಗನ್ನೆಯರು
ಬಂದುದನರಿತು ಕಳಸ ಕನ್ನಡಿಯಲಿ
ಛಂದದಲಿದಿರಲೈದಿದರು ॥೫೦॥

ನಾನಾವಾದ್ಯಗಳಲಿಯಿದಿರ್ಗೊಂಡರು
ಭಾನುತೇಜನ ಸನ್ನಿಧಿಗೆ
ಮಾನಿನಿಯರು ಚಂದ್ರಾಕರ ಸಹಿತಲಿ
ಮೇನಕಾತ್ಮಜೆವರನಡಿಯಾ ॥೫೧॥

ಕಾಣುತ ಮೈಯಿಕ್ಕಲಿಯೀಶ್ವರ ಕಂಡು
ಯೇಣಲೋಚನೆಯರೈವರನು
ಕ್ಷೋಣಿಪ ಚಂದ್ರಾಕರ ಬಂದುದನಾಗ
ರಾಣಿಗರುಹಿದಾ ಶಿವನು ॥೫೨॥

ಗಿರಿಜೆ ಕೇಳಿವರು ಗಂಧರ್ವರು ಎಮ್ಮಯ
ನಿರುಪದಿ ಜನಿಸಿ ಧರೆಯೊಳು
ಇರುತಿರಲಿಲ್ಲಿಗೆಯಿತಂದರೆನುತ ಚಂದ್ರಾ
ಕರನ ಮೈದಡಹಿದನಾ ಶಿವನು ॥೫೩॥

ಬಳಲಿದಿರೈ ಭೂತಕಳಕೆಡೆಯಾಡಿಯೆ
ಕೆಳದಿಯಗೂಡಿ ನಮ್ಮಿಂದಾ
ಕುಳಿತು ಸುಖದಿಯಿರಿಯೆನುತ ಗಾಂಧರ್ವರ
ಬಳಿಯ ಬಿಡಾರ ಮಾಡಿಸಿದಾ ॥೫೪॥

ಈಶನೊಪ್ಪಿದ ಪರಮೇಶನೊಪ್ಪಿದ
ಸರ್ವೇಶನೊಪ್ಪಿದ ಹೇಮಶೈಲಾ
ವಾಸನೊಪ್ಪಿದ ವಾಸುಕಂಕಣನೊಪ್ಪಿದ
ಶಾಶ್ವತ ಶಿವನೊಪ್ಪಿದನು ॥೫೫॥

ಮನ್ಮಥಮುಕುರವನಿನ್ನಾರು ಕೇಳ್ದರೆ
ಹೊನ್ನು ಧಾನ್ಯವು ಘನವಹುದು
ಕನ್ನೇರು ಪುತ್ರರು ಹೆಚ್ಚುಗೆ ಶಿವನ
ಸನ್ನಿಧಿಯಿಷ್ಟಪದವು ॥೫೬॥

ಲಾಲಿಸಿದರೆ ಓದಿದರೆ ಬರದರಿಗೆ
ಶೂಲಿಯು ಬೇಡಿದನೀವಾ
ಭಾಳಾಕ್ಷನ ನಿರೂಪವೆ ತಾನಿದು
ನಾನು ಹೇಳಿದ ಮಾತಲ್ಲ ॥೫೭॥

ಮದನಾರಿಯು ತ್ರಿಯಂಬಕನ ಕಾರುಣ್ಯದಿ
ಗದುಗಿನ ಗು[ಂ]ಡಿಶೆಟ್ಟಿಯರು
ಮುದದಿಂದ ಪೇಳ್ದನು ಮನ್ಮಥಮುಕುರವ
ಇದ ಕೇಳ್ದರೆ ಶಿವನೊಲಿವಾ ॥೫೮॥

ಹರ ಜಯಕರುಣಾಕರ ಜಯ ಭಕ್ತರ
ದುರಿತವಿಪಿನವಹ್ನಿಯೆನಿಪ
ಹರಿಸುರಮುನಿಗಳೊಂದಿತ ಪಾದಪಂಕಜ
ಪರಮಗುರುವೆ ಜಯ ಜಯತು ॥೫೯॥

ಏಳು ಸಂದೊಳಗಾಗಿ ಪೇಳಿದೆನಱುನೂರ
ಮೇಲೆ ಮೂವತ್ತೈದನೆಣಿಸಿ
ಶೂಲಿಯ ಚರಣಕರ್ಪಿತವಾದ
ಪದಸ್ತುತಿ ಲಾಲಿಸುವದು ಭಕ್ತಜನರು ॥೬೦॥

ಭಕ್ತರ ದುರಿತಕುಮುದ ಮಾರ್ತಾಂಡನೆ
ನಿತ್ಯಾನಂದ ನಿರ್ಭಯನೆ
ಕರ್ತುವೆಯೀರೇಳುಭುವನ ರಕ್ಷಾಮಣಿ
ಮೃತ್ಯುಂಜಯ ಜಯ ಜಯತು ॥೬೧॥

ತ್ರಾಹಿ ಪಂಚಾನನ ದಶಭುಜ ಫಣಿಕರ್ಣ
ತ್ರಾಹಿಕ ಪರ್ದಿ ತ್ರಿಶೂಲಿ
ತ್ರಾಹಿ ಬಾಳಾಂಬಕ ಭಕ್ತವತ್ಸಲ ಶಂಭು
ತ್ರಾಹಿ ಶಂಕರ ಶಾಂತಗುರುವೆ ॥೬೨॥

ಶರಣು ಸರ್ವೇಶ ಭವವಾರಿಧಿ ವಡಬಾಗ್ನಿ
ಶರಣು ಭಕ್ತರ ಭಾಗ್ಯನಿಧಿಯೆ
ಶರಣು ಈರೇಳು ಭುವನ ರಕ್ಷಾಮಣಿ
ಶರಣು ಸಂಗಮನಾಥ ಗುರುವೆ ॥೬೩॥

ಅಂತು ಸಂಧಿ ೭ ಕ್ಕಂ ಪದನು ೬೩೪ ಕ್ಕಂ
ಮಂಗಳಮಹಾಶ್ರೀ

ಅನುಬಂಧ

ತ್ರಿಪುರದಹನ ಸಾಂಗತ್ಯ

೧. ಪದ್ಯಗಳ ಅಕಾರಾದಿ

ಅ–ಆ

ಅಂಜಬೇಡಿನ್ನು ಭಂಜಿಸುವೆನು ಕಳ್ಳರ	೨–೧೩೫
ಅಂತಕನುಂತಕ ಕೈಗೆಜಗುವ ಖಗ	೪–೧೩೧
ಅಂತಿಂತು ಪೇಳುವ ಸಂದೇಹ ಕವಿಗಳ	೧–೧೫
ಅಂಧ[ಕಾ]ಸುರ ತಿಮಿರಾರ್ಕ ಪಿನಾಕಿ	೧–೫
ಅಂಬಂಬನೀದುದೊ ಅಂಬಿನಂಬುಧಿಯೊ	೪–೮೫
ಅಂಬರದಲಿ ಸಂಭ್ರಮದೊಳಗಾಡುವ	೩–೧೧೧
ಅಂಬರದೊಳಗಿಹ ಶಿವದ್ರೋಹಿಗಳ ಕಂಡು	೫–೫೨
ಅಂಬಿನಂಬುಧಿಯೊಳು ಮುಳುಗಿದನೋ ದೇವ	೪–೨೦೭
ಅಂಬುಜಮುಖಿ ಕೇಳು ಹಣವಿಲ್ಲದವ ಹೆಣ	೧–೧೯೫
ಅಕಟಕಟಮರರೈಶ್ವರಿಯು ಹೋಯಿತುಯೆಂದು	೧೩೪
ಅಕ್ಕ ಕೇಳೌ ಮಕರಾಂಕನ ಬಾಣಕೆ	೧–೨೪೨
ಅಕ್ಕಕ್ಕ ಪೊಸನಲ್ಲ ಬಂದನೊತ್ತೆಯ ಪಿಡಿ	೧–೧೮೯
ಅಕ್ಕಟ ಕುಟಿಲ ನಾಯಕರೆ ಮಗಳು ಮನ	೧–೨೦೯
ಅಕ್ಕಟ ಜಂಭನು ಸಿಕ್ಕಿದನೆಂದುಜ಼್	೪–೧೯೯
ಅಕ್ಕಟ ನಂದಿಕೇಶ್ವರನು ತುತ್ತಾದನು	೪–೧೮೭
ಅಕ್ಷರತ್ರಯ ಲೋಕ ಶಿಕ್ಷರಕ್ಷಕ	೧–೨
ಅಗಿವ ಗುದ್ದಲಿ ತೂಱುವ ಮೊಱ ಸರಬೊಂಬೆ	೩–೧೫೪
ಅಗ್ಗದ ರಥಿಕರ ವಗ್ಗ ಮುಱಿದು ಸಲೆ	೪–೨೧೧
ಅಜನ ಭಜಿಪಡಾವ ಠಾವೆಂದು ಕೇಳಲು	೧–೪೪
ಅಡವಿಯ ಗಿಡುವನು ಸುಡುವರೆ ವೃಕ್ಷದ	೧–೪೦
ಅಡಿಗಳನೂರ್ಧ್ವ[ಕೆ] ನೆಗಹಿ ಸೂಜಿಯಮೇಲೆ	೧–೯೦
ಅಡಿಗಳನೂರ್ಧ್ವಕೆ ನೆಗಹಿ ಸೂಜಿಯ ಮೇಲೆ	೧–೯೭
ಅಡಿಯಿಡಲಸುರರೋಲಗದಿ ಹೋಹೋಯೆಂದು	೨–೪೫

ಇ-ಈ

ಗ–ಘ

ಚ–ಛ

ಜ–ಝ

ಪ–ಫ

ಬ-ಭ

ಯ–ರ

❖❖

ಕಠಿಣ ಪದಕೋಶ

ಅ–ಆ

ಅಂಗಜ(೧–೧೫೦)ಕಾಮ

ಅಂಗಜಚಾಪ(೩–೩)ಕಾಮನಬಿಲ್ಲು

ಅಂಘ್ರಿ(೧–೩)ಪಾದ

ಅಂಚೆ(೨–೭೧)ಹಂಸ

ಅಂಡಲೆ(೧–೬೩)ಪೀಡಿಸು, ಕಾಡು

ಅಂತಕ(೪–೧೩೧)ಯಮ

ಅಂಬಕತ್ರಯ(೫–೧೬೬)ಮೂರುಕಣ್ಣುಳ್ಳವ, ಶಿವ

ಅಂಬರ(೧–೧೦೭)ಆಕಾಶ

ಅಂಬಿಕೆಪತಿ(೩–೧೧೧)ಶಿವ

ಅಂಬಿನಂಬುಧಿ(೪–೮೩)ಬಾಣಗಳ ಸಮುದ್ರ

ಅಂಬು(೧–೩೩)ಬಾಣ

ಅಂಬುಜ(೧–೧)ನೀರಲ್ಲಿಹುಟ್ಟಿದ್ದು, ಕಮಲ

ಅಕ್ಕರು(೧–೭)ಪ್ರೀತಿ

ಅಗಜಾಧಿಪತಿ(೪–೧೧೬)ಶಿವ

ಅಗಜೆ(೨–೧೧೫)ಪಾರ್ವತಿ

ಅಗಿ(೧–೭೯)ತಿನ್ನು

ಅಚ್ಯುತ(೧–೧೦೫)ವಿಷ್ಣು

ಅಜ(೧–೧೦೦)ಬ್ರಹ್ಮ

ಅಜ(೧–ವೃ)ಹುಟ್ಟಿದ

ಅಜನರಾಣಿ(೧–೮)ಬ್ರಹ್ಮನರಾಣಿ, ಶಾರದೆ

ಅಟ್ಟುಳಿ(೨–೬೪)ಉಪಟಳ, ತೊಂದರೆ

ಅಡಿ(೧–೬)ಪಾದ

ಅಣುಗ(೩–೧೧೭)ಮಗ

ಅದಟು(೨–೯)ಶೌರ್ಯ, ಪರಾಕ್ರಮ

ಅದುಬುತ(೨–೧೪೯)ಅದ್ಭುತ

ಅದ್ರಿಜೆ(೨ ವೃ)ಪರ್ವತರಾಜನ ಮಗಳು, ಪಾರ್ವತಿ

ಅಧರ(೧–೧೬೯)ತುಟಿ

ಅಧ್ವರ(೧–೨)ಯಜ್ಞ

ಅನಲ(೨–೧೯)ಬೆಂಕಿ

ಅನಿಮಿಷ(೩–೪೬)ದೇವತೆ

ಅನುಜ(೨–೨೧)ತಮ್ಮ

ಅನುಮಿಷ(೧–೪೧)ದೇವತೆ

ಅಸುರಾಂತಕ(೫–೧೧೨)ವಿಷ್ಣು, ರಾಕ್ಷಸ ವೈರಿ

ಅಬುಜ(೫–೧೩೬)ಅಬ್ಜ, ಕಮಲ

ಅಭಯಹಸ್ತ(೫–೩೬)ಆಶೀರ್ವಾದ, ರಕ್ಷಣೆ ನೀಡುವ ಕೈ

ಅಭವ(೨–೧೨೦)ಶಿವ

ಅಮರರು(೧–ವೃ)ದೇವತೆಗಳು

ಅರತ(೨–೧೩೩)ಬತ್ತಿದ, ಬರತ, ಬಾಡಿದ

ಅರಳು(೫–೫೫)ಹೂವು

ಅರ್ಬುದ(೪–೪)ಹತ್ತುಕೋಟಿ

ಅಲರಂಬ(೧–೧೮೬)ಕಾಮ

ಅಲರು(೧–೧೫೩)ಪುಷ್ಪ

ಅಲರಿನಂಬುಧಿ(೪–೧೯೬)ಹೂವಿನಕೊಳ

ಅಲರ್ವೀಸಣಿಗೆ(೧–೨೨೩) ಹೂವಿನ ಬೀಸಣಿಕೆ

ಅಶ್ವ(೩–೮೭)ಕುದುರೆ

ಅಷ್ಟಕುಲಪರ್ವತ(೨–೬)ಎಂಟು ಕುಲಪರ್ವತಗಳು

ಅಷ್ಟದಿಕ್ಕು(೨–೨೯)ಎಂಟುದಿಕ್ಕು

ಅಷ್ಟಯೋಗ(೧–೯೫)ಎಂಟುವಿಧದ ಯೋಗ

ಅಸಮಾಕ್ಷ(೪–೧೩೨)ಶಿವ
ಅಸವಳಿ(೪–೧೯೮)ಬಸವಳಿ, ಶಕ್ತಿಗುಂದು
ಅಸಿ(೫–೮೨)ಖಡ್ಗ
ಅಸಿಯಳು(೧–೭೫)ಹೆಂಡತಿ
ಅಸುರ(೧–೪೦)ರಾಕ್ಷಸ
ಅಸ್ತಗಿರಿ(೨–೧೫೩)ಪಶ್ಚಿಮಾದ್ರಿ
ಅಹಿ(೪–೧೯೧)ಸರ್ಪ, ಹಾವು
ಅಳಕ(೧–೨೨೮)ಮುಂಗುರುಳು, ಕೂದಲು
ಅಳವಳಿ(೧–೩೫)ಶಕ್ತಿಗುಂದು
ಅಳಿ(೧–೩೫)ಸಾಯಿ, ನಾಶವಾಗು
ಅಳುಪು(೨–೫೩)ತಪ್ಪು, ಸುಳ್ಳುಬೀಳು
ಅಳ್ಳೆದೆ(೪–೭೦)ಪುಕ್ಕಲು ಸ್ವಭಾವ
ಆಣ್ಮ(೨ ವ)ಒಡೆಯ, ಪ್ರಭು
ಆತ್ಮಜ(೧–೧೫)ಮಗ
ಆದಿತ್ಯ(೧–೪೦)ಸೂರ್ಯ
ಆನನ(೨–೧೨೭)ಮುಖ
ಆರಡಿ(೧–೨೩೦)ದುಂಬಿ, ಭ್ರಮರ
ಆರುಮೊಗದವ(೧–೨೮)ಷಣ್ಮುಖ
ಆಸ್ಯ(೧–೧)ಮುಖ
ಆಹವ(೩–೧೧೯)ಯುದ್ಧ
ಆಳುವೇರಿ(೫–೭೧)ಆಳ್ವೇರಿ, ಮಹಡಿ, ಮಾಳಿಗೆ, ಕೋಟೆಯ ಗೋಡೆ

ಇ–ಈ

ಇಂಚರ(೩–೧೧೮)ಧ್ವನಿ
ಇಂದು(೩–ವೃ)ಚಂದ್ರ
ಇಕ್ಕೆಲ(೧–೧೬೭)ಎರಡು ಬದಿ
ಇಟ್ಟಿ(೧–೭೧)ಈಟಿ, ಭರ್ಚಿ
ಇತ್ತರ(೩–೬೯)ಎರಡುಕಡೆ
ಇನಿಯ(೧–೧೦೭)ಗಂಡ
ಇಬ್ಬಗಿಯಾಗು(೪–೧೮೯)ಹೋಳಾಗು
ಇಳೆ(೧–೩೫)ಭೂಮಿ
ಈಂಟು(೩–೧೮೬)ಕುಡಿ
ಈರೇಳುಲೋಕ(೩–೧೮೦)ಹದಿನಾಲ್ಕು ಲೋಕ

ಉ–ಊ

ಉಂಗುಷ್ಠ(೧–೭೦)ಬೆರಳು
ಉಕ್ಕುಡುತೆ(೩–೧೬೧)ಒಂದು ಗುಟುಕು
ಉಗಿ(೩–೧೮೩)ಮುರಿ, ಉಗುಳು
ಉಚ್ಚಹ(೧–೧೦೫)ಉತ್ಸಾಹ
ಉಡುಪ(೧–೨೨೬)ಚಂದ್ರ
ಉಡುಪತಿ(೧–೬೩)ನಕ್ಷತ್ರಗಳ ಒಡೆಯ, ಚಂದ್ರ
ಉದಕ(೧–೧೧೩)ನೀರು
ಉಪ್ಪರಿಸು(೩–೮೬)ಜಿಗಿ, ಹಾರು
ಉಬ್ಬಟೆ(೧–೧೦೨)ಧೈರ್ಯ
ಉಮ್ಮಯ(೫–೧೫೨)ಉತ್ಸಾಹ
ಉರ(೧–೮೮)ಎದೆ
ಉರಗ(೨–೩೩)ಹಾವು
ಉರವಣಿಸು(೧–೬೫)ಹೆಚ್ಚಾಗು
ಉರವಣಿಸು(೨–೯)ಆತುರಪಡು, ಸಂಭ್ರಮಿಸು
ಉರಿಗಣ್ಣ(೨–೧೫೪)ಶಿವ
ಉರುಬು(೩–೬)ರಭಸ
ಉಱುಬು(೫–೬೪)ಮೇಲೆಬೀಳು, ಏರಿಹೋಗು
ಉಲಿ(೧–೫೧)ಕೂಗು, ಕಲರವ ಮಾಡು
ಉಸುರು(೨–೧೨೭)ಹೇಳು
ಉಟಿಗ(೨–೫೮)ಶಕುನದ ಪಕ್ಷಿ
ಊಡು(೧–೮೬)ಉಣಿಸು
ಊರು(೪–೬೨)ಕಚ್ಚು
ಊಳಿಗ(೨–೫೩)ಸೇವೆ

ಎ-ಏ-ಐ

ಎಕ್ಕಟಿಗ(೩-೧೨೭)ಗಟ್ಟಿಗ
ಎಕ್ಕಡಿಗರು(೩-೬೭)ಕಾವಲುಗಾರರು, ಅಂಗರಕ್ಷಕರು
ಎಕ್ಕಲ(೧-೬೮)ಕಾಡುಹಂದಿ
ಎಗ್ಗಳ(೨-೧೬)ಹೆಚ್ಚು
ಎಚ್ಚಣಿಸು(೩-೧೨೮)ಹಚ್ಚು, ಲೇಪಿಸು
ಎಚ್ಚಾಡು(೪-೧೨)ಹೊಡೆದಾಡು, ಕಾದಾಡು
ಎಚ್ಚು(೧-೩೩)ಹೊಡೆ
ಎಚ್ಚು(೩-೧೪)ಎಸೆದು
ಎಡರು(೫-೧೬೨)ಕಷ್ಟ, ತೊಂದರೆ
ಎದೆದಲ್ಲಣ(೧-೨೪)ಭಯಂಕರ
ಎರಳೆ(೧-೮೦)ಜಿಂಕೆ
ಎಱೆಯ(೧-೮೨)ಒಡೆಯ, ಗಂಡ
ಎವೆಹಳಚದೆ(೨-೧೨೦)ಕಣ್ಣು ಪಿಳುಕಿಸದೆ
ಎಳೆವೆಱೆ(೩-೧೧೬)ಬಾಲಚಂದ್ರ
ಏಳುಸರದಿ(೨-೧೪೯)ಏಳು ಸಮುದ್ರ
ಐಮೊಗ(೨-೫೧)ಬ್ರಹ್ಮ

ಒ-ಓ

ಒಕ್ಕಲಿಕ್ಕು(೫-೧೪೪)ತುಳಿ, ತಟ್ಟು
ಒಕ್ಕಿಲಾಡು(೪-೧೧೦)ತುಳಿದಾಡು
ಒಕ್ಕುಡುತೆ(೨-೬)ಒಂದುಬೊಗಸೆ, ಒಂದು ಗುಟುಕು
ಒಗೆ(೪-೭೬)ಹೊರಹೊಮ್ಮು
ಒಡ್ಯಾಣ(೧-೧೬೦)ನಡಪಟ್ಟಿ, ಡಾಬು
ಒರೆ(೧-೧೬)ಬರೆ, ಹೇಳು
ಒಱಲಿಸು(೪-೮೮)ಅಳಿಸು, ನೋಯಿಸು
ಒಳ್ಳೆ(೪-೭೦)ಹೊಟ್ಟೆ
ಒಳ್ಳೆಯ(೨-೫೮)ನೀರುಹಾವು
ಓವು(೫-೧೭೦)ಕಾದಾಡು, ಪ್ರೀತಿಸು

ಕ-ಖ

ಕಂಚುಕಿಯರು(೨-೧೨೫)ದ್ವಾರಪಾಲಕರು
ಕಂಜಜ(೨-೧೨೦)ಬ್ರಹ್ಮ
ಕಂಜಸಖ(೩-೫೬)ಸೂರ್ಯ
ಕಂದರ್ಪ(೧-೫)ಕಾಮ
ಕಂದರ್ಪಹರ(೧-೫)ಕಾಮನನ್ನು ಸುಟ್ಟವ, ಶಿವ
ಕಂಧರ(೧-೨೬೩)ಕಂಠ, ಕುತ್ತಿಗೆ
ಕಕ್ಕಡೆ(೫-೮೩)ಭರ್ಜಿ, ಒಂದು ಬಗೆಯ ಆಯುಧ
ಕಕ್ಕಸವಹ(೧-೨೦೧)ಕರ್ಕಸವಾದ, ಅಹಿತವಾದ
ಕಟಿ(೧-೧೫೨)ನಡು
ಕಟ್ಟಿಗೆಯವರು(೨-೪೫)ಕಾವಲುಗಾರರು
ಕಡುಗೂಪ(೧-೩೮)ಹೆಚ್ಚಾಗಿ ಪ್ರೀತಿಸುವವ
ಕದಪು(೧-೧೫೭)ಕಪೋಲ
ಕದಬು(೪-೧೯)ಒತ್ತು, ಬಲವಾಗಿ ಇರಿ
ಕದುಬು(೪-೮೭)ಸಿಟ್ಟಾಗು
ಕನಕಾದ್ರಿ(೧-೨೫)ಬಂಗಾರದ ಪರ್ವತ
ಕನಲು(೩-೧೭)ಸಿಟ್ಟಾಗು
ಕನ್ನಡವಕ್ಕಿ(೧-೧೮೯)ಗಿಳಿ
ಕಪರ್ದಿ(೩-೮೦)ಶಿವ
ಕಪಿ(೧-೪೯)ಮಂಗ
ಕಪ್ಪುಗೊರಳ(೧-೧೮)ಶಿವ
ಕಮಠ(೩-೧೧)ಆಮೆ
ಕಮಲಜ(೧-೯೫)ಬ್ರಹ್ಮ, ಕಮಲದಲ್ಲಿ ಹುಟ್ಟಿದವ
ಕಮಲನಾಭ(೫-೯೯)ಹೊಕ್ಕುಳಲ್ಲಿ ಕಮಲ ಉಳ್ಳವ, ವಿಷ್ಣು
ಕಮಲಾರಿ(೨-೧) ಕಮಲದ ವೈರಿ, ಚಂದ್ರ
ಕಯ್ದು(೫-೬೧)ಆಯುಧ

ಕರ(೧–೪)ಕೈ
ಕರವಾಳ(೫–೬೩)ಖಡ್ಗ
ಕರಿ(೪–೮)ಆನೆ
ಕರುಣಾರ್ಣವ(೫–೧೪೯)ಕರುಣಾ ಸಾಗರ
ಕರೆಕಂಠ(೩–೬)ಕಪ್ಪುಗೊರಳ, ಶಿವ
ಕವುರಿಡು(೫–೧೩೫)ಸುಟ್ಟು ಕರಕಾಗು, ಕಪ್ಪಾಗು
ಕಳ್ಳು(೪–೧೨೭)ಹೆಂಡ
ಕಳ್ಳೇರಿದ(೫–೩೬)ನಿಶೆಯೇರಿದ, ಕಳ್ಳುಕುಡಿದ
ಕಾದು(೨–೩೯)ಹೋರಾಡು
ಕಾಮಾಂತಕ(೨–೧೨೪)ಶಿವ
ಕಾರಮೇಘ(೧–೨೬)ಕಪ್ಪುಮೋಡ
ಕಾರಿಯ(೧–೩೭)ಕಾರ್ಯ, ಕೆಲಸ
ಕಾರ್ಮುಕ(೩–೭೦)ಬಿಲ್ಲು
ಕಾಲ(೪–೧೦೬)ಯಮ
ಕಾವ(೧–೨೩೪)ಕಾಮ
ಕಿತ್ತೀಡಾಡು(೨–೬)ಕಿತ್ತು ಒಗೆ
ಕೀಲಿಸು(೪–೯೫)ಜಡಿ, ನಾಟಿಸು, ಜೋಡಿಸು
ಕುಕ್ಕುರ(೧–೬೭)ನಾಯಿ
ಕುಜಜಾತಿ(೧–೪೭)ವೃಕ್ಷಸಮೂಹ
ಕುಜನ(೧–೨೯)ಕೆಟ್ಟಜನ
ಕುತುರು(೨–೩೪)ಕಂಟಿ, ಪೊದರು
ಕುಪಿತ(೧–೧೧೦)ಸಿಟ್ಟು
ಕುಮುದ(೧–೨೪೭)ಕಮಲ
ಕುರುಳು(೧–೧೭೦)ಕೂದಲು
ಕುಸುಮಸರ(೧–೧೭೩)ಕಾಮ
ಕೂಪಜಲ(೧–೨೦೭)ಭಾವಿಯನೀರು
ಕೂಪ(೧–೪೨)ಕೂರ್ಪ, ಪ್ರೀತಿಯ
ಕೂರಂಬು(೪–೧೦೧)ಹರಿತವಾದ ಬಾಣ
ಕೂರಿಟ್ಟೆ(೫–೧೫)ಹರಿತವಾದ ಈಟಿ
ಕೂರುಗುರು(೧–೧೫೪)ಚೂಪಾದ ಉಗುರು
ಕೂರ್ಪ(೩–೭)ಪ್ರೀತಿ
ಕೃಪಾಣ(೪–೫೪)ಖಡ್ಗ, ಕತ್ತಿ
ಕೆಡೆ(೧–೬೭)ಜೀಳು
ಕೇಣಿಗೊಳ್ಳು(೨–೧೨೧)ತಾಳು, ಧರಿಸು
ಕೈದು(೪–೭೧)ಆಯುಧ
ಕೊಂಡೆಯ(೩–೩೭)ಚಾಡಿ
ಕೊಂತ(೩–೧೫೦)ತ್ರಿಶೂಲ
ಕೊಣ(೨–೨೮)ಕೊಳ
ಕೊನಬು(೧–೧೭೮)ಬೆಡಗು, ಒನಪು
ಕೋಟನ(೫–೨೨)ಒಂದು ಜಾತಿಯ ಹಕ್ಕಿ
ಕೋಡಗ(೩–೨೪)ಮಂಗ
ಕೋದಂಡ(೪–೭೯)ಬಿಲ್ಲು
ಕೋಳುಹೋಗು(೫–೩೫)ಬಲಿಯಾಗು, ಹಾಳಾಗು
ಕಱೆಕಂಠ(೫–೯೦)ಕಪ್ಪುಗೊರಳ, ಶಿವ
ಕ್ಷೋಣಿ(೨–೫)ನೆಲ, ಭೂಮಿ
ಖಂಡೆಯ(೨–೧೦)ಕತ್ತಿ
ಖಂಡೇಂದು(೪–೨೧೦)ಬಾಲಚಂದ್ರ
ಖಂಡೇಂದುಧರ(೩–೩೫)ಶಿವ
ಖಂಡೇಂದುಧರನವಾಹ(೪–೨೧೦)ವೃಷಭ, ನಂದಿ
ಖಗಕುಲ(೧–೫೧)ಪಕ್ಷಿಜಾತಿ
ಖಗಜಾತಿ(೨–೧೫೫)ಪಕ್ಷಿಸಂಕುಲ
ಖಗಮೃಗ(೧–೧೦೦)ಪಕ್ಷಿ, ಪಶು
ಖತಿ(೩–೮)ಕೋಪ, ಸಿಟ್ಟು
ಖಳರು(೧–೧೦೫)ರಾಕ್ಷಸರು
ಖುರ(೪–೪೪)ಕುದುರೆಯ ಕಾಲು
ಖೂಳ(೧–೧೨)ಮೂರ್ಖ

ಗ–ಘ

ಗಗನ(೧–೯೮)ಆಕಾಶ
ಗಜ(೨–೪)ಆನೆ

ಗಜಘಟೆ(೪–೪೮)ಯುದ್ಧಕ್ಕೆ ಸಿದ್ಧಮಾಡಿದ ಆನೆಗಳ ಸಮೂಹ
ಗಜಚರ್ಮಧರ(೧–೩೦)ಶಿವ
ಗದಗಂಪಿಸು(೪–೮೯)ನಡುಗು
ಗರಳ(೨–೧೦೭)ವಿಷ
ಗಾಡಿ(೧–೩೧)ಬಲ, ಶಕ್ತಿ
ಗಾರುಮಾಡು(೨–೧೨೮)ನಾಶಮಾಡು
ಗಾವಳಿ(೫–೪೧)ಶಬ್ದ, ಆರ್ಭಟ
ಗುಡಿ(೩–೧೧೨)ಧ್ವಜ
ಗುಡಿಗಟ್ಟು(೧–೩೪)ಸಂತಸ ಹೆಚ್ಚಾಗು
ಗುದಗೆ(೩–೧೫೪)ಬಡಿಗೆ, ಗದೆ
ಗುಹ್ಯಕ(೪–೬೬)ಕುಬೇರ
ಗೂಪ>ಕೂರ್ಪ(೧–೩೮)ಪ್ರೀತಿಸುವವ
ಗೊಂದಣ(೩–೧೩೦)ಗುಂಪು
ಗೊಣ(೧–೨೩)ಕೊಳ
ಗೊಣಸು(೪–೧೦)ಬಿಲ್ಲಿನ ಹೆದೆ
ಗೊರವ(೩–೧೮)ಶಿವ
ಗೋಮೇಧಿಕ(೨–೭೭)ಕೆಂಪುರತ್ನ
ಗೋವಿಂದ(೨–೬೯)ವಿಷ್ಣು
ಘಟೆ(೪–೪೮)ಸಮೂಹ

ಚ

ಚಂಡ(೫–೪೫)ಉಗ್ರಕೋಪ
ಚಂದ್ರಚೂಡ(೧–೧)ಚಂದ್ರನನ್ನು ಧರಿಸಿದವ, ಶಿವ
ಚಂದ್ರಜೂಟ(೩–೯)ಚಂದ್ರನನ್ನು ತಲೆಯಲ್ಲಿ ಮುಡಿದವ, ಶಿವ
ಚಂದ್ರಧರ(೧–೨೩)ಚಂದ್ರನನ್ನು ಮುಡಿದವ, ಶಿವ
ಚಂದ್ರಮೌಳಿ(೫–೯೧)ಚಂದ್ರನನ್ನು ತಲೆಯಲ್ಲಿ ಧರಿಸಿದವ, ಶಿವ
ಚತುರಾನನ(೨–೧೨೭) ನಾಲ್ಕು ಮುಖ ಉಳ್ಳವ, ಬ್ರಹ್ಮ
ಚತುರ್ದಶ(೫–೧೩೨)ಹದಿನಾಲ್ಕು
ಚರಣಾರವಿಂದ(೧–೫)ಪಾದಕಮಲ
ಚಲ್ಲಬಡಿ(೫–೬೭)ಚಲ್ಲಾಪಿಲ್ಲಿಮಾಡು
ಚಳಕ(೩–೮೭)ವೇಗ
ಚಳಕ(೪–೮೮)ಚಮತ್ಕಾರ
ಚಾಪ(೪–೧೬೩)ಬಿಲ್ಲು
ಚಿತ್ತಜವೈರಿ(೪–೧೩೪)ಕಾಮವೈರಿ. ಶಿವ
ಚುನ್ನ(೧–೨೦೩)ಅಣಕ, ನಿಂದೆ
ಚೂಣಿ(೪–೬)ಸೈನ್ಯದ ಮುಂಭಾಗ
ಚೌದಂತ (೫–೯೭)ಚತುರ್ದಂತ, ನಾಲ್ಕು ಐರಾವತ

ಜ

ಜಂಭಾರಿ(೨–೪೪)ಇಂದ್ರ
ಜರೆ(೨–೫೩)ನಿಂದಿಸು
ಜವ(೩–೧೮೩)ಯಮ
ಜವನಿಕೆ(೨–೧೦೧)ಪರದೆ
ಜವಳಿ(೧–೨೦೧)ಬಟ್ಟೆ
ಜವಾದಿ(೫–೩)ಸುಗಂಧದ್ರವ್ಯ
ಜಾಲ(೧–೧೧೧)ಸಮೂಹ
ಜೇವಡೆ(೩–೩)ಧ್ವನಿ
ಜೇವಡೆ(೪–೭೯)ಜಗ್ಗು
ಜೊನ್ನ(೧–೨೨೫)ಬೆಳದಿಂಗಳು
ಜೋಹರಿಸು(೧–೨೨೦)ವೇಷಹಾಕು

ಟ

ಟವುಳಿ(೩–೫೬)ಕುಲಾವಿ, ಶಿರಸ್ತ್ರಾಣ
ಟುಮಕು(೪–೨೨೬)ತಮಲಟೆ ವಾದ್ಯ

ಡ

ಡೆಂಕಣಿ(೧–೧೨೬)ಧ್ವಜದ ಕಂಬ
ಡೆಂಕಣಿ(೫–೯೪)ಕೋಟೆಯ ಬುರುಜು

ತ

ತಡೆಗಡಿ(೧–೪೦)ನಾಶಮಾಡು
ತಮ(೪–೭೬)ಕತ್ತಲೆ
ತರಣಿ(೨–೭೬)ಸೂರ್ಯ
ತರಿ(೧–೫೬)ಹರಿ
ತಲೆಯೋಡು(೧–೪)ತಲೆಬುರುಡೆ
ತಲೆಯಕ್ಕರ(೧–೩೨)ಹಣೆಬರಹ
ತಲೆವರಿ(೫–೬೯)ಅಂಕುಶದ ಏಟನ್ನು ತಿಂದು ಈಲಾಗು
ತಳಿಸು(೧–೮೫)ಕುಟ್ಟು
ತಳಿ(೫–೧೫)ಹಚ್ಚು
ತಳಿ(೫–೯೮)ಚಿಮುಕಿಸು
ತಳಿರ್ವಾಸಿಕೆ(೧–೨೨೩)ಹೂವಿನ ಹಾಸಿಗೆ
ತಾವರೆ(೧–೧೦೬)ಕಮಲ
ತಿಂಗಳ(೧–೨೩೮)ಚಂದ್ರ, ಹುಣ್ಣಿಮೆ
ತಿಮಿರ್(೩–೧೪೨)ತಿಂಡಿ
ತಿಮಿರ(೫–೧೬)ಕತ್ತಲೆ
ತಿಳಿಜೊನ್ನ(೧–೧೩)ಬೆಳದಿಂಗಳು
ತೀವು(೩–೮೪)ತುಂಬು
ತುಡುಕು(೧–೬೭)ಇಡು
ತುಡುಕು(೪–೩)ಕೈಹಾಕು, ಹಿಡಿ
ತುಡುಕು(೪–೭೦)ಹೊಡೆ, ತಿವಿ
ತುಡುಕು(೪–೯)ತುಂಬು, ಆವರಿಸು
ತುರಗ(೩–೪೮)ಕುದುರೆ
ತುರಿಯ(೨–೧೧೮)ಸಪ್ಪಳ
ತುರುವಿಂಡು(೩–೧೨೬)ಆಕಳ ಹಿಂಡು
ತುಱುಗು(೪–೯೧)ಸುರಿಸು, ತುಂಬು
ತೆತ್ತಿಗ(೪–೧೨೨)ಸೇವಕ, ಊಳಿಗದವ
ತೆತ್ತಿಸು(೫–೮೪)ಜೋಡಿಸು, ಸೇರಿಸು
ತೆತ್ತೀಸಕೋಟಿ(೨–೨೫)ಮೂವತ್ತುಮೂರುಕೋಟಿ
ತೊಡವೆ(೩–೧೮೩)ವೇಷ
ತೊಲಗು(೧–೭೧)ಹೋಗು
ತೋಮರ(೩–೧೫೦)ಈಟಿ, ಬಾಣ
ತೋಹು(೧–೭೮)ಮೋಸ
ತ್ರಿಜಗ(೧–೨೮)ಮೂರುಲೋಕ
ತ್ರಿಣಯ(೧–೮೯)ಮೂರುಕಣ್ಣುಳ್ಳವ, ಶಿವ
ತ್ರಿದಶ(೩–೧೧೯)ಮೂವತ್ತು, ದೇವತೆ
ತ್ರಿಯಕ್ಷ(೧–೨)ಮೂರು ಕಣ್ಣುಳ್ಳವ, ಶಿವ
ತ್ರೈಜಗ(೨–೬೫)ಮೂರುಲೋಕ
ತಱಿ(೪–೧೯೭)ಕಡಿ, ಕತ್ತರಿಸು, ಮುರಿ
ತಱುಬು(೪–೭೯)ನಿಲ್ಲಿಸು

ದ–ಧ

ದಂಡಿಗೆ(೩–೩೫)ವೀಣೆ
ದಡಿಗ(೪–೧೬೯)ದಾಂಡಿಗ, ಬಲಶಾಲಿ
ದನುಜ(೧–೨೫)ರಾಕ್ಷಸ
ದಿಗುಬಲಿ(೫–೬೪)ದಿಕ್ಕಿಗೆ ಬಲಿಕೊಡುವುದು, ಕೊಲ್ಲುವುದು
ದಿನನಾಯಕ(೩–೯)ಸೂರ್ಯ
ದಿನಪ(೧–೬೩)ಸೂರ್ಯ
ದಿನಮಣಿ(೩–೩೩)ಸೂರ್ಯ
ದಿವ(೧–೨೮)ದಿನ
ದಿವಿಜರು(೨–೧೮)ದೇವತೆಗಳು
ದೀಧಿತಿ(೨–೮೩)ಬೆಳಕು
ದುಗುಡ(೧–೧೧೪)ಕಳವಳ
ದುಮ್ಮಾನ(೧–೧೨೧)ದುಗುಡ
ದುವ್ವಾಳಿಸು(೩–೮೭)ಬೆನ್ನಟ್ಟು
ದೇವವ್ರಾತ(೨–೫೭)ದೇವತೆಗಳ ಸಮೂಹ
ದೇವಾಂಗ(೧–೧೬೪)ಬಟ್ಟೆ, ಸೀರೆ
ದೊದ್ದೆಗರು(೫–೬೭)ಒಂದಾಗಿ ಸೇರಿದವರು
ದೊಯಿಸ(೧–೧೪೩)ಜೋಯಿಸ
ದ್ರುಹಿಣಿ(೩–೧೧೦)ಬ್ರಹ್ಮದೇವ

ಧನು(೧–೬)ಬಿಲ್ಲು
ಧಾರುಣಿ(೩–ವೃ)ಭೂಮಿ
ಧಾರೆವಟ್ಟಲ(೧–೧೨)ನೀರು ಎರೆಯುವ ಬಟ್ಟಲು
ಧುರ(೧–೯೪)ಯುದ್ಧ
ಧೃವಲೋಕ(೧–೧೨೬)ದೇವಲೋಕ
ಧ್ರೂಲೋಕ(೫–೫೧)ದೇವಲೋಕ

ನ

ನಂಜುಗೊರಳ(೨–೧೪೪)ಶಿವ
ನಂದಿವಾಹನ(೨–೬೯)ಶಿವ
ನಂದಿಸಿಂಧನ(೪–೨೨೭)ನಂದಿಧ್ವಜ
ನಖರೇಖೆ(೧–೧೬೯)ಉಗುರಿನಗೆರೆ
ನಟ್ಟುವರು(೧–೧೦೮)ನೃತ್ಯಗಾತಿಯರು
ನನೆ(೫–೫೫)ಮೊಗ್ಗೆ
ನಭ(೫–೧೨೮)ಆಕಾಶ
ನರುತಿ(೪–೧೦೮)ನೈರುತ್ಯ
ನಳಿನಸಂಭವ(೫–೯೬)ಕಮಲದಲ್ಲಿ ಹುಟ್ಟಿದವ, ಬ್ರಹ್ಮ
ನಾಗಕುಂಡಲ(೧–೧)ಹಾವನ್ನು ಕುಂಡಲ ಮಾಡಿಕೊಂಡವ, ಶಿವ
ನಾಡಾಡಿ(೧–೧೦೪)ಸಾಮಾನ್ಯ ಮನುಷ್ಯ
ನಾಡಾಡಿದೇವರು(೩–೯)ಕ್ಷುದ್ರದೇವರು, ಸಾಮಾನ್ಯ ದೇವರು
ನಾಣ್ದೆಸೆ(೪–೭೭)ನಾಲ್ಕುದಿಕ್ಕು
ನಾಗಭೂಷಣ(೫–
೯೩)ಸರ್ಪವನ್ನು ಆಭರಣವಾಗಿ ಧರಿಸಿದವ, ಶಿವ
ನಾರಂದ(೩–೨೯)ನಾರದಮುನಿ
ನಾಳಿ(೨–೭೩)ನಾರಿಕೇಳ, ತೆಂಗಿನಮರ
ನಿಟಲನೇತ್ರ(೨–೮೬)ಹಣೆಗಣ್ಣ, ಶಿವ
ನಿಟಿಲಾಕ್ಷಿ(೫–೧೫೧)ಹಣೆಗಣ್ಣು
ನಿರರೂಹ(೧–೯೪)ಬ್ರಹ್ಮ
ನಿರ್ಜರರು(೧–೩೪)ದೇವತೆಗಳು
ನಿವಹ(೫–೧೪೮)ಸಮೂಹ
ನಿಶಾಚರ(೩–೧೫೭)ಕತ್ತಲಲ್ಲಿ ತಿರುಗುವವರು
ನಿಶಾಟಸಂಕುಳ(೫–ವೃ)ನಿಶಾಚರರ ಸಮೂಹ, ರಾತ್ರಿ ತಿರುಗುವ ಭೂತ ಸಮೂಹ
ನಿಶೆ(೩–೧೬೦)ರಾತ್ರಿ
ನೀರಜಭವ(೨–೬೧)ಬ್ರಹ್ಮ
ನಿರೀಕ್ಷಣೆ(೫–೧೪೩)ನೋಟ
ನೀಲಕುಂತಳ(೧–೮೪)ಕೂದಲು
ನೆಗಪು(೩–೭೪)ಮೇಲಕ್ಕೆತ್ತು
ನೆಗಹು(೧–೭೧)ಮೇಲಕ್ಕೆತ್ತು
ನೆಣ(೪–೨೧೫)ಕೊಬ್ಬು
ನೆರಳು(೨–೧೫೨)ಒಟ್ಟುಗೂಡಿಸು
ನೊಸಲು(೧–೧೫೨)ಹಣೆ
ನೊಸಲುರಿ(೫–೧೩೯)ಹಣೆಯ ಬೆಂಕಿ

ಪ–ಫ

ಪಂಕಜ(೧–೧೬೩)ಕೆಸರಿನಲ್ಲಿ ಹುಟ್ಟಿದುದು, ಕಮಲ
ಪಂದಿ(೧–೬೬)ಹಂದಿ
ಪಗಲಾಣ್ಮ(೧–೧೩೭)ಸೂರ್ಯ
ಪಗಲು(೫–೩೮)ಹಗಲು
ಪಟಹ(೧–೭೮)ಡೋಲು
ಪಣ್ಯಾಂಗನೆ(೧–೨೬೧)ವೇಶ್ಯಾಸ್ತ್ರೀ
ಪದ್ಮ(೧–ವೃ)ಕಮಲ
ಪದ್ಮಜ(೧–ವೃ)ಬ್ರಹ್ಮ
ಪದ್ಮಸಂಖ್ಯೆ (೨–೮೧)ನೂರುಕೋಟಿ
ಪನ್ನಗ(೩–೫೨)ಆದಿಶೇಷ
ಪನ್ನಗಧರ(೫–೧೪೬)ಸರ್ಪಧರ, ಶಿವ
ಪರುಡವಿಸು(೨–೧೫೪)ಹಬ್ಬು, ಹರಡು
ಪರಸು(೩–೧೫೦)ಕೊಡ್ಲಿ

ಪಲಸು(೨–೭೩)ಪಲಸು
ಪಶುಪತಿ(೨–೧೪೭)ಶಿವ
ಪಳುಕು(೧–೪೬)ಸ್ಫಟಿಕಶಿಲೆ
ಪಾಟಿಸು(೩–೧೧೪)ಜೋಡಿಸು, ನಿರ್ಮಿಸು
ಪಾಡಳಿ(೨–೫೨)ಅಂದಗೆಡು
ಪಾದನಳಿನ(೪–೨೧೯)ಪಾದಕಮಲ
ಪಾವಕ(೧–೧೭)ಬೆಂಕಿ
ಪಾವಕಾಕ್ಷ(೧–೧೭)ಶಿವ, ಉರಿಗಣ್ಣುಳ್ಳವ
ಪಾವು(೧–೨೪೪)ಹಾವು
ಪಿಂಡಿವಾಳ(೩–೧೫೦)ಶೂರ, ಧೀರ
ಪಿರಿಚು(೨–೧೧೮)ತಿರುವು
ಪುಂಡರೀಕ(೧–೫೫)ಕಮಲ
ಪುಂಡರೀಕಜ(೨–೬೦)ಬ್ರಹ್ಮ
ಪುಂಡರೀಕಾಕ್ಷ(೫–೧೦೯)ಕಮಲಾಕ್ಷ, ವಿಷ್ಣು
ಪುತ್ತಳಿಕೆ(೧–೧೪೭)ಗೊಂಬೆ
ಪುರವಳಯ(೪–(೪–೬))ಊರ ಮುಂಭಾಗ
ಪುರಹೂತ(೪–೮೪)ಅಗ್ನಿ
ಪುರುಲೆ(೨–೧೩)ಪುಡಿಕಟ್ಟಿಗೆ
ಪುಲಿ(೧–೪೯)ಹುಲಿ
ಪುಲ್ಲಸರ(೧–೨೬೨)ಕಾಮ
ಪೂವಿಲ್ಲ(೧–೨೩೪)ಕಾಮ
ಪೂವು(೧–೧೪)ಹೂವು
ಪೂಸರ(೧–೧೬೫)ಹೂವಿನಸರ; ಪೂಶರ–ಕಾಮ.
ಪೆಣ(೧–೪)ಹೆಣ, ಶವ
ಪೆರ್ಗತ್ತಲೆ(೧–೯)ದಟ್ಟವಾದ ಕತ್ತಲೆ
ಪೇಳು(೧–೫೦)ಹೇಳು
ಪೊಡವಿ(೧–೩೪)ಭೂಮಿ
ಪೊಳಲು(೧–೧೩೩)ಊರು, ಪಟ್ಟಣ
ಪೋಟತನ(೧–೨೨೦)ಸ್ಪರ್ಧೆ
ಪ್ರಮಥಾಧಿಪ(೫–೯)ಶಿವ
ಫಣಿ(೩–೫೭)ಹಾವು, ಸರ್ಪ

ಬ–ಭ

ಬಂಡಿಯಬೋವ(೩–೫೧)ರಥದ ಸಾರಥಿ
ಬಣ್ಣ(೧–೧೭೭)ಬಟ್ಟೆ
ಬಣ್ಣಗೆಡು(೨–೧೩೨)ಶಕ್ತಿಗುಂದು
ಬತ್ತೀಸ(೨–೪೯)ಮೂವತ್ತೆರಡು
ಬಲಗೊಳ್ಳು(೧–೫)ನಮಸ್ಕರಿಸು
ಬವರ(೧–೨೮)ಯುದ್ಧ
ಬವರಿಗಡ್ಡ(೩–೬೦)ಹರಕುಗಡ್ಡ, ಸುರಳಿಗಡ್ಡ
ಬಾಸಿಗ(೨–೧೨)ಬಾಸಿಂಗ
ಬಿಟ್ಟಿ(೨–೧೨೧)ಸೇವೆ
ಬಿಲ್ಲುಲಿ(೧–೧೪)ಬಿಲ್ಲಿನ ಶಬ್ದ
ಬಿಸರುಹ(೫–೩)ಕಮಲ
ಬಿಸಿಗಣ್ಣ(೩–೫)ಶಿವ
ಬಿಸುರುಹನೇತ್ರ(೨–೧೪೭)ಕಮಲನೇತ್ರ, ವಿಷ್ಣು
ಬೆನಕ(೧–೭)ಗಣಪತಿ
ಬೆನವ(೩–೧೦೨)ಗಣಪತಿ
ಬೆಲೆವೆಣ್ಣು(೧–೨೨೮)ವೇಶ್ಯೆ
ಬೆಸನ(೨–೧೮)ಹೇಳಿಕೆ
ಬೆಸಸು(೨–೧೯)ಹೇಳು
ಬೇಹ(೪–೧೯೪)ಬೇಕಾದ
ಬೇಹಿನಚರರು(೩–೪)ಗುಪ್ತಚಾರರು
ಬೋವ(೨–೧೩೧)ಸಾರಥಿ
ಬೋಸರಿಗ(೧–೨೧೩)ವಂಚಕ
ಬೌದ್ಧವತಾರ(೫–೧೦೭)ಸುಂದರ ಪುರುಷನ
ಕಪಟವೇಷ
ಭಂಗಿಸು(೧–೨೭)ಸೋಲಿಸು, ಕಡೆಗಣಿಸು
ಭಂಜಿಸು(೨–೧೩೫)ನಾಶಮಾಡು
ಭರತ(೨–೬೩)ಸಮುದ್ರದ ಉಬ್ಬರ
ಭಲ್ಲೂಕ(೧–೪೯)ನರಿ
ಭಲ್ಲೆಯ(೩–೧೪೬)ಈಟಿ, ಭರ್ಜಿ

ಭವನ(೧-೨೩)ಮನೆ
ಭಸ್ಮಲೇಖ(೧-೧)ವಿಭೂತಿಧರಿಸಿದವ, ಶಿವ
ಭಾಗೀರಥೀ(೧-೧)ಗಂಗೆ
ಭಾಗೀರಥೀಧರ(೧-೧)ಗಂಗೆಯನ್ನು ಧರಿಸಿದವ, ಶಿವ
ಭಾನು(೨-೧೨೬)ಸೂರ್ಯ
ಭಾವಜವೈರಿ(೨-೧೪೬)ಕಾಮವೈರಿ, ಶಿವ
ಭಾಳನೇತ್ರ(೧-೮೦)ಹಣೆಗಣ್ಣ, ಶಿವ
ಭುಜಂಗ(೧-೧೭೯)ವಿಟ
ಭುಜಗೇಂದ್ರ(೧-೨೬೩)ಸರ್ಪ
ಭುಜಗೇಂದ್ರ ಭೂಷಣ(೧-೨೬೩)ಶಿವ
ಭೂರಿ(೧-೩೭)ಚೆನ್ನಾಗಿ

ಮ

ಮಂದಾಕಿನೀಧರ(೫-೧೪೭)ಗಂಗಾಧರ, ಶಿವ
ಮಕರ(೧-೨೪೨)ಮೊಸಳೆ
ಮಕರತೋರಣ(೨-೭೮)ಮೆರವಣಿಗೆಯಲ್ಲಿ ಒಡಿಯುವ ತೋರಣ
ಮಕರಾಂಕ(೧-೨೪೨)ಕಾಮ
ಮಗ್ಗಿಸು(೩-೫)ಮರ್ದಿಸು
ಮಜ್ಜನ(೧-೧೧೩)ಸ್ನಾನ, ಜಳಕ
ಮಡುಗು(೧-೬೩)ಇಡು
ಮಥನಿಸು(೧-೪೦)ತಿಕ್ಕು, ಕಡೆ
ಮದಕರಿ(೧-೧೫೬)ಮದವೇರಿದ ಆನೆ
ಮದನವೈರಿ(೨-೮೫)ಶಿವ
ಮದನಾರಿ(೧-೧೧೪)ಶಿವ
ಮಯ(೧-೧೨೧)ದೇವಶಿಲ್ಪಿ
ಮಯಿಜೋಲ(೫-೧೫)ಎದೆಕವಚ
ಮಲತ(೧-೩೦)ಸೊಕ್ಕಿದ
ಮಲಯಜ(೧-೨೩೧)ಶ್ರೀಗಂಧ
ಮಲೆ(೧-೨೫)ಸೊಕ್ಕೇರು
ಮಲೆ(೪-೧೫೫)ಪರ್ವತ
ಮಸಣ(೪-೧೨೬)ಸುಡುಗಾಡು, ಶ್ಮಶಾನ
ಮಸ್ತಕ(೩-೧೦೫)ತಲೆ
ಮಳಲಕೊಡ(೫-೧೦೫)ಉಸುಕಿನಕೊಡ
ಮಳಲು(೫-೮೪)ಉಸುಕು
ಮಾಣದೆ(೧-೮)ಮರೆಯದೆ
ಮಾತಂಗ(೧-೭೯)ಆನೆ
ಮಾರ(೧-೧೫೪)ಕಾಮ
ಮಾರಹರ(೩-೪೫)ಕಾಮನನ್ನು ಸುಟ್ಟವ, ಶಿವ
ಮಾರಾಂತು(೪-೧೮೧)ಎದುರಾಗಿ
ಮಾರಾರಿ(೧-೩೬)ಕಾಮನವೈರಿ, ಶಿವ
ಮಾರ್ಜಾಲ(೧-೪೮)ಬೆಕ್ಕು
ಮಾಜಾನು(೪-೭೮)ಎದುರಾಗು
ಮಿಗೆ(೧-೩೯)ಚೆನ್ನಾಗಿ
ಮಿಸುನಿ(೧-೧೩೨)ಬಂಗಾರ
ಮಿಸುಪ(೧-೬೪)ಹೊಳೆಯುವ
ಮುಕುಂದ(೫-೧೧೧)ವಿಷ್ಣು
ಮುಕ್ಕಣ್ಣ(೧-೭)ಮೂರು ಕಣ್ಣುಳ್ಳವ, ಶಿವ
ಮುದ(೧-೨೫)ಸಂತೋಷ
ಮುವ್ವಿಡಿ(೧-೩೦)ಮೂರುಹಿಡಿ
ಮುನಿ(೧-೨೫)ಸಿಟ್ಟಾಗು
ಮುಪ್ಪುರ(೧-೧೦೭)ಮೂರು ಊರು
ಮುಪ್ಪೊಳಲು(೨-೪)ಮೂರುಪುರ
ಮುರಾರಿ(೨-೬೧)ಕೃಷ್ಣ, ವಿಷ್ಣು
ಮುಳಿದು(೩-೫)ಸಿಟ್ಟಾಗಿ
ಮೂಡಣಾದ್ರಿ(೩-೩೩)ಪೂರ್ವದಿಕ್ಕಿನಬೆಟ್ಟ
ಮೂಲಕ್ಷ(೨-೨೭)ಮೂರುಲಕ್ಷ
ಮೂಸು(೧-೪೮)ಮುಸುವ, ಕರಿಮಂಗ
ಮೃಗಧರ(೧-೨೪೭)ಚಂದ್ರ
ಮೃಗಮದ(೪-೧೪೬)ಕಸ್ತೂರಿ
ಮೃಡ(೧-೪)ಶಿವ

ಮೇದಿನಿ(೧–೩೦)ಭೂಮಿ, ಲೋಕ
ಮೈಯಿಕ್ಕು(೧–೧೦೭)ನಮಸ್ಕರಿಸು
ಮೊರೆಯಿಡು(೧–೨೯)ಬೇಡಿಕೊಳ್ಳು
ಮೋಹರಿಸು(೩–೧೯೩)ಗುಂಪಾಗು

ಯ–ರ

ರಂಚಿಕೆ(೩–೧೪೭)ಅಂಬಾರಿ
ರಚ್ಚೆ(೨–೧೨)ರಂಪ, ಹಟ
ರಜನಿ(೧–೧೧೫)ರಾತ್ರಿ
ರವ(೪–೯೨)ಸಪ್ಪಳ, ಧ್ವನಿ
ರವಿ(೩–ವೃ)ಸೂರ್ಯ
ರಾಜಮೌಳಿ(೧–೪೫)ಶಿವ
ರಿಪು(೪–೧೪೮)ವೈರಿ
ರುಧಿರ(೪–೧೮೧)ರಕ್ತ
ರೋಮ(೩–೮೪)ಕೂದಲು

ಲ–ವ

ಲಕುಮಿ(೨–೩)ಲಕ್ಷ್ಮಿ
ಲಕ್ಕ(೨–೭೯)ಲಕ್ಷ
ಲಗ್ಗೆ(೪–೧೨೩)ಮುತ್ತಿಗೆ
ಲಾಗಿಸು(೫–೨೪)ಹಾರು, ಜಿಗಿ
ಲೆಂಗಿಸು(೫–೩೯)ಹಾರು, ಜಿಗಿ
ಲೇಪಾಳ(೨–೩೫)ನೇಪಾಳ
ಲೇಸಾಗಿ(೧–೪೦)ಚೆನ್ನಾಗಿ
ವಂಗಡಲು(೧–೭೯)ಸಮೂಹ
ವಾಣಿಯಗಂಡ(೨–೧೨೧)ಬ್ರಹ್ಮ
ವದನ(೪–೭೫)ಮುಖ
ವರಾಹ(೧–೭೭)ಹಂದಿ
ವಾರಿಜ(೨–೫೬)ಕಮಲ
ವಾಘೆ(೩–೮೭)ಕಡಿವಾಣ, ಲಗಾಮು
ವಾಜಿ(೩–೭೬)ಕುದುರೆ
ವಾಣಿ(೧–೧೧೦)ಶಾರದೆ
ವಾರನಾರಿಯರು(೩–೮೯)ವೇಶ್ಯೆಯರು
ವಾರಿಜಸಂಭವ(೨–೫೬)ಬ್ರಹ್ಮ
ವಾರಿಧಿ(೧–೨೮)ಸಮುದ್ರ
ವಾಸವ(೨–೫೫)ಐಶ್ವರ್ಯವುಳ್ಳವ, ಇಂದ್ರ
ವಾಸುಗಿ(೩–ವೃ)ಆದಿಶೇಷ, ಸರ್ಪ
ವಿದಾರಣ(೫–೧೫೩)ಕೊಲ್ಲುವಿಕೆ
ವಿಪಿನ(೧–೭೬)ಕಾಡು
ವಿಬುಧರು(೫–೧೪೧)ದೇವತೆಗಳು
ವಿರಿಂಚಿ(೧–೯೬)ಬ್ರಹ್ಮ
ವಿಷಗಳ(೫–೧೦೬)ಶಿವ
ವಿಸರುಹಭವ(೧–೨೬೧)ಕಮಲದಲ್ಲಿ ಹುಟ್ಟಿದವ, ಬ್ರಹ್ಮ
ವಿಳಾಸ(೧–೧೯)ಬೆಡಗು
ವೇಡೆಯ(೩–೧೧೩)ಆವಾರ, ಬೇಲಿ
ವೇಡೆಯಿಸು(೫–೧೩೧)ಸುತ್ತುವರಿ, ಮುತ್ತು, ಆವರಿಸು
ವ್ಯೋಮಕೇಶ(೨–೧೨೪)ಶಿವ
ವ್ರಾತ(೩–೧೩೫)ಸಮೂಹ

ಶ–ಸ

ಶತಕೋಟಿ(೨–೮೧)ನೂರುಕೋಟಿ
ಶಬರ(೧–೫೩)ಬೇಡ
ಶಬರಿ(೧–೬೪)ಬೇಡತಿ
ಶರ(೧–೬)ಬಾಣ
ಶರಧಿ(೫–೪೯)ಸಮುದ್ರ
ಶರಭ(೪–೨೧೬)ಸಿಂಹಕ್ಕಿಂತ ಬಲಶಾಲಿಯಾದ ಶಕ್ತಿಯುಳ್ಳ ಮೃಗ
ಶಶಿ(೧–ವೃ) ಚಂದ್ರ
ಶಶಿಭೂಷ(೧–ವೃ)ಚಂದ್ರನನ್ನು ಮುಡಿದವ, ಶಿವ
ಶಾರ್ದೂಲ(೧–೭೯)ಹುಲಿ

ಶಿಂಸುಮಾರ(೪–ವೃ)ಮೊಸಳೆ
ಶಿಖಿ(೧–೧ ಕಂ)ಬೆಂಕಿ
ಶೂಲ(೧–೪)ತ್ರಿಶೂಲ
ಶೂಲಧರ(೫–೬೩)ಶಿವ, ತ್ರಿಶೂಲಧರಿಸಿದವ
ಶೇಷ(೨–೧೦)ಆದಿಶೇಷ
ಶೇಷ(೫–೧೦೧)ಉಂಡುಉಳಿದ ಅನ್ನ
ಶ್ರೀಪತಿ(೫–೧೦೭)ಲಕ್ಷ್ಮೀಪತಿ, ವಿಷ್ಣು
ಸಂಗರ(೪–೨೧೬)ಯುದ್ಧ
ಸಂದೋಹ(೨–೧೨೬)ಸಮೂಹ
ಸಕುನ(೨–೫೮)ಶಕುನ
ಸಗ್ಗಳೆ(೩–೯೨)ನೀರುತುಂಬುವ ಚರ್ಮದಚೀಲ, ಕಪಾಲಿ
ಸಬಳ(೩–೧೫೦)ಬಡಿಗೆ, ಈಟಿ, ಆಯುಧ
ಸಮರ(೩–೧೮೯)ಯುದ್ಧ, ಕಾಳಗ
ಸರ(೧–೮೫)ಸ್ವರ, ಧ್ವನಿ
ಸರಡು(೧–೧೧)ವ್ಯರ್ಥವಾದುದು
ಸರದಿ(೧–೧೯)ಶರದಿ, ಸಮುದ್ರ
ಸರಸಿಜ(೧–೨೩೦)ಕಮಲ
ಸರಸಿಜಮುಖಿ(೧–೨೩೦)ಕಮಲಮುಖಿ
ಸರಳು(೧–೧೫೩)ಬಾಣ
ಸರ್ಪಧರ(೧–೧೮)ಶಿವ
ಸಿಂಗ(೧–೭೯)ಸಿಂಹ
ಸಿಂಗಾಡಿ(೪–೧೨)ಬಿಲ್ಲು
ಸಿಂಧ(೪–೨೨೭)ಒಂದುಬಗೆಯ ಬಾವುಟ
ಸಿಖಿ(೫–೧)ಅಗ್ನಿ
ಸಿರ(೧–೬೫)ತಲೆ
ಸೀಗುರಿಯಾಗು(೧–೧೦೦)ಸುಟ್ಟು ಹೋಗು
ಸೀಯು(೫–೮೪)ಸೀವು, ಸುಡು
ಸೀಸಕ(೪–೧೮೩)ಶಿರಸ್ತ್ರಾಣ, ತಲೆಕವಚ
ಸುತ್ರಾಮ(೨–೧೨೪)ಇಂದ್ರ
ಸುಧೆ(೫–೧೦೦)ಅಮೃತ
ಸುರಕಟಕ(೧–೩೪)ದೇವತೆಗಳ ಸಮೂಹ
ಸುರಗಿ(೧–೫೩)ಖಡ್ಗ
ಸುರನಾರಿಯರು(೧–೨೦)ದೇವಸ್ತ್ರೀಯರು
ಸುರಧೇನು(೨–೨೮)ಕಾಮಧೇನು
ಸುರಪ(೨–೧೨೯)ಇಂದ್ರ
ಸುರರಿಪು(೪–೧೪೭)ರಾಕ್ಷಸ
ಸುರಲೋಕ(೧–೨೪)ದೇವಲೋಕ
ಸೂಕರ(೧–೮೧)ಹಂದಿ
ಸೂಡು(೨–೧)ಧರಿಸು, ಮುಡಿ
ಸೂಲ(೧–೧೫೪)ಖಡ್ಗ
ಸೂಲಿ(೩–೧೧೭)ಶೂಲಿ, ಶಿವ
ಸೂಳೈಸು(೪–೭)ಮೊಳಗು, ಧ್ವನಿಮಾಡು
ಸೆಣಸು(೩–೧೫)ಹೋರಾಡು
ಸೊಮ್ಮು(೨–೧೮)ಸ್ವತ್ತು
ಸೋನೆ(೪–೨೧)ಮಳೆ
ಸೋಹು(೧–೭೮)ಅಟ್ಟು
ಸ್ಥಾಣು(೨–೧೨೨)ಶಿವ
ಸ್ಮರ(೧–೨೨೪)ಕಾಮ

ಹ

ಹಕ್ಕರಿಕೆ(೩–೧೪೬)ಕುದುರೆಯ ತಡಿ, ಹಲ್ಲಣ
ಹಗೆ(೧–೩೮)ವೈರಿ
ಹಣ್ಣು(೨–೧೭)ಹೂಡು
ಹಯ(೩–೯೧)ಕುದುರೆ
ಹರಿ(೧–ವೃ)ವಿಷ್ಣು
ಹರಿ(೪–೬೨)ಸಿಂಹ
ಹರಿಗೆ(೫–೧೫)ಢಾಲು
ಹರಿಬ(೩–೧೮)ಕಾರ್ಯ, ಕೆಲಸ
ಹರಿವಾಣ(೩–೬೧)ತಾಟು
ಹಲ್ಲಣಿಸು(೫–೧೫೬)ಜೀನು ಹಾಕಿ ಸಜ್ಜುಗೊಳಿಸು

ಹವಣಿಸು(೨–೧೦)ಪ್ರಯತ್ನಿಸು, ಒದಗಿಸು
ಹವಣು(೩–೧೨)ರೀತಿ, ಮಿತಿ
ಹಸುಬ(೨–೫೮)ಒಂದು ಜಾತಿಯ ಪಕ್ಷಿ
ಹಳಚು(೪–೧೯೫)ಕಾದಾಡು, ಎದುರಾಗು
ಹೀಲಿ(೧–೬೪)ನವಿಲುಗರಿ, ಬೆಂಡು
ಹುತವಾಹ(೨–೧೧೯)ಅಗ್ನಿ
ಹುಲಿಮುಖ(೫–೬೯)ಕೋಟೆಯೊಳಗಿನ ಸಣ್ಣ ಸೀಳು ಹಾದಿ
ಹುಲ್ಲದೊಂದೆ(೫–೮೪)ಹುಲ್ಲಿನಹೊರೆ
ಹುಲ್ಲೆ(೧–೪೯)ಜಿಂಕೆ
ಹೂಣಿಸು(೧–೨೫೪)ಪ್ರತಿಜ್ಞೆಮಾಡು
ಹೂಣಿಸು(೪–೧೭೯)ಗುರಿಯಿಡು, ಹುರಿದುಂಬಿಸು
ಹೂಣು(೨–೧೨೧)ಮುಚ್ಚು
ಹೆಕ್ಕಳಿಸು(೨–೨೪)ಗರ್ವಿಸು
ಹೆಡಗುಡಿಕಟ್ಟು(೪–೮೮)ಹೆಡಮುರಿಗೆ ಕಟ್ಟು
ಹೆದೆ(೩–೫೨)ಬಿಲ್ಲು
ಹೆರೆದಲೆಯ(೩–೮೩)ಚಂದ್ರನನ್ನು ಮುಡಿದವ, ಶಿವ
ಹೆರೆನೊಸಲು(೨–೧೩೩)ಚಂದ್ರನಂತಿರುವ ಹಣೆ
ಹೇಡಯಿಸು(೨–೫೨)ಭಯಪಡು, ಹೆದರು
ಹೊಂದಾವರೆ(೧–೨೩)ಹೊನ್ನಿನ ಕಮಲ
ಹೊಂದೇರು(೪–೭೦)ಹೊನ್ನಿನ ರಥ
ಹೊಣಕೆ(೪–೬)ಯುದ್ಧ, ಕಾದಾಟ
ಹೊನ್ನಂಬು(೩–೧೪)ಬಂಗಾರದ ಬಾಣ
ಹೊರಜಿ(೩–೧೪೭)ದಪ್ಪನೆಯ ಹಗ್ಗ, ಮಿಣಿ
ಹೊಱೆ(೨–೭)ಹತ್ತಿರ, ಸಮೀಪ
ಹೊಳಕೆ(೩–೧೮೮)ಪ್ರಕಾಶ

❖❖

ಮನ್ಮಥ ಮುಕುರ
೧. ಪದ್ಯಗಳ ಅಕಾರಾದಿ

ಅ

ಆ

ಈ

ಏ

ಒ

ಗ

ಚ

ಜ

ತ

ದ

ಪ

ಮ

ರ

ಲ

ವ

ಹ

ಕಠಿಣ ಪದಕೋಶ

ಅ–ಆ

ಅಂಕುರಿಸು (೧–೬೫)–
ಮೊಳಕೆಯೊಡೆ,
ಹುಟ್ಟು

ಅಂಘ್ರಿ(೧–೮)–ಪಾದ, ಚರಣ

ಅಂಚೆ(೩–೨೫)–ಹಂಸೆ

ಅಂಚೆಗಮನ(೩–೧೨)–ಹಂಸನಡೆ

ಅಂಚೆಯ ಕುದುರೆ(೨–೪೩)–
ಓಲೆಯನ್ನು ಒಯ್ಯುವ ಕುದುರೆ

ಅಂಚೆಯ ಕುದುರೆಕಾರರು(೨–೪೪)–
ಓಲೆಕಾರರು

ಅಂಬರ(೨–೯೨)–ಆಕಾಶ

ಅಂಬು(೨–೫೮)–ಬಾಣ

ಅಂಬುಜ(೨–೯೪)–ಕಮಲ

ಅಕ್ಕರು(೧–೫೫)–ಪ್ರೀತಿ

ಅಕ್ಷರಲಿಪಿ(೧–೧೮)–ಹಣೆಬರಹ

ಅಚ್ಯುತ(೫–೨೨)–ವಿಷ್ಣು

ಅಜ(೧–೫೮)–ಬ್ರಹ್ಮ

ಅಜಶಿರಪಾಣಿ(೧–೫೮)–ಬ್ರಹ್ಮನ
ತಲೆಯನ್ನು
ಕಪಾಲಮಾಡಿಕೊಂಡವ, ಶಿವ

ಅಟಮಟ(೧–೩೯)–ಮೋಸ, ಠಕ್ಕುತನ

ಅಡರು(೧–೨೭)–ತೊಂದರೆ, ಕಷ್ಟ

ಅಡರು(೨–೫೮)–ಹತ್ತು, ಏರಿಬರು

ಅಡಸು(೩–೩೪)–ಒತ್ತಾಗಿ ಸೇರಿಸು

ಅಡಿ(೧–೧೫)–ಪಾದ

ಅಡಿಗಣ್ಣ(೪–೩೯)–ಪಾದದಲ್ಲಿ ಕಣ್ಣುಳ್ಳವ,
ಶಿವ

ಅಡಿಯಿಡು(೧–೩೯)–ಪಾದವಿಡು,
ಪ್ರವೇಶಮಾಡು

ಅಣ್ಣಗಳು(೨–೧)–ಶಿಕ್ಷಕರು,
ಓದಿಸುವವರು

ಅಧರ(೫–೧೭)–ತುಟಿ

ಅಬುಜಾಕ್ಷಿ(೨–೨೩)–ಕಮಲ ನೇತ್ರೆ

ಅಮರರು(೧–೩೧)–ದೇವತೆಗಳು

ಅಮರಾವತಿ(೧–೪೨)–ಇಂದ್ರನ
ರಾಜಧಾನಿ

ಅಮರು(೧–೬೪)–ಹತ್ತು, ಏರು,
ಧರಿಸು

ಅಯ್ಯ(೧–೧)–ತಂದೆ

ಅರಸಂಚೆ (೨–೨೦)–ರಾಜಹಂಸ

ಅರಸು(೧–೩೭)–ಹುಡುಕು

ಅರಳು(೧–೬೧)–ಹೂವು, ಪುಷ್ಪ

ಅರಿಕೆಯಾಗು(೫–೭೬)–ಗೊತ್ತಾಗು, ತಿಳಿ

ಅರುಣ(೨–೮೭)–ಕೆಂಪು

ಅರುಹು(೧–೨೫)–ಹೇಳು

ಅರೆಮೈ(೧–೧೦)–ಅರ್ಧ ದೇಹ

ಅರ್ಕ(೧–೨೮)–ಸೂರ್ಯ

ಅರ್ತಿ(೧–೩೭)–ಪ್ರೀತಿ

ಅವನಿ(೧–೭೨)–ಭೂಮಿ

ಅಶ್ರು(೪-೫೫)-ಕಣ್ಣೀರು
ಅಶ್ವ (೨-೪)-ಕುದುರೆ
ಅಷ್ಟದಿಕ್ಕು(೬-೮೧)-ಎಂಟು ದಿಕ್ಕು
ಅಳಕಾಪುರ(೧-೪೨)-ಕುಬೇರನ ರಾಜಧಾನಿ
ಅಳುವಳಿ(೫-೫೬)-ಶಕ್ತಿಗುಂದು
ಆಣ್ಮ(೧-೭)-ಒಡೆಯ, ಪತಿ
ಆನನ(೧-೧)-ಮುಖ
ಆಯದಮಾತು(೨-೩೩)-ಗುಟ್ಟಿನನುಡಿ
ಆರಡಿ(೫-೬)-ನಾಲ್ಕುಪಾದ ಉಳ್ಳದ್ದು, ದುಂಬಿ
ಆರಡಿಗುರುಳು(೫-೬)-ದುಂಬಿಯಂಥ ಕಪ್ಪು ಕೂದಲು
ಆರೋಗಿಸು(೪-೨೦)ಊಟಮಾಡು
ಆಲಿಪುದು(೧-೨೧)-ಕೇಳುವುದು
ಆಸ್ಯ (೩-೯೦)-ಮುಖ
ಆಳಾಪ(೨-೧೧)-ಆಲಾಪ, ರಾಗ, ಧ್ವನಿ
ಆಳ್ದ(೧-೧೦)-ಒಡೆಯ, ಗಂಡ

ಇ-ಈ

ಇಂಡೆ (೬-೧೭)-ಹೂವಿನ ಮಾಲೆ, ರಾಶಿ
ಇನ(೨-೯೪)-ಸೂರ್ಯ
ಇನಕುಲ(೩-೪)-ಸೂರ್ಯವಂಶ
ಇನಚಂದ್ರ(೫-೭೦)-ಸೂರ್ಯ ಚಂದ್ರ
ಇನಿವಾತು(೫-೩೮)-ಪ್ರೀತಿಯ ಮಾತು
ಈರೇಳು(೭-೬೧)-ಹದಿನಾಲ್ಕು

ಉ-ಊ

ಉಂಗುಷ್ಠ(೧-೪)-ಕಾಲಿನ ಕಿರುಬೆರಳು
ಉಗಿ(೨-೩೧)-ಸುರಿಸು
ಉಡುಕಾಂತ(೧-೪೧)-ಚಂದ್ರ
ಉಡುಕಾಂತ(೧-೭೯)-ಚಂದ್ರ
ಉಡುಕಾಂತಧರ(೨-೮೫)-ಚಂದ್ರಧರ, ಶಿವ
ಉಡುಪತಿ(೪-೩೯)-ಚಂದ್ರ
ಉಡುಪತಿಧರ (೪-೩೯)-ಚಂದ್ರಧರ, ಶಿವ
ಉತ್ಪಲ(೫-೮)-ಕಮಲ
ಉದಕ(೨-೩೨)-ನೀರು
ಉದರ(೧-೮೫)-ಹೊಟ್ಟೆ
ಉರ(೫-೧೭)-ಎದೆ
ಉರವಣಿಸು(೪-೨೪)-ಅವಸರಿಸು
ಉರುಬು(೬-೮೧)-ಮೇಲೆಬೀಳು, ಏರಿ ಹೋಗು
ಉರ್ವಿ(೧-೧೨)-ಭೂಮಿ, ಲೋಕ
ಉಲಿ(೧-೧೮)-ಹೇಳು, ನುಡಿ
ಊಣೆಯ(೧-೨೨)-ಕೊರತೆ, ಕುಂದು
ಊಳಿಗದವರು(೪-೭)-ಸೇವಕರು

ಎ-ಏ-ಐ

ಎಣೆ(೨-೧೮)-ಸರಿಸಮಾನ
ಎಯ್ದು(೪-೧೪)-ಬರು
ಎರೆಯ(೨-೪೧)-ಒಡೆಯ, ಗಂಡ
ಎಳಸು(೩-೧೧೬)-ಬಯಸು
ಏಣ(೨-೨೬)-ಚಿಗುರೆ, ಜಿಂಕೆ
ಏಣಲೋಚನೆ(೪-೮)-ಚಿಗರೆ ಕಣ್ಣವಳು
ಏಣಾಯತನೇತ್ರೆ(೧-೮೭)-ಜಿಂಕೆಯ ಕಣ್ಣುಳ್ಳವಳು

ಏಣಾಯತಾಕ್ಷಿ (೨–೨೬)
ಚಿಗುರೆಯಂತಹ
ಕಣ್ಣುಳ್ಳವಳು
ಐದಿದರು(೧–೬೧)–ಬಂದರು

ಒ–ಓ
ಒಕ್ಕಣಿಸು(೧–೫೦)–ಹೇಳು
ಒಕ್ಕಲಿಕ್ಕು(೩–೧೭)–ತುಳಿ
ಒಕ್ಕಳು(೪–೪೭)–ಸುರಿಸಿದಳು
ಒಗು(೪–೪೭)–ಚಿಮ್ಮು, ಸುರಿ,
ಹೊಮ್ಮು
ಒಗುವಳು(೪–೫೫)–ಸುರಿವ ಕಣ್ಣೀರು
ಒಡಬಡು(೨–೨೮)–ಒಪ್ಪು
ಒತ್ತಿಲಿ(೪–೧೦)–ಹತ್ತಿರದಲ್ಲಿ
ಓಜೆಗೆಡಿಸು(೨–೨೪)–ಶಕ್ತಿಗುಂದಿಸು
ಓತು(೪–೪೧)–ಪ್ರೀತಿಸಿ, ಅವಿತು
ಓಪರು(೧–೮೦)–ರಕ್ಷಿಸುವವರು

ಕ–ಖ
ಕಂಕಣ(೧–೪)–ಬಳೆ
ಕಂಜ(೨–೪೦)–ಕಮಲ
ಕಂಜದಳಾಯತಾಕ್ಷಿ(೨–೪೦)–
ಕಮಲದಂಥ ಕಣ್ಣುಳ್ಳವಳು
ಕಂತು(೨–೬೪)–ಕಾಮ
ಕಂತುಹರ(೨–೬೪)–ಶಿವ
ಕಂದರ್ಪ(೨–೭೪)–ಕಾಮ
ಕಂಧರ(೪–೩೮)–ಕೊರಳು
ಕಂಬುಗರಳ(೬–೧೪)–ವಿಷಕಂಠ
ಕಕ್ಕಡ (೩–೪೨)–ದೀವಿಟಿಗೆ
ಕಜ್ಜ(೫–೩೨) –ಕಾರ್ಯ, ಕೆಲಸ
ಕಡಲು(೧–೩)–ಸಮುದ್ರ

ಕಣ್ಣುಗೆಡು (೪–೫೩)–ಕಂಗೆಡು,
ಕಣ್ಣುಕಾಣದಂತಾಗು,
ದಿಕ್ಕು ತೋಚದಂತಾಗು
ಕದಳಿ(೩–೧೭)–ಬಾಳೆ
ಕದ್ರ್ಯಂಕು(೩–೧೨)–ಕಚ್ಚು, ಕಡಿ
ಕನಕದಂಡ(೪–೯)–ಬಂಗಾರದ
ವೀಣೆ
ಕನ್ನೈದಿಲ(೨–೯೧)–ಕಪ್ಪುಕಮಲ
ಕಪಿ(೨–೭೭)–ಮಂಗ
ಕಬರಿ(೨–೮೭)–ತುರುಬು,ಕೂದಲು
ಕರ(೪–೪೪)–ಹೆಚ್ಚಿನ
ಕರಪಾತ್ರೆ(೧–೪)–ಕಪಾಲ
ಕರಿ(೪–೬)–ಆನೆ
ಕರಿಗಮನ(೩–೧೨೦)–ಗಜಗಮನ,
ಆನೆನಡಿಗೆ
ಕರುಣಾರ್ಣವ(೬–೧೫)–ಕರುಣ
ಸಮುದ್ರ
ಕರುವಾಡ(೪–೫೭)–ಅರಮನೆ,
ಉಪ್ಪರಿಗೆ
ಕರುವಿಡು(೧–೨೩)–
ಎರಕಹೊಯ್ಯು, ಅಚ್ಚೊತ್ತು
ಕರೆ(೨–೭೯)–ಹಿಂಡು
ಕರೋಟಿ(೬–೧೪)–ರುಂಡ
ಕಲಹ(೫–೬೬)–ಜಗಳ
ಕಲ್ಯಾಣ(೧–೨೯)–ಮದುವೆ
ಕಾದಲೆ(೨–೩೮)–ಪ್ರಿಯತಮೆ
ಕಾಪಾಲಧರ(೧–೪೩)–ಶಿವ
ಕಾಪಿಡು(೧–೮೯)–ಕಾವಲಿಡು
ಕಾಯ(೧–೮೬)–ದೇಹ
ಕಾಯಜ(೧–೮೭)–ಕಾಮ
ಕಾರ್ಮುಕ(೫–೪)–ಬಿಲ್ಲು

ಕಾಲ್ವೊಡರು(೨–೩೪)–ಕಾಲುಹಿಡಿ, ಕಾಲಿಗೆಬೀಳು
ಕಾಳಂಜಿಗೆ (೪–೭)–ಒಂದು ಬಗೆಯ ಬೀಸಣಿಕೆ
ಕುಂಭಕುಚ(೨–೬೦)– ಗಡಿಗೆಯಂಥ ದೊಡ್ಡ ಮೊಲೆ
ಕುಂಭಿನಿ(೧–೭೧)–ಭೂಮಿ
ಕುಡುತೆಗಂಗಳು(೩–೧೦೮)– ಅಂಗೈ ಅಗಲವಾದ ಕಣ್ಣುಗಳು
ಕುಪಿತ(೩–೭೮)–ಸಿಟ್ಟು
ಕುಮುದ(೭–೬೧)–ಅರಳುವ ಕಮಲ
ಕುಮುದಿನಿ(೨–೯೫)–ಕಮಲ
ಕುರುಹು(೨–೩೭)–ಗುರುತು
ಕುರುಳು(೪–೫೧)–ಕೂದಲು
ಕುಸುಮ(೨–೭೯)–ಹೂವು
ಕೂಡಡಿಗೊಂಡು(೫–೬೮)– ಬೆನ್ನುಹತ್ತಿ
ಕೂರಂಬು(೨–೫೮)–ಹರಿತವಾದ ಬಾಣ, ಚೂಪಾದ ಬಾಣ
ಕೂರುಗುರು(೫–೪೩)–ಚೂಪಾದ ಉಗುರು
ಕೂರ್ಮ(೩–೩೫)–ಆಮೆ
ಕೃಷ್ಣಾಜಿನ(೨–೭೪)ಕಪ್ಪು ಚಿಗುರೆಯ ಚರ್ಮ
ಕೆಳದಿ (೪–೯)–ಗೆಳತಿ
ಕೇಕರಾಕ್ಷಿ (೨–೮೭)–ನವಿಲಿನ ಕಣ್ಣಿನಂತೆ ಕಣ್ಣುಳ್ಳವಳು
ಕೈಪು(೨–೭೪)–ಕೌಪೀನ
ಕೊಂಚೆ(೩–೨೫)–ಕ್ರೌಂಚಪಕ್ಷಿ
ಕೊಂತ(೧–೭೯)–ತ್ರಿಶೂಲ
ಕೊಡಹು(೨–೫೩)–ಒರಸು
ಕೊನಬು(೩–೬೨)–ದಟ್ಟ
ಕೋಡುಗಲ್ಲು(೨–೮೦)–ಪರ್ವತ ಶಿಖರ
ಕೋಳುಹೋಗು(೧–೪೮)– ವ್ಯರ್ಥವಾಗು
ಕ್ಷಿತಿ(೪–೧೩)–ಭೂಮಿ
ಕ್ಷೋಣಿಪ(೪–೮)–ಅರಸ
ಖಂಡೆಯ(೧–೧೭)–ಆಯುಧ, ಖಡ್ಗ
ಖಂಡೇಂದು(೬–೧೪)–ಅರ್ಧಚಂದ್ರ
ಖಂಡೇಂದುಧರ(೧–೭೩)– ಅರ್ಧಚಂದ್ರಧರ, ಶಿವ
ಖಚರ(೫–೨೨)–ಪಕ್ಷಿ, ಗಂಧರ್ವ
ಖೇಚರ(೫–೨೨)–ಒಂದು ಕ್ಷುದ್ರ ದೇವತೆಯ ಹೆಸರು, ಆಕಾಶದಲ್ಲಿ ಸಂಚರಿಸುವವನು

ಗ–ಘ

ಗಂಧರ್ವರು(೪–೧೫)–ದೇವಲೋಕದ ಗಾಯಕರು
ಗಜ(೨–೪)–ಆನೆ
ಗಣಿಕಾಂಗನೆ(೩ ೮೦)–ವೇಶ್ಯಾಸ್ತ್ರೀ
ಗಭಸ್ತಿ(೪–೨೫)–ಕಾಂತಿ
ಗರಳ(೪–೩೮)–ವಿಷ
ಗಳ(೪–೩೮)–ಕಂಠ, ಕುತ್ತಿಗೆ
ಗಳರವ(೫–೪೪)–ಧ್ವನಿ
ಗಾಣಿ(೧–೨೨)–ಗಾಯಕಿ
ಗಾಣಿಗಳು(೪–೩)–ಗಾಯಕರು
ಗಾರುಡ(೨–೫)–ಸರ್ಪಮಂತ್ರ
ಗಿಡಿಬಿಡಿ(೬–೪೪)–ಡಮರುಗ ರೀತಿಯವಾದ್ಯ

ಗಿರಿಜಾವರ(೧-೪೬)-ಶಿವ
ಗಿಳಿವಾತು(೧-೯೪)-ಗಿಳಿಯಂತೆ ಮಾತನಾಡುವುದು
ಗೀರ್ವಾಣರಾಯ(೧-೧೨)-ಬ್ರಹ್ಮ
ಗುಡಿಗಟ್ಟು(೩-೨೧)-ಬಾವುಟ ಕಟ್ಟು, ಅತಿಸಂತೋಷಗೊಳ್ಳು
ಗುಣಿತ(೪-೩೬)-ಲೆಕ್ಕ
ಗುಹ (೪-೩೯)-ಕಾರ್ತಿಕೇಯ
ಗೊಂಚಂಬು(೫-೫೩)-ಬಾಣಗಳ ಗೊಂಚಲು
ಗೊಣ(೧-೪೦)-ಕೊಳ
ಗೋಕರ್ಣ(೧-೫)-ಕಿವಿಯಲ್ಲಿ ಹಾವನ್ನು ಕುಂಡಲಿಯಾಗಿ ಧರಿಸಿದವ, ಶಿವ
ಗೋಪತಿ(೧-೫)-ನಾರಾಯಣ, ಕೃಷ್ಣ
ಘೃತ(೩-೧)-ತುಪ್ಪ

ಚ-ಛ

ಚಂದ್ರಧರ (೬-೨)-ಚಂದ್ರನನ್ನು ಧರಿಸಿದವ, ಶಿವ
ಚಕೋರನಯನ (೫-೬)- ಚಕ್ರವಾಕದಂಥ ಕಣ್ಣು
ಚತುರಾನನ(೩-೧೨೨)-ನಾಲ್ಕು ಮುಖದವ, ಬ್ರಹ್ಮ
ಚತುರಾಸ್ಯ(೧-೭೮)-ನಾಲ್ಕು ಮುಖವುಳ್ಳವ, ಬ್ರಹ್ಮ
ಚಪ್ಪನ್ನ ದೇಶ(೫-೬೯)-ಐವತ್ತಾರು ದೇಶ
ಚವುಬೀದಿ(೪-೨೬)-ನಾಲ್ಕು ದಾರಿ
ಚವುಷಷ್ಠಿ ಬಂಧ(೩-೭೪)- ಅರವತ್ನಾಲ್ಕು ಬಂಧ
ಚವುಷಷ್ಠಿ ವಿದ್ಯೆ(೨-೮)- ಅರವತ್ನಾಲ್ಕು ವಿದ್ಯೆ
ಚಾಪ(೩-೪೨)-ಬಿಲ್ಲು
ಚಾರಿವರಿ(೪-೪೬)-ಹುಡುಕಾಡು, ಸುತ್ತಾಡು
ಚಿತ್ತಜಾರಿ(೧-೯೫)-ಶಿವ
ಚಿತ್ತೈಸು(೧-೪೯)-ಕೇಳು
ಚೂಣಿ(೬-೫೩)-ಸೈನ್ಯದ ಮುಂಭಾಗ
ಚೂತ(೨-೨೯)-ಮಾವಿನ ಮರ
ಚೆಂದೆಂಗು(೩-೧೪)-ಕೆಂಪುತೆಂಗು
ಚೆಂಬಕೆ(೬-೪೪)-ಕಂಚಿನ ವಾದ್ಯ
ಚೆಲ್ಲೆಗಣ್ಣು(೧-೯೪)-ವಿಶಾಲವಾದ ಕಣ್ಣು, ದೊಡ್ಡಕಣ್ಣು
ಛಡಾಳಿಸು(೨-೧೦)-ನುಡಿಸು, ಸಪ್ಪಳಮಾಡು
ಛಾಯ(೧-೮೬)-ಕಾಂತಿ, ಲಾವಣ್ಯ

ಜ

ಜಠರ(೧-೮೬)-ಹೊಟ್ಟೆ
ಜನನೀ(೧-೯)-ತಾಯಿ
ಜನಪತಿ(೪-೧೬)-ಅರಸ
ಜರೆ(೧-೩೫)-ಹೀಯಾಳಿಸು
ಜಲಕೇಳಿ(೧-೨೯)-ಜಲಕ್ರೀಡೆ, ನೀರಾಟ
ಜವಗುಂದು(೫-೯೯)-ವೇಗ ಕಡಿಮೆಯಾಗು, ಶಕ್ತಿಗುಂದು
ಜವದಾಡೆ(೩-೪೪)-ಯಮನ ಗಡ್ಡ
ಜಾಗಟೆ(೬-೪೪)-ಗಂಟೆ
ಜಾನಿಸು(೨-೩೭)-ಅಕಲುಹಾಕು, ವಿಚಾರಿಸು

ಜಾಹ್ನವಿ(೧–೫೮)–ಗಂಗೆ
ಜಾಹ್ನವೀಧರ(೧–೫೮)–
ಗಂಗೆಯನ್ನು ಧರಿಸಿದವ, ಶಿವ
ಜಿಹ್ವೆ(೩–೧೦೮)–ನಾಲಗೆ
ಜುಂಜುರುಮಳೆ(೨–೪೦)–
ತುಂತುರ ಮಳೆ
ಜೊನ್ನ(೨–೯೧)–ಬೆಳದಿಂಗಳು

ಡ

ಡುಂಡೆ(೬–೪೪)–ಒಂದು ಬಗೆಯ ವಾದ್ಯ
ಡೆಂಕಣಿ(೩–೩೭)–ಧ್ವಜದ ಕಂಬ
ಡೆಂಡಣಿಸು(೪–೫೫)–ದುಃಖದಿಂದ ತತ್ತರಿಸು

ತ

ತಂಬಟ (೬–೪೪) –ತಮಟೆ, ಹಲಗೆ
ತಡಹಿಕೊಳ್ಳು(೪–೩೯)–
ನೇವರಿಸಿಕೊಳ್ಳು
ತತ್ತಗಲದ(೫–೩೬)–ಬಿಟ್ಟೂ ಬಿಡದ
ತನುಜ(೧–೫೫)–ಮಗ
ತಬಸಿ (೨–೬೮)–ಒಂದು
ಜಾತಿಯ ಮರ
ತಮ(೨–೯೬)–ಕತ್ತಲ
ತರಣಿ(೪–೨೦)–ಸೂರ್ಯ
ತರ್ಕೈಸು(೧–೫೫)–
ಸಮಾಧಾನಪಡಿಸು
ತರ್ಕೈಸು(೭–೩೬)–ಅಪ್ಪಿಕೊಳ್ಳು
ತಸ್ಕರ(೨–೫೬)–ಕಳ್ಳ
ತಳತಂತ್ರ(೬–೨೮)–ಕೈಕೆಳಗಿನ ಸೈನ್ಯ
ತಳಪುಗಣ್ಣು(೫–೩೯)–ಹೊಳೆಯುವ ಕಣ್ಣು
ತಳರ್(೨–೮೬)–ಅಲ್ಲಾಡು, ಚಲಿಸು
ತಳಿರಡಿ(೧–೯೩)–ಕೋಮಲ ಪಾದ
ತಳುವದೆ(೬–೫೦)–ತಡಮಾಡದೆ
ತಾಮ್ರಚೂಡ(೨–೯೩)–ಕೋಳಿ
ತಾರಾದ್ರಿ(೧–೩೧)–ರಜತಗಿರಿ, ಬೆಳ್ಳಿ
ಪರ್ವತ
ತಾವರೆ (೫–೮)–ಕಮಲ
ತಾವರೆಸಖ(೪–೨)–ಕಮಲಸಖ,
ಸೂರ್ಯ
ತಿರಿತಂದು (೨–೭೯)–ಹರಿದು ತಂದು
ತಿಳಿಜೊನ್ನ(೫–೩೯)–ತಿಳಿಬೆಳದಿಂಗಳು
ತುಡುಕು(೫–೪೨)–ಹಿಡಿ, ತೊಡಗು
ತುರಗ(೪–೬)–ಕುದುರೆ
ತೂಪಿರಿ(೫–೫೦)–ಉಗುಳು
ತೆಳುವಸುರು(೨–೨೦)–ತೆಳುವಾದ
ಹೊಟ್ಟೆ
ತೊಡೆ(೧–೧೮)–ಅಳುಕಿಸು
ತೊತ್ತು(೨–೨೬)–ಸೇವಕಿ
ತ್ರಿಣಯ(೪–೩೬)–ಮುಕ್ಕಣ್ಣ, ಶಿವ
ತ್ರಿಯಂಬಕ(೧–೨೫)ಮೂರುಕಣ್ಣುಳ್ಳವ,
ಶಿವ

ದ–ಧ

ದಂಡಿಗೆ(೬- ೧೩)–ವೀಣೆ
ದಂತಹತಿ(೫–೪೫)–ಹಲ್ಲಿನ ಗುರುತು
ದಂತಿಗಮನೆ(೩–೬೬)–ಆನೆಯ
ನಡಿಗೆ
ಉಳ್ಳವಳು
ದಂತಿಪತಿ(೩–೩೨)–ಇಂದ್ರ
ದಟ್ಟಿ(೧–೪)–ಧೋತ್ರ, ಉಡುಗೆ
ದನುಜ(೧–೪)–ರಾಕ್ಷಸ
ದರಹಸಿತದ ಮುಖ(೫–೪೧)–
ನಗುಮುಖ

ದರ್ಪಕ(೫-೧೯)-ಕಾಮ
ದಶಭುಜ(೪-೩೮)-ಹತ್ತು ಭುಜವುಳ್ಳವ, ಶಿವ
ದಾರಿದ್ರ್ಯ(೧-೭೫)-ಬಡತನ
ದಿವಾಕರ(೧-೧)-ಸೂರ್ಯ
ದಿವಿಜ(೧-೬೦)-ದೇವತೆ
ದಿವಿಜರರಸ(೧-೬೦)-ದೇವತೆಗಳ ಒಡೆಯ, ಇಂದ್ರ
ದುಕೂಲ(೪-೫೩)-ಬಟ್ಟೆ, ಸೀರೆ
ದುರಿತ(೭-೫೯)-ಕಷ್ಟ
ದೂಷಕ(೧-೨೬)-ನಿಂದಕ
ದ್ವಾದಶದಿನ(೧-೯೦)-ಹನ್ನೆರಡು ದಿನ
ಧನುಜಾರಿ(೧-೫೮)-ವಿಷ್ಣು
ಧಾತ್ರಿ(೧-೮೦)-ಭೂಮಿ

ನ

ನಂದನೆ(೫-೬೪)-ಮಗಳು
ನಂದಿವಾಹನ(೧-೭೦)-ಶಿವ
ನಖವೊಯಿಲು(೫-೪೫)-ಉಗುರಿನ ಗಾಯ
ನಗ(೩-೩೭)-ಬೆಟ್ಟ ಪರ್ವತ
ನಟ್ಟಿರುಳು(೪-೪೫)-ನಡುರಾತ್ರಿ
ನದಿಪತಿ(೧-೩೦)-ಸಮುದ್ರರಾಜ
ನದಿರಾಜ(೧-೩೧)-ಸಮುದ್ರರಾಜ
ನನೆಗೋಲ(೩-೯೪)-ಕಾಮ
ನನ್ನಿ(೩-೯)-ಸತ್ಯ
ನಭ (೪-೩೦)-ಆಕಾಶ
ನಯನ(೧-೧೫)-ಕಣ್ಣು
ನವಮಾಸ(೧-೮೬)-ಒಂಬತ್ತು ತಿಂಗಳು

ನಳಿತೋಳು(೧-೯೩)-ಬಳ್ಳಿಯಂಥ ಕೈ
ನಳಿನ(೧-೫೨)-ಕಮಲ
ನಳಿನಪರ್ಣ(೩-೨೭)-ಕಮಲದ ಎಲೆ
ನಾಗಭೂಷಣ(೧-೫೬)-ಸರ್ಪಧರ, ಶಿವ
ನಾಡೆರೆಯ(೨-೪೧)-ನಾಡೊಡೆಯ, ಅರಸ
ನಾಮ(೧-೨೧)-ಹೆಸರು
ನಿಟಿಲ(೭-೯)-ಹಣೆ
ನಿಟಿಲಾಕ್ಷ (೧-೭೪)-ಹಣೆಗಣ್ಣುಳ್ಳವ, ಶಿವ
ನಿಟ್ಟಿಸು(೧-೩೬)-ನೋಡು
ನಿಡಿದಾದ(೧-೨)-ಉದ್ದವಾದ
ನಿಡುಜಡೆ(೧-೩)-ಉದ್ದವಾದ ಜಡೆ
ನಿದ್ರೆತಿಳಿದು(೪-೨೧)-ಎಚ್ಚರಾಗಿ
ನಿರೂಪ(೧-೭೧)-ಆದೇಶ
ನಿರೂಪ(೭-೫೭)-ಆಜ್ಞೆ
ನಿವಹ (೫-೨೧)-ಗುಂಪು
ನಿಳಯ(೧-೫೭)-ಮನೆ, ಗುಡಿ
ನುತಿ(೧-೧೦)-ಸ್ತುತಿ ಸ್ತೋತ್ರ
ನೆಗೆ(೩-೩೩)-ಹಾರು
ನೆರಹು(೧-೬೬)-ಸೇರಿದ
ನೇಸರ(೬-೧)-ಸೂರ್ಯ
ನೊಸಲು(೧-೧೮)-ಹಣೆ
ನೋಂತು(೧-೪೯)-ವ್ರತಮಾಡಿ

ಪ-ಫ

ಪಂಕಜಮುಖ(೧-೯೪)-ಕಮಲದಂಥ ಮುಖ
ಪಂಗುಳ(೫-೮೬)-ಕುಂಟ

ಪಂಚವದನ(೪-೩೮)-
ಐದುಮುಖವುಳ್ಳವ, ಶಿವ
ಪಂತಿ(೪-೧೧)-ಪಂಕ್ತಿ, ಸಾಲು
ಪಟ್ಟೆಚಿನ್ನಾಂಬರ(೫-೧೧)-
ಬಂಗಾರದ ಅಂಚಿನ ಸೀರೆ
ಪಡಿ(೪-೧೭)-ಆಹಾರಪದಾರ್ಥ
ಪಣಿಯ(೪-೩೬)-ಆದಿಶೇಷ
ಪದಗತಿ(೧-೮೫)-ನಡೆ
ಪದಿನೆಂಟು(೧-೨೯)-ಹದಿನೆಂಟು
ಪದ್ಮ(೩-೨೦)-ಕಮಲ
ಪನ್ನಗ(೩-೯)ಸರ್ಪ
ಪನ್ನಗಧರ(೩-೯)-ಸರ್ಪಧರ,
ಶಿವ
ಪರಶು(೩-೪೭)-ಕೊಡಲಿ
ಪರಿ(೧-೬೫)-ಹಬ್ಬು, ಪರಿಸರಿಸು
ಪರ್ಣ(೩-೨೭)-ಎಲೆ
ಪವಡಿಸು(೪-೨೦)-ಮಲಗು
ಪವಳ(೧-೨)-ಮುತ್ತು, ಹವಳ
ಪವುಜು(೬-೩೨)-ಸೈನ್ಯ
ಪಳುಕು(೩-೬೦)-ಸ್ಫಟಿಕ
ಪಾದಪಂಕಜ(೧-೧೨)ಪಾದಕಮಲ
ಪಾಯಿದಳ(೬-೩೩)-ಕಾಲ್ದಳ
ಪಾರಿಸು(೪-೧೯)-ಪಾರಣೆಮಾಡು
ಪಾಶ (೨-೭೨)-ಹಗ್ಗ
ಪಾಶಂಡಿದ್ಯೆವ(೧-೨೬)-ಕ್ಷುದ್ರ ದೇವರು
ಪಾಷಾಣ(೨-೪)-ಕಲ್ಲು
ಪಿಸುಣರು(೧-೩೯)-
ಚಾಡಿಕೋರರು
ಪಿಂಡಿವಾಳ(೩-೪೩)-ಒಂದು
ಬಗೆಯ ಆಯುಧ
ಪಿಕ(೩-೧೨)-ಕೋಗಿಲೆ
ಪಿಕಾಳಿ(೩-೨೫)-ಕೋಗಿಲೆ
ಸಮೂಹ
ಪಿಸುಣ(೨-೨೫)-ಮೋಸಗಾರ
ಪುರ(೧-೨೮)-ಊರು
ಪುರ್ಬು(೫-೪)-ಹುಬ್ಬು
ಪುಲ್ಲಶರಾರಿ(೩-೫೨)-ಕಾಮವೈರಿ,
ಶಿವ
ಪುಳಿಂದ(೨-೫೬)-ಬೇಡರು
ಪೃತುವೀಶ(೪-೧೩) ಪೃಥ್ವೀಶ,
ಅರಸ
ಪೆರೆದಲೆಯ(೪-೪೦)-ಚಂದ್ರಧರ,
ಶಿವ
ಪೇರುರಗ (೪-೨೫)-ದೊಡ್ಡ
ಹಾವು
ಪೊರವಾರ(೧-೯೩)-ನಿತಂಬ
ಪೋಷಣ(೧-೨೬)-
ಹೊಟ್ಟೆಹೊರೆಯುವುದು
ಪ್ರತಿ(೪-೧೩)-ಪರ್ಯಾಯ, ಬದಲು,
ಸಮಾನ
ಪ್ರಭಾಕರ(೨-೯೬)-ಬೆಳಕನ್ನು
ಕೊಡುವವ, ಸೂರ್ಯ
ಫಣಿ(೧-೪)-ಸರ್ಪ
ಫಣಿಕುಂಡಲ(೪-೩೮)-ಹಾವನ್ನು
ಆಭರಣವಾಗಿಸಿದವ, ಶಿವ
ಫಣೀಶ(೧-೯೮)-ಸರ್ಪಧರ, ಶಿವ

ಬ-ಭ

ಬಂಡು(೨-೯೫)-ಮಕರಂದ
ಬಗಿ(೩-೩೪)-ಸೀಳು
ಬಚ್ಚರಣೆ (೬-೩೭)-ವಜ್ರದ ಸಾಣೆ
ಹಿಡಿಯುವಿಕೆ

ಬಟ್ಟಮೊಲೆ(೧–೯೩)–ದುಂಡು ಮೊಲೆ
ಬಟ್ಟಿರಿ(೩–೪೪)–ಒಂದು ವಿಧದ ಆಯುಧ
ಬಟ್ಟೆ(೪–೨೭)–ಹಾದಿ
ಬಡನಡು(೧–೯೩)–ಸಣ್ಣ ನಡು
ಬಣಗು(೨–೨೩)–ಅಲ್ಪ, ಸಾಮಾನ್ಯ
ಬಣಗೆಯರು(೧–೩೭)–ಕೀಳು ಸ್ತ್ರೀಯರು
ಬತ್ತೀಸ (೩–೩೫)–ಮೂವತ್ತೆರಡು
ಬತ್ತೀಸರಾಗ(೪–೧೫)–ಮೂವತ್ತೆರಡು ರಾಗ
ಬತ್ತೀಸಾಯುಧ(೬–೫೨)–ಮೂವತ್ತೆರಡು ಆಯುಧ
ಬಲಿದು(೧–೮೬)–ದಪ್ಪವಾಗಿ
ಬಳಸು(೧–೩೦)–ಸುತ್ತುವರಿ
ಬಾಣವೈದ(೪–೪೬)ಪಂಚಬಾಣ, ಕಾಮ
ಬಾಣವೈದಸನ್ನಿಭ(೪–೪೬)–ಕಾಮನ ಸಮಾನ ರೂಪುಳ್ಳವನು
ಬಾಸೆ(೨–೨೦)–ಕೂದಲು
ಬಿಡಾರ(೪–೧೭)–ವಾಸಸ್ಥಳ, ಮನೆ
ಬಿದಿಗೆಯ ಶಶಿ(೧–೯೬)–ಹುಣ್ಣಿಮೆಯ ಚಂದ್ರ
ಬೆನವ(೧–೧೪)–ಬೆನಕ, ಗಣಪತಿ
ಬೋಧಿಸು (೨–೩೮)–ಹೇಳು
ಭಕ್ಷಣೆ(೧–೧೮)–ಆಹಾರ
ಭದ್ರ(೧–೧೮)–ವೀರಭದ್ರ
ಭಲ್ಲೂಕ(೨–೭೧)–ಕರಡಿ
ಭಲ್ಲೆ (೩–೪೩)–ಈಟಿ
ಭವಾರಿಧಿ(೭–೬೩)–ಭವಸಾಗರ
ಭಸಿತ(೧–೩೯)–ವಿಭೂತಿ
ಭಾಗೀರಥೀ(೧–೧)–ಗಂಗೆ
ಭಾನುಕುಲ(೬–೩೨)–ಸೂರ್ಯವಂಶ
ಭಾರತಿ(೧–೭೮)–ಶಾರದೆ
ಭಾರೈಸು(೧–೮೩)–ಭಾರವಾಗು
ಭಾಳ(೨–೫೪)–ಹಣೆ
ಭಾಳಲೋಚನ(೬–೫)–ಹಣೆಗಣ್ಣ, ಶಿವ
ಭಾಳಾಕ್ಷ(೭–೫೭)–ಹಣೆಗಣ್ಣ, ಶಿವ
ಭಾಳಾಕ್ಷಿ(೧–೨)–ಹಣೆಗಣ್ಣ
ಭೂಷಕರ್ಣೆ(೨–೫)–ಅಲಂಕಾರ ವಿದ್ಯೆ
ಭೃಂಗಕುಂತಳ(೧–೭೭)–ಕಪ್ಪು ತುರುಬು

ಮ

ಮಂಡಿಸು(೪–೧೦)–ಕುಳಿತುಕೊಳ್ಳು
ಮಂದಗತಿ(೧–೯೩)–ಸಾವಧಾನ ನಡೆ
ಮಂದಿರ(೫–೬೨)–ಅರಮನೆ
ಮಖ(೧–೧೮)–ಯಜ್ಞ
ಮಖಾಂಶು(೪–೨೫)–ಯಜ್ಞದ ಭಾಗ
ಮಗುಳೆ(೧–೭೦)–ಮತ್ತೆ, ಮರಳಿ
ಮಡಗು(೧–೮೩)–ಇಡು
ಮಡಲು(೧–೩)–ವಿಸ್ತರಿಸು, ಹಬ್ಬು
ಮತಿ(೧–೧)–ಬುದ್ಧಿ
ಮದಕರಿ(೨–೬೦)–ಸೊಕ್ಕಿದ ಆನೆ
ಮದನ(೧–೨)–ಕಾಮ
ಮದನಾರಿ(೧–೨೫)–ಶಿವ
ಮನಸಿಜಾರಿ(೧–೫೫)–ಕಾಮವೈರಿ, ಶಿವ

ಮನ್ಮಥ(೭–೫೮)–ಕಾಮ
ಮಯೂರ(೪–೩೨)–ನವಿಲು
ಮರುಳ(೨–೨೭)–ಹುಚ್ಚ

ಮಲತ(೬–೨೯)–ಸೊಕ್ಕಿದ
ಮಸ್ತಕ(೬–೪೧)–ಕಲೆ
ಮಹೀಷ(೫–೭೮)–ಅರಸ
ಮಾಂದಳಿರ್(೩–೨೦)–ಮಾವಿನ ಚಿಗುರು
ಮಾಜು(೨–೨೪)–ಬಿಡು, ನಿರಾಕರಿಸು
ಮಾಜು(೨–೮೩)–ಮರೆಮಾಡು, ಮುಚ್ಚಿಡು
ಮಾರ(೩–೩೧)–ಕಾಮ
ಮಾರಿಮುಖ(೩–೪೪)–ಒಂದು ಬಗೆಯ ಆಯುಧ
ಮಾರುತ(೩–೩೧)–ಗಾಳಿ
ಮಾರ್ಜಾಲ(೨–೭೧)–ಅಡವಿ ಬೆಕ್ಕು
ಮಾರ್ತಾಂಡ(೭–೬೧)–ಸೂರ್ಯ
ಮಾಸ(೧–೮೪)–ತಿಂಗಳು
ಮಾಸಾಳು(೫–೪೩)–ವೀರ, ಶೂರ, ಕಾಮ
ಮಿಂಡಿ(೧–೧೧)–ಜಾರಸ್ತ್ರೀ
ಮಿಡಿ(೨–೨೮)–ಸುರಿಸು
ಮಿಹಿರ(೨–೮೬)–ಸೂರ್ಯ
ಮುಂಚೆ(೨–೪೪)–ಮೊದಲು
ಮುಂದುಗೆಡು(೨–೩೨)–ಹಾದಿತಪ್ಪು, ಮುಂದೇನೆಂದು ತಿಳಿಯದಾಗು
ಮುಕುರ(೧–೨೧)–ಕನ್ನಡಿ
ಮುಕ್ಕಣ್ಣ(೧–೩೪)–ಮೂರು ಕಣ್ಣುಳ್ಳವ, ಶಿವ
ಮುಖವಾರಿಜ(೫–೬)–ಮುಖಕಮಲ
ಮುಡಿ(೪–೫೪)–ತಲೆಗೂದಲು
ಮುದ(೭–೫೮)–ಸಂತೋಷ
ಮುದ್ಗರ(೩–೪೩)–ಗದೆ
ಮುಪ್ಪುರ(೨–೬೧)–ಮೂರುಪುರ, ತ್ರಿಪುರ
ಮುರಿತಾಪ (೬–೪೪)–ಒಂದುಬಗೆಯ ವಾದ್ಯ
ಮುಸುಂಡ(೩–೪೩)–ಒಂದು ಬಗೆಯ ಆಯುಧ
ಮುಸುಲಿ(೩–೪೩)–ಒನಕೆ
ಮೃಡ(೧–೨೭)–ಶಿವ
ಮೆಲ್ಲಡಿಗಮನ(೪–೫೫)–ಮೆಲುನಡೆ, ಸಾವಕಾಶ ನಡೆ
ಮೇಘ(೨–೮೯)–ಮುಗಿಲು, ಮೋಡ
ಮೌಕ್ತಿಕ(೧–೩೧)–ಮುತ್ತು

ರ–ಲ

ರತಿರಾಜಮರ್ದನ(೪–೨೧)–ಕಾಮ ಮರ್ದನ, ಶಿವ
ರತ್ನಗಭಸ್ತಿ (೪–೨೫)–ರತ್ನದ ಕಾಂತಿ
ರಬಾಬು(೬–೪೪)–ಒಂದು ಬಗೆಯ ವಾದ್ಯ
ರವಿಕುಲ (೪–೪)–ಸೂರ್ಯವಂಶ
ರಾಜಮರಾಳ(೩–೧೧೨)–ರಾಜಹಂಸ
ರಾಜೀವಮುಖಿ(೩–೧೧೨)–ಕಮಲಮುಖಿ
ರಿತುಕಾಲ(೩–೨೬)–ಋತುಕಾಲ
ಲಂಬಿಸು–(೫–೪೭)–ಉದ್ದವಾಗು

ಲಂಬೋದರ(೧–೧೪)–
ದೊಡ್ಡಹೊಟ್ಟೆಯುಳ್ಳವ, ಗಣಪತಿ
ಲತೆ(೧–೬೫)–ಬಳ್ಳಿ
ಲುಬ್ಧಕ(೨–೫೬)–ಬೇಡರವ
ಲೆಂಗಿಸು(೬–೭೯)–ಜಿಗಿ, ಹಾರು

ವ

ವದನ(೧–೮೫)–ಮುಖ
ವನಧಿ(೩–೩೧)–ಸಮುದ್ರ
ವಹ್ನಿ(೭–೫೯)–ಬೆಂಕಿ
ವಾಜಿ(೪–೨೯)–ಕುದುರೆ
ವಾಜಿಯೇರಾಟ(೪–೨೯)–
ಕುದುರೆ ಸವಾರಿ
ವಾಣಿ(೧–೨೪)–ಶಾರದೆ, ಸರಸ್ವತಿ
ವಾಯಣ(೨–೫)–ಮೋಸಗಾರಿಕೆ
ವಾರಣ(೧–೩೧)–ಆನೆ, ಐರಾವತ
ವಾರಿರುಹ(೨–೫೨)–ನೀರಲ್ಲಿ
ಹುಟ್ಟಿದ್ದು, ಕಮಲ
ವಾರುವ(೭–೧೯)–ಕುದುರೆ
ವಾರುಹಾಕ್ಷಿ(೨–೫೨)– ಕಮಲಾಕ್ಷಿ
ವಾಸುಗಿ(೧–೫೯)–ಸರ್ಪ
ವಿಪಿನ(೭–೫೯)–ಕಾಡು
ವಿರಂಚಿ(೪–೩೮)–ಬ್ರಹ್ಮ
ವಿರಂಚಿಕಂಧರ(೪–೩೮)–ಬ್ರಹ್ಮನ
ತಲೆ
ವೀಳೆಯ(೬–೩೪)–ಆದೇಶ, ಆಜ್ಞೆ,
ಅಪ್ಪಣೆ
ವೇಣಿ(೧–೪೦)–ಪ್ರವಾಹ, ನದಿ
ವ್ಯಾಘ್ರಾಜಿನ(೧–೪)–ಹುಲಿಚರ್ಮ

ಶ–ಸ

ಶಂಭರಾರಿ(೨–೬೦)–ಶಿವ
ಶಬರ ಶಬರಿ(೨–೬೪)–ಬೇಡ,
ಬೇಡತಿ
ಶಶಾಂಕ(೪–೩೦)–ಚಂದ್ರ
ಶಶಿ(೧–೨೮)–ಚಂದ್ರ
ಶಾರ್ದೂಲ(೬–೩೫)–ಹುಲಿ
ಶಿರ(೪–೧೩)–ತಲೆ
ಶಿವನ ಕೃತ್ತಿಮ(೫–೨೧)–
ಶಿವನಲೀಲೆ, ಶಿವನತಂತ್ರ
ಶಿವೆ(೧–೭)–ಪಾರ್ವತಿ
ಶಿವೆಯಾಣ್ಮ(೧–೭)–ಶಿವ
ಶೈಲ(೧–೨೮)–ಪರ್ವತ
ಷಡುರಸಾನ್ನ(೨–೨೮)–ಆರು ರಸಗಳಿಂದ
ಸಿದ್ಧಪಡಿಸಿದ ಅನ್ನ
ಷೋಡಶ(೬–೧೩)–ಹದಿನಾರು
ಷೋಡಶಕಳೆ(೪–೨೭)–ಹದಿನಾರು
ಕಲೆ
ಷೋಡಶೋಪಚಾರ(೧–೫೭)
ಹದಿನಾರು ರೀತಿಯ
ಪೂಜೋಪಚಾರ
ಸಂತಾನ(೧–೪೯)–ಮಕ್ಕಳ ಫಲ
ಸಂದಳಿ(೪–೧)–ಗುಂಪು
ಸಗ್ಗ(೩–೩೨)–ಸ್ವರ್ಗ
ಸಟೆ(೧–೭೪)–ಸುಳ್ಳು
ಸನ್ನಿಭ(೪–೪೬)–ಸಮಾನ
ಸಬಳ(೩–೪೩)–ಭರ್ಚಿ
ಸಮಿದೆ(೨–೭೭)–ಕಟ್ಟಿಗೆ
ಸರದಿ(೪–೨)–ಶರದಿ, ಸರೋವರ
ಸರಸಿಜ(೧–೩೭)–ನೀರಿನಲ್ಲಿ
ಹುಟ್ಟಿದುದು, ಕಮಲ

ಸರಸಿಜರಿಪು(೧-೩೨)-ಕಮಲವೈರಿ, ಚಂದ್ರ
ಸರಳು(೨-೯೨)-ಬಾಣ
ಸರಿಮಿಂಡಿ(೫-೭೬)- ಸಮವಯಸ್ಸಿನ ಹೆಣ್ಣು, ಯೌವ್ವನ ಸ್ತ್ರೀ
ಸಸಿ(೫-೧೦೫)-ಶಶಿ, ಚಂದ್ರ
ಸಸಿಜೊನ್ನ(೩-೬೦)-ಬೆಳದಿಂಗಳು
ಸಾಸಿರ(೪-೩೬)-ಸಾವಿರ
ಸಿಂಗರ(೧-೪೦)-ಶೃಂಗಾರ
ಸಿಂಧು(೧-೩೦)-ಸಮುದ್ರ
ಸಿರಮಾಲೆ(೪-೩೮)-ರುಂಡಮಾಲೆ
ಸಿರಿ(೧-೩೧)-ಲಕ್ಷ್ಮಿ
ಸಿರಿ(೧-೫೧)-ಸಂಪತ್ತು
ಸಿರಿಮುಡಿ(೧-೬೧)-ತಲೆ
ಸುರಗಿ(೩-೨೮)-ಸುರಹೊನ್ನೆ ಹೂ
ಸುರಗಿ(೩-೪೨)-ಖಡ್ಗ
ಸುರತರು(೧-೭೫)-ಕಲ್ಪವೃಕ್ಷ
ಸುರಧೇನು(೧-೭೫)-ಕಾಮಧೇನು
ಸುರಪತಿ(೧-೩೧)-ಇಂದ್ರ
ಸುಲಿಪಲ್ಲ(೧-೯೪)-ಶುಭ್ರ ಹಲ್ಲು
ಸುವರ್ಣ(೧-೨)-ಬಂಗಾರ
ಸೊಲ್ಲಿಸು(೧-೯೪)-ಹೇಳು
ಸೋಗೆನವಿಲು(೧-೧)-ಗಂಡು ನವಿಲು
ಸೋರ್ಮುಡಿ(೫-೪)-ಸಡಿಲಾದ ಮುಡಿ, ಜೋಲುವ ಕೂದಲು
ಸೋರ್ಮುಡಿ(೨-೨೦)-ಮುಂಗುರುಳು
ಸ್ಥಾಣು(೬-೧೫)-ಅಚಲ
ಸ್ಥಾನಪತಿ(೪-೫)-ಸ್ಥಳೀಯ ಅಧಿಕಾರಿ
ಸ್ಮರ(೫-೯)-ಕಾಮ

ಹ

ಹಕ್ಕೆ(೪-೪೭)-ಆಶ್ರಯ
ಹದನ(೫-೯೧)-ವೃತ್ತಾಂತ
ಹದನು(೨-೪೨)-ರೀತಿ
ಹರ(೧-೩೧)-ಶಿವ
ಹರದಿಕೆ(೫-೮೨)-ವ್ಯಾಪಾರ
ಹರವಾಗಿಹ(೧-೬)-ವಿಶಾಲವಾಗಿರುವ
ಹರಿ(೧-೩೧)-ವಿಷ್ಣು
ಹರಿಗೆ(೩-೪೨)-ಗುರಾಣಿ
ಹರಿಣ(೨-೭೧)-ಜಿಂಕೆ
ಹರಿತಹ(೫-೫೮)-ಓಡಿ ಬರುವ
ಹರೆ(೬-೪೪)-ಭೇರಿ, ಒಂದು ಬಗೆಯ ಚರ್ಮವಾದ್ಯ
ಹಲಬು(೪-೪೭)-ಹಂಬಲಿಸು
ಹಸೆ(೧-೬೨)-ಮದುಮಕ್ಕಳು ಕುಳಿತುಕೊಳ್ಳುವ ಮಣೆ
ಹಳಚು(೬-೬೪)-ಎದುರಾಗು
ಹಳುವು(೧-೫೨)-ಕಾಡು, ಅರಣ್ಯ, ಅಡವಿ
ಹಾರು(೨-೯೦)-ಕಾಯು, ಬಯಸು
ಹಾಹೆ(೧-೧೭)-ಗೊಂಬೆ
ಹೀಲ(೨-೬೮)-ಒಂದು ಜಾತಿಯ ಮರ
ಹುಲ್ಲೆಗಣ್ಣು(೫-೮)-ಜಿಂಕೆಕಣ್ಣು
ಹುಸಿ(೧-೩೯)-ಸುಳ್ಳು
ಹೇಮಾದ್ರಿ(೧-೩೨)-ಬಂಗಾರದ ಬೆಟ್ಟ
ಹೇರಂಬ(೧-೧೪)-ಗಣೇಶ, ಗಣಪತಿ
ಹೊಂದಾವರೆ (೧-೪೦)-ಕೆಂಪು ಕಮಲ
ಹೊಣಕೆ(೫-೪೪)-ಶಕ್ತಿ, ಸಾಮರ್ಥ್ಯ
ಹೊಲಬು(೫-೫೬)-ಗುರುತು

ಪಾರಿಭಾಷಿಕ ಪದಗಳು

ಅರಿಷಡ್ವರ್ಗ (ತ್ರಿ. ೨–೧೩೭)

ಕಾಮ, ಕ್ರೋಧ, ಲೋಭ, ಮೋಹ ಮದ, ಮತ್ಸರ–ಎಂಬ ಆರು ವೈರಿಗಳು.

ಅಷ್ಟಕುಲ ಪರ್ವತಗಳು (ತ್ರಿ. ೨–೬)

ಮೇರು, ಮಂದರ, ಕೈಲಾಸ, ವಿಂಧ್ಯಾಚಲ, ನಿಷಧ, ಗಂಧಮಾದನ, ಮಾಲ್ಯವಂತ, ಹಿಮಾಲಯ–ಎಂಬ ಎಂಟು ಮಹಾಪರ್ವತಗಳು.

ಅಷ್ಟ ದಿಕ್ಕುಗಳು (ತ್ರಿ. ೨–೨೯)

ಪೂರ್ವ, ಆಗ್ನೇಯ, ದಕ್ಷಿಣ, ನೈರುತ್ಯ, ಪಶ್ಚಿಮ, ವಾಯುವ್ಯ, ಉತ್ತರ, ಈಶಾನ್ಯ–ಎಂಬ ಎಂಟು ದಿಕ್ಕುಗಳು.

ಅಷ್ಟ ದಿಗ್ಗಜಗಳು (ತ್ರಿ. ೫–೧೩೬)

ಐರಾವತ, ಪುಂಡರೀಕ, ವಾಮನ, ಕುಮುದ, ಅಂಜನ, ಪುಷ್ಪದಂತ, ಸಾರ್ವಭೌಮ, ಸುಪ್ರತೀಕ–ಎಂಬ ಎಂಟು ದಿಕ್ಕಿನ ಆನೆಗಳು.

ಅಷ್ಟ ಮದ (ತ್ರಿ. ೨–೧೩೭)

ಕುಲಮದ, ಬಲಮದ, ಧನಮದ, ರೂಪಮದ, ಯೌವ್ವನಮದ, ವಿದ್ಯಾಮದ, ರಾಜ್ಯಮದ, ತಪೋಮದ–ಎಂಬ ಎಂಟು ಮದಗಳು. ಅಷ್ಟಾಂಗಯೋಗ

ಅಷ್ಟಯೋಗ (ತ್ರಿ. ೧–೯೫)

ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ ಸಮಾಧಿ–ಎಂಬ ಎಂಟು ಯೋಗಗಳು. ಇವುಗಳಿಗೆ ಯೋಗಾಂಗಗಳೆಂದು ಕರೆಯುತ್ತಾರೆ.

ಅಷ್ಟಾಂಗ ಸೈನ್ಯ (ತ್ರಿ.)

ರಥ, ಹಸ್ತಿ, ಅಶ್ವ, ಪದಾತಿ, ವಿಷ್ಟಿ, ನಾವಿಕ, ಚರ, ದೇಶಿಕ–ಎಂಬ ಸೈನ್ಯದ ಎಂಟು ಅಂಗಗಳು.

ಅಷ್ಟಾದಶ ವಿದ್ಯೆಗಳು : (ಮ. ೨-೨)

ನಾಲ್ಕು ವೇದಗಳು (ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ), ಆರು ವೇದಾಂಗಗಳು (ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜೋತಿಷ್ಯ, ಕಲ್ಪ), ಧರ್ಮಶಾಸ್ತ್ರ, ಪುರಾಣ, ಮೀಮಾಂಸಾ, ನ್ಯಾಯ, ಆಯುರ್ವೇದ, ಧನುರ್ವೇದ, ಗಾಂಧರ್ವವೇದ, ಅರ್ಥಶಾಸ್ತ್ರ. ಇವು ೧೮ ವಿದ್ಯೆಗಳು.

ಅಷ್ಟಾದಶ ವರ್ಣನೆಗಳು (ಮ. ೧-೨೮, ೨೯)

ಉದಧಿ, ಪುರ, ಅಧಿಪ, ಸುತ, ಮಂತ್ರಿ, ದೂತ, ಗಮನ, ಆಜಿ, ವಿರಹ, ಶೈಲ, ಋತು, ಉದ್ಯಾನ, ವಿವಾಹ, ಜಲಕ್ರೀಡೆ, ಸುರತಕೇಳಿ, ಚಂದ್ರೋದಯ, ಸೂರ್ಯೋದಯ, ಮಧುಪಾನ-ಇವು ಮಹಾಕಾವ್ಯದಲ್ಲಿ ಬರುವ ೧೮ ವರ್ಣನೆಗಳು.

ಈರೇಳು ಲೋಕ (ತ್ರಿ ೩-೧೮೦); ಹದಿನಾಲ್ಕು ಭುವನ (ತ್ರಿ ೨-೮೪)

ಭೂಲೋಕ, ಭುವರ್ಲೋಕ, ಸ್ವರ್ಲೋಕ, ಮಹರ್ಲೋಕ, ಜನರ್ಲೋಕ, ತಪೋಲೋಕ, ಸತ್ಯಲೋಕ-ಇವು ಏಳು ಊರ್ಧ್ವಲೋಕಗಳು.

ಅತಲ, ವಿತಲ, ಸುತಲ, ರಸಾತಲ, ತಲಾತಲ, ಮಹಾತಲ, ಪಾತಾಳ - ಇವು ಏಳು ಅಧೋಲೋಕಗಳು

ಚತುರಂಗಬಲ (ತ್ರಿ)

ರಥ, ಹಸ್ತಿ, ಅಶ್ವ, ಪದಾತಿ-ಇವು ಯುದ್ಧಗಳಲ್ಲಿ ಬಳಸುವ ನಾಲ್ಕು ರೀತಿಯ ಸೈನ್ಯದ ಬಲಗಳು.

ಚವುಷಷ್ಠಿ ವಿದ್ಯೆಗಳು (ಮ. ೨-೯ ; ೩-೭೪; ೪-೪)

೧. ಇತಿಹಾಸ, ೨. ಆಗಮ, ೩. ಕಾವ್ಯಾಲಂಕಾರ, ೪. ನಾಟಕ, ೫. ಗಾಯನ, ೬. ಕವಿತ್ವ, ೭. ಕಾಮಶಾಸ್ತ್ರ, ೮. ದುರೋದರ (ದ್ಯೂತ-ಪಗಡೆ), ೯. ದೇವಭಾಷಾಲಿಪಿ ಜ್ಞಾನ, ೧೦. ಲಿಪಿಕರ್ಮ, ೧೧. ವಾಚನ, ೧೨. ಗಣಕ, ೧೩. ವ್ಯವಹಾರ, ೧೪. ಸ್ವರಶಾಸ್ತ್ರ, ೧೫. ಶಾಕುನ (ಶಕುನಶಾಸ್ತ್ರ), ೧೬. ಸಾಮುದ್ರಿಕ, ೧೭. ರತ್ನಶಾಸ್ತ್ರ, ೧೮. ಗಜಾಶ್ವರಥಕೌಶಲ, ೧೯. ಮಲ್ಲಶಾಸ್ತ್ರ, ೨೦. ಸೂಪಕರ್ಮ, ೨೧. ಭೂರುಹ ದೋಹನ, ೨೨. ಗಂಧವಾದ, ೨೩. ಧಾತುವಾದ, ೨೪. ಖನಿವಾದ, ೨೫. ರಸವಾದ, ೨೬. ಬಿಲವಾದ, ೨೭. ಅಗ್ನಿಸಂಸ್ತಂಭ, ೨೮. ಖಡ್ಗಸ್ತಂಭ, ೨೯. ಜಲಸ್ತಂಭ, ೩೦. ವಾಚಸ್ತಂಭ, ೩೧. ವಯಸ್ತಂಭ, ೩೨, ವಶೀಕರಣ, ೩೩. ಆಕರ್ಷಣ, ೩೪. ಮೋಹನ, ೩೫. ವಿದ್ವೇಷಣ, ೩೬. ಉಚ್ಚಾಟನ, ೩೭. ಮಾರಣ, ೩೮. ಕಾಲವಂಚನ, ೩೯. ಪರಕಾಯ ಪ್ರವೇಶ, ೪೦. ಪಾದುಕಾ ಸಿದ್ಧಿ, ೪೧. ವಾಕ್ಸಿದ್ಧಿ, ೪೨. ಘುಟಿಕಾಸಿದ್ಧಿ, ೪೩. ಐಂದ್ರಜಾಲಿಕ, ೪೪. ಅಂಜನ, ೪೫. ಪರದೃಷ್ಟಿ ವಂಚನ, ೪೬. ಸ್ವರವಂಚನ, ೪೭. ಮಣಿ ಮಂತ್ರೌಷಧಸಿದ್ಧಿ, ೪೮. ಚೋರಕರ್ಮ,. ೪೯. ಚಿತ್ರಕ್ರಿಯಾ, ೫೦.

ಲೋಹಕ್ರಿಯಾ, ೫೧. ಅಶ್ಮಕ್ರಿಯಾ, ೫೨. ಮೃತ್‌ಕ್ರಿಯಾ, ೫೩. ದಾರುಕ್ರಿಯಾ, ೫೪. ವೇಣುಕ್ರಿಯಾ, ೫೫. ಚರ್ಮಕ್ರಿಯಾ, ೫೬, ಅಂಬರಕ್ರಿಯಾ, ೫೭. ಅದೃಶ್ಯಕರಣ, ೫೮. ದಂತಿಕರಣ, ೫೯. ಮೃಗಯಾವಿಧಿ, ೬೦. ವಾಣಿಜ್ಯ, ೬೧. ಪಾಶುಪಾಲ, ೬೨. ಕೃಷಿ, ೬೩. ಆಸವಕರ್ಮ, ೬೪. ಲಾವಕುಕ್ಕುಟ ಮೇಷಾದಿ ಯುದ್ಧಕಾರಕ ಕೌಶಲ–ಇವು ಅರವತ್ನಾಲ್ಕು ವಿದ್ಯೆಗಳೆನಿಸುತ್ತವೆ.

ಚಪ್ಪನ್ನ ದೇಶಗಳು : (ಮ. ೫–೬೯)

(೧) ಅಂಗ, ವಂಗ, ಕಳಿಂಗ, ತೆಲುಂಗ, ಕೊಂಗ, ಲಾಟ, ಬಂಗಾಳ, ಚೋಳ, ಕೇರಳ, ಗೌಳ, ಪಾಂಚಾಳ, ಸಿಂಹಳ, ಕುಂತಳ, ನೇಪಾಳ, ಮಲಯಾಳ, ತುಳವ, ಸೈಂಧವ, ಕೊಂಕಣ, ಕುರು, ಮಗಧ, ಮತ್ಸ್ಯ, ವಿದರ್ಭ, ಕೋಸಲ, ಶೂರಸೇನ, ಕಾಶ್ಮೀರ, ಮಹಾರಾಷ್ಟ್ರ, ಕರ್ಣಾಟ, ಕಿರಾತ, ತುರುಷ್ಕ, ಶಂಕರ, ಬರಮ, ತಿಗರ್ತ, ನಿಷಧ, ಮಧ್ಯ, ಜೈನ, ಬರ್ಬರ, ಬಾಹ್ಲೀಕ, ಲಾಟಿ, ಜೈನ, ಕರಾಳ, ಓಡ್ರ, ಘೂರ್ಜರ, ಕಾಂಭೋಜ, ಸೌರಾಷ್ಟ್ರ, ಸೌವೀರ, ಪಾಂಡ್ಯ, ಹೂಣ, ಯವನ, ಮ್ಲೇಚ್ಛ, ಹೈಹಯ, ಆರ್ಯಾವರ್ತ, ಭೋಜ, ದ್ವೈಪ, ಅಮರಕ, ಉತ್ತರಕುರು, ಗೈಟಿ (ವಿವೇಕ ಚಿಂತಾಮಣಿ).

(೨) ಅಂಗ, ವಂಗ, ಕಳಿಂಗ, ಕರ್ಣಾಟ, ಕೇರಳ, ಕಾಮರೂಪ, ಮಾಳವ, ಗೌಡ, ವನವಾಸ, ಕುಂತಲ, ಕೊಂಕಣ, ಮಗಧ, ಸೌರಾಷ್ಟ್ರ, ಲಾಟ, ಭೋಟ, ವರಾಟ, ಶಬರ, ಕುಕರ, ಕುರು, ಆವಂತಿ, ಪಾಂಡ್ಯ, ಮದ್ರ, ಸಿಂಹಳ, ಘೂರ್ಜರ, ಪಾರಶೀಕ, ಮಿಥಿಲ, ಪಾಂಚಾಲ, ಶೂರಸೇನಿ, ಗಾಂಧಾರ, ಬಾಹ್ಲೀಕ, ಹೈಹಯ, ತೌಳವ, ಸಾಲ್ವ, ಪುಂಡ್ರಕ, ಪ್ರಾಗ್ಜ್ಯೋತಿಷ, ಮತ್ಸ್ಯ, ಚೇದಿ, ಬರ್ಬರ, ನೇಪಾಳ, ಗೌಳ, ಕಾಶ್ಮೀರ, ಕನ್ಯಾಕುಬ್ಜ, ಮಾಗಧ (ವಿದರ್ಭ), ಖುರಸಾಣ, ಮಹಾರಾಷ್ಟ್ರ, ಕೋಸಲ, ಕೇಕಯ, ಅಹಿಚ್ಛತ್ರ, ತ್ರಿಲಿಂಗ, ಪ್ರಯಾಗ, ಕರಹಾಟಕ, ಕಾಂಭೋಜ, ಭೋಜ, ಚೋಳ, ಹೂಣ, ಕಾಶಿ (ಶಿವತತ್ವರತ್ನಾಕರ).

(೩) ಅಂಗ, ಮಲೆಯಾಳ, ಮಾಳವ, ಮಗಧ, ಬರ್ಬರ, ಕಳಿಂಗ, ಕಾಶ್ಮೀರ, ಕೊಂಕಣ, ಸಿಂಧು, ಹಮ್ಮೀರ, ವಂಗ, ಹೊಯಿಸಳ, ತುಳುವ, ಚೋಳ, ಚೇರಮ, ಪಾಂಡ್ಯ, ಯವನ, ಸೌವೀರ, ಮಚ್ಛ, ಬಂಗಾಳ, ಜೈನ, ಜೋನೆಗ, ಸಗರ, ಹೈವಿಗ, ತೆಲುಂಗ, ಗುರ್ಜರ, ಗೌಳ, ನೇಪಾಳ, ಸೌರಾಷ್ಟ್ರ, ಸಿಂಗಳ, ದ್ರಾವಿಡ, ಕಾಂಬೋಜ, ಲಾಟ, ಪಾಂಚಾಳ, ವೈದರ್ಭ, ಕುರು, ಕುಕುರ, ಕರಹಾಟ, ಕರ್ಪರ, ಅವಂತಿಕ, ಪಾರಿಯಾತ್ರ, ಕರ್ಣಾಟ, ಕೋಸಲ, ಮಂದಭದ್ರ, ಕುಂತಳ, ಮಹಾಚೀನಕ, ವಿದೇಹ, ಭೋಟಕ, ತುರಷ್ಕ, ಒಡ್ಡಿಯ, ಪಾರಸಿಕ, ಮಹಾಘೋಟಕ, ಪುಳಿಂದಕ, ಸ್ತ್ರೀರಾಜ್ಯ, ಕೊಂಗು, ಮರಾಟ (ಚೆನ್ನಬಸವ ಪುರಾಣ)

(೪) ಅಂಗ, ವಂಗ, ಕಳಿಂಗ, ಕಾಶ್ಮೀರ, ಕಾಮರೂಪ, ಸೌರಷ್ಟ್ರ, ಗಾಂಧಾರ, ಕೇರಳ, ಚೋಳ, ಕೋಸಲ, ಮತ್ಸ್ಯ, ಮಾಳವ, ನೇಪಾಳ, ಪಾಂಚಾಲ, ಸಿಂಹಳ, ಕಾಂಭೋಜ, ಸೌವೀರ, ಬಂಗಾಳ, ಮಾಗಧ, ಕುಂತಳ, ಮಲಯಾಳ, ಮಗಧ, ವತ್ಸ, ಸೈಂಧವ, ಜ್ವಾಲ, ಸಾಲ್ವ, ಮದ್ರ, ಮೈಂದ, ಸಿಂಧು, ಆಂಧ್ರ, ದ್ರಾವಿಡ, ದ್ರವಿಡ, ಲಾಟ, ಮರಾಟ, ದಶಾರ್ಣ, ಪಾಂಡ್ಯ, ವರಾಟ, ಬಾಹ್ಲೀಕ, ಪುಳಿಂದ, ವಿದರ್ಭ, ಪಾರಸೀಕ, ಬರ್ಬರ, ಹೂಣ, ಘೂರ್ಜರ, ಕೇಕಯ, ಕಿರಾತ, ಟಂಕಣ, ಕೊಂಕಣ, ಕುರು, ಶೂರಸೇನ, ಯವನ, ವಿದೇಹ, ಚೇದಿ, ಭೋಜ, ಅವಂತಿ, ಕರ್ನಾಟ (ಮುಮ್ಮಡಿ ಕೃಷ್ಣರಾಜರ–ಸಂಖ್ಯಾರತ್ನಮಾಲಾ ಟೀಕೆ)–ಇವು ೫೬ ದೇಶಗಳು.

ತ್ರಿಜಗ (ತ್ರಿ. ೧–೨೮); **ತ್ರೈಜಗ** (ತ್ರಿ. ೨–೬೫)

ಸ್ವರ್ಗ ಮರ್ತ್ಯ, ಪಾತಾಳ ಎಂಬ ಮೂರುಲೋಕಗಳು.

ನವಗ್ರಹಗಳು (ತ್ರಿ. ೩–೭೨)

ಸೂರ್ಯ, ಸೋಮ (ಚಂದ್ರ), ಮಂಗಳ, ಬುಧ, ಗುರು, ಶುಕ್ರ, ಶನಿ, ರಾಹು, ಕೇತು–ಎಂಬ ಒಂಬತ್ತು ಗ್ರಹಗಳು.

ನವರಸ (ಮ. ೧–೨೩)

ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಬೀಭತ್ಸ, ರೌದ್ರ, ಶಾಂತ–ಇವು ಒಂಬತ್ತು ಕಾವ್ಯರಸಗಳು.

ಪಂಚಮುಖ (ತ್ರಿ. ೨–೯೧)

ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ – ಇವು ಶಿವನ ಐದು ಮುಖಗಳು.

ಪಂಚವಾದ್ಯಗಳು (ತ್ರಿ. ೨–೮೦)

ಕಹಳೆ, ಗಂಟೆ, ಭೇರಿ, ವೀಣೆ, ಶಂಖ, (ಕೊಂಬು, ತಮ್ಮಟೆ, ಶಂಖ, ಭೇರಿ, ಜಾಗಟೆ)–ಇವು ಐದು ಮಂಗಲ ವಾದ್ಯಗಳೆಂದು ಕರೆಯಿಸಿಕೊಳ್ಳುತ್ತವೆ.

ಬತ್ತೀಸಾಯುಧ (ತ್ರಿ. ೨–೪೯ ; ಮ. ೬–೫೭)

(೧) ಚಕ್ರ, ಭಿಂಡಿವಾಳ, ಭೃಶುಂಡಿ, ದೃಘಣ, ದಂಶಕಂಟಕ, ಇಳಾಹಸ್ತ, ಇಷು, ಮುಸಲ, ಮೌಷ್ಟಿಕ, ಮಯೂಖ, ಲಗುಡ, ಲವಿತ್ರ, ಪರಿಘ, ಪ್ರಾಸ, ಪಾಶ, ಶಕ್ತಿ, ಶತಘ್ನಿ, ಸೀರ, ಸ್ಥೂಣ, ತೋಮರ, ಗದಾ, ಗೋಶೀರ್ಷ, ಅಮುಕ್ತ ವಜ್ರ, ಆಸ್ತರ, ಅಸಿಧೇನುಕ, ಪಟ್ಟಸ, ಮುದ್ಗರ, ಪಿನಾಕ, ಕುಂತ, ಕಾಳರಾತ್ರಿ, ಯಾಪನ, ಆಳಿಕಾ.

(೨) ಖಡ್ಗ, ಕರಾಚೂರಿ, ಕಕ್ಕಡ, ಕಡುಗತ್ತಿ, ಸಣೆಗತ್ತಿ, ಸಬಳ, ಈಟಿ, ಇದುರುಗತ್ತಿ, ಉಬ್ಬಣ, ಕಬ್ಬಿಣಕೋಲು, ಚಕ್ರ, ಚಂಡು, ವೋತಿ, ಚಲ್ಲೆಹ, ಬಲ್ಲೆಹ,

ಬಂಕು, ಬಾಣ, ಸೆದೆ, ನರಾದಿ, ಶೂಲ, ಶರಾದಿ, ಚೂರಿ, ಚಿಕ್ಕತಾರಿ, ಕಿರಸೆ, ಪರಶು, ಪಾಶ, ಪಟ್ಟೆಯ, ಮಟ್ಟ, ಅಂಕುಶ, ವಂಕಿ, ಲೌಡಿ, ಜವದಾಡೆ.

(೩) ಬಾಣ, ಖಡ್ಗ, ತೋಮರ, ಸ್ತೋಮ, ಸೃಗ, ಚೇರಿ, ಶಕ್ತಿ, ಯಷ್ಟಿ, ಭಿಂಡಿವಾಲ, ಪರಿಷ, ಪರಶು, ಗದೆ, ಪ್ರಾಸ, ಮುದ್ಗರ, ಮುಸಲ, ಶೂಲ, ಪಾಶ, ಚಕ್ರ, ಮುಸುಂಡಿ, ವಜ್ರ, ದಂಡ, ಹಲ, ಅಶನಿ, ಕುಂತ, ಅರಿಷ್ಟ, ಕ್ರಕಚ, ಪರಶು, ಶಂಕು, ತೋತ್ರ, ವೇಣು, ತ್ರಿಶೂಲ, ಕುಸೂಲ – ಇವು ೩೨ ಆಯುಧಗಳು.

ಮೂವತ್ತಾರು ತತ್ವಗಳು (ತ್ರಿ. ೨–೧೩೮)

೨೫ ಆತ್ಮತತ್ವಗಳು, ೧೦ ವಿದ್ಯಾತತ್ವ ಮತ್ತು ೧ ಶಿವತತ್ವ ಸೇರಿ ಒಟ್ಟು ಮೂವತ್ತಾರು ತತ್ವಗಳು.

ಆತ್ಮತತ್ವಗಳು : ಪಂಚಭೂತಗಳು, ಪಂಚ ಜ್ಞಾನೇಂದ್ರಿಯಗಳು, ಪಂಚ ವಿಷಯಗಳು, ಪಂಚ ಕರ್ಮೇಂದ್ರಿಯಗಳು, ಪಂಚ ಮನಾದಿಗಳು.

- ಪೃಥ್ವಿ, ಅಪ್, ತೇಜ, ವಾಯು, ಆಕಾಶ–ಪಂಚಭೂತಗಳು
- ಶಬ್ದ, ಸ್ಪರ್ಶ, ರೂಪ, ರಸ, ಗಂಧ–ಪಂಚ ವಿಷಯಗಳು
- ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ–ಪಂಚ ಜ್ಞಾನೇಂದ್ರಿಯಗಳು
- ಗುದ, ಗುಹ್ಯ, ಪಾದ, ಪಾಣಿ, ವಾಕ್–ಪಂಚ ಕರ್ಮೇಂದ್ರಿಯಗಳು
- ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನ, ಸುಜ್ಞಾನ–ಪಂಚ ಮನಾದಿಗಳು

ವಿದ್ಯಾತತ್ವಗಳು : ಕರ್ಮಸಾದಾಖ್ಯ, ಕರ್ತೃಸಾದಾಖ್ಯ, ಮೂರ್ತಿಸಾದಾಖ್ಯ, ಅಮೂರ್ತಿಸಾದಾಖ್ಯ, ಶಿವಸಾದಾಖ್ಯ,–ಎಂಬ ಪಂಚಸಾದಾಖ್ಯಗಳು
ನಿವೃತ್ತಿಕಲೆ, ಪ್ರತಿಷ್ಠಾಕಲೆ, ವಿದ್ಯಾಕಲೆ, ಶಾಂತಿಕಲೆ, ಶಾಂತ್ಯಾತೀತಕಲೆ–ಎಂಬ ಪಂಚಕಲೆಗಳು.
ಶಿವತತ್ವ–ಒಂದು. ಈ ಎಲ್ಲ ಸೇರಿ ೩೬ ತತ್ವಗಳೆನಿಸುತ್ತವೆ.

ಷಡ್ರಸಗಳು (ಮ. ೨–೨೮)

ಮಧುರ, ಆಮ್ಲ, ಲವಣ, ತಿಕ್ತ, ಕಟು, ಕಷಾಯ–ಇವು ಆರು ರಸಗಳು.

ಷೋಡಶೋಪಚಾರ (ಮ. ೬–೧೧)

(೧) ಅರ್ಘ್ಯ, ಪಾದ್ಯ, ಆಚಮನ, ಪತ್ರಪುಷ್ಪ, ಗಂಧ, ಅಕ್ಷತೆ, ರುದ್ರಾಕ್ಷಮಾಲಾ, ಛತ್ರ, ಚಾಮರ, ವ್ಯಜನ, ಗೀತ, ವಾದ್ಯ, ನರ್ತನ, ಪ್ರದಕ್ಷಿಣ, ನಮಸ್ಕಾರ, ಸ್ತೋತ್ರ – ಇವು ಹದಿನಾರು ಉಪಚಾರಗಳು.

(೨) ಮಜ್ಜನ ಮಾಡಿಸುವುದು, ದೇವಾಂಗ ಉಡಿಸುವುದು, ಸುಗಂಧ ದ್ರವ್ಯ ಲೇಪಿಸುವುದು, ಅಕ್ಷತೆಯ ನೀಡುವುದು, ಪರಿಮಳ ಪುಷ್ಪವ ಮುಡಿಸುವುದು, ಧೂಪವಾಸನೆಯ ಕೊಡುವುದು, ಆರತಿಯ ಬೆಳಗುವುದು, ಮೃಷ್ಟಾನ್ನವನ್ನು ನೀಡುವುದು, ಅಮೃತ ಪಾನಗಳನ್ನು ಕೊಡುವುದು, ಹಸ್ತ ಪ್ರಕ್ಷಾಲನ ಮಾಡಿಸುವುದು, ತಾಂಬೂಲವನ್ನು

ಕೊಡುವುದು, ಉನ್ನತಾಸನವನಿಕ್ಕುವುದು, ಸಂಗೀತ ವಾದ್ಯಗಳ ಕೇಳಿಸುವುದು, ಆಭರಣಗಳನ್ನು ತೊಡಿಸುವುದು, ವಾಹನಗಳನ್ನು ಏರಿಸುವುದು, ಗೃಹವನ್ನು ಕೊಡುವುದು –ಹೀಗೆ ಹದಿನಾರು ಬಗೆಯ ಭಕ್ತಿಯನ್ನು ಮಾಡುವುದು.

ಸಪ್ತಾಂಗ (ಮ.)

ಸ್ವಾಮಿ, ಅಮಾತ್ಯ, ಸುಹೃತ್, ಕೋಶ, ರಾಷ್ಟ್ರ, ದುರ್ಗ, ಬಲ (ಸೈನ್ಯ)– ಇವು ಏಳು ರಾಜ್ಯದ ಅಂಗಗಳೆನಿಸುತ್ತವೆ.

ಪಂಚವಿಂಶತಿ ಲೀಲೆಗಳು (ತ್ರಿ.)

೧. ಚಂದ್ರಕಲಾಧರಲೀಲೆ (ಸೋಮಧರಲೀಲೆ), ೨. ಉಮಾಮಾಹೇಶ್ವರಲೀಲೆ, ೩. ವೃಷಭವಾಹನಲೀಲೆ (ವೃಷಭಾರೂಢಲೀಲೆ), ೪. ತಾಂಡವಲೀಲೆ, ೫. ಗಿರಿಜಾ ಕಲ್ಯಾಣ ಲೀಲೆ, ೬. ಭಿಕ್ಷಾಟನಲೀಲೆ, ೭. ಮಾರಹರಲೀಲೆ (ಕಾಮದಹನಲೀಲೆ), ೮. ಕಾಲಹರಲೀಲೆ, ೯. ತ್ರಿಪುರದಹನಲೀಲೆ. ೧೦. ಜಲಂಧರಹರಲೀಲೆ, ೧೧. ಅಜಾರಿಲೀಲೆ, ೧೨. ವೀರಭದ್ರಲೀಲೆ (ದಕ್ಷಾಧ್ವರಲೀಲೆ), ೧೩. ಶರಭಾವತಾರಲೀಲೆ, ೧೪. ಅರ್ಧನಾರೀಶ್ವರಲೀಲೆ. ೧೫. ಕಿರಾತಲೀಲೆ, ೧೬. ಕಂಕಾಳಧರಲೀಲೆ, ೧೭. ಚಂಡೇಶಾನುಗ್ರಹಲೀಲೆ, ೧೮. ವಿಷಧರಲೀಲೆ, ೧೯. ಚಕ್ರಪ್ರದಾನಲೀಲೆ, ೨೦. ವಿಘ್ನಪ್ರಸಾದಲೀಲೆ, ೨೧. ಉಮಾಸ್ಕಂದಲೀಲೆ, ೨೨. ಏಕಪಾದಲೀಲೆ, ೨೩. ಸುಖಾವಹಲೀಲೆ, ೨೪. ದಕ್ಷಿಣಾಮೂರ್ತಿಲೀಲೆ, ೨೫. ಲಿಂಗೋದ್ಭವಲೀಲೆ–ಇವು ಶಿವನ ೨೫ ಲೀಲೆಗಳು.

ಹದಿನಾರು ಕಳೆ (ಮ. ೪–೨೮)

(೧) ಅಮೃತಾ, ಮಾನದಾ, ಪೂಷಾ, ಪುಷ್ಟಿ, ತುಷ್ಟಿ, ರತಿ, ಧೃತಿ, ಶಶಿನೀ, ಚಂದ್ರಿಕಾ, ಕಾಂತಿ, ಜ್ಯೋತ್ಸ್ನಾ, ಶ್ರೀ, ಪ್ರೀತಿ, ಅಂಗದಾ, ಪೂರ್ಣಾ, ಪೂರ್ಣಾಮೃತಾ –ಇವು ಹದಿನಾರು ಚಂದ್ರನಲ್ಲಿರುವ ಕಲೆಗಳು.

(೨) ಪೂಷಾ, ಯಶಾ, ಸುಮನಸಾ, ರತಿ, ಪ್ರಾಪ್ತಿ, ಧೃತಿ, ಋದ್ಧಿ, ಸೌಮ್ಯ, ಮರೀಚಿ, ಅಂಶುಮಾಲಿನಿ, ಅಂಗಿರಾ ಶಶಿನೀ, ಛಾಯಾ, ಸಂಪೂರ್ಣ ಮಂಡಲಾ, ತುಷ್ಟಿ, ಅಮೃತಾ–ಇವು ಹದಿನಾರು ಕಾಮಕಲೆಗಳು.

(೩) ಶಂಖಿನೀ, ಪದ್ಮನೀ, ಲಕ್ಷ್ಮಣೀ, ಕಾಮಿನೀ, ಪೋಷಿಣೀ, ಪುಷ್ಟಿವರ್ಧಿನೀ, ಆಹ್ಲಾದಿನೀ, ಅಶ್ವಪದಿನೀ, ವ್ಯಾಪಿನೀ, ಪ್ರಯೋದಿನೀ, ಮೋಹಿನೀ, ಪ್ರಭಾ, ಕ್ಷೀರವರ್ಧಿನೀ, ವೇಧವರ್ಧಿನೀ, ವಿಕಾಸಿನೀ, ಶೌಮಿನೀ–ಇವು ಹದಿನಾರು ಸ್ತ್ರೀ ಜಾತಿಗಳು.

ವಾದ್ಯಗಳು (ಮ. ೬–೪೪)

(೧) ಚಾರ್ಮಣ, ತಾಂತ್ರಿಕ, ಘನ–೩ ವಿಧ

(೨) ತತ, ಆನದ್ಧ (ಅವನದ್ಧ), ಸುಷಿರ, ಘನ–೪ ವಿಧ

(೩) ಸುಷಿರ, ಘನ, ಚರ್ಮಬದ್ಧ, ತಂತ್ರೀ, ಗಾನ, – ೫ ವಿಧ

– ಶ್ರುತಿ, ನಾಗಸ್ವರ, ತಾಳ, ಸಮ್ಮೇಳನ, ಚಂದ್ರವಾದ್ಯ
– ಶ್ರುತಿ, ಮೌರಿ, ಡೋಲು, ತಾಸಮಾರ, ತಾಳ.
– ಶ್ರುತಿ, ಸನಾಯಿ, ಡೋಲು, ತಾಸು, ಸಮ್ಮೇಳ
– ಡಮರು, ಡೋಲು, ಶ್ರುತಿ, ನಾಗಸ್ವರ, ತಾಳ
– ಊದುವಾದ್ಯ, ಡೋಲು, ಗಂಟೆ, ಶಂಖ, ತಾಳ
– ಡೋಲು, ಗಂಟೆ, ರಣಕಹಳೆ, ನಗಾರಿ, ಪದಾರ್ತಿದಿಡುಂಬು
– ಮದಳಂ, ತಿಮುಲ, ಎಡಕ್ಕ, ಕೊಂಬು, ಎಲತ್ತಾಳಂ

(೪) ಭದ್ರ (ಕರಡೆ), ಶಾಸಕ (ನಗಾರಿ), ಭೀಷಣ (ತ್ರಾಸಾ), ಘೋಷಣ (ಹುಡುಕ್ಕಾ), ಕಾಹಲ (ಗೌರಿಕಾಳೆ), ದುಂದುಭಿ (ಧೋರ), ಘಂಟಿಕೆ (ಘಂಟೆ)– ೧೦ ವಿಧ.

(೫) ಭೇರಿ, ಡಮರುಗ, ಧವಲ, ಡಿಂಡಿಮ, ದುಂದುಭಿ, ಕಹಳೆ, ಮದ್ದಳೆ, ಮದ್ದುಕ, ಮೃದಂಗ, ನೂಪುರ, ಪಾನವ, ಪಟಹ, ಶಬ್ದ, ತಾಳ, ತುಂಬುರ, ತೂರ್ಯ, ವೇಣು, ವೀಣಾ–೧೮ ವಿಧ.

ರಾಗಗಳು : (ಮ. ೨–೧೫)

– ಭೈರವಿ, ಭೂಪತಿ (ಭೂಪಾಲ), ಶ್ರೀರಾಗ, ರಾಗಪಂಜರ, ವಸಂತ, ಮಾಲವ, ಬಂಗಾಲ, ನಾಟಕ (ನಟ್ಟ)–ಇವು ೮ ಪುರುಷರಾಗಗಳು.
– ಭೈರವಿಗೆ : ದೇವಕ್ರಿಯಾ, ಮೇಷರಂಜಿ, ಕುರಂಜೀ
– ಭೂಪಾಲಕ್ಕೆ : ವೇಲಾವುಲೀ, ಮಲಹರಿ, ಬೌಲಿ (ಬೌಳಿ)
– ಶ್ರೀರಾಗಕ್ಕೆ : ಅಂಧಾಲೀ, ಭಲ್ಲಾತೀ, ಮಾಹುರೀ,
– ರಾಗಪಂಜರಕ್ಕೆ : ದೇಶೀ, ಲಲಿತಾ, ತೋಡೀ
– ವಸಂತಕ್ಕೆ : ರಾಮಕ್ರಿಯಾ, ವರಾಲೀ, ಕೌಶೀ
– ಮಾಲವಕ್ಕೆ : ಗುಂಡಕ್ರಿಯಾ, ಘೂರ್ಜರಿ, ಗೌಲೀ (ಗೌಳಿ)
– ಬಂಗಾಲಕ್ಕೆ : ಕರ್ಣಾಟಗೌಲಿಕಾ , ಧನ್ಯಾಸಿಕಾ, ಕಾಂಭೋಜೀ
– ನಟ್ಟವಿಗೆ : ದೇಶಾಕ್ಷಿ, ಆಹರೀ, ನಾರಾಯಣಿ – ಇವು ೨೪ ಸ್ತ್ರೀರಾಗಗಳು ಎರಡೂ ಸೇರಿ ಒಟ್ಟು ಮೂವತ್ತೆರಡು ರಾಗಗಳು – ಇವನ್ನು ಬತ್ತೀಸ ರಾಗಗಳು ಎಂದು ಕರೆಯಲಾಗುತ್ತದೆ.

ಮೇಳ ತರ್ಕ ರಾಗಗಳು : – ೭೨

ಕನಕಾಂಬರಿ, ಫೇನದ್ಯುತಿ, ಗಾನಸಾಮವರಾಳಿ, ಭಾನುಮತಿ, ಮನೋರಂಜಿನಿ, ತನುಕೀರ್ತಿ, ಸೇನಾಗ್ರಣಿ, ಜನತೋಡಿ, ಧುನಿಭಿನ್ನಷಡ್ಜ, ನಟಾಭರಣ, ಕೋಕಿಲರವ, ರೂಪವತಿ, ಗೇಯಹೆಜ್ಜಜ್ಜಿ, ವಾಟಿವಸಂತ ಭೈರವಿ, ಮಾಯಾಮಾಳವ ಗೌಳ, ತೋಯವೇಗ ವಾಹಿನಿ, ಛಾಯಾವತಿ, ಜಯಶುದ್ಧ ಮಾಳವಿ, ಝುಂಕಾರಭ್ರಮರಿ, ನಾರೀರೀತಿಗೌಳ,

ಕಿರಣಾವಳಿ, ಶ್ರೀರಾಗ, ಗೌರೀ ಮನೋಹರಿ, ವೀರವಸಂತ, ಶರಾವತಿ, ತರಂಗಿಣಿ, ಸೌರಸೇನಾ, ಹರಿಕೇದಾರಗೌಳ, ಧೀರ ಶಂಕರಾಭರಣ, ನಾಗಾಭರಣ, ಕಲಾವತಿ, ರಾಗಚೂಡಾಮಣಿ, ಗಂಗಾತರಂಗಿಣಿ, ಭೋಗಚ್ಛಾಯನಾಟ, ಶೈಲದೇಶಾಕ್ಷಿ, ಛಲನಾಟ, ಸೌಗಂಧಿನಿ, ಜಗನ್ಮೋಹನ, ಧಾಲಿವರಾಳಿ, ನಭೋಮಣಿ, ಕುಂಭಿನಿ, ರವಿಕ್ರಿಯ, ಗೀರ್ವಾಣಿ, ಭವಾನಿ, ಶಿವಪಂತುವರಾಳಿ, ಸ್ತವರಾಜ, ಸೌವೀರ, ಜೀವಂತಿನಿ, ಧವಳಾಂಗ, ನಾಮದೇಶಿ, ಕಾಶೀರಾಮಕ್ರಿಯ, ರಮಾಮನೋಹರಿ, ಗಮಕ ಕ್ರಿಯ, ವಂಶವತಿ, ಶಾಮಳ, ಚಾಮರ, ಸುಮದ್ಯುತಿ, ದೇಶೀ ಸಿಂಹಾವರ, ಧಾಮವತಿ, ನಿಷಧ, ಕುಂತಳ, ರತಿಪ್ರಿಯ, ನೀತಪ್ರಿಯ, ಭೂಷಾವತಿ, ಶಾಂತಕಲ್ಯಾಣಿ, ಚತುರಂಗಿಣಿ, ಸಂತಾನಮಂಜರಿ, ಜ್ಯೋತಿ, ಧೌಳಪಂಚಯ, ನಾಸಾಮಣಿ, ಕುಸುಮಾಕರ, ರಸಮಂಜರಿ–ಇವು ೭೨ ಮೇಳತರ್ಕ ರಾಗಗಳು.

ರಾಗಾಂಗಗಳು – ಪೂರ್ವ ಪ್ರಸಿದ್ಧವಾದವು – ೩೪

(೧) ಶಂಕರಾಭರಣ, ಘಂಟಾರವ, ಹಂಸಕ, ದೀಪಕ, ರೀತಿ, ಕರ್ನಾಟಿಕ, ಲಾಟಿ, ಪಾಂಚಾಲಿ.

- ಗಾಂಭೀರಿ, ವೇಹಾರಿ, ಶ್ವಸಿತ, ಉತ್ಪಲಿ, ಗೋಲಿ, ನಾದಾಂತರಿ, ನೀಲೋತ್ಪಲಿ, ಛಾಯಾ, ತರಂಗಿಣಿ, ಗಾಂಧಾರಗತಿಕ, ವೈರಂಜಿ
- ಭಾವಕ್ರಿ, ಸ್ವಭಾವಕ್ರಿ, ಶಿವಕ್ರಿ, ಮಕರಕ್ರಿ, ತ್ರಿನೇತ್ರಕ್ರಿ, ದನುಕ್ರಿ, ಕುಮುದಕ್ರಿ, ಓಜಕ್ರಿ, ಇಂದ್ರಕ್ರಿ, ನಾಗಕೃತ್, ಧನ್ಯಕೃತ್, ವಿಜಯಕ್ರಿ
- ಪೂರ್ಣಾಟಿ, ದೇವಾಲ, ಗುರುಂಜಿಕಾ–ಇವು ೩೪ ಕ್ರಮವಾಗಿ ರಾಗಾಂಗ, ಭಾಷಾಂಗ, ಕ್ರಿಯಾಂಗ, ಉಪಾಂಗಗಳಿಗೆ ಸಂಬಂಧಿಸಿದ ರಾಗಾಂಗಗಳೆನಿಸಿವೆ.

ರಾಗಾಂಗಗಳು– ನವೀನ ಪ್ರಸಿದ್ಧವಾದವು–೫೨

- ರಾಗಾಂಗದಲ್ಲಿ : ಮಧ್ಯಮಾದಿ, ಮಾಲವಶ್ರೀ, ತೋಡಿ, ಬಂಗಾಲ, ಭೈರವ, ವರಾಟಿ, ಗುರ್ಜರಿ, ಗೌಡ, ಕೋಲಾಹಲ, ವಸಂತಕ, ಧನ್ಯಾಸಿ, ದೇಶಿ, ದೇಶಾಖ್ಯ.
- ಭಾಷಾಂಗದಲ್ಲಿ : ಡೊಂಬಕಿ, ಸಾವರಿ, ವೇಲಾವಲಿ, ಪ್ರಥಮ ಮಂಜರಿ, ಆದಿಕಾಮೋದಿಕಾ, ನಾಗಧ್ವನಿ, ಶುದ್ಧವರಾಟಿಕಾ, ನಟ್ಟ, ಕರ್ಣಾಟ ಬಂಗಾಲ.
- ಕ್ರಿಯಾಂಗದಲ್ಲಿ : ರಾಮಕೃತ್, ಗೌಡಕೃತ್, ದೇವಕ್ರಿ,
- ಉಪಾಂಗದಲ್ಲಿ : ೬ ವರಾಟಿಭೇದಗಳು, ೨ ತೋಡಿಗಳು, ೪ ಗುರ್ಜರಿಗಳು, ಭುಂಜಿಕಾ, ಸ್ತಂಬತೀರ್ಥಿಕಾ, ಛಾಯಾ ವೇಲಾವಲಿ + ಪ್ರತಾಪ ವೇಲಾವಲಿ, ಭೈರವಿ, ಕಾಮೋದಸಿಂಹಲೀ, ಛಾಯಾನಟ್ಟ, ರಾಮಕೃತ್, ಭಲ್ಲಾತಿಕಾ, ಮಲ್ಹಾರೀ, ಮಲ್ಹಾರ, ಗೌಡಕ, ಕರ್ಣಾಟ, ದೇಶವಾಲ, ತೌರುಷ್ಕ, ದ್ರಾವಿಡ.

❖❖

ಕಳೆದ ಮೂರು ದಶಕಗಳಿಂದ ಗುಲಬರ್ಗಾ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆಯ ಜೊತೆಗೆ ಪ್ರಕಟಣೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಲ್ಲಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಹಲವಾರು ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು.

ಈ ಯೋಜನೆಗಳಲ್ಲಿ ಹಸ್ತಪ್ರತಿಗಳ ಸಂಗ್ರಹ ಸಂರಕ್ಷಣೆ ಹಾಗೂ ಪ್ರಕಟನಾ ಯೋಜನೆ ಭಾಗ-1 ರ ಪ್ರಧಾನ ಸಂಶೋಧಕರು ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾದ ಡಾ. ನಾಗಾಬಾಯಿ ಬಿ. ಬುಳ್ಳಾ ಅವರು ಈ ಯೋಜನೆಯಲ್ಲಿ ಹಲವಾರು ಅಪ್ರಕಟಿತ ಹಸ್ತಪ್ರತಿ ಗಳನ್ನು ಪ್ರಕಟಿಸಿದ್ದಾರೆ. ನಾಡಿನ ಪ್ರಮುಖ ಹಸ್ತಪ್ರತಿಗಳನ್ನು ಪ್ರಕಟಿಸಿ ಜನಸಾಮಾನ್ಯರಿಗೆ ತಲುಪುವಂತೆ ಮಾಡಿದ್ದಾರೆ. ಈ ಯೋಜನೆಯ ಸಂಪುಟಗಳು ಅಪೂರ್ವ ದಾಖಲೆಗಳೆನಿಸಿವೆ. ಹಸ್ತಪ್ರತಿಗಳನ್ನು ಸಂಪಾದನೆ ಮಾಡಿಕೊಟ್ಟಿರುವ ಸಂಪಾದಕರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಿ. ಬಸವರಾಜು ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ ಅವರಿಗೂ ಹಾಗೂ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ. ಟಿ. ಪುಟ್ಟಯ್ಯ
ಕುಲಪತಿಗಳು